ಗೌರಿ ಲಂಕೇಶರ

ಲಂಕೇಶ್


ಜನವರಿ 17, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಚಿತ್ರದುರ್ಗ: ಕನ್ಯಕಾಪರಮೇಶ್ವರಿ ಸೊಸೈಟಿಯಲ್ಲಿ ಮೋಸ

ಭೀಮಾ ತೀರದಲ್ಲಿ ಮತ್ತೊಂದು ಕೊಲೆ

ರಿಂಗ್ ಮಾಸ್ಟರ್ ಕುಮಾರಣ್ಣನ ಪೂನಾ ಸರ್ಕಸ್!

ಮಡಿಕೇರಿ: ದಲಿತ ಶಾಸಕನ ವಿರುದ್ಧ ರೆಡ್ಡಿಗಳ ಕೆಂಗಣ್ಣು



ಮಂಗ ದೊಂಗ



ಕಿರಾಣಿ ಅಂಗಡಿ ಶೆಟ್ಟರು ಮತ್ತು ವಾಲ್‌ಮಾರ್ಟ್ ಪಂಟರು

ಚಾರ್ವಾಕ

- ಶಿವಸುಂದರ್-

ರೈತರಾಯಿತು, ಕಾರ್ಮಿಕರಾಯಿತು, ಈಗ ಜಾಗತೀಕರಣದ ರಥಚಕ್ರಕ್ಕೆ ಕುದಿಯಾಗುವ ಸರದಿ ಕಿರಾಣಿ ಅಂಗಡಿ ಶೆಟ್ಟರದು! ಮರು ವಸಾಹತೀಕರಣವೆಂಬ ಈ ರಾಜಸೂಯಯಾಗದಲ್ಲಿ ವಿದೇಶಿ ಬಂಡವಾಳವೆಂಬ ಅಶ್ವಮೇಧದ ಕುದುರೆಯನ್ನು ಕಟ್ಟಿ ಹಾಕಿದವರೂ ಅಲ್ಲಸ್ವಲ್ಪ ಉಳಿದುಕೊಳ್ಳುತ್ತಿದ್ದರೆ ಕಟ್ಟಿಹಾಕಲೂ ಪ್ರಯತ್ನಿಸದವರು ಸರ್ವನಾಶವಾಗುತ್ತಿದ್ದಾರೆ. ಈಗ ಬುಷ್ ದೊರೆಯ ಅಶ್ವಮೇಧದ ಕುದುರೆ ನಮ್ಮ ಕಿರಾಣಿ ಅಂಗಡಿ ಶೆಟ್ಟರ ಬಾಗಿಲಿಗೆ ಬಂದು ನಿಂತಿದೆ. ಈ ದೇಶದ ಒಂದು ಕೋಟಿಗೂ ಹೆಚ್ಚು ವ್ಯಾಪಾರಸ್ಥರೂ 40 ಲಕ್ಷಕ್ಕೂ ಹೆಚ್ಚು ಅಂಗಡಿಗಳು ಮತ್ತು 250 ಬಿಲಿಯನ್ ಡಾಲರ್ ಅಂದರೆ 1250000 ಕೋಟಿ ರೂಪಾಯಿಗಳ ವಹಿವಾಟಿರುವ ಕಿರಾಣಿ ವ್ಯಾಪಾರವೆಂಬ ಸಾಮ್ರಾಜ್ಯವನ್ನು ನಮಗೊಪ್ಪಿಸಬೇಕೆಂದು ಯುದ್ಧಕ್ಕೆ ಕರೆಯುತ್ತಿದೆ. ಈವರೆಗೆ ಕಿರಾಣಿ ಶೆಟ್ಟರ ಆಸಕ್ತಿ ಕಾಯುತ್ತಿದ್ದ ರಕ್ಷಿಸುತ್ತಿದ್ದ ಬಿಜೆಪಿ, ಕಾಂಗ್ರೆಸ್ಸಿಗರು ವಾಲ್‌ಮಾರ್ಟ್, ಮೆಟ್ರೊ, ಕೇರ್‌ಫೋರ್ ಮತ್ತಿತರರ ಜೊತೆ ಒಪ್ಪಂದ ಮಾಡಿಕೊಂಡು ಕಿರಾಣಿ ಮಾರುಕಟ್ಟೆಯನ್ನು ಹರಾಜು ಮಾಡಿಕೊಂಡಾಗಿದೆ. ಆದ್ದರಿಂದಲೇ ಪ್ರಪಂಚದ ಕಿರಾಣಿ ವ್ಯವಹಾರದ ದೈತ್ಯ ವಾಲ್‌ಮಾರ್ಟ್ ಜೊತೆಜೊತೆಗೆ ಬಿರ್ಲಾ ಮತ್ತು ರಿಲಾಯನ್ಸ್ ಕಂಪನಿಗಳು ದೊಡ್ಡ ಸಂಖ್ಯೆಯಲ್ಲಿ ದಾಳಿ ಇಡಲು ಸಜ್ಜಾಗುತ್ತಿವೆ. ಈಗಾಗಲೇ ವಾಲ್‌ಮಾರ್ಟ್ ಕಂಪನಿ ಮಿಟ್ಟಲ್ ಎಂಬ ಭಾರತೀಯ ಕಂಪನಿಯ ಜೊತೆ ಸೇರಿಕೊಂಡು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳವನ್ನು ವಿರೋಧಿಸುತ್ತಿರುವ ಕಮ್ಯುನಿಸ್ಟ್ ಪಕ್ಷದ ಆಳ್ವಿಕೆಯಿರುವ ಪಶ್ಚಿಮ ಬಂಗಾಳದಲ್ಲೇ ಅಂಗಡಿ ತೆರೆಯುವ ಸನ್ನಾಹ ನಡೆಸುತ್ತಿದೆ.



ಅದಲ್ಲದೆ ರಿಲಾಯನ್ಸ್ ಕಂಪನಿ ಸಹ ದೇಶಾದ್ಯಂತ 1500 ಪಟ್ಟಣಗಳಲ್ಲಿ 4500 ಅಂಗಡಿಗಳನ್ನು ತೆರೆಯುತ್ತಿದೆ. ಬಿರ್ಲಾ ಕಂಪನಿಯೂ ಕಿರಾಣಿ ಕ್ಷೇತ್ರಕ್ಕೆ ಲಗ್ಗೆ ಇಡುತ್ತಿದೆ.

ಅಸಲು ಈ ವಿದೇಶಿ ಬಂಡವಾಳಿಗರು ಚಿಲ್ಲರೆ ವ್ಯಾಪಾರಕ್ಕೂ ಏಕೆ ಗಂಟು ಬಿದ್ದಿದ್ದಾರೆ? ಅದಕ್ಕೆ ಕಾರಣವಿದೆ. ಇಂದು ಚಿಲ್ಲರೆ ವ್ಯಾಪಾರ ಬರೀ ಚಿಲ್ಲರೆ ವ್ಯಾಪಾರವಾಗಿ ಉಳಿದಿಲ್ಲ. ಇದಕ್ಕೆ ಒಂದು ಉದಾಹರಣೆಯೆಂದರೆ ಬರೀ ಚಿಲ್ಲರೆ ವ್ಯಾಪಾರದಲ್ಲಿರುವ ಅಮೆರಿಕದ ವಾಲ್‌ಮಾರ್ಟ್ ಕಂಪನಿ ಇಂದು ಪ್ರಪಂಚದ 500 ಬೃಹತ್ ಉದ್ಯಮ ಸಂಸ್ಥೆಗಳಲ್ಲಿ ಒಂದಾಗಿದೆ. ಅದರ ವಾರ್ಷಿಕ ವಹಿವಾಟು 50 ಬಿಲಿಯನ್ ಡಾಲರ್‌ಗಳು. ಅಂದರೆ ಎರಡು ಲಕ್ಷದ ಐವತ್ತು ಸಾವಿರ ಕೋಟಿಗಳು! ಅಂದರೆ ಕರ್ನಾಟಕ ಸರ್ಕಾರದ ಐದು ವರ್ಷದ ಬಜೆಟ್ಟಿಗೆ ಸಮ.

ವಾಲ್‌ಮಾರ್ಟ್, ಕೆಲ್ಲೋಗ್ಸ್, ಮ್ಯಾಕ್‌ಡೊನಾಲ್ಡ್, ಕೆ.ಎಫ್.ಸಿ ತರಹದ ಚಿಲ್ಲರೆ ವ್ಯಾಪಾರದ ಸಂಸ್ಥೆಗಳು ತಮ್ಮತಮ್ಮ ದೇಶಗಳಲ್ಲಿ ದೊಡ್ಡದೊಡ್ಡ ಸೂಪರ್ ಮಾರ್ಕೆಟ್‌ಗಳನ್ನು, ಮಾಲ್‌ಗಳ ಚೈನ್‌ಗಳನ್ನು ಸ್ಥಾಪಿಸಿಕೊಂಡು ಬಂದೋಬಸ್ತ್ ವ್ಯಾಪಾರ ನಡೆಸುತ್ತಿದ್ದಾರೆ.

ಆದರೆ ಕಳೆದ ಕೆಲವು ವರ್ಷಗಳಿಂದ ಈ ದೇಶಗಳಲ್ಲಿನ ಮಾರುಕಟ್ಟೆ ಸಂಪೂರ್ಣ ಮುಗಿಯುತ್ತಾ ಬಂದಿದೆ. ಅಂದರೆ ಇನ್ನು ಆ ಮಾರುಕಟ್ಟೆಯ ವಿಸ್ತರಣೆ ಕಷ್ಟಸಾಧ್ಯ. ಹೀಗಾಗಿಯೇ ಈ ಚಿಲ್ಲರೆ ದೈತ್ಯರು ವಿಶ್ವದ ಇತರೆಡೆಗಳಲ್ಲಿ ಚಿಲ್ಲರೆ ವ್ಯಾಪಾರದ ಹುಲ್ಲುಗಾವಲನ್ನು ಅರಸುತ್ತಿವೆ.

ಬ್ರೆಜಿಲ್, ರಷ್ಯಾ, ದ.ಆಫ್ರಿಕ, ಕಿರ್ಗಿಸ್ತಾನ್, ಭಾರತದಂಥ ದೇಶಗಳೇ ಈಗ ಅವರ ಗುರಿ. ಅದರಲ್ಲೂ ಬಗ್ಗು ಎಂದರೆ ತೆವಳಲು ತಯಾರಿರುವ ಆಳುವವರ್ಗಗಳನ್ನು ಹೊಂದಿರುವ ಭಾರತವೆಂದರೆ ಅವರಿಗೆ ಅಚ್ಚುಮೆಚ್ಚು. ಮೆಟ್ರೋದಂತಹ ದೈತ್ಯ ವಿಶ್ವದ ಎರಡನೆ ವ್ಯಾಪಾರಿ ಸಂಸ್ಥೆ ಏಷ್ಯಾದಲ್ಲಿ ತನ್ನ ವ್ಯಾಪಾರ ವಿಸ್ತರಣೆ ಮಾಡುವಾಗ ಆಯ್ಕೆ ಮಾಡಿಕೊಂಡ ದೇಶವೆಂದರೆ ಭಾರತ ಹಾಗೂ ದೂರದ ಕಿರ್ಗಿಸ್ತಾನ್!

ಇದಕ್ಕೂ ಒಂದು ಕಾರಣವಿದೆ. ಭಾರತ ಒಂದು ನೂರೆಂಟು ಕೋಟಿ ಜನ ವಾಸ ಮಾಡುವ ದೇಶ. ಇಲ್ಲಿ ಎಂಟು ಕೋಟಿಯಷ್ಟು ಮಧ್ಯಮವರ್ಗವಿದೆ. ಒಂದು ಅಂದಾಜಿನ ಪ್ರಕಾರ ಈ ವರ್ಗಕ್ಕೆ ವಾರ್ಷಿಕ ಮೂರು ಸಾವಿರ ಡಾಲರ್‌ನಷ್ಟು ಖರ್ಚು ಮಾಡುವ ಆದಾಯವಿದೆ. ಇದು ಇನ್ನೂರ ಐವತ್ತು ಬಿಲಿಯನ್ ಡಾಲರ್‌ಗಳಾಗುತ್ತವೆ. ಅಂದರೆ ಹನ್ನೆರಡು ಲಕ್ಷದ ಐವತ್ತು ಸಾವಿರ ಕೋಟಿಗಳು. ಅಂದರೆ ಭಾರತ ದೇಶದ ಒಂದು ವರ್ಷದ ಬಜೆಟ್ಟಿಗೆ ಸಮ... ಈ ಪ್ರಮಾಣದ ವ್ಯಾಪಾರವಿದ್ದರೂ ಅದರಲ್ಲಿ ಶೇಕಡಾ ತೊಂಭತ್ತೆಂಟರಷ್ಟು ಅಸಂಘಟಿತ ಅಂಗಡಿಗಳೇ. ಶೇಕಡ ಎರಡು ಮಾತ್ರ ಕಂಪನಿ ಮಳಿಗೆಗಳು.

ಈವರೆಗೆ ಇದ್ದ ಸರ್ಕಾರದ ನೀತಿಗಳು ಈ ಬಗೆಯ ವ್ಯಾಪಾರ ಉದ್ಯಮಕ್ಕೆ ಪೂರಕವಾಗಿದ್ದವು. ಈಗ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಬೀದಿ ಬದಿ ವ್ಯಾಪಾರಿಗಳ ಮೇಲೆ ಹಾಗೂ ಸಣ್ಣಪುಟ್ಟ ವ್ಯಾಪಾರಿಗಳ ಮೇಲೆ ಗದಾಪ್ರಹಾರ ಮಾಡುವಂಥ ಕಾನೂನುಗಳು ಬರುತ್ತಿರುವುದು ವಿದೇಶಿ ವ್ಯಾಪಾರಿ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ಹೊರತು ಬೇರೇನೂ ಅಲ್ಲ. ಎಲ್ಲಾ ಸಿಟಿಗಳಲ್ಲೂ ಬೀದಿಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡುತ್ತಿರುವುದೂ ಇದೇ ಕಾರಣಕ್ಕಾಗಿಯೇ. ವ್ಯಾಟ್-ಪಾಟ್ ಅಂತ ಸಣ್ಣ ಪುಟ್ಟ ವ್ಯಾಪಾರಿಗಳ ಪ್ರಾಣ ಹಿಂಡುತ್ತಿರುವುದೂ ಇದೇ ಕಾರಣಕ್ಕಾಗಿಯೇ.

ಇದನ್ನು ಗಮನದಲ್ಲಿಟ್ಟುಕೊಂಡೇ ವಿಶ್ವದ ಬೃಹತ್ ವ್ಯಾಪಾರಿ ಉದ್ಯಮಿಗಳು ಭಾರತಕ್ಕೆ ದಾಳಿಯಿಡುತ್ತಿದ್ದಾರೆ. ಮೆಟ್ರೊ, ವಾಲ್‌ಮಾರ್ಟ್, ಕೇರ್‌ಫೋರ್, ಕೆ.ಎಫ್.ಸಿಯಂಥ ಸಂಸ್ಥೆಗಳು ಕೆಲವರ್ಷಗಳಿಂದ ಸುಲಿಗೆ ಪ್ರಾರಂಭಿಸಿವೆ. ಡಾಮಿನೊ, ಪೆಪ್ಸಿ, ಕೊಕೊಕೋಲ, ಕಾರ್ಗಿಲ್, ಕೆಲ್ಲೊಗ್ಸ್, ಕೊನಗ್ರ, ಪಿಲ್ಸ್‌ಬರಿ, ಬಾಸ್ಕಿನ್ ರಾಬಿನ್ಸ್, ನೆಸ್ಲೆ ಇನ್ನಿತ್ಯಾದಿ ಬಹು ರಾಷ್ಟ್ರೀಯ ಕಂಪನಿಗಳು ಸಾಲುಗಟ್ಟಿ ಕಾಯುತ್ತಿವೆ. ಅವುಗಳಲ್ಲಿ ಕೆಲವು ಈಗಾಗಲೇ ಹಿಂಬಾಗಿಲಿನಿಂದ ಕಾರ್ಯಾಚರಣೆ ಪ್ರಾರಂಭಿಸಿವೆ. ಇದರಲ್ಲಿ ವಾಲ್‌ಮಾರ್ಟ್-ಮಿಟ್ಟಲ್ ಮಳಿಗೆ ಇತ್ತೀಚಿನದ್ದು.


ಇದರಿಂದಾಗಿ ನಮ್ಮ ಮನೆ ಪಕ್ಕದಲ್ಲಿದ್ದ, ನಮಗೆ ಬೇಕಾದಾಗ ಸಾಲ ಕೊಡುತ್ತಿದ್ದ, ತಿಂಗಳ ಸಂಬಳ ಬರದಿದ್ದರೂ ಸ್ವಲ್ಪ ಕಾಯುತ್ತಿದ್ದ ಕಿರಾಣಿ ಶೆಟ್ಟರ ಕತೆಯೇನು? ಹಾಗೆ ನೋಡಿದರೆ ಇದರಿಂದ ಕಿರಾಣಿ ಶೆಟ್ಟರ ಬದುಕು ಮಾತ್ರ ಮೂರಾಬಟ್ಟೆಯಾಗುವುದಿಲ್ಲ, ಬದಲಿಗೆ ಇಡೀ ದೇಶದ ಆರ್ಥಿಕತೆಯೇ ಸಂಕಷ್ಟಕ್ಕೀಡಾಗುತ್ತದೆ.

ಇಂದು ಭಾರತದಲ್ಲಿ ಒಂದೂವರೆ ಕೋಟಿಯಷ್ಟು ಸಣ್ಣ ಮಳಿಗೆಗಳಿವೆ. ಅದರಲ್ಲಿ ಶೇಕಡ 70ರಷ್ಟು ಭಾಗ ಒಂದೇ ಕುಟುಂಬ ನಡೆಸುತ್ತಿರುವ ಜೀವನಾಧಾರವಾದ ಕೆಲಸವೇ ವಿನಃ ಅವರ ಮಟ್ಟಿಗೆ ಅದು ಲಾಭಕ್ಕಾಗಿ ನಡೆಸುತ್ತಿರುವ ಉದ್ಯಮವಲ್ಲ. ಈಗ ಚಿಲ್ಲರೆ ವ್ಯಾಪಾರದ ಕ್ಷೇತ್ರಕ್ಕೂ ಈ ಸಾಂಸ್ಥಿಕ ವಿದೇಶಿ ಬಂಡವಾಳ ಬಂದರೆ ಈ ಇಡೀ ವರ್ಗ ಬೀದಿಗೆ ಬೀಳುತ್ತದೆ. ಇದು ತತ್‌ಕ್ಷಣ ಕಣ್ಣಿಗೆ ಕಾಣುವ ಪರಿಣಾಮ. ಆದರೆ ದೂರಗಾಮಿ ಪರಿಣಾಮ ನಮ್ಮ ಇಡೀ ದೇಶದ ಅರ್ಥ ವ್ಯವಸ್ಥೆಯನ್ನೇ ಹಾಳುಗೆಡಹುವಂತದ್ದಾಗಿದೆ. ಮೊದಲನೆಯದಾಗಿ ಲಾಭಕ್ಕಾಗಿ ಉದ್ಯಮ ನಡೆಸುವ ಈ ಬಹುರಾಷ್ಟ್ರೀಯ ಕಂಪನಿಗಳು ಈ ದೇಶದ ಜನರ ಅಗತ್ಯವನ್ನು ಪೂರೈಸುವುದಕ್ಕಿಂತ ತನ್ನಲ್ಲಿರುವ ಸರಕುಗಳಿಗೆ ಕೃತಕ ಬೇಡಿಕೆ ಸೃಷ್ಟಿಸುವುದನ್ನೇ ಮಾಡುತ್ತದೆ. ಇದು ಸಂಪನ್ನ ಜನರ ಆಹಾರ ಅಭ್ಯಾಸಗಳನ್ನೇ ಬದಲಾಯಿಸಿಬಿಡುತ್ತದೆ. ಅವರನ್ನು ತನ್ನ ಗ್ರಾಹಕರನ್ನಾಗಿಯೂ ಹಾಗೂ ಆದ್ದರಿಂದಲೇ ತನ್ನ ವಕಾಲತ್ತು ವಹಿಸುವವರನ್ನಾಗಿಯೂ ಪರಿವರ್ತಿಸಿ ಕುರುಡರನ್ನಾಗಿಸುತ್ತದೆ. ಎರಡನೆಯದಾಗಿ ಸ್ಥಳೀಯ ಜನರ ಅಗತ್ಯ ನಗಣ್ಯವಾಗಿ ಮಾಲ್‌ಗಳ ಹಾಗೂ ಸೂಪರ್ ಮಾರ್ಕೆಟ್‌ಗಳಲ್ಲಿ ಖರೀದಿಸುವಂಥವರನ್ನು ಗಮನದಲ್ಲಿಟ್ಟುಕೊಂಡೇ ಕಾನೂನುಗಳು ರಚಿತವಾಗುತ್ತದೆ. ದೇಶದ ಅಗತ್ಯ ಸೌಕರ್ಯಕ್ಕಾಗಿ ಇರುವ ಬಜೆಟ್‌ನ ಸಂಪನ್ಮೂಲಗಳೆಲ್ಲಾ ಇಂತಹ ಗ್ರಾಹಕರಿಗಾಗಿ ಹಾಗೂ ಅಂತಹ ವಾಣಿಜ್ಯ ಸಂಸ್ಥೆಗಳಿಗಾಗಿಯೇ ವಿನಿಯೋಗವಾಗುತ್ತದೆ. ಈಗಾಗಲೇ ಟೂರಿಸಂ ಬೆಳೆಯಲು ಮಾಲ್‌ಗಳು ಅಗತ್ಯ ಎನ್ನುವ ಪ್ರತಿಪಾದನೆ ಸರ್ಕಾರದ ವಾದವಾಗಿದ್ದು, ಅಲ್ಲಿಯೂ ಸ್ಥಳೀಯ ವ್ಯಾಪಾರಿಗಳ ಬದುಕು ಬೀದಿ ಪಾಲಾಗಲಿದೆ.

ಅಷ್ಟು ಮಾತ್ರವಲ್ಲ, ಚಿಲ್ಲರೆ ವ್ಯಾಪಾರಕ್ಕೆ ಧುಮುಕಬೇಕೆಂದು ಯತ್ನಿಸುತ್ತಿರುವ ಬಿರ್ಲಾಗಳು ಮತ್ತು ಅಂಬಾನಿಗಳು ತಮಗೆ ನಗರಗಳಲ್ಲಿ ಕನಿಷ್ಠ ಶೇ.15 ರಷ್ಟು ಹೆಚ್ಚುವರಿ ಜಾಗವನ್ನು ವಾಣಿಜ್ಯ ವ್ಯವಹಾರಕ್ಕಾಗಿ ತೆರವು ಮಾಡಿಸಿಕೊಡಬೇಕೆಂದು ಆಗ್ರಹಿಸಿವೆ. ಅದನ್ನು ಒಪ್ಪಿಕೊಂಡು ಈಗಾಗಲೇ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಸರ್ಕಾರಗಳಿಗೆ ಈ ನಿಟ್ಟಿನಲ್ಲಿ ಒಂದು ನಿರೂಪವನ್ನು ಕೊಟ್ಟಿದೆ. ಈ ಹಿನ್ನೆಲೆಯಲ್ಲೇ ಇರಬೇಕು, ಮೊನ್ನೆ ಕುಮಾರಸ್ವಾಮಿಯವರು ನಗರದಲ್ಲಿ ಒತ್ತುವರಿಯಾಗಿರುವ 19000 ಎಕರೆ ಜಮೀನನ್ನು ಮರು ವಶಮಾಡಿಕೊಳ್ಳುವುದಾಗಿ ಘೋಷಿಸಿದ್ದಾರೆ. ಅಂದರೆ ಕಿರಾಣಿ ಕ್ಷೇತ್ರದಲ್ಲಿ ವಿದೇಶಿ ಮತ್ತು ದೇಶಿ ದೊಡ್ಡ ಬಂಡವಾಳ ಬರಲು ಈವರೆಗೆ ಸಣ್ಣಪುಟ್ಟ ಜನಗಳಿಗೆ ಅನುಕೂಲವಾಗಿದ್ದ ಕಾನೂನುಗಳನ್ನೇ ಸರ್ಕಾರ ಬದಲಾಯಿಸುತ್ತಿದೆ. ದೇಶಭಕ್ತ ಪಕ್ಷಗಳು, ಹಿಂದೂಗಳೆಲ್ಲಾ ಒಂದು ಎನ್ನುವ ಪಕ್ಷಗಳು ಇದಕ್ಕೆ ಮೌನ ಸಮ್ಮತಿ ನೀಡಿಯಾಗಿದೆ.

ಕಿರಾಣಿ ಶೆಟ್ಟರು ಬಾಗಿಲು ಹಾಕಿದರೆ ಬಡ ಕೂಲಿ ಕಾರ್ಮಿಕರ ಮತ್ತು ಬಡ ಮಧ್ಯಮ ವರ್ಗದವರ ತಟ್ಟೆ ಖಾಲಿ ಬೀಳುತ್ತದೆ. ಶೆಟ್ಟರ ಅಂಗಡಿಗೂ ಬಡವನ ತಟ್ಟೆಗೂ ಇರುವ ಸಾವಯವ ಸಂಬಂಧ ಬೀದಿಗಳಲ್ಲೂ ಹೋರಾಟವಾಗಿ ಪರಿವರ್ತನೆ ಆಗದೆ ಶೆಟ್ಟರೂ ಉಳಿಯುವುದಿಲ್ಲ ಬೋರೇಗೌಡರೂ ಉಳಿಯುವುದಿಲ್ಲ. ■

No Comments



"ಈ ದೇಶ ಬಂಡವಾ... ದಾರಿ ಹಿಡಿದರೆ ಮಾತ್ರ ... ವಾಗುತ್ತದೆ"

-ನಾರಾಯಣಮ...

"ಪೇಜಾವರ ಶ್ರೀಗಳ ... ದೂರು ನೀಡಿದವನ ... ಮೊಕದ್ದಮೆ ದಾಖ... ಪೊಲೀಸರಿಗೆ ಸೂಚಿಸಿದ್ದ..."


-ಉದಿಯೂ...

"ಅಗತ್ಯ ಬಿದ್ದರೆ ಮಾತ್ರ ಲಾಟರಿ ಸಂಪೂರ್ಣ ನಿ..."

-ರಾಮಚಂದ್ರ...

"ಸರ್ಕಾರ ಎಷ್ಟು ದಿನ ಇರುತ್ತದೆ ಎಂಬುದು ನನಗೆ ಮುಖ್ಯವಲ್ಲ"

-ಎಚ್.ಡಿ.ಕುಮಾರಸ್ವಾಮಿ



"ನಾನು ನಾಸ್ತಿಕನಲ್ಲ"

-ಸಿದ್ದರಾಮಯ್ಯ

"ರೈತರ ಮಕ್ಕಳು ರೈತರಾಗಿ ಉಳಿಯಬಾರದು"

-ಶ್ರೀರಾಮ...

"ಹೊಸ ವರ್ಷದಲ್ಲಿ ದೇವೇಗೌಡರ ಕಾಶೀಯ..."

-ಒಂದು ಪತ್ರಿಕಾ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:::

"ನನಗೆ ಹಿಂಸೆಯಲ್ಲಿ ನಂಬಿಕೆಯಿಲ್ಲ. ನಾನು ಕೊಲೆ ಬೆದರಿಕೆ ಹಾಕಿಲ್ಲ"

-ಪೇಜಾವರ ಸ್ವಾಮಿ



"ಸರ್ಕಾರ ಉಳಿಸಿಕೊಳ್ಳಲು ನಾನು ಸಮಯ ವ್ಯಯ ಮಾಡುವುದಿಲ್ಲ"

-ಎಚ್.ಡಿ.ಕುಮಾರಸ್ವಾಮಿ



"ಕನ್ನಡ ಫಲಕ ಹಾಕಲಿಲ್ಲ... 20000ರೂ. ದಂಡ"

-ಕನ್ನಡ ಅಭಿವೃದ್ಧಿ ಪ್ರಾ...

"ಭಯೋತ್ಪಾದನೆ ನಿಗ್ರಹಕ್ಕೆ ಹಿ... ಧರ್ಮವೊಂದೇ ಪರಿಹಾರ"

-ನರೇಂದ್ರ ಮ...

ವಾರದ ಹತಾಶೆ

"ಬುದ್ಧಿಜೀವಿಗಳೆನಿಸಿಕೊಂಡವರ ಕಾಟ ಪುರಾಣ ಕಾಲದ ಚಾರ್ವಾಕರಿಂದ ಹಿಡಿದು ಇಂದಿನ ಗೌರಿ ಲಂಕೇಶ್‌ರವರೆಗೆ ಮುಂದುವರೆದಿದೆ"

-ಚಕ್ರವರ್ತಿ ಸೂಲಿಬೆಲೆ



ವಾರದ ಭಯೋತ್ಪಾದನ...



"ಒಂದು ಅತ್ಯಂತ... ಕಠೋರ ವಾಸ್ತವವೆಂ... ಹಿಂದೂ ಧರ್ಮವಿದ್ದ... ಕನ್ನಡ, ತಮಿಳು, ಬ... ಸಂಸ್ಕೃತ ಇರುತ್ತದೆ. ವಿವೇಕಾನಂದ, ಬಸವ... ಪುರಂದರರೂ ಇರು... ಹಿಂದೂ ಧರ್ಮ ನಾಶವಾದರೆ ಇವರೇ... ನಾಶವಾಗುತ್ತಾರೆ."

-ಚಿದಾನಂದಮ...

ವಾರದ ವಿವೇಕ

"ಗ್ರಾಮಸಭೆಯ ನಿರ್ಧಾರವನ್ನು ವಿಧಾನಸ... ಪ್ರಶ್ನಿಸದಿರುವಂತಾಗಬೇಕು"

-ಅಣ್ಣಾ...

ವಾರದ ಸತ್ಯ

"ನಾನು ಯಾವ ದೇಶದ ಸೇವೆಯನ್ನೂ ... ತ್ತಿಲ್ಲ. ನನ್ನ ಗ್ರಾಹಕರ ಲಾಭ ಜಾಸ್ತಿ ಮಾಡು... ನನ್ನ ಗುರಿ"

- ಇನ್‌ಫೋಸಿಸ್ ನಾರಾಯಣ...

ದಕ್ಕಿದ ಚಂದ್ರಮಂಡಲ ಜಾತ್ರೆ, ತಪ್ಪಿದ ಕೃಷ್ಣಜನ್ಮಸ್ಥಾನ ಯಾತ್ರೆ

ಕಂಡಹಾಗೆ



ಸಾಮಾನ್ಯವಾಗಿ ಆಫೀಸಿನಿಂದ ಹೊರಗೆ ಕಾಲಿಡಲು ಆಗದಷ್ಟು ಕೆಲಸಗಳ ರಾಶಿ ಹಾಕಿಕೊಂಡಿರುತ್ತೇನೆ. ಲಂಕೇಶ್, ಗ್ರೀನ್, ಪ್ರಕಾಶನದ ಕೆಲಸ... ಇವನ್ನು ನಿಭಾಯಿಸಲೂ ದಿನದ ಇಪ್ಪತ್ನಾಲ್ಕು ಗಂಟೆ ಸಾಲುವುದಿಲ್ಲ ಅಂತ ಹಲವಾರು ಬಾರಿ ಅನ್ನಿಸಿದ್ದರೆ, ಇನ್ನೂ ಕೆಲವೊಮ್ಮೆ ಸಿನಿಮಾಗಳಲ್ಲಿ ಬರುವಂತೆ ನಾನೂ ಡಬಲ್ ಅಥವಾ ಟ್ರಿಪಲ್ ಆಕ್ಟಿಂಗ್ ಮಾಡುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಂತಲೂ ಅನ್ನಿಸುತ್ತದೆ. ಆದರೆ ಅವೆರಡೂ ಅಸಾಧ್ಯವಾಗಿರುವುದರಿಂದ ಟೈಂ ವಿಚಾರದಲ್ಲಿ ನಾನು ಬಹಳ ಜಿಪುಣಿಯಾಗಿದ್ದೇನೆ.



ಸಿದ್ದಪ್ಪಾಜಿ

ಆದರೂ ಹಲವೊಮ್ಮೆ ಅದು ಹೇಗೋ ಟೈಮ್ ಮಾಡಿಕೊಳ್ಳಬೇಕಾಗುತ್ತದೆ. ಮೊನ್ನೆ ಹಾಗೇ ಆಯಿತು. ಜನವರಿ ನಾಲ್ಕರ ಗುರುವಾರ ಒಂದು ಕೋರ್ಟ್ ಕೇಸಿಗೆ ಸಂಬಂಧಿಸಿದಂತೆ ಮೈಸೂರಿಗೆ ಹೋಗಬೇಕಿತ್ತು. ಅದರ ಹಿಂದಿನ ದಿನ ಸಂಜೆ ನಮ್ಮ ಬಳಿದಾಳೆ ಈಶರವರು ಚಿಕ್ಕಲ್ಲೂರಿನಲ್ಲಿ ಸಿದ್ದಪ್ಪಾಜಿ ಜಾತ್ರೆ ಇವತ್ತಿನಿಂದ ಶುರು. ರಾತ್ರಿ 10 ಗಂಟೆ ಸುಮಾರಿಗೆ ಚಂದ್ರಮಂಡಲ ಆಚರಣೆ ಇರುತ್ತಂತೆ. ಹೋಗೋಣವಾ...?" ಅಂದುದು. ಹೇಗಿದ್ದರೂ ಮಾರನೆ ದಿನ ಮೈಸೂರಿಗೆ ಹೋಗಬೇಕಿದ್ದರಿಂದ, ಚಿಕ್ಕಲ್ಲೂರಿ ನಿಂದ ಬೆಳಗ್ಗೆ ಹೊರಟರಾಯಿತು ಎಂದು ನಿರ್ಧರಿಸಿ ನಿಂತ ಹೆಜ್ಜೆಯಲ್ಲೇ ಹೊರಟೆವು. ಈ ನಿರ್ಧಾರ ತೆಗೆದುಕೊಂಡ ಅರ್ಧಗಂಟೆಯಲ್ಲೇ ನಮ್ಮ ಕಾರ್ ಕೊಳ್ಳೇಗಾಲದತ್ತ ಧಾವಿಸುತ್ತಿತ್ತು.

ಕರ್ನಾಟಕದ ನಾಥ-ಸಿದ್ಧರ ಪರಂಪರೆ ಗೊತ್ತಿರುವವರಿಗೆ ಮಂಟೇಸ್ವಾಮಿ ಬಗ್ಗೆಯೂ ಗೊತ್ತಿರುತ್ತದೆ. ಬಹುಶಃ 15-16 ನೇ ಶತಮಾನದಲ್ಲಿದ್ದಿರಬಹುದಾದ ಮಂಟೇಸ್ವಾಮಿಯ ಶಿಷ್ಯ ಅರ್ಥಾತ್ ಸಿಸುಮಗನೇ ಈ ಸಿದ್ದಪ್ಪಾಜಿ. ಒಂದು ಬಾರಿ ನಾವು ಹೀಗೆ ಯಾವುದೋ ಊರಿಗೆ ಹೋಗುತ್ತಿದ್ದಾಗ ಈಶ 'ಧರೆಗೆ ದೊಡ್ಡವ'ನಾದ ಮಂಟೇಸ್ವಾಮಿ ಕತೆಯ ಕ್ಯಾಸೆಟ್ ಹಾಕಿ ಕೇಳಿಸಿದ್ದರು. ಮೈಸೂರು ಮಹದೇವಯ್ಯ ಎಂಬ ವಯೋವೃದ್ಧ ನೀಲಗಾರ ನಿರೂಪಿಸಿರುವ ಮಂಟೇಸ್ವಾಮಿ ಪವಾಡದ ಕತೆ ಅದ್ಭುತವಾಗಿತ್ತು. ಅವತ್ತಿನಿಂದ ನನಗೆ ಮಂಟೇಸ್ವಾಮಿಯ ಕತೆ ಕೇಳುವ ಹುಚ್ಚು, ಅವನು ಮಠ ಕಟ್ಟಿ, ಬದುಕಿ, ನಿರ್ವಾಣವಾದ ಬೊಪ್ಪಗೊಂಡನಪುರ ಮತ್ತು ಅವನ ಸಿಸುಮಗ ಸಿದ್ದಪ್ಪಾಜಿಯ ಗದ್ದುಗೆ ಇರುವ ಚಿಕ್ಕಲ್ಲೂರಿಗೆ ಹೋಗಿ ಜಾತ್ರೆ ನೋಡಬೇಕೆಂಬ ಆಸೆ. ಅದು ಮೊನ್ನೆ ಮೂರನೇ ತಾರೀಖು ಬುಧವಾರ ಈಡೇರಿತು.

ಈ ಮಂಟೇಸ್ವಾಮಿಗೆ ನಡೆದುಕೊಳ್ಳುವವರು ದಕ್ಷಿಣ ಕರ್ನಾಟಕದಲ್ಲಿ ಲಕ್ಷಾಂತರ ಒಕ್ಕಲುಗಳಿವೆ. ಇವನ ಪವಾಡಗಳನ್ನು ಹಾಡುವ ನೀಲಗಾರರು ಮಂಟೇಸ್ವಾಮಿಯನ್ನು 12 ನೇ ಶತಮಾನದಿಂದ ಶುರುಮಾಡಿ ವಿಜಯನಗರದ ಕಾಲವನ್ನೂ ಹಾದಿ ಮೈಸೂರು ಒಡೆಯರ್ ಸನ್ನಿಧಿಯವರೆಗೂ ಓಡಾಡಿಸಿ ಕಾಲಾತೀತನನ್ನಾಗಿಸಿಬಿಟ್ಟಿದ್ದಾರೆ. ಇವನ ಶಿಷ್ಯ ಸಿದ್ದಪ್ಪಾಜಿಗೂ ಅಷ್ಟೇ ಭಕ್ತರಿದ್ದಾರೆ. ಇವನ ಗದ್ದುಗೆ ಇರುವ ಚಿಕ್ಕಲ್ಲೂರಿನಲ್ಲಿ ಹೊಸ ವರ್ಷದ ಮೊದಲ ಹುಣ್ಣಿಮೆಯ ರಾತ್ರಿ 'ಚಂದ್ರಮಂಡಲ' ಆಚರಣೆಯೊಂದಿಗೆ ಶುರುವಾಗುವ ಜಾತ್ರೆ ಐದು ದಿನ ನಡೆಯುತ್ತದೆ.

ಮೊನ್ನೆ ತರಾತುರಿಯಿಂದ ನಾವು ಹೊರಟದ್ದೇ ಈ ಚಂದ್ರಮಂಡಲವನ್ನು ನೋಡಲು. ಕನಕಪುರ ದಾಟಿ ಹಲಗೂರಿನಿಂದ ಪತ್ರಿಕೆಯ ಮಿತ್ರ ಸತೀಶ್‌ರನ್ನು ಸೇರಿಸಿಕೊಂಡು, ಕೊಳ್ಳೇಗಾಲದಿಂದ ನಮ್ಮ ವರದಿಗಾರ ಚಿಕ್ಕಮಾಳಿಗೆ ಹಾಗೂ ಪತ್ರಕರ್ತ ಗುರುಸ್ವಾಮಿಯವರನ್ನೂ ಜೊತೆಮಾಡಿಕೊಂಡು ಚಿಕ್ಕಲ್ಲೂರು ತಲುಪಿದಾಗ ರಾತ್ರಿ ಹತ್ತೂವರೆ ಗಂಟೆಯಾಗಿತ್ತು.

ಹೊಲ-ತೋಟಗಳನ್ನು ಹಾಯ್ದು ಬಯಲಿನಂತಿದ್ದ ಸ್ಥಳವೊಂದಕ್ಕೆ ನಾವು ತಲುಪಿ ನೋಡಿದರೆ ರಾತ್ರಿಯಲ್ಲೂ ಸಾವಿರಾರು ಜನ ಸೇರಿದ್ದರು. ನಿಜ ಹೇಳಬೇಕೆಂದರೆ ನಾನು ಎಂದೂ ಒಂದೇ ಸ್ಥಳದಲ್ಲಿ ಅಷ್ಟು ಬೃಹತ್ ಸಂಖ್ಯೆಯಲ್ಲಿ ಸೇರಿದ್ದ ಬಡ ರೈತಾಪಿಗಳನ್ನು ನೋಡಿರಲಿಲ್ಲ. ಚಳಿಗಾಲದ ಕೊನೆಯ ದಿನಗಳಾಗಿದ್ದರೂ ಚಳಿ ಕಮ್ಮಿ ಏನಿರಲಿಲ್ಲ. ಆದರೆ ಜನರ ಶ್ರದ್ಧೆಗೆ ಅದ್ಯಾವ ಲೆಕ್ಕ. ಗಂಡಸರು ತಲೆಗೆ ಟವಲ್ ಮತ್ತು ದೇಹಕ್ಕೆ ಬೆಡ್‌ಶೀಟ್‌ಗಳನ್ನು ಸುತ್ತಿಕೊಂಡಿದ್ದರೆ, ಮಹಿಳೆಯರು ತಮ್ಮ ಸೀರೆಯ ಸೆರಗನ್ನೇ ತಲೆಸುತ್ತಾ ಎಳೆದು ಬಿಗಿದುಕೊಂಡು ಒಂದು ಮಹೋನ್ನತ ಗಳಿಗೆಗಾಗಿ ಕಾದು ನಿಂತಿದ್ದರು. ಹತ್ತು ಸಾವಿರಕ್ಕೂ ಹೆಚ್ಚು ಬಡ ಜನ 'ಚಂದ್ರಮಂಡಲ' ನಡೆಯುವ ವೇದಿಕೆಯ ಕಡೆಗೆ ಮುಖ ಮಾಡಿ ಭಕ್ತಿ ಶ್ರದ್ಧೆಯಿಂದ ನಿಂತಿದ್ದರು. ಅವರ ನಡುವೆ ನುಗ್ಗಿ ಜಾಗ ಮಾಡಿಕೊಳ್ಳುತ್ತಾ ನಾವು ವೃತ್ತಾಕಾರಾವಾಗಿ ನಿರ್ಮಿಸಿದ್ದ ಆರಡಿ ಎತ್ತರದ ವೇದಿಕೆಯ ಹತ್ತಿರ ತಲುಪಿದೆವು. ತಲೆ ಮೇಲೆ ಆಕಾಶದಲ್ಲಿ ಪೂರ್ಣಚಂದ್ರನ ಬೆಳಕು ಹಾಲಿನಂತೆ ಚೆಲ್ಲಿತ್ತು.

'ಚಂದ್ರಮಂಡಲ' ಎಂಬುದು ಬಿದಿರಿನಲ್ಲಿ ನಿರ್ಮಿಸಿದ್ದ ಶಂಕುವಿನಾಕೃತಿಯ ರಚನೆ. ತಳಮಟ್ಟದಿಂದ ಸುರುಳಿ ಸುತ್ತಿದಂತೆ ಆಗಲವಾಗಿ ಶುರುವಾಗಿ ಎತ್ತರಕ್ಕೆ ಹೋದಂತೆ ಚಿಕ್ಕದಾಗುತ್ತಾ ಹೋಗುತ್ತದೆ. ಕೆಲವು ಸಣ್ಣಪುಟ್ಟ ಹೂ-ಹಣ್ಣುಗಳ ಪೂಜೆಯೊಂದಿಗೆ ಆರಂಭವಾದ ಜಾತ್ರೆ ಕೊನೆಗೆ 'ಚಂದ್ರಮಂಡಲ'ಕ್ಕೆ ಬೆಂಕಿ ಹಚ್ಚುವುದರೊಂದಿಗೆ ಕೊನೆಗೊಳ್ಳುತ್ತದೆ.

ಬೆಂಕಿ ವೃತ್ತಾಕಾರದಲ್ಲಿ ಝುಗ ಮಗಿಸಲು ಶುರುವಾದೊಡನೆ ಸುತ್ತಾ ನೆರೆದಿದ್ದ ಸಾವಿರಾರು ಭಕ್ತರು ತಾವು ಈ ಸೀಜನ್‌ನಲ್ಲಿ ಬೆಳೆದ ಭತ್ತ, ರಾಗಿ, ಜೋಳದ ತೆನೆ, ಅಡಕೆ ಗೊಂಚಲುಗಳನ್ನು ಉರಿಯುತ್ತಿದ್ದ ಚಂದ್ರಮಂಡಲದತ್ತ ತೂರಲಾರಂಭಿಸಿದರು. ಮಂಟೇಸ್ವಾಮಿ ಹಾಗೂ ಸಿದ್ದಪ್ಪಾಜಿಗೆ ರೈತರು ಅರ್ಪಿಸುವ ಕಾಣಿಕೆ ಇದು. ಈ ಆಚರಣೆ ಬಹಳ ಸರಳವಾಗಿದೆ. ಪುರೋಹಿತರಿಲ್ಲ, ಅರ್ಥವಾಗದ ಸಂಸ್ಕೃತ ಶ್ಲೋಕಗಳಿಲ್ಲ, ಕುಂದಾಚಾರಗಳಿರದ ಅಪ್ಪಟ ಕೃಷಿ ಹಬ್ಬವಿದು. ತನ್ನ ಒಕ್ಕಲುಗಳಿಂದ – ಅಂದರೆ ಭಕ್ತರಿಂದ – ಧರೆಗೆ ದೊಡ್ಡವರು, ಧರೆಯ ತಂದಯ್ಯ ಎಂದೆಲ್ಲಾ ಆರ್ದ್ರತೆಯ ಮೊರೆಯಾಲಾಪನೆ ಮಾಡಿಸಿಕೊಳ್ಳುತ್ತಾನೆ ಮಂಟೇಸ್ವಾಮಿ. ಅವನ ಪವಾಡಗಳನ್ನು ವೈಚಾರಿಕವಾಗಿ ವಿಶ್ಲೇಷಿಸಿದರೆ ದಕ್ಷಿಣ ಕರ್ನಾಟಕದಲ್ಲಿ ಕೃಷಿ ವಿಸ್ತರಿಸಲು ಅವನು ಬಡರೈತರಿಗೆ ನೆರವಾದ ಘಟನೆಗಳು ತೆರೆದುಕೊಳ್ಳುತ್ತವೆ. ಅವೆಲ್ಲವನ್ನು ಇಲ್ಲಿ ವಿವರಿಸಲು ಆಗಲ್ಲ, ಆದರೆ ನೀವು ಮಂಟೇಸ್ವಾಮಿಯ ಕತೆಗಳನ್ನು ಓದಿದರೆ, ಕ್ಯಾಸೆಟ್‌ಗಳನ್ನು ಕೇಳಿದರೆ ರೋಮಾಂಚಕ ಕತೆಗಳು ಸಿಗುತ್ತವೆ.

ಆಗಸದಲ್ಲಿ ಚಂದ್ರನ ತಣ್ಣನೆಯ ಬೆಳದಿಂಗಳು, ಇಳೆಯಲ್ಲಿ ಚಂದ್ರಮಂಡಲದ ಜ್ವಾಲೆ, ಸುತ್ತಲೂ ಸೇರಿದ್ದ ಬಡ ಜನರ ಕಪಟವಿಲ್ಲದ ಶ್ರದ್ಧಾಭಕ್ತಿ ತನ್ಮಯತೆಗಳೆಲ್ಲ ನಿಜಕ್ಕೂ ಮನಕಲಕುವಂತಿತ್ತು, ನಮ್ಮ ಸಮಾಜದ ಕಟ್ಟಕಡೆಯ ಮನುಷ್ಯರ, ಕಷ್ಟಗಳಲ್ಲಿ ಬೆಂದು ಬಸವಳಿದಿರುವ, ಬಡತನವನ್ನೇ ಹಾಸಿ ಹೊದೆಯುವ, ಮುಗ್ಧ ಜನರ ಜಾತ್ರೆ ಅದು. ನಾವು ಕಷ್ಟಪಟ್ಟು ಬಿಡುವು ಮಾಡಿಕೊಂಡು ಅಷ್ಟು ದೂರ ಹೋಗಿದ್ದೂ ಸಾರ್ಥಕ ಎನಿಸಿತ್ತು.

ಚಂದ್ರಮಂಡಲದ ಜ್ವಾಲೆ ಆರುತ್ತಿದ್ದಂತೆ ಸಾವಿರಾರು ಜನ ವೇದಿಕೆಗೆ ನುಗ್ಗಿ ಸುಟ್ಟು ಕರಕಲಾಗಿದ್ದ ಬಿದಿರು, ಧಾನ್ಯಗಳ ಕಪ್ಪನ್ನು- ಅದನ್ನು ಮಟ್ಟಿಕಪ್ಪು -ಎನ್ನುತ್ತಾರೆ -ತಗೆದುಕೊಂಡು ಹಣೆಗೆ ಹಚ್ಚಿಕೊಳ್ಳುತ್ತಿದ್ದರು. ಆಗ ವೇದಿಕೆಯನ್ನೇರಿ ಚಂದ್ರಮಂಡಲ ಆಚರಣೆಯನ್ನು ನಿರ್ವಹಿಸುತ್ತಿದ್ದ ಅರಸ್ ರವರನ್ನು ಮತ್ತು 'ಮಿನಿ ಮಂಟೇಸ್ವಾಮಿ' ಎಂಬ ಅಡ್ಡ ಹೆಸರು ಪಡೆದುರುವ ಹಂಪಿ ವಿಶ್ವವಿದ್ಯಾಲಯದ ವೆಂಕಟೇಶ್ ಇಂದುವಾಡಿಯನ್ನು ಮಾತಾಡಿಸಿ ಕೆಳಗೆ ಬಂದ ಮೇಲೆ ನನಗೂ ಮಟ್ಟಿಕಪ್ಪು ಸಿಕ್ಕಿತು. ದೇವರಗುಡ್ಡ ಒಬ್ಬ ನಮ್ಮೆಲ್ಲರ ಹಣೆಗೂ ಮಟ್ಟಿಕಪ್ಪು ಹಚ್ಚಿ ಕಾಣಿಕೆ ಪಡೆದು ಹೋದ.

ಇದೆಲ್ಲಾ ಮುಗಿದು ಮಧ್ಯರಾತ್ರಿಯಾಗುತ್ತಿದ್ದಂತೆ ಸಾವಿರಾರು ಜನ ಇಹ-ಪರಗಳ ಪರಿವೆಯೇ ಇಲ್ಲದೆ ಬಯಲಲ್ಲಿ, ಮರಗಿಡಗಳ ಕೆಳಗೆ, ಎತ್ತಿನ ಗಾಡಿಗಳ ಅಡಿ ಮುದುಡಿ ಮೈಚೆಲ್ಲಿದ್ದನ್ನು ನೋಡಿದೆ. ಹಾಗೆ ನಿದ್ರಾವಶರಾಗಿದ್ದ ಸಹಸ್ರಾರು ದೇಹಗಳನ್ನು ದಾಟಿಕೊಂಡು, ನಮ್ಮನ್ನೆಲ್ಲಾ ಬೆರಗುಗೊಳಿಸಿದ ಚಂದ್ರಮಂಡಲ ಜಾತ್ರೆ ಮುಗಿಸಿ ಮತ್ತೆ ಕೊಳ್ಳೇಗಾಲದತ್ತ ಹೊರಟಾಗ ರಾತ್ರಿ ಒಂದು ಗಂಟೆಯಾಗಿತ್ತು, ಬೆಳಗ್ಗೆ ಬೇಗನೆ ಎದ್ದು ಮೈಸೂರಿಗೆ ಹೊರಡಬೇಕೆಂಬ ಆತುರ ನನ್ನದಾದರೆ ವರದಿಗಾರ ಮಾಳಿಗೆಗೆ ನಮಗೆ ತಿಂಡಿ ತಿನ್ನಿಸಬೇಕೆಂಬ ತವಕ. ಸರಿ ಎಂದು ಟೌನಿನ ಫೇಮಸ್ ಆದರೆ ಸಾಧಾರಣ ಲೆವೆಲ್‌ನ ಹೋಟೆಲಿಗೆ ಹೋದೆವು. ಕೊಳ್ಳೇಗಾಲದ ಜನ ಎಂತಾ ತಿಂಡಿಪೋತರೆಂದು ನನಗೆ ಆಗಲೇ ಗೊತ್ತಾಗಿದ್ದು, ಸಪ್ಲೈಯರ್ ತಿಂಡಿ ಲಿಸ್ಟ್ ಹೇಳುತ್ತಾ "ಸೆಟ್ ಮಸಾಲೆ ದೋಸೆ ಇದೆ" ಎಂದ. ಬೆಂಗಳೂರಿನಲ್ಲಿ ಬರೀ ಸೆಟ್ ದೋಸೆ ನೋಡಿದ್ದ ನಮ್ಮ ಈಶ ಕುತೂಹಲದಿಂದ ಅದನ್ನೇ ಕೊಡಿ ಅಂದರು. ಸ್ವಲ್ಪದರಲ್ಲಿ ಬಂದು ಎರಡೆರಡು ಮಸಾಲೆ ದೋಸೆಗಳಿದ್ದ ಪ್ಲೇಟ್!



ನಾನು ಮತ್ತು ಕೊಳ್ಳೇಗಾಲ ಏಜೆಂಟ್ ಚಿಕ್ಕಮಾಳಿಗೆ

ಮಾಯಾ ಮಂತ್ರ ವಿದ್ಯೆಗೆ ಹೆಸರುವಾಸಿಯಾಗಿರುವ ಕೊಳ್ಳೇಗಾಲಕ್ಕೆ ಕಾಲಿಟ್ಟ ಮೇಲೆ ಈಶ ಸುಮ್ಮನಿರುತ್ತಾರ? ಕ್ಷಣಾರ್ಧದಲ್ಲಿ ಸೆಟ್ ಮಸಾಲೆ ಮಾತ್ರವಲ್ಲ ಅದರೊಂದಿಗೆ ಒಂದು ವಡೆಯನ್ನೂ 'ಮಾಯಾ' ಮಾಡಿದ ನಂತರ ನಾವು ಮೈಸೂರಿನತ್ತ ಹೊರಟೆವು. ದಾರಿಯಲ್ಲಿ ನಮ್ಮ ಹರಟೆ ಶುರುವಾಯಿತು. "ಮಾಳಿಗೆ ಅಂದರೆ ಊರಿನ ಹೆಸರಾ ಇಲ್ಲಾ ಸರ್‌ನೇಮಾ?" ಎಂದರು ಈಶ.

ನಮ್ಮ ವರದಿಗಾರ ಚಿಕ್ಕಮಾಳಿಗೆ ನಾಚುತ್ತಾ "ಸಾರ್ ಅದು ಫ್ಯಾಮಿಲಿ ಹೆಸರು. ನಮ್ಮದು ಜಾಯಿಂಟ್ ಫ್ಯಾಮಿಲಿ. ನಮ್ಮ ಮನೆಯಲ್ಲಿ ಚಿಕ್ಕಮಾಳಿಗೆ, ದೊಡ್ಡ ಮಾಳಿಗೆ, ಸಣ್ಣಮಾಳಿಗೆ, ಹಿರಿಮಾಳಿಗೆ, ಕಿರಿಮಾಳಿಗೆ ಅಂತಾ ಹೆಸರಿರೊ ಹದಿನೆಂಟು ಜನ ಇದ್ದೀವಿ" ಎಂದ.

"ಸರಿ ಮಾಳಿಗೆ ಅಂದ್ರೇನು" ಎಂದು ಕೇಳಿದೆ.

"ಮಾಳಗೇಶ್ವರಮ್ಮ ಅಂತಾ ನಮ್ಮನೇ ದೇವ್ರು ಹೆಸರದು. ಅವಳು ರಾವಣಾಸುರನ ತಂಗಿ ಅಂತೆ. ನಾವು ಅದನ್ನೇ ಪೂಜೆ ಮಾಡೋದು" ಅಂದ ಚಿಕ್ಕ ಮಾಳಿಗೆ.

ಅದು ನಿಜ, ಏಕೆಂದರೆ ಮಳವಳ್ಳಿ ಸುತ್ತಮುತ್ತ ಈಗಲೂ ಜನ ರಾವಣೇಶ್ವರಿಯನ್ನೇ ಪೂಜಿಸುತ್ತಾರೆ. ಇದರ ಬಗ್ಗೆ ಬೇಕಾದಷ್ಟು ಅಧ್ಯಯನಗಳೂ ನಡೆದಿವೆ. ಆದರೆ ನಮಗೆ 'ಮಾಳಿಗೆ' ವಿಚಾರ ಹೊಸದಾಗಿತ್ತಷ್ಟೇ. ಹೀಗೆ ದಾರಿ ಸಾಗುತ್ತಿರುವಾಗ ಮಾಳಿಗೆ ತಾವು ಕಂಡಿದ್ದ ಆಕ್ಸಿಡೆಂಟ್ ವಿಚಾರ ಹೇಳುತ್ತಾ "ಅವನ್ ಸೂಲ್ ಹೊಂಟೋಯ್ತು ಅನ್ ಕಂಡಿದ್ದೋ" ಎಂದರು.

ನಾನು ಬೆರಗಾಗಿ 'ಸೂಲು' ಅಂದ್ರೇನು? ಅಂತಾ ಕೇಳಿದರೆ 'ಉಸಿರು' ಅನ್ನೋ ಉತ್ತರ ಬಂತು. ಈ ತರಹ ತಮ್ಮದೇ ಪ್ರಾದೇಶಿಕ ಭಾಷಾ ಸೊಬಗನ್ನು ಉಳಿಸಿಕೊಂಡು ಮಾತಾಡುವವರನ್ನು ಕಂಡರೆ ನನಗೊಂತರಾ ಹೊಟ್ಟೆಕಿಚ್ಚು, ಯಾಕೆಂದರೆ ಬೆಂಗಳೂರಿನಲ್ಲೇ ಬೆಳೆದ ನಮ್ಮಂಥವರ ಭಾಷೆ ಪಾಲಿಷ್ ಆಗಿ ಆಗಿ ಯಾವ ಸ್ವಾರಸ್ಯ-ಸೊಗಡೂ ಇರದಂತಾಗಿ ಹೋಗಿರುತ್ತದೆ. ಚುರುಕು ಮಾತು, ಚಮತ್ಕಾರ ಅಥವಾ sattire ಗಳಿಂದ ನಾವು ಆ ಕೊರತೆಯನ್ನು ತುಂಬಿಕೊಳ್ಳಬೇಕು. ನಮ್ಮ ಬಳಗದ ರಾಜಲಕ್ಷ್ಮಿ ಅಂಕಲಗಿ ಕಚೇರಿಗೆ ಬಂದಾಗ ಅವಳ ಮಾತು ಕೇಳುವುದೇ ನನಗೆ ಚೆಂದ. ಪಕ್ಕಾ ಮಾಡ್ರನ್ ಹುಡುಗಿಯಾಗಿದ್ದರೂ ಬಿಜಾಪುರದ ಈ ಲಾಯರ್ ರಾಜಲಕ್ಷ್ಮಿ 'ಖರೆ, ಆದಾವು, ಬಂದೀನ್ರಿ' ಎಂದೆಲ್ಲಾ ಮಾತಾಡುತ್ತಿರುತ್ತಾಳೆ.

ಅಂದು ನಮ್ಮೊಂದಿಗಿದ್ದ ಹಲಗೂರ್ ಸತೀಶ್ ಕೂಡ ಅದೇ ಜಾಯಮಾನದವರು. ನಾವು ದೇವೇಗೌಡರ ರಾಜಕೀಯ, ಭ್ರಷ್ಟಾಚಾರ ಅಂತೆಲ್ಲಾ ಮಾತನಾಡುತ್ತಿದ್ದಾಗ ಸತೀಶ್ ಥಟ್ಟನೆ "ಅಲ್ಲಾ ಅವನು ತಿನ್ನೊದ್ ಒಂದ್ ಮುದ್ದೆ, ಇನ್ನೆಷ್ಟು ಅಳೆದಾನೊ?" (ದುಡ್ಡು ಹೊಡೆಯುವುದು ಎಂದರ್ಥ) ಎಂದರು.

ಇದಕ್ಕೆ ಗೌಡರೇ ಉತ್ತರ ಹೇಳಬೇಕು.

ಹೀಗೇ ಮಾತಾಡಿಕೊಂಡು ನಾವು ಮೈಸೂರಿನ ಕೋರ್ಟ್ ತಲುಪಿದಾಗ ಅನಿರೀಕ್ಷಿತ ಬೆಳವಣಿಗೆಗಳಿಂದಾಗಿ ನಾವು ನ್ಯಾಯಾಂಗದ ಬಂಧನಕ್ಕೆ ಒಳಗಾಗುವ ಪರಿಸ್ಥಿತಿ ಬಂತು. ಒಂದೆರಡು ಹಿಯರಿಂಗ್‌ಗೆ ಹಾಜರಾಗಿರಲಿಲ್ಲವೆಂಬ ತಪ್ಪಿಗಾಗಿ ಆ ಸಂದರ್ಭ ಎದುರಾಗಿತ್ತು. ಆದರೆ ಆಗಲೇ ಜಾಮೀನಿಗೆ ಅರ್ಜಿ ಹಾಕಿಕೊಂಡು ಸಂಜೆಯ ವೇಳೆಗೆ ಆ ವಿಚಾರ ಬಗೆಹರಿಸಿಕೊಂಡು ಬೆಂಗಳೂರು ಸೇರಿದೆವು. ಕೃಷ್ಣಜನ್ಮಸ್ಥಾನ ಸೇರುವುದನ್ನು ತಪ್ಪಿಸಿಕೊಂಡು...

ಈಗ ಎಂದಿನಂತೆ ಸಂಚಿಕೆಯ ಕೆಲಸದ ಒತ್ತಡ, ಬೇರೆ ಕೆಲಸಗಳ ಗಡಿಬಿಡಿಯ ನಡುವೆಯೂ ನಾವು ನೋಡಿದ 'ಚಂದ್ರಮಂಡಲ' ಇನ್ನೂ ನನ್ನ ಮನಸ್ಸನ್ನು ತುಂಬಿಕೊಂಡಿದೆ. ಮುಂದಿನ ಜನವರಿಗೆ ನಾನು ಮತ್ತೆ ಅಲ್ಲಿಗೆ ಹೋಗಬೇಕೆಂದಿದ್ದೇನೆ. ನೀವೂ ಒಮ್ಮೆ ಹೋಗಿ ಬನ್ನಿ ನಮ್ಮ ಪರಂಪರೆಯ ಬೇರುಗಳಿರುವುದೇ ಅಂತಹ ಜಾಗೆಗಳಲ್ಲಿ.....

-ಗೌರಿ ಲಂಕೇಶ್

ಲಂಕೇಶ್ ಪ್ರಕಾಶನದ ಹೊಸ ಹೆಜ್ಜೆ



ಇದೊಂದು ಚಿಕ್ಕ ಮತ್ತು ಚೊಕ್ಕ ಸಮಾರಂಭ. ನಮ್ಮ ಸಂಸ್ಥೆಯ ಮೂರನೆ ಕೂಸಾದ 'ಲಂಕೇಶ್ ಪ್ರಕಾಶನ' ಹೊರತಂದಿರುವ ಸುಕನ್ಯಾ ಕನಾರಳ್ಳಿಯವರ 'ಅಲ್ಲಿಂದ ಇಲ್ಲಿಗೆ' ಅನುವಾದಿತ 'ಅವಳ ಕತೆಗಳು' ಎಂಬ ಪುಸ್ತಕ ಬಿಡುಗಡೆ ಸಮಾರಂಭ. ನಾನು ಚಿಕ್ಕವಳಾಗಿದ್ದಾಗಿನಿಂದಲೂ ನನಗೆ ಪರಿಚಿತರಾಗಿರುವ, ಇವತ್ತಿಗೂ ಮಹಿಳಾಪರ, ಪ್ರಜಾಪ್ರಭುತ್ವದ ಪರ ಹೋರಾಟಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿರುವ ಡಾ. ವಿಜಯ(ಮ್ಮ)ರವರು ಈ ಪುಸ್ತಕವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಾಗ ಅವರು ತಕ್ಷಣವೇ ಒಪ್ಪಿಕೊಂಡಿದ್ದರು. ಹಾಗೆಯೇ ನಮ್ಮ ನಾಡಿನ ಚಿಂತಕರು, ಇವತ್ತು ಉತ್ತಮ ವಿಮರ್ಶಕಿ ಮತ್ತು ಸ್ತ್ರೀವಾದಿ ಲೇಖಕಿಯಾಗಿರುವ ಡಾ.ಎಂ.ಎಸ್. ಆಶಾದೇವಿ ಈ ಪುಸ್ತಕವನ್ನು ಕುರಿತು ಮಾತನಾಡಬೇಕೆಂದು ಕೇಳಿಕೊಂಡಾಗ ಆಕೆಯೂ ಒಪ್ಪಿಕೊಂಡರು.

ಈಗ ಅಮೆರಿಕದಲ್ಲಿ ವಾಸಿಸುತ್ತಿರುವ ಸುಕನ್ಯ ಮತ್ತು ಆಕೆಯ ಸಂಗಾತಿ ಹರಿ ರಜೆ ಮೇಲೆ ಆಗಮಿಸಿರುವುದರಿಂದ ನಮ್ಮ ಕಚೇರಿಯ ಹತ್ತಿರದಲ್ಲೇ ಇರುವ ಕರೂರ್ ವೈಶ್ಯ ಬ್ಯಾಂಕಿನ ಆವರಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದೆವು. ಶನಿವಾರ ಸಂಜೆ ನಾಲ್ಕು ಗಂಟೆಗೆ ನಡೆದ ಈ ಕಾರ್ಯಕ್ರಮಕ್ಕೆ 'ಲಂಕೇಶ್' ವಾರಪತ್ರಿಕೆಯ ಹಲವು ಮಿತ್ರರು ಆಗಮಿಸಿದ್ದರು.

ಪುಸ್ತಕ ಕುರಿತು ಮಾತನಾಡಿದ ಆಶಾದೇವಿ ಇದೊಂದು ಸಾರ್ಥಕ ಅನುವಾದವಾಗಿದ್ದು, ಅನುವಾದದ ಕಾರ್ಯದಲ್ಲಿ ಪರಕಾಯ ಪ್ರವೇಶ ಮಾಡಿ ತನ್ಮಯತೆಯಿಂದ ಕಾರ್ಯ ನಿರ್ವಹಿಸಿ ಕತೆಗಳ ಆಶಯವನ್ನು ಈಡೇರಿಸಿದ್ದಾರೆ ಎಂದರು. ಹಾಗೆಯೇ ಇವತ್ತು ಸಮಾಜದಲ್ಲಿ ಸ್ತ್ರೀಯರ ಸ್ಥಿತಿಯನ್ನು ಅರಿಯಲು ಅವರ ಸಾಹಿತ್ಯ ಕೂಡ ಮುಖ್ಯ, ಆದ್ದರಿಂದ ಭಾರತದ ಹಲವಾರು ಭಾಷೆಗಳಲ್ಲಿ ಮಹಿಳೆಯರು ಬರೆದಿರುವ ಕತೆಗಳನ್ನು ಕನ್ನಡಕ್ಕೆ ತಂದಿರುವುದು ಸ್ವಾಗತಾರ್ಹ ಎಂದರು.

ಮಹಿಳಾ ಸಾಹಿತ್ಯವನ್ನು ಹಲವು ಪೂರ್ವಾಗ್ರಹ ಮಾದರಿಗಳೊಂದಿಗೆ ನೋಡದೇ ಸ್ತ್ರೀ ವಿಶಿಷ್ಟ ಅನುಭವದ ಮಾದರಿ, ಸ್ತ್ರೀವಾದ ಸಿದ್ಧಾಂತ ಹಾಗೂ ಕಾವ್ಯ ಮಿಮಾಂಸೆಯ ಹಿನ್ನೆಲೆಯಲ್ಲಿ ವಿಮರ್ಶಿಸಿದಾಗ ತಾತ್ವಿಕ ನೆಲೆ ದೊರಕಿತು ಎನ್ನುವ ಅಭಿಪ್ರಾಯವನ್ನು ಆಶಾದೇವಿ ವ್ಯಕ್ತಪಡಿಸಿದರು. ಹಾಗೆಯೇ ಸ್ತ್ರೀ ಧಾರಣಾಶಕ್ತಿಯ ಹಿನ್ನೆಲೆಯಲ್ಲಿ ಸ್ತ್ರೀ ಜೀವನ ಪ್ರೀತಿಯ ಹಿನ್ನೆಲೆಯಲ್ಲಿ ನೋಡಬೇಕೆಂದೂ ಅವರು ಹೇಳಿದರು.

ಪುಸ್ತಕವನ್ನು ಬಿಡುಗಡೆ ಮಾಡಿದ ಡಾ. ವಿಜಯಮ್ಮನವರು ಪಾರಂಪರಿಕ ಸಂಪ್ರದಾಯಬದ್ಧ ವಿಮರ್ಶೆಯ ಕಾಲಘಟ್ಟದಿಂದ ಇಂದು ನೇರವಾಗಿ ಹೇಳುವ ಗಟ್ಟಿತನದ ಹಂತದವರೆಗೆ ವಿಮರ್ಶೆ ಬೆಳೆದು ಬಂದ ಹಂತವನ್ನು ವಿವರಿಸಿದ ಅವರು ಇಂತಹ ಸೃಜನಶೀಲ ಅನುವಾದದಂತಹ ಸಣ್ಣ ಪ್ರಯತ್ನ ವಿಸ್ತಾರವಾಗಬೇಕು ಹಾಗೂ ಕನ್ನಡದಲ್ಲಿ ಈ ಬಗೆಯ ಕತೆಗಳು ಇನ್ನಷ್ಟು ಬರಬೇಕು ಎಂದು ಆಶಿಸಿದರು.

ಅನುವಾದಕಿ ಸುಕನ್ಯಾ ಕನಾರಳ್ಳಿ ತನ್ನದೊಂದು ಪುಟ್ಟ ಪ್ರಯತ್ನವಾದರೂ ಸ್ತ್ರೀ ಸಂವೇದನೆಯನ್ನು ಸ್ತ್ರೀಯರು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮುಖ್ಯವಾದದ್ದು ಮತ್ತು ಇಂತಹ ಕಾರ್ಯದಲ್ಲಿ ಒಬ್ಬರ ಪ್ರಯತ್ನಕ್ಕಿಂತಲೂ ಹಲವಾರು ಜನರ ಪ್ರಯತ್ನವೂ ಕೈಗೂಡಬೇಕು ಎಂದರು.

ಕಳೆದ ಮೂರು ತಿಂಗಳಲ್ಲಿ ಎಂಟು ಪುಸ್ತಕಗಳನ್ನು ಹೊರತಂದಿರುವ 'ಲಂಕೇಶ್ ಪ್ರಕಾಶನ'ಕ್ಕಂತೂ ಇದೊಂದು ಹೆಮ್ಮೆಯ ದಿನವಾಗಿತ್ತು, ಏಕೆಂದರೆ ಆ ಎಂಟು ಪುಸ್ತಕಗಳಲ್ಲಿ ಮೂರು ಅಪ್ಪನ ಪುಸ್ತಕಗಳ ಮರುಮುದ್ರಣವಾಗಿದ್ದರೆ, ಸುಕನ್ಯಾ ಕನಾರಳ್ಳಿಯವರ ಈ ಪುಸ್ತಕ ನಮ್ಮ ಸಂಸ್ಥೆಯಿಂದ ಪ್ರಥಮ ಮಹಿಳಾ ಸಾಹಿತ್ಯದ ಪುಸ್ತಕವಾಗಿರುವುದು. ಬರುವ ಮಾರ್ಚ್ 8 (ಅಪ್ಪನ 72 ನೇ ಹುಟ್ಟುಹಬ್ಬ)ಕ್ಕೆ 'ಲಂಕೇಶ್ ಪ್ರಕಾಶನ'ದಿಂದ ಅಪ್ಪನ 'ನೀಲು' ಪದ್ಯಗಳ ಪುಸ್ತಕದ ಜೊತೆಗೆ ಟೀಕೆ-ಟಿಪ್ಪಣಿ ಭಾಗ ಮೂರನ್ನು ಹೊರತರಲಿದ್ದೇವೆ. ಅವುಗಳೊಂದಿಗೆ ಅಪ್ಪನ ಸಮಗ್ರ ಕತೆಗಳು ಹಾಗೂ ಇತರ ಪುಸ್ತಕಗಳೂ ಮರುಮುದ್ರಣಗೊಳ್ಳುತ್ತಿವೆ. ಹಾಗೆಯೇ ಅಂದು ಖುಷ್ವಂತ್ ಸಿಂಗ್‌ರವರ 'ಟ್ರೈನ್ ಟು ಪಾಕಿಸ್ತಾನ್' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿರುವ ಡಾ. ಎಂ.ಬಿ. ರಾಮಮೂರ್ತಿಯವರ ಪುಸ್ತಕವನ್ನು ಕೂಡ.

ಲಂಕೇಶ್ ಪ್ರಕಾಶನದ ಈ ಹೊಸ ಹೆಜ್ಜೆಗಳಿಗೆ ನಿಮ್ಮೆಲ್ಲರ ಬೆಂಬಲ ಮತ್ತು ಪ್ರೋತ್ಸಾಹ ಎಂದಿಗೂ ಇರಲಿ ಎಂದು ಆಶಿಸುತ್ತೇವೆ.

-ಗೌರಿ

ಕೊಡಗು: ದಲಿತ ಶಾಸಕನ ಮೇಲೆ ಚೆಡ್ಡಿಗಳ ಕೆಂಗಣ್ಣು

ಶಾಸಕನೊಬ್ಬ ತನ್ನ ಕ್ಷೇತ್ರಕ್ಕೇ ಕಾಲಿಡಬಾರದು. ಆತನ ವಿರುದ್ಧ ಬಹಿಷ್ಕಾರ ಹಾಕುತ್ತೇವೆ. ದಲಿತ ಜನಾಂಗಕ್ಕೆ ಸೇರಿದ ಶಾಸಕ ಮೇಲ್ಜಾತಿಯವರ ಮಾತನ್ನು ಕೇಳುವುದಿಲ್ಲ ಎಂದರೆ ಏನರ್ಥ?... ಇಂತಹ ವಾದಗಳೇ ಇವತ್ತು ಕೊಡಗಿನ ವಿರಾಜಪೇಟೆಯಲ್ಲಿ ಕೇಳಿಬರುತ್ತಿವೆ. ಹೀಗೆ ಪ್ರಜಾಪ್ರತಿನಿಧಿಯೊಬ್ಬನ ಬಗ್ಗೆ ಉದ್ಧಟತನದಿಂದ ಮಾತನಾಡುತ್ತಿರುವವರು, ಆ ಮೂಲಕ ತಾವು ಜಾತಿನಿಂದನೆಗೆ ಗುರಿಯಾಗುತ್ತೇವೆ ಎಂಬುದನ್ನೂ ಮರೆತಿರುವವರು, ಬೇರಿನ್ಯಾರೂ ಅಲ್ಲ, ಸಂಘಪರಿವಾರದವರು.

ಇವತ್ತು ಕೊಡಗಿನ ಸಂಘಪರಿವಾರದ ಕೆಂಗಣ್ಣಿಗೆ ಗುರಿಯಾಗಿರುವವರು ದಲಿತ ಸಮುದಾಯಕ್ಕೆ ಸೇರಿರುವ ಹೆಚ್.ಡಿ. ಬಸವರಾಜು ಎಂಬ ವಿರಾಜಪೇಟೆಯ ಬಿಜೆಪಿ ಶಾಸಕ. ಈತ ಮಾಡಿದ ತಪ್ಪು ಕೊಡವ ಸಮುದಾಯಕ್ಕೆ ಸೇರಿರುವ ಅಪ್ಪಚ್ಚು ರಂಜನ್ ಎಂಬ ಸೋಮವಾರಪೇಟೆಯ ಮಾಜಿ ಬಿಜೆಪಿ ಶಾಸಕನ ತಾಳಕ್ಕೆ ಕುಣಿಯದಿದ್ದದ್ದು, ಸಂಘ ಪರಿವಾರದ ಆದೇಶಗಳನ್ನು ಪಾಲಿಸದೇ ಇದ್ದದ್ದು, ತಾನು ದಲಿತನಾದರೂ ತನಗೂ ಬುದ್ಧಿ ಇದೆ ಎಂದು ತೋರಿಸಿದ್ದು. ಇದಿಷ್ಟು ಸಾಕಲ್ಲವೇ ಸಂಘಪರಿವಾರದ ಕೋಪಕ್ಕೆ ಗುರಿಯಾಗಲು?



ಶಾಸಕನ ಮನೆಯ ಕಿಟಕಿ ಪುಡಿಯಾಗಿರುವುದು

ಇದೆಲ್ಲ ಪ್ರಾರಂಭವಾದದ್ದು ಒಂದು ತಿಂಗಳ ಹಿಂದೆ; ಅಪ್ಪಟ ಚೆಡ್ಡಿ ಬುದ್ಧಿಯ ಸೋಮವಾರಪೇಟೆಯ ಮಾಜಿ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ವಿರಾಜಪೇಟೆಯಲ್ಲಿ ತನ್ನ ವಂಶಸ್ಥಾನವನ್ನು ಹುಟ್ಟಿಸಲು ತನ್ನ ಸಹೋದರನಾದ ಸುನೀಲ್ ಸುಬ್ರಮಣಿಯನ್ನು ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಸ್ಥಾನಕ್ಕೆ ಏರಿಸಲು ಪ್ರಯತ್ನಿಸಿದ್ದಾಗಿನಿಂದ.

ಆದರೆ ತನ್ನ ಸಹೋದರನನ್ನು ಅಧ್ಯಕ್ಷ ಗದ್ದುಗೆಗೆ ಏರಿಸುವ ಅಪ್ಪಚ್ಚು ರಂಜನ್ ಪ್ಲಾನ್ ಯಶಸ್ವಿ ಆಗಲಿಲ್ಲ. ಅದಕ್ಕೆ ಅಡ್ಡ ಬಂದವರು ಮಡಿಕೇರಿಯ ಬಿಜೆಪಿ ಶಾಸಕ ಕೆ.ಜಿ. ಬೋಪಣ್ಣ ಮತ್ತು ವಿರಾಜಪೇಟೆಯ ಬಿಜೆಪಿ ಶಾಸಕ ಬಸವರಾಜು. ಪಂಚಾಯತಿಯ ಪ್ರಧಾನ ಕಾರ್ಯದರ್ಶಿ ಆಗಿರುವ ಸುನೀಲನನ್ನು ಯಾವುದೇ ಕಾರಣಕ್ಕೆ ಅಧ್ಯಕ್ಷನನ್ನಾಗಿ ನೇಮಿಸಬಾರದೆಂದು ಅವರಿಬ್ಬರು ವಿರೋಧ ವ್ಯಕ್ತಪಡಿಸಿದರು. ಈ ವಿವಾದ ಕುರಿತಂತೆ ಸುಮಾರು ಒಂದು ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲೂ ಎರಡೂ ಬಣಗಳು ಕೈಕೈ ಮಿಲಾಯಿಸುವ ಹಂತಕ್ಕೂ ಹೋಗಿದ್ದವು.

ಈ ಜಗಳ ಇನ್ನೂ ಬಗೆಹರಿಯದೇ ಮುಂದೆ ಸಾಗಿರುವ ಸಂದರ್ಭದಲ್ಲೇ ದೇಶದೆಲ್ಲೆಡೆ ಸಂಘಪರಿವಾರ ಏರ್ಪಡಿಸುತ್ತಿರುವ 'ವಿರಾಟ ಹಿಂದೂ ಸಮಾವೇಶ' ಎಂಬ ಕೋಮುದ್ವೇಷದ ಕಾರ್ಯಕ್ರಮ ವಿರಾಜಪೇಟೆಯಲ್ಲೂ ನಡೆಯಿತು. ಈ ಕಾರ್ಯಕ್ರಮವನ್ನೇ ನೆಪವಾಗಿ ಇಟ್ಟುಕೊಂಡು ತನ್ನ ತೋಳ್ಬಲ ಮತ್ತು ಹಣಬಲವನ್ನು ಪ್ರದರ್ಶಿಸಲು ಮುಂದಾದ ಅಪ್ಪಚ್ಚು ರಂಜನ್‌ನ ಮತ್ತೊಬ್ಬ ಸಹೋದರ ಸುಜ ಕುಶಾಲಪ್ಪ. ಆದರೆ ದುರಾದೃಷ್ಟವಶಾತ್, ಸಾರಾಯಿ ಗುತ್ತಿಗೆದಾರನಾದ ಸುಜ ಕುಶಾಲಪ್ಪ ಎಷ್ಟು ಹಣ ಸುರಿದರೂ ಆತ ನಿರೀಕ್ಷಿಸಿದ್ದ 50,000 'ಹಿಂದೂ'ಗಳು ಈ ಸಮಾವೇಶಕ್ಕೆ ಬರಲೇ ಇಲ್ಲ. ಬದಲಾಗಿ ಕೇವಲ ಐದು ಸಾವಿರ ಜನ ಮಾತ್ರ ಬಂದು ಆತನಿಗೆ ತೀವ್ರ ಮುಖಭಂಗವಾಯಿತು. ಆದರೆ ಮಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಂದ ಗಡವ, ಈ ಸೋಲಿಗೆ ಕಾರಣ ಶಾಸಕ ಬಸವರಾಜು ಯಾವುದೇ ಕೆಲಸ ಮಾಡದಿದ್ದದ್ದು ಎಂಬ ತಕರಾರು ಎತ್ತಿದ.


ಗಾಂಜಾ ಪಾರ್ಟಿ ಚಕ್ಕೇರ

ಹೇಳಿ ಕೇಳಿ ಬಸವರಾಜು ದಲಿತ. ಅಂತಹವರು ಬಲಿಷ್ಠ ಮೇಲ್ಜಾತಿ ಕೊಡವರ ಆದೇಶ ಪಾಲಿಸಲಿಲ್ಲ ಅಂದರೆ ಅದನ್ನು ಸಹಿಸಲಿಕ್ಕಾಗುತ್ತದೆಯೆ? ಇದನ್ನು ಪ್ರತಿಭಟಿಸಲೇಬೇಕೆಂದು ಮತ್ತೊಬ್ಬ ಕೊಡಗಿನ ವೀರ ಚಕ್ಕೇರ ಮನು ಎಂಬಾತ ಮುಂದಾದ. ಮರುದಿನ ನಡೆದ ಸಾರ್ವಜನಿಕ ಸಭೆಗೆ ಶಾಸಕ ಬಸವರಾಜು ಹಾಜರಾದಾಗ ಅವರನ್ನು ವ್ಯಂಗ್ಯ' ಭರಿತ ಮಾತುಗಳಲ್ಲಿ ಉದ್ದೇಶಿಸಿ ಮಾತನಾಡಿದ. ಅದಕ್ಕೆ ಅವರು ಪ್ರತಿಕ್ರಿಯಿಸದಿದ್ದಾಗ ಮನು ಕುಪಿತನಾದ.

ಈ ಮನುವಿನದ್ದು ಹಾಸ್ಯಾಸ್ಪದ ಇತಿಹಾಸ. ಹಿಂದೊಮ್ಮೆ ಸಂಪೂರ್ಣವಾಗಿ ಗಾಂಜಾ ಪಾರ್ಟಿ ಆಗಿದ್ದ ಈತ ಒಮ್ಮೆ ಮುಸಲ್ಮಾನರೊಬ್ಬರ ಮನೆಗೆ ಗಾಂಜಾ ಖರೀದಿಸಲು ಹೋಗಿದ್ದ. ಆಗ ಅವರು "ನಮ್ಮಲ್ಲಿ ಗಾಂಜಾ ಇಲ್ಲ, ಹೋಗು" ಅಂದಾಗ ಮನುಗೆ ಎಷ್ಟು ಕೋಪ ಬಂದಿತ್ತೆಂದರೆ ಅವರ ಮನೆಯ ಮುಂದಿದ್ದ ಕುರಿಯನ್ನೇ ಕದ್ದುಕೊಂಡು ಹೋಗಿದ್ದ. ಇದರ ಬಗ್ಗೆ ಆ ಮುಸಲ್ಮಾನರು ಪೊಲೀಸರಿಗೆ ದೂರು ನೀಡಿ, ಗೋಣಿಕೊಪ್ಪದ ಪೊಲೀಸರು ಮನುವನ್ನು ಬಂಧಿಸಿ, ಆತನ ಕೈಗಳಿಗೆ ಕೋಳಗಳನ್ನು ತೊಡಿಸಿ ನಗರದಲ್ಲಿ ಮೆರವಣಿಗೆ ಮಾಡಿಸಿದ್ದರು. ಇಂತಹ ಮನು ಆನಂತರ ಪಕ್ಕಾ ಆರೆಸ್ಸೆಸ್ ಆಗಿ, ಅವರು ಸ್ಥಾಪಿಸಿರುವ ನಿರರ್ಥಕ ಆದಿವಾಸಿ ಕಲ್ಯಾಣ ಸಂಘಕ್ಕೆ ನಾಯಕನಾದ ಎಂಬುದು ಅಚ್ಚರಿಯ ವಿಷಯವೇನಲ್ಲ.

ಆದಿವಾಸಿಗಳ ಉದ್ಧಾರದ ಬಗ್ಗೆ ಮಾತನಾಡುತ್ತಾ ಚೆಡ್ಡಿ ಕೆಲಸ ಮಾಡುತ್ತಿದ್ದ ಮನು, ಜನವರಿ 2ರಂದು ಸಂಜೆ ವಿರಾಜಪೇಟೆಯ ಸಂಗಮ್ ಬಾರ್‌ನಲ್ಲಿ ಕುಡಿದು ಚಿತ್ತಾಗಿದ್ದಾನೆ. ಹಾಗೆ ಚಿತ್ತಾದ ನಂತರ ತಪ್ಪಗೆ ಮನೆಗೆ ಹೋಗುವ ಬದಲು ಬಸವರಾಜುರವರಿಗೆ ಫೋನ್ ಮಾಡಿ "ಅಕ್ಕನ್, ಅಮ್ಮನ್" ಇತ್ಯಾದಿ ಸುಸಂಸ್ಕೃತ ಭಾಷೆಯನ್ನು ಪ್ರಯೋಗಿಸಿದ್ದಾನೆ. ಕೊನೆಗೆ, "ಎಲ್ಲಿದ್ದೀಯೋ ಮಗನೆ?" ಎಂದು ಕೇಳಿದ್ದಾನೆ. "ಇನ್ನೆಲ್ಲಿರುತ್ತೀನಿ, ಮನೆಯಲ್ಲಿದ್ದೇನೆ" ಎಂದು ಬಸವರಾಜು ಉತ್ತರಿಸಿದ್ದಾರೆ.

ಅವರು ಮನೆಯಲ್ಲಿದ್ದಾರೆ ಎಂದು ಗೊತ್ತಾದ ಕೂಡಲೆ ಅವರ ಮನೆಮುಂದೆ ಹಾಜರಾದ ಮನು ಬಾಗಿಲು ಬಡಿದು "ತೆಗೆಯೋ ಬಾಗಿಲು ಸೂಳೆ ಮಗನೆ" ಎಂದೆಲ್ಲ ಅರಚುತ್ತಾ ಕುಡಿದ ಅಮಲಿನಲ್ಲಿ ದಾಂಧಲೆ ಎಬ್ಬಿಸಿದ್ದಾನೆ. ಆಗ, ಬಸವರಾಜುರವರು ಬಾಗಿಲನ್ನು ತೆರೆಯದೆ ತಮ್ಮ ಮನೆಯ ಪಕ್ಕದಲ್ಲೇ ವಾಸಿಸುವ ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೆ ಫೋನ್ ಮಾಡಿ ಅವರನ್ನು ಕರೆದಿದ್ದಾರೆ. ಅವರು ಬರುವಷ್ಟರಲ್ಲಿ ಬಸವರಾಜುರವರ ಮನೆಯ ಕಿಟಕಿಯನ್ನು ಮನು ಒಡೆದಿದ್ದಾನೆ, ಬಾಗಿಲು ಮುರಿಯಲು ಪ್ರಯತ್ನಿಸಿದ್ದಾನೆ. ಸಹಜವಾಗಿಯೇ ಪೊಲೀಸರು ಮನುವನ್ನು ಬಂಧಿಸಿ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ.



ಅಪ್ಪಚ್ಚು ರಂಜನ್

ಆದರೆ, ಪೊಲೀಸರು ದಲಿತ ಬಸವರಾಜು ಪರ ವಹಿಸಿ ಕೊಡವ ಮನುವನ್ನು ಬಂಧಿಸಿದ್ದಾರೆ ಎಂದು ಕೆಂಡಾಮಂಡಲವಾದ ಚೆಡ್ಡಿ ಕೊಡವರು ಮರುದಿನ ಇಡೀ ವಿರಾಜಪೇಟೆ ತಾಲ್ಲೂಕಿನಲ್ಲಿ ಬಂದ್‌ಗೆ ಕರೆ ನೀಡಿದ್ದಾರೆ.

"ನಮ್ಮ ಮನು ತುಂಬಾ ಸಂಭಾವಿತ, ಆತನನ್ನು ಬಸವರಾಜುರವರೇ ಮನೆಗೆ ಕರೆಸಿಕೊಂಡಿದ್ದರು. ಮನು ಅವರ ಮನೆಗೆ ಹೋಗಿದ್ದಾಗ ದೊಣ್ಣೆ ಕೋಲಿನಲ್ಲಿ ಅವನಿಗೆ ಬಾರಿಸಿದ್ದಾರೆ. ತಕ್ಷಣವೇ ಮನುರನ್ನು ಬಿಟ್ಟು ಬಸವರಾಜುರವರನ್ನು ಬಂಧಿಸಬೇಕು" ಎಂದು ಚೆಡ್ಡಿಗಳು ತರಲೆ ಶುರುಮಾಡಿವೆ. ಗಾಂಜಾ ಪಾರ್ಟಿ ಆಗಿದ್ದ ಮನು, ಈ ಪ್ರಕರಣ ನಡೆದ ರಾತ್ರಿ ಟೋಟಲ್ ಆಗಿ ಚಿತ್ತಾಗಿದ್ದ ಎಂದು ವೈದ್ಯರ ವರದಿ ಹೇಳುತ್ತಿದ್ದರೂ ಚೆಡ್ಡಿಗಳು ಅದನ್ನು ನಿರ್ಲಕ್ಷಿಸುತ್ತಿವೆ.



ಬಿಜೆಪಿ ಶಾಸಕನ ವಿರುದ್ಧ ಚೆಡ್ಡಿಗಳ ಪ್ರತಿಭಟನೆ

ಅದೆಲ್ಲಕಿಂತಲೂ ಮುಖ್ಯವಾಗಿ "ನಾವು ಸಾಕಿದ ನಾಯಿ ಆ ಬಸವರಾಜು. ಇವತ್ತು ಆ ನಾಯಿಯೇ ನಮ್ಮನ್ನು ಕಚ್ಚಲು ಬರುತ್ತದೆಂದರೆ ಸುಮ್ಮನಿರಕ್ಕಾಗುತ್ತಾ?" ಅಂತ ಬೊಬ್ಬೆಹಾಕುತ್ತಿವೆ. ಅಷ್ಟೇ ಅಲ್ಲ ಆತನ ವಿರುದ್ಧ ಬಹಿಷ್ಕಾರ ಹಾಕುತ್ತೇವೆ ಎಂದೂ ಅರಚಿದ್ದವು. ಆದರೆ ಅದ್ಯಾರು ಬುದ್ಧಿ ಹೇಳಿದರೋ ಏನೋ, ಬಸವರಾಜು ವಿರುದ್ಧ ಬಹಿಷ್ಕಾರ ಎಂದರೆ ಅದು ಜಾತಿನಿಂದನೆಗೆ ಸಮನಾಗಿದ್ದು ಕಂಬಿ ಎಣಿಸಬೇಕಾಗುತ್ತದೆ ಎಂದು ಅರಿತು ಕೊನೆ ಗಳಿಗೆಯಲ್ಲಿ ತಮ್ಮ ಮಾತನ್ನು ಬದಲಿಸಿವೆ. ಆದ್ದರಿಂದ, ಬಹಿಷ್ಕಾರದ ಬದಲಾಗಿ "ಆತ ಈ ಕ್ಷೇತ್ರಕ್ಕೇ ಕಾಲಿಡಕೂಡದು, ಯಾವ ಕಾರ್ಯಕ್ರಮದಲ್ಲೂ ಭಾಗವಹಿಸಬಾರದು" ಎಂದು ಈಗ ಪ್ರತಿಭಟಿಸುತ್ತಿವೆ. ಅಷ್ಟೇ ಅಲ್ಲದೆ, ಸ್ಥಳೀಯರಾದ ಕೊಡವರ ಆದೇಶಗಳನ್ನು ಪಾಲಿಸದೇ ಇದ್ದ ಬಸವರಾಜು ಮೂಲತಃ ಮಂಡ್ಯ ಜಿಲ್ಲೆಯವರಾದ್ದರಿಂದ "ಆತ ಹೊರಗಿನವನು. ಅವನು ಇಲ್ಲಿ ಕಾಲಿಡದಂತೆ ಮಾಡಿ" ಎಂದೂ ಚೆಡ್ಡಿಗಳು ತಕರಾರೆತ್ತಿವೆ.

ಬಸವರಾಜು ಪುರಾಣ

ಈಗ ಕೊಡವ ಚೆಡ್ಡಿಗಳ ಕೋಪಕ್ಕೆ ಗುರಿಯಾಗಿರುವ ಬಸವರಾಜು ಸತ್ಯಹರಿಶ್ಚಂದ್ರನೇನಲ್ಲ. ಅಧಿಕಾರಿಗಳಿಂದ ಹಫ್ತಾ ವಸೂಲಿಯಿಂದ ಹಿಡಿದು ವರ್ಗಾವಣೆ ದಂಧೆಗಳಲ್ಲೂ ಈತನದ್ದು ಎತ್ತಿದ ಕೈ. ಆದರೆ ಈತ ಬಿಜೆಪಿ ಪಕ್ಷದ ಶಾಸಕನಾದರೂ ಚೆಡ್ಡಿಗಳ ಕಿಡಿಗೇಡಿ ಬುದ್ಧಿ ಹೊಂದಿಲ್ಲ. ಬಸವರಾಜನ ವ್ಯಕ್ತಿತ್ವ ಎಂತಹದ್ದೆಂದರೆ ಆತ ಚೆಡ್ಡಿಗಳು ಕೇಳಿದಷ್ಟು ಹಣ ಬಿಸಾಡಿ ಅವರ ಕೋಮುವ[...] ಕಾರ್ಯಕ್ರಮಗಳಿಂದ ದೂರ ಉಳಿಯುವುದು.

ಹಿಂದೊಮ್ಮೆ ಮಂಡ್ಯದಲ್ಲಿ ಸಿಂಡಿಕೇಟ್ ಬ್ಯಾಂಕಿ[...] ನೌಕರಿ ಮಾಡುತ್ತಿದ್ದ ಬಸವರಾಜು ತಮ್ಮ ಕೆಲ[...] ರಾಜೀನಾಮೆ ನೀಡಿ ಬಿಜೆಪಿ ಪಕ್ಷ ಸೇರಿ ಮೀಸಲು ಕ್ಷೇತ್ರ[...] ವಿರಾಜಪೇಟೆಯಿಂದ ಸ್ಪರ್ಧಿಸಿ ಗೆದ್ದಿದ್ದರು. ಆದರೆ [...] ಚೆಡ್ಡಿ ನಾಯಕರಿಗೆ ಗೊಡ್ಡು ಸಲಾಮು ಹೊಡೆಯುವವ[...] ಎಂದು ಗೊತ್ತಾಗಿ ಹಿಂದಿನ ಚುನಾವಣೆಗಳಲ್ಲಿ ಆತನ ವಿರು[...] ಚೆಡ್ಡಿಗಳೇ ಕೆಲಸ ಮಾಡಿ ಸೋಲಿಸಿದ್ದರು. ಕಳೆದ ಚುನಾವ[...]ಯಲ್ಲಿ ಬಸವರಾಜುಗೆ ಪಕ್ಷ ಟಿಕೇಟು ನೀಡದ[...] ನೋಡಿಕೊಳ್ಳಲು ಯತ್ನಿಸಿದರು. ಆದರೆ ಅದು ಹೇಗೋ ಟಿಕೇಟ್ ಪಡೆದ ಬಸವರಾಜು ಕಾಂಗ್ರೆಸ್‌ನ ಸುಮಾ ವಸಂ[...] ವಿರುದ್ಧದ ಮತಗಳನ್ನು ಪಡೆದು ಗೆದ್ದೇಬಿಟ್ಟರು. ಹೀ[...] ಎರಡನೇ ಬಾರಿ ಗೆದ್ದ ಬಸವರಾಜು ಚೆಡ್ಡಿಗಳಿಗೆ ಕ್ಯಾರೆ ಅನ್ನದೆ ತಮ್ಮ ನುಂಗಾಟದಲ್ಲಿ ತಲ್ಲೀನರಾದರು.

ಅಪ್ಪಟ 'ದೇಶಭಕ್ತ'ರಾದ, 'ಭ್ರಷ್ಟಾಚಾರ ವಿರೋಧಿ'ಗಳಾದ[...] ಚೆಡ್ಡಿಗಳು ಎಂದು[...] ಈತನ ಗುಳುಂ[...] ಕಾರ್ಯಗಳ ಬಗ್ಗೆ[...] ಚಕಾರ ಎತ್ತಿದ್ದಿಲ್ಲ[...] ಆದರೆ ಯಾವತ್ತು[...] ಬಸವರಾಜು ತಮ್ಮ[...] ಗರ್ಭಗುಡಿಯಲ್ಲಿ[...] ನಾಯಕರ ಅನುಮತಿ ಪಡೆಯದೇ ಮತ್ತೆ ಕೆಲಸ ಮಾಡ[...] ಶುರುಮಾಡಿದರೋ ಆಗ ಚೆಡ್ಡಿಗಳ ಪಿತ್ತ ನೆತ್ತಿಗೇರಿ[...] "ಯಾರ ಅನುಮತಿ ಪಡೆದು ಈ ಕಾಮಗಾರಿ ಪಾ[...] ಮಾಡಿದೆ, ಈ ಟೆಂಡರ್ ಪಾಸ್ ಮಾಡಿಸುವ ಅಧಿಕಾ[...] ನಿನಗೆ ಕೊಟ್ಟವರು ಯಾರು?" ಎಂದೆಲ್ಲ ತಕರಾರು [...] ಆತನನ್ನು ನಿಯಂತ್ರಿಸಲು ಚೆಡ್ಡಿಗಳು ಪ್ರಯತ್ನಿಸಿದರು. ಆ[...] ಯಾವಾಗ ಬಸವರಾಜು ಅಪ್ಪಚ್ಚು ರಂಜನ್ ಸಹೋದ[...] ಸುನಿಲ್ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಸ್ಥಾನಕ್ಕೆ ಏರುವುದ[...] ತಡೆದರೋ ಅದನ್ನು ಕೊಡವ ಚೆಡ್ಡಿಗಳಿಗೆ ಸಹಿಸಲಾಗಲಿ[...]

ದಲಿತರು ಹಿಂದೂಗಳಲ್ಲ

ಕೊಡಗಿನ ಈ ವಿವಾದಕ್ಕೆ ಇನ್ನೊಂದು ಆಯಾಮ[...] ಇದೆ. ಒಂದೆಡೆ ಎಲ್ಲ ಜಾತಿಯವರನ್ನು 'ಹಿಂದೂ' ಎ[...] ಲೇಬಲ್ ಅಡಿ ಸೇರಿಸಲು ಪ್ರಯತ್ನಿಸುತ್ತಿರುವ ಬಿಜೆಪಿಗ[...] ಕೊಡಗಿನಲ್ಲಿ ಓರ್ವ ದಲಿತ ಶಾಸಕನ ವಿರುದ್ಧ ಕೊಡವ[...] ಪ್ರತಿಭಟಿಸುತ್ತಿದ್ದರೆ ಯಾವ ಚೆಡ್ಡಿ ನಾಯಕನೂ ತುಟಿಪಿಟಿ[...] ಎಂದಿಲ್ಲ. ಇದರಿಂದಲೇ ಹಿಂದೂತ್ವವಾದಿಗಳಿಗೆ ದಲಿ[...] ಬಗ್ಗೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದಲ್ಲ[...]

ವಿಪರ್ಯಾಸದ ಸಂಗತಿ ಯಾವುದೆಂದರೆ, ವಿರಾಜಪ[...] ತಾಲ್ಲೂಕು ಕಾಂಗ್ರೆಸ್‌ನ ನಾಯಕಿ ವೀಣಾ ಅಚ್ಚ[...] ಕೂಡ ತನ್ನ ಕೊಡವ ಸಮುದಾಯದ ಚೆಡ್ಡಿಗಳ ಪರವಹಿ[...] "ಬಸವರಾಜು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾ[...] ಕೊಡಬೇಕು" ಎಂದು ಹೇಳುವ ಮೂಲಕ ತನ್ನ ಪ[...] ಜಾತ್ಯತೀತ ನಿಲುವಿಗೇ ದ್ರೋಹ ಬಗೆದಿದ್ದಾರೆ. ಈ ಹೆಂ[...] ಬುದ್ಧಿ. ಹೇಳುವ ಜನ ಕೊಡಗಿನಲ್ಲಿಲ್ಲವೇ?

ಕೊಡಗು ಜಿಲ್ಲೆಯಲ್ಲಿ ಹಲವಾರು ಸಮಸ್ಯೆಗಳ[...] ಅವುಗಳಲ್ಲಿ ಪ್ರಮುಖವಾದದ್ದು ಬಾನೆ ಜಮೀನುಗಳ[...] ಕುರಿತದ್ದು. ಈ ಜಮೀನುಗಳು ಜನರಿಗೆ ಸೇರಿದ್ದು ಎಂ[...] ಒಂದು ದಶಕಕ್ಕೂ ಹಿಂದೆ ನ್ಯಾಯಾಲಯ ತೀರ್ಪು ನೀಡಿದ್ದ[...] ಇತ್ತೀಚೆಗೆ ಕೋ-ಜಾ ಸರಕಾರದ ಮಂತ್ರಿ ಜಗದೀಶ್ ಶೆಟ್ಟ[...] ಒಂದು ಸರ್ಕಾರಿ ಸುತ್ತೋಲೆಯನ್ನು ಹೊರಡಿಸಿ [...] ಮುಂದೆ ಈ ಬಾನೆ ಜಮೀನುಗಳು ಸರಕಾರಕ್ಕೆ ಸೇ[...] ಎಂದು ಆದೇಶ ನೀಡಿದ್ದಾರೆ. ಈ ಆದೇಶ ಸಾವಿರಾ[...] ರೈತರ ಬದುಕನ್ನೇ ನಾಶಮಾಡಲಿದ್ದು ಅದನ್ನು ಪ್ರ[...] ಖ್ಯಾತ ವಕೀಲ ಎ. ಕೆ. ಸುಬ್ಬಯ್ಯನವರು ನ್ಯಾಯಾಲಯ[...] ಮುಂದೆ ಅರ್ಜಿ ಸಲ್ಲಿಸಿದ್ದಾರೆ.

ಆದರೆ ಚೆಡ್ಡಿಗಳಿಗೆ ಎಂದೂ ಜನಪರವಾಗಿ ಚಿಂ[...]ವುದು ರೂಢಿ ಆಗಿಲ್ಲ. ಬದಲಾಗಿ ಜನರನ್ನು ಧರ್ಮ[...] ಮೇಲೆ ವಿಂಗಡಿಸಿ ಒಬ್ಬರ ವಿರುದ್ಧ ಒಬ್ಬರನ್ನು ಎತ್ತಿಕಟ್ಟುವ[...] ಹಿಂದುಳಿದವರನ್ನು ಮತ್ತು ದಲಿತರನ್ನು ಶೋಷಿಸುವ[...] ಅವರಿಗೆ ಕರಗತವಾಗಿದೆ.

ಇದಕ್ಕೆ ದಲಿತ ಶಾಸಕ ಬಸವರಾಜು ಪ್ರತ್ಯಕ್ಷ [...] ಇದನ್ನು ಕಂಡಾದರೂ ಚೆಡ್ಡಿಗಳ 'ಹಿಂದೂಗಳು ನಾ[...] ಒಂದು' ಎಂಬ ಸ್ಲೋಗನ್ನುಗಳಿಗೆ ಶೋಷಿತ ಸಮುದಾ[...] ಬಲಿಯಾಗದಿರಲಿ. ಆಕಸ್ಮಾತ್ ಬಲಿಯಾದರೆ ಅವರೆಲ್ಲ[...] ಬಸವರಾಜನ ಸ್ಥಿತಿ ಕಟ್ಟಿಟ್ಟ ಬುತ್ತಿ ಎಂಬುದ[...] ಮರೆಯದಿರಲಿ!

–ಸಾವ[...]

ಜಮೀನ್ದಾರಿ ಮನಸ್ಸುಗಳ ಅತಿರೇಕ

ವಿರಾಜಪೇಟೆಯ ಶಾಸಕ ಬಸವರಾಜು ಮೇಲೆ ನಡೆದ ಹಲ್ಲೆ ಸಂಘಪರಿವಾರದಲ್ಲಿನ ಸಂಘರ್ಷದೊಂದಿಗೆ ಇಲ್ಲಿನ ಜಮೀನ್ದಾರಿ ಮನಸ್ಸುಗಳು ಇಂದು ತಲುಪಿರುವ ಅತಿರೇಕ ಮಟ್ಟವನ್ನು ಪ್ರತಿಬಿಂಬಿಸುತ್ತದೆ. ಕೊಡಗಿನ ಪ್ರತ್ಯೇಕತಾವಾದ ಕೊಡಗಿಗೆ ಕರ್ನಾಟಕದ ಪ್ರಭುತ್ವದಿಂದ ಆದ ಅನ್ಯಾಯದ ಫಲಶ್ರುತಿ ಎಂಬ ನಂಬಿಕೆ ಹೊರಜಗತ್ತಲ್ಲಿ ಪ್ರಚಲಿತದಲ್ಲಿದೆ. ಹಾಗೆಂದೇ ಇಲ್ಲಿಗೆ ಬಂದುಹೋಗುವ ರಾಜಕೀಯ ನಾಯಕರು ಅಭಿವೃದ್ಧಿಯ ಹಲವು ಪ್ಯಾಕೇಜುಗಳ ಆಶ್ವಾಸನೆಗಳನ್ನು ಕೊಟ್ಟು ಹೋಗುತ್ತಾರೆ. ಆದರೆ ಪ್ರತ್ಯೇಕ ರಾಜ್ಯದ ಕೂಗಿನ ಹಿಂದೆ ತಲತಲಾಂತರದಿಂದ ಹರಿದುಬಂದ ಜಮೀನ್ದಾರಿ ಅಹಂಭಾವ ಕೆಲಸ ಮಾಡಿದೆ ಎಂಬ ಸತ್ಯಕ್ಕೆ ಎಲ್ಲರೂ ಬೆನ್ನು ತೋರಿಸುತ್ತಾರೆ. ಇನ್ನೊಂದೆಡೆ ಕರ್ನಾಟಕ ವಿಮೋಚನಾ ರಂಗ ತರಹದವರು ಕೊಡಗಿನ ರಾಷ್ಟ್ರೀಯತೆಗೆ ಮನ್ನಣೆ ಸಿಕ್ಕರೆ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕುತ್ತದೆ ಎಂಬ ನಂಬಲನರ್ಹ ತರ್ಕವನ್ನು ಮಂಡಿಸುತ್ತಾರೆ. ಹಾಗೆಯೇ ನಂದಿನೆರವಂಡ ನಾಚಪ್ಪನ ಲಿವಾಕ್- ಕೆ.ಆರ್.ಎಂ.ಎಂ.- ಸಿ.ಎನ್.ಸಿ. ಸಂಘಟನೆಗಳೆಲ್ಲ ಈ ಭ್ರಮಾತ್ಮಕ ರಾಷ್ಟ್ರೀಯತೆಯ ಪರಿಕಲ್ಪನೆಯ ಹೊಳೆಯಲ್ಲಿ ಯಥೇಚ್ಛ ಈಜಾಡಿವೆ.

ಕೊಡಗಿನ ಕೊನೆಯ ಅರಸ ಚಿಕ್ಕವೀರರಾಜನಿಗೆ ಪಟ್ಟದರಸಿಯ ಮೂಲಕ ಗಂಡು ಸಂತತಿ ಇರಲಿಲ್ಲ. ಆತನ ತಂಗಿ ದೇವಮ್ಮಾಜಿಯ ಗಂಡ ಚೆನ್ನಬಸಪ್ಪ ಒಬ್ಬ ವೀರಶೈವ ಧರ್ಮಕ್ಕೆ ಮತಾಂತರಗೊಂಡಿದ್ದ ಕೊಡವ. ಚಿಕ್ಕವೀರರಾಜನನ್ನು ಪಟ್ಟದಿಂದಿಳಿಸಿ ಚೆನ್ನಬಸಪ್ಪನಿಗೆ ಅರಸೊತ್ತಿಗೆ ಕೊಡಬೇಕೆಂದು ಅಂದಿನ ಪ್ರಬಲ ಜಮೀನ್ದಾರ ಸಮುದಾಯವಾದ ಕೊಡವರು ಅತೀವ ಒತ್ತಡವನ್ನು ಹಾಕಿದ್ದರು. ಮುಂದೆ ನಡೆದ ಬೆಳವಣಿಗೆಗಳಿಗೆ ಮತ್ತು ಚಿಕ್ಕವೀರರಾಜನ ಪದಚ್ಯುತಿಗೆ ಇದು ಮುನ್ನುಡಿಯಾಗಿತ್ತು. ಆಡಳಿತಾವಧಿಯ ಕೊನೆಕೊನೆಗೆ ಚಿಕ್ಕವೀರರಾಜನಿಗೆ ಸ್ಥಳೀಯ ಮುಖ್ಯಸ್ಥರ ಮೇಲೆ ನಂಬಿಕೆ ಇಲ್ಲದಾಗಿತ್ತು. ಈತ ಕೇರಳದ ವಯನಾಡಿಂದ ಕೆಲವು ಮುಸ್ಲಿಮ್ ಯೋಧರನ್ನು ಕರೆಸಿ ತನ್ನ ಖಾಸಗಿ ಅಂಗರಕ್ಷಕರನ್ನಾಗಿ ನೇಮಿಸಿಕೊಳ್ಳುವಷ್ಟು ಭಯಭೀತನಾಗಿದ್ದ.

ಅರಸೊತ್ತಿಗೆಯಿಂದ ತೊಡಗಿ ಪ್ರಜಾಪ್ರಭುತ್ವದ ತನಕ ಅಲ್ಲೊಮ್ಮೆ ಇಲ್ಲೊಮ್ಮೆ ಈ ರೀತಿಯ ಅನಾರೋಗ್ಯಕರ ಜಮೀನ್ದಾರಿ ಮನಸ್ಸುಗಳು ತಪ್ಪುದಾರಿಯಲ್ಲಿ ಸಾಗಿಬಂದದ್ದು ದುರಂತ. ಈ ಅಸ್ವಸ್ಥ ಚಿಂತನೆಯನ್ನು ಹಿಂದೆ ಬ್ರಿಟಿಷ್ ವಂದಿಮಾಗಧರು, ನಂತರ ನಾಚಪ್ಪ ತರಹದ ಹುಂಬರು ಮತ್ತು ಇಂದಿನ ಸಂಘಪರಿವಾರ ಮತ್ತವರ ಪೂರ್ವಿಕರು ಪೋಷಿಸುತ್ತಾ ಬಂದಿದ್ದಾರೆ. ಕಳೆದ ಮಹಾ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ 'ಹಿಂದು' ಎಂದು ಬರೆಯದೆ 'ಕೊಡವ' ಎಂಬುದಾಗಿ ಬರೆಯಬೇಕೆಂದು ತನ್ನ ಸಮುದಾಯಕ್ಕೆ ಅಪರೂಪಕ್ಕೆಂಬಂತೆ ಒಂದು ಒಳ್ಳೆಯ ಕರೆಯನ್ನು ಕೊಟ್ಟಿದ್ದ ನಾಚಪ್ಪ ಈಗ ನಡೆಯುತ್ತಿರುವ ಹಿಂದೂ ಸಮಾಜೋತ್ಸವಗಳಲ್ಲಿ ಭಾಗವಹಿಸದಂತೆ ಆಗ್ರಹಿಸಿ ಒಂದಿಷ್ಟಾದರೂ ಮಾನವತೆಯನ್ನು ಪ್ರದರ್ಶಿಸಬಹುದಿತ್ತು, ಆದರೆ ಅವರು ಹಾಗೆ ಮಾಡಿಲ್ಲ.

ಅಂತಹ ಪ್ರಬುದ್ಧತೆಯನ್ನು ಕೊಡವರು ಎಲ್ಲಿಂದ ಆ ರ ‘ ಸ ‘ ಬ ‘ ೀ ಕ ‘ ು ?

ಭೀಮಾ ತೀರದಲ್ಲಿ ಮತ್ತೆ ಹಂತಕರ ಆರ್ಭಟ

ಮರುಕಳಿಸಿದ ರಕ್ತಪಾತ

ಸುಪಾರಿ ಹಂತಕರಾಗಿದ್ದ ಚಂದಪ್ಪ ಹರಿಜನ, ಕೇಶಪ್ಪ ತಾವರಖೇಡ, ಶಿವಾಜಿ ಬೋರಗಿ ಎಂಬುವವರಿಂದ ಕುಖ್ಯಾತಿ ಪಡೆದಿದ್ದ ಭೀಮಾ ತೀರದಲ್ಲಿ ಈ ಹಿಂದೆ ಭಯಾನಕ ವಾತಾವರಣವಿತ್ತು. ಚಂದಪ್ಪ ಹರಿಜನ ಪೊಲೀಸ್ ಎನ್‌ಕೌಂಟರ್‌ನಲ್ಲಿ, ಕೇಶಪ್ಪ ತಾವರಖೇಡ ಏಡ್ಸ್‌ನಿಂದ ಹಾಗೂ ಶಿವಾಜಿ ಬೋರಗಿ ಕ್ಯಾನ್ಸರ್‌ನಿಂದ ಸಾವಿಗೀಡಾದ ನಂತರ ಈ ಭಾಗದಲ್ಲಿ ರಕ್ತಪಾತದ ಅಧ್ಯಾಯ ಕೊನೆಗೊಂಡಂತಾಗಿತ್ತು.

ಕಳೆದ ಮೂರು ವರ್ಷಗಳಿಂದ ಈ ಭೂಗತ ಚಟುವಟಿಕೆಗಳು ಮೊದಲಿನಷ್ಟು ಸಕ್ರಿಯವಾಗಿಲ್ಲ ಎಂದು ಪೊಲೀಸರು ನಿಟ್ಟುಸಿರು ಬಿಡುವಷ್ಟರಲ್ಲಿಯೇ ಇದೀಗ ಮತ್ತೊಂದು ಹೆಣ ಬಿದ್ದಿದೆ. ಇಡೀ ಅಫಜಲ್‌ಪುರವೇ ತಲ್ಲಣಗೊಳ್ಳುವಂತೆ ಶಿರವಾಳದ ದಳಪತಿ ತಿಪ್ಪಣ್ಣ ವಡ್ಡರ್ ಎಂಬ ಮುದುಕನ ಕೊಲೆ ಹಾಡುಹಗಲೇ ನಡೆದು ಹೋಗಿದೆ. ಜನವರಿ 3ರಂದು ಅಫಜಲ್‌ಪುರ ಬಸವೇಶ್ವರ ಚೌಕ್ ಬಳಿ ಐದು ಜನರ ಹಂತಕರ ಗುಂಪೊಂದು ಗುಂಡಿಟ್ಟು ಕೊಂದು ಪರಾರಿಯಾಗಿದೆ. ಪರಿಣಾಮ ತಿಪ್ಪಣ್ಣ ಸ್ಥಳದಲ್ಲಿಯೇ ಹೆಣವಾಗಿ ಹೋದ.

ಕೊಲೆಗೆ ಕಾರಣ

ನಟೋರಿಯಸ್ ಕಿಲ್ಲರ್ ಚಂದಪ್ಪ ಹರಿಜನನ ಸಹಚರನಾಗಿದ್ದ ಸೈಯದ್ ಎಂಬಾತನನ್ನು ಬಸಣ್ಣ ವಡ್ಡರ್ ಎಂಬಾತ ತನ್ನ ಹಳೆಯ ರಾಜಕೀಯ ದ್ವೇಷ ಸಾಧಿಸಲು ಹೀಗೊಂದು ದಿನ ಸೈಯದ್‌ನನ್ನು ಉಪಾಯವಾಗಿ ಹೋಟೆಲ್‌ಗೆ ಕರೆಸಿದ್ದ. ಹಾಗೆ ಕರೆಸಿ, ದೇಖಾವರಿ ಮಾತುಗಳನ್ನಾಡಿದಂತೆ ಮಾಡಿ ಸೈಯದ್‌ನ ಕುತ್ತಿಗೆಯನ್ನು ಟವಲ್‌ನಿಂದ ಗಟ್ಟಿಯಾಗಿ ಸುತ್ತಿ ಆತ ಮಿಸುಕಾಡದಂತೆ ಮಾಡಿದ್ದ. **Pre-planned** ಆಗಿ ಅಲ್ಲಿ ಸೇರಿದ್ದ ವಡ್ಡರ ಜಾತಿಯ ಯಲಗುಣ್ಯ ಮುಂತಾದವರು ಸೈಯದ್‌ನ ಮೇಲೆ ಸೈಜುಗಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದರು.

ಹಾಗೆ ಮೋಸ ಮಾಡಿ ತನ್ನ ಅಣ್ಣ ಸೈಯದ್‌ನನ್ನು ಕೊಂದವರ ವಿರುದ್ಧ ಸೇಡು ತೀರಿಸಿಕೊಳ್ಳಲು ಭೂಗತನಾಗಿ ಹೋದ ರಜಾಕ್, ಚಂದಪ್ಪನ ಬಲಗೈ ಭಂಟನಾಗಿದ್ದ ಭಾಗಪ್ಪನ ಜತೆ ಸೇರಿ ಅವತ್ತಿನಿಂದ ಇವತ್ತಿನವರೆಗೆ ಆಗಾಗ ಮಾರಣಹೋಮ ನಡೆಸುತ್ತಲೇ ಇದ್ದ.

ರಜಾಕ್‌ನ ದಾಳಿ

ಅಣ್ಣ ಸೈಯದ್‌ನ ಹತ್ಯೆಯ ವಿರುದ್ಧ ಸೇಡು ತೀರಿಸಿಕೊಳ್ಳುವ ಹುಚ್ಚಾಟದಲ್ಲಿ ತೊಡಗಿದ್ದ ರಜಾಕ್ 2004ರಲ್ಲಿ ಶಿರವಾಳ್ ಗ್ರಾಮದ ಮೇಲೆ ತನ್ನ ಹಂತಕ ಪಡೆಯೊಂದಿಗೆ ಲಗ್ಗೆಯಿಟ್ಟು ಯಲಗುಣ್ಯ ಮತ್ತು ರವಳ್ಯಾ (ರಾಹುಲ)ರಿಗಾಗಿ ತೀವ್ರವಾಗಿ ಹುಡುಕಾಡಿದ್ದ. ಇದನ್ನು ಮೊದಲೇ ಗ್ರಹಿಸಿದ್ದ ಯಲಗುಣ್ಯ ಮತ್ತು ರವಳ್ಯಾ ಅವತ್ತು ಅಕ್ಷರಶಃ ಬಚಾವಾದರು. ದ್ವೇಷದ ಜ್ವಾಲೆಯೊಂದಿಗೆ ಬಂದಿದ್ದ ಆ ಅಂಡರ್‌ವರ್ಲ್ಡ್ ಟೀಮ್ ಪಿತ್ಥ ನೆತ್ತಿಗೇರಿಸಿಕೊಂಡು ನಾಲ್ಕು ಮಂದಿ ಅಮಾಯಕರನ್ನು ಕೊಚ್ಚಿ ಹಾಕಿತ್ತು.

ವಿಚಾರಣೆ ಪ್ರಾರಂಭ

ಆಗಿನ ಗೃಹ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಈ ಘಟನೆಯಿಂದ ರೋಸಿ ಹೋಗಿದ್ದರು. ಅಂತೆಯೇ ಇಡೀ ಸರ್ಕಾರವೇ ಶಿರವಾಳ್ ಗ್ರಾಮಕ್ಕೆ ಭೇಟಿ ನೀಡಿ, ಕೊಲೆಯಾದವರ ಕುಟುಂಬಗಳಿಗೆ ಸಾಂತ್ವನ ಹೇಳಿ ಹೋಗಿತ್ತು. ತಮ್ಮ ಜಿಲ್ಲೆಯಲ್ಲಾದ ಈ ಘಟನೆಯನ್ನು ಗಂಭೀರವಾಗಿ ಕೈಗೆತ್ತಿಕೊಂಡ ಖರ್ಗೆ, ಈಶಾನ್ಯ ವಲಯ ಐಜಿಪಿಯಾಗಿದ್ದ ಕೆಂಪಯ್ಯನವರನ್ನೆ ವಿಚಾರಣೆಗಾಗಿ ನೇಮಿಸಿದ್ದರು.

ಇದು ತಮ್ಮ ಪಾಲಿನ ಪ್ರತಿಷ್ಠೆಯ ವಿಷಯವೆಂದು ಬಗೆದಿದ್ದ ಕೆಂಪಯ್ಯ ಕೊಲೆಯಾದವರ ಕುಟುಂಬಗಳಿಂದ ದೂರು ದಾಖಲಿಸಿಕೊಂಡಿದ್ದರು. ಹಾಗೆ ಲಿಖಿತ ದೂರು ದಾಖಲಿಸಿಕೊಳ್ಳುವ ಸಂದರ್ಭದಲ್ಲಿ ಅಪ್ರೂವರ್ ಆಗಿ ಸಾಕ್ಷಿ ನುಡಿಯಲು ಮುಂದೆ ಬಂದವನೇ ಮೊನ್ನೆ ಹತ್ಯೆಗೀಡಾದ ತಿಪ್ಪಣ್ಣ ವಡ್ಡರ್.

ಯಾರು ಈ ತಿಪ್ಪಣ್ಣ

ಶಿರವಾಳ್ ಗ್ರಾಮದ ದಳಪತಿಯಾಗಿದ್ದ ತಿಪ್ಪಣ್ಣ ಗ್ರಾಮದ ವಡ್ಡರ್ ಜನಾಂಗದ 35 ಕುಟುಂಬಗಳ ಪೈಕಿ ಅತ್ಯಂತ ಹಿರೀಕ. ಕೋರ್ಟ್-ಕಚೇರಿಯ ಎಲ್ಲ ಬಗೆಯ ಜ್ಞಾನ ಹೊಂದಿದ್ದ ಈತ ಸಾಮೂಹಿಕ ಹತ್ಯೆಗೆ ಕಾರಣವಾಗಿದ್ದ ರಜಾಕ್ ಮತ್ತು ಅವನ ಸಹಚರರನ್ನು ಮುಗಿಸುವ ಹುನ್ನಾರ ನಡೆಸಿದ್ದ. ಅಂತೆಯೇ ಹತ್ಯೆ ಪ್ರಕರಣದಲ್ಲಿ ಭಾಗಿಯಾದ ರಜಾಕ್‌ನ ಪಡೆಗೆ ಇದುವರೆಗೂ ಜಾಮೀನು ಸಿಗದಂತೆ ಅಡ್ಡಗಾಲು ಹಾಕುತ್ತಲೇ



ಚಂದಪ್ಪ ಹರಿಜನ

ಬಂದಿದ್ದ. ಮೇಲಾಗಿ ಗುಲ್ಬರ್ಗಾ ಕೋರ್ಟಿನಲ್ಲಿ ಸಾಕ್ಷಿ ನುಡಿಯುವುದಕ್ಕೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದ.

ಈ ಕಾರಣದಿಂದಾಗಿಯೇ ಈತನನ್ನು ಶಾಶ್ವತವಾಗಿ ಸರಿಸಿಬಿಟ್ಟರೆ, ಕೋರ್ಟಿನಲ್ಲಿರುವ ಕೇಸು ಸಾಕ್ಷಿದಾರರಿಲ್ಲದೆ ಖುಲಾಸೆಯಾಗುತ್ತದೆ ಎಂದು ರಜಾಕ್ ತರ್ಕಿಸಿದ. ಕೇಸಿಗೆ ಅಡ್ಡಗಾಲಾದ ತಿಪ್ಪಣ್ಣನನ್ನು ಹಟಾಯಿಸಿಬಿಟ್ಟರೆ ಮುಂದೆ ವಡ್ಡರ ಜನಾಂಗದ ಯಾರೊಬ್ಬರೂ ಕೋರ್ಟಿನಲ್ಲಿ ತನ್ನ ವಿರುದ್ಧ ಸಾಕ್ಷಿ ನುಡಿಯುವ ದುಸ್ಸಾಹಸಕ್ಕೆ ಕೈಹಾಕುವುದಿಲ್ಲ ಎಂಬ ಉದ್ದೇಶದಿಂದ ಅವತ್ತು ಹಾಡುಹಗಲೇ ತಿಪ್ಪಣ್ಣನನ್ನು ಫಿನಿಶ್ ಮಾಡಿ ಪರಾರಿಯಾಗಿದ್ದಾನೆ.

ಸೈಯದ್ ಯಾಕೆ ಕೊಲೆಯಾದ

ಭೂಗತ ಪಾತಕಿ ಚಂದಪ್ಪ ಹರಿಜನನಿಗೆ ರುಚಿಕಟ್ಟಾದ ಚಿಕನ್ ಮಾಡಿಕೊಡುತ್ತಿದ್ದ ಸೈಯದ್ ಚಂದಪ್ಪನ ಸಖ್ಯ ಬೆಳೆಸಿಕೊಂಡು ಅವನ ಭೂಗತ ಜಗತ್ತಿನೊಳಗೆ ಎಂಟ್ರಿಯಾದ. ಚಂದಪ್ಪ ಹೇಳಿ ಕಳುಹಿಸಿದ ವ್ಯಕ್ತಿಗಳಲ್ಲಿ ಹೋಗಿ ಅವರಿಂದ ಲಕ್ಷಗಟ್ಟಲೇ ಹಣ ವಸೂಲಿ ಮಾಡಿಕೊಂಡು ಬರುತ್ತಿದ್ದ ಸೈಯದ್ ಚಂದಪ್ಪನ ಪ್ರೀತಿಯ-ವಿಶ್ವಾಸಾರ್ಹ ಶಿಷ್ಯನಾಗಿ ಬೆಳೆದ. ಇದರಿಂದಾಗಿ ಚಂದಪ್ಪನ ಹೆಸರೇಳಿಕೊಂಡು ಊರಿನ ಸಣ್ಣಪುಟ್ಟ ವ್ಯಾಜ್ಯಗಳನ್ನು ಬಗೆಹರಿಸಿ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಹೆಸರುವಾಸಿಯಾದ.

ಮುಂದೊಂದು ದಿನ ಚಂದಪ್ಪ ಹರಿಜನ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದಾಗ ಸ್ವಲ್ಪ ದಿನಗಳ ಕಾಲ ತಲೆ ಮರೆಸಿಕೊಂಡಿದ್ದ ಸೈಯದ್ ಆನಂತರ ಮತ್ತದೇ ಖದರಿನಲ್ಲಿ ಓಡಾಡತೊಡಗಿದ. ಮುಂದೆ ಗೌರ್(ಬಿ) ಗ್ರಾಮ ಪಂಚಾಯಿತಿ ಚುನಾವಣೆ ಬಂದಾಗ ಅದರಲ್ಲಿ ಸಾಕಷ್ಟು ಆಸಕ್ತಿ ತೋರಿದ ಸೈಯದ್, ತನ್ನ ಹಳೆಯ ಸ್ನೇಹಿತನಾಗಿದ್ದ ಬಸಣ್ಣ ವಡ್ಡರ್ ವಿರುದ್ಧವೇ ಕೆಲಸ ಮಾಡಿ ನಾಮದೇವ ಎಂಬಾತನನ್ನು ಗೆಲ್ಲಿಸಿ ಅವನನ್ನೇ ಅಧ್ಯಕ್ಷನನ್ನಾಗಿ ಮಾಡುವಲ್ಲಿ ಯಶಸ್ವಿಯಾದ.

ಚುನಾವಣೆಯಲ್ಲಿ ತನಗಾದ ಮುಖಭಂಗದಿಂದಾಗಿ ಒಳಗೊಳಗೆ ಕುದಿಯುತ್ತಿದ್ದ ಬಸಣ್ಣ 'ಎಲೆಕ್ಷನ್ ಬರ್‍ತಾವ್-ಹೋಗ್ತಾವ. ದೋಸ್ತಾಗಿ ಹಂಗಲ್ಲ ಇದು ಹಮೇಷಾ ಇರುವಂಥದು' ಎಂದು ಮತ್ತೆ ಜುಗಲ್‌ಬಂದಿಯಾದ. ಒಂದರ್ಥದಲ್ಲಿ ಆಗ ಇವರಿಬ್ಬರು ಜನರ ಕಣ್ಣಿಗೆ ರಾಮ-ಲಕ್ಷ್ಮಣರಂತೆ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಹೀಗಿರುವಾಗ ಒಂದು ದಿನ ಬಸಣ್ಣ ಸೈಯದ್‌ನನ್ನು ಉಪಾಯವಾಗಿ ಹೋಟೆಲ್‌ಗೆ ಕರೆಯಿಸಿ ಅಲ್ಲಿ ಅವನನ್ನು ಮುಗಿಸಿದ್ದ.

ಯಲಗುರ್‍ಯಾ ಖಾಜ್ಯಾ ಸತ್ತರು

ಶಿರವಾಳ್ ಸಾಮೂಹಿಕ ಹತ್ಯೆ ನಡೆದಾದ ಬಳಿಕ ಹುಷಾರ್ ಆದ ಯಲಗುರ್‍ಯಾ ರಜಾಕ್‌ನ ಅಟ್ಯಾಕ್‌ನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಬಳ್ಳೊಂಡಗಿಯ ಖಾಜ್ಯಾನೊಂದಿಗೆ ಸ್ನೇಹ ಬೆಳೆಸಿದ್ದ. ರಜಾಕ್ ಸಿಕ್ಕರೆ ಅವನ ಕಥೆ ಮುಗಿಸಬೇಕೆಂದುಕೊಂಡು ಅತ್ಯಂತ ಫ್ರೀ ಆಗಿ ಓಡಾಡಿಕೊಂಡಿದ್ದ. ಆದರೆ ಇದನ್ನರಿತ ರಜಾಕ್ ಅಪ್ಪಿತಪ್ಪಿಯೂ ಅಫಜಲ್‌ಪುರ ಸೀಮೆಯೊಳಗೆ ತಲೆ ಹಾಕಿರಲಿಲ್ಲ.

ಆದರೆ ಯಾವಾಗ ಮಿಂಚಿನಾಳ್ ಎನ್‌ಕೌಂಟರ್‌ನಲ್ಲಿ ಯಲಗುರ್‍ಯಾ ಮತ್ತು ಖಾಜ್ಯಾ ಸತ್ತು ಹೋದರೋ, ಆಗಿನಿಂದಲೇ ರಜಾಕ್ ಸೀಮೆಗಳಲ್ಲಿ ಓಡಾಡಿ ಉಳಿದಿದ್ದ ರವಳ್ಯಾನನ್ನು ಮುಗಿಸಲು ಸ್ಕೆಚ್ ಹಾಕುತ್ತಿದ್ದ. ಆದರೆ ತಿಪ್ಪಣ್ಣನ ದುರಾದೃಷ್ಟವೋ ಏನೋ ರಜಾಕ್‌ನ ಭೇಟೆಯಲ್ಲಿ ತಿಪ್ಪಣ್ಣ ಮೊದಲ ಬಲಿಯಾಗಿದ್ದಾನೆ.

ಮೊದಲಿಗಿಂತಲೂ ಈಗ ಅತ್ಯಂತ ಆಕ್ಟಿವ್ ಆಗಿರುವ ರಜಾಕ್ ತನ್ನ ಅಣ್ಣನಾದ ಸೈಯದ್‌ನ ಹತ್ಯೆಯ ಸೇಡನ್ನು ತೀರಿಸಿಕೊಳ್ಳಲು ತನ್ನದೇ ಆದ ಪಡೆಯೊಂದನ್ನು ಕಟ್ಟಿಕೊಂಡು ಯಲಗುರ್‍ಯಾ ಮತ್ತು ರವಳ್ಯಾನನ್ನು ಮೊದಲ ಕಂತಿನಲ್ಲಿಯೇ ಮುಗಿಸಬೇಕೆಂದು ಲೆಕ್ಕ ಹಾಕುತ್ತಿದ್ದ. ಆದರೆ ಈ ಮಧ್ಯೆ ಬಿಜಾಪುರದ ಮಿಂಚಿನಾಳ್ ರೈಲ್ವೆ ನಿಲ್ದಾಣದ ಹತ್ತಿರ ಪೊಲೀಸರು ನಡೆಸಿದ ಎನ್‌ಕೌಂಟರ್‌ನಲ್ಲಿ ಯಲಗುರ್‍ಯಾ ಹತನಾಗಿದ್ದ. ತಾನು ಮಾಡಬಯಸಿದ್ದ ಕೆಲಸವನ್ನು ಪೊಲೀಸರೇ ಮಾಡಿದ್ದಕ್ಕೆ ರಜಾಕ್ ನಿಟ್ಟುಸಿರು ಬಿಟ್ಟಿದ್ದ.

ಯಲಗುರ್‍ಯಾನ ಖಾಸಾದೋಸ್ತ್ ಆಗಿದ್ದ ರವಳ್ಯಾನನ್ನು ಮುಗಿಸಬೇಕೆಂದಿದ್ದ ರಜಾಕ್‌ನಿಗೆ ತಿಪ್ಪಣ್ಣ ಅಡ್ಡಗಾಲಾದ. ಅಂತೆಯೇ ಇಂದು ಆತನನ್ನು ಸರಿಸಿದ್ದಾನೆ ಎಂದು ಹೇಳಲಾಗುತ್ತಿದೆ. ಇದರಿಂದಾಗಿ ಸುಮಾರು ಎರಡ್ಮೂರು ವರ್ಷದಿಂದ ತಣ್ಣಗೆ ಹರಿಯುತ್ತಿದ್ದ ಭೀಮೆಯಲ್ಲಿ ಇದೀಗ ಮತ್ತೆ ರಕ್ತದೋಕುಳಿ ಕಾಣಿಸುತ್ತಿದೆ.

ರಜಾಕ್‌ನ ಮುಂದಿನ ಭೇಟೆ ರವಳ್ಯಾನನ್ನು ಮುಗಿಸುವುದಕ್ಕಿಂತ ಮುಂಚೆ ಪೊಲೀಸ್ ಪಡೆ ಎಚ್ಚೆತ್ತುಕೊಳ್ಳಬೇಕಾಗಿದೆ. ರಜಾಕ್ ಮತ್ತು ಅವನ ಹಂತಕ ಪಡೆ ಗೌರ್ ಮತ್ತು ಅಳ್ಳಗಿ ಪ್ರದೇಶದಲ್ಲಿ ಸುಳಿದಾಡುತ್ತಿದೆ ಎಂಬ ಪೂರ್ಣ ಮಾಹಿತಿಯಿದ್ದರೂ ಆಕ್ಟಿವ್ ಆಗಿ ಕೆಲಸ ಮಾಡದ ಸಿಪಿಐ ಪಿ.ಬಿ. ಗಜಕೋಶ, ಪಿಎಸ್‌ಐ ಶರೀಫ್, ಎಸ್‌ಐ ಮುನಿಸ್ ಖಬರ್ಕರ್ ಈ ಕೊಲೆಗೆ ಮೂಕಸಾಕ್ಷಿಯಾಗಿದ್ದಾರೆ.

-ವರದಿಗಾರ

ಸಂಸದ ಯತ್ನಾಳ್, ಶಾಸಕ ಪಟ್ಟಣಶೆಟ್ಟಿ ಅಭಯಹಸ್ತ

ಕಡಿವಾಣವೇ ಇಲ್ಲ ಡಿ.ಸಿ. ಮೊಹಸಿನ್‌ಗೆ!

ಬಿಜಾಪುರ

ಕಳೆದ ತಿಂಗಳು ಬಿಜಾಪುರದ ಡಿ.ಸಿ. ಮನೆ ಮೇಲೆ ರೇಡ್ ಆದ ಸುದ್ದಿ ಹಬ್ಬಿದಾಗ, ಬಿಜಾಪುರದ ಜನ 'ಅಂತೂ ಈಗ್ಲಾದ್ರೂ ಪೀಡೆ ತೊಲಗಬಹುದು' ಎಂದುಕೊಂಡಿದ್ದರು. ಆದರೆ ಹಾಗೇನೂ ಆಗಿಲ್ಲ. ಸಂಸದ ಬಸನಗೌಡ ಯತ್ನಾಳ್, ಬಿಜಾಪುರದ ಶಾಸಕ ಅಪ್ಪು ಪಟ್ಟಣಶೆಟ್ಟಿ, ಜೊತೆಗೆ ಉಸ್ತುವಾರಿ ಸಚಿವ ಈಶ್ವರಪ್ಪರೆಂಬ ತ್ರಿವಳಿ ಚೆಡ್ಡಿಗಳ ಅಭಯಹಸ್ತ ಇರುವಾಗ ಪ್ರಳಯಾಂತಕ ಡಿ.ಸಿ. ಮೊಹಮ್ಮದ್ ಮೊಹಸಿನ್ ನನ್ನು ಅಲ್ಲಾಡಿಸುವ ಧೈರ್ಯ ಯಾರಿಗಿದೆ ಹೇಳಿ? ಅದಕ್ಕೇ ಅಲ್ಲವೇ, ಈ ಡಿ.ಸಿ. ಸತತ ಏಳು ವರ್ಷಗಳಿಂದ ಬಿಜಾಪುರ ಜಿಲ್ಲೆಯನ್ನು ದರೋಡೆ ಮಾಡುತ್ತಲೇ ಇರುವುದು; ಸಾಕುಸಾಕಾದ ಜನ ಹಿಡಿಶಾಪ ಹಾಕುತ್ತಾ ನಿರಾಶರಾಗಿರುವುದು.

ಮೊಹಸಿನ್ ಸುತ್ತ ನುಂಗೇಶಿಗಳು

ಡಿ.ಸಿ. ಮೊಹಸಿನ್‌ಗೆ ಸಹಕರಿಸಲೆಂದೇ ಜಿ.ಪಂ. ಸಿ.ಇ.ಓ. ರಾಜೀವ್ ರಂಜನ್, ಎಸ್.ಪಿ. ಹೇಮಂತ್‌ಕುಮಾರ್ ಸಿಂಗ್ ಸಹ ಬಿಜಾಪುರವನ್ನು ಬಿಡಲೊಲ್ಲರು.

ರಸ್ತೆ ಅಗಲೀಕರಣದ ನೆಪದಲ್ಲಿ 125 ಕೋಟಿ ರೂ. ತಂದ ಡಿ.ಸಿ. ಖರ್ಚು ಮಾಡಿದ್ದಕ್ಕಿಂತ ನುಂಗಿದ್ದೇ ಅಧಿಕ. ರಸ್ತೆಬದಿಯ ಬಡ ಮುಸ್ಲಿಮ್ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಿ, ಅಲ್ಲಿ ಕಾಂಪ್ಲೆಕ್ಸ್‌ಗಳನ್ನು ನಿರ್ಮಿಸಿದ ಡಿ.ಸಿ. ತನಗೆ ಪ್ರಸಾದ ಕೊಟ್ಟವರಿಗೆ, ಶಾಸಕ ಅಪ್ಪು ಪಟ್ಟಣಶೆಟ್ಟಿಯ ಚೇಲಾಗಳಿಗೆ ಕಾಂಪ್ಲೆಕ್ಸ್‌ನ ಅಂಗಡಿಗಳನ್ನು ಧಾರೆ ಎರೆದುಬಿಟ್ಟ. ಪಟ್ಟಣಶೆಟ್ಟಿಯ ಶಿಷ್ಯ, ಯೋಜನಾಧಿಕಾರಿ ಶ್ರೀಕಾಂತ್ ಕಟ್ಟಿಮನಿಯೇ ಡಿ.ಸಿ.ಯ ಅನಧಿಕೃತ ವಸೂಲಿಗಾರ. ನೀಲನಕ್ಷೆಯಂತೆ ಕಾಂಪ್ಲೆಕ್ಸ್ ಕಟ್ಟದೇ, ತಮಗೆ ಬೇಕಾದಂತೆ ಕಟ್ಟಿತು ಡಿ.ಸಿ. ಪಡೆ.

ನಗರಸಭಾ ಅಧ್ಯಕ್ಷ ಅಬ್ದುಲ್‌ರಜಾಕ್ ಲೋಣಿಗೊಬ್ಬನಿಗೇ ಹತ್ತಾರು ಶಾಪ್‌ಗಳನ್ನು ದಯಪಾಲಿಸಲಾಗಿದೆ. ಹವೇಲಿಗಲ್ಲಿಯ ಮಾಜಿಹಂಟರ್ ನೌಶಾದ್ ಡಿ.ಸಿ.ಗೆ ಸಲಹೆಗಾರನಂತಾಗಿದ್ದಾನೆ.

ಆಗಾಗ 'ಡಿಸಿಯನ್ನು ಟ್ರಾನ್ಸ್‌ಫರ್ ಮಾಡಿಸ್ತೀನಿ' ಎಂದು ಪತ್ರಿಕಾಗೋಷ್ಠಿಯ ನಾಟಕವಾಡುವ ಶಾಸಕ ಅಪ್ಪು ಪಟ್ಟಣಶೆಟ್ಟಿ ಮರುದಿನವೇ ಡಿ.ಸಿ. ಜೊತೆ ಡ್ಯುಯೆಟ್ ಹಾಡುತ್ತಿರುತ್ತಾನೆ.



ಬಸವರಾಜ್ ಪಾಟೀಲ್ ಯತ್ನಾಳ್


ಗೋಲಗುಮ್ಮಟದ 350ನೇ ವರ್ಷದ ಆಚರಣೆ ಮಾಡಲೆಂದು ಜನರಿಂದ ದಾನ ಪಡೆಯುತ್ತಲೇ ಇರುವ ಡಿ.ಸಿ. ಈ ಆಚರಣೆಯ ಮಾತು ಶುರುಮಾಡಿ ಒಂದೂವರೆ ವರ್ಷವೇ ಆಯ್ತು!

ರಸ್ತೆ ಅಗಲೀಕರಣದ ವೇಳೆ ಪಟ್ಟಣಶೆಟ್ಟಿಯ ಇನ್ನೊಬ್ಬ ಚೇಲಾ, ಕ್ರೀಡಾ ಇಲಾಖೆಯ ವಿಜಯ್‌ಧರ್‌ನ ಬಿಲ್ಡಿಂಗ್ ಉರುಳಬೇಕಿತ್ತು. ಆದರೆ ಡಿ.ಸಿ.ಯ ನೆರವಿನಿಂದ ಆ ಬಿಲ್ಡಿಂಗ್‌ನ್ನು ತರಾತುರಿಯಲ್ಲಿ 24 ಲಕ್ಷಕ್ಕೆ ರೆವಿನ್ಯೂ ಇಲಾಖೆಯೇ ಖರೀದಿಸಿಬಿಟ್ಟಿತು. ಮಧುಬನ್ ಹೋಟೆಲ್ ಮಾಲೀಕ ಬಾಬುರಾಮಗೌಡ ಪಾಟೀಲನ ಬಿಲ್ಡಿಂಗ್‌ಗೆ ಡಿ.ಸಿ. ಕೈಹಚ್ಚದೇ ಇದ್ದುದಕ್ಕೆ ಕೈಬೆಚ್ಚಗಾಗಿದ್ದೇ ಕಾರಣ.

ಕಳೆದ ತಿಂಗಳು ಡಿ.ಸಿ. ಮನೆ ಮೇಲೆ ರೈಡಾಯಿತೊ ಇಲ್ಲವೊ? ಒಟ್ಟನಲ್ಲಿ ಡಿ.ಸಿ. ಮಾತ್ರ ದೆಹಲಿ, ಬೆಂಗಳೂರು ತಿರುಗಾಡುತ್ತಾ ಸ್ಥಾನಭದ್ರ ಮಾಡಿಕೊಳ್ಳುತ್ತಿದ್ದಾನೆ. ಅದರರ್ಥ: ಬಿಜಾಪುರ ಜನರ ಬದುಕು ಅಭದ್ರಗೊಳ್ಳುತ್ತಲೇ ಇರುತ್ತದೆ. ಎಲ್ಲಿ ಯತ್ನಾಳ್, ಪಟ್ಟಣಶೆಟ್ಟಿಗಳು?

-ಮೇಘರಾಜ್

ಅವ್ರು ಪೂನಾದಿಂದ ಬಂದು ಕಡದೆತ್ತಾಕದು ನನಿಗ್ಗೊತ್ತಿಲ್ಲವೆ



ಜುಮ್ಮಿ ಹಸಿರು ಬಣ್ಣದ ಸ್ವೆಟರ್ ಇಕ್ಕಿದ್ದರೂ, ನಡುಗುತ್ತ "ಯವ್ವಾ ಯವ್ವಾ ಇದೇನು ಸಳಿ ಹೋಗತ್ತಗೆ" ಎಂದುಕೊಂಡು ಬಂದಳು. ಚಳಿಯಿಂದ ಪಾರಾಗಲು ಸೀರ ಕಾಳಮಾವನಾಗಲೇ ಒಂದೊಂದು ಲೋಟ ಕಾಫಿ ಹೀರಿ ಬೀಡಿ ಎಳೆಯುತ್ತ ಕುಳಿತಿದ್ದರು. ಉಗ್ರಿಯೂ ಬಂದು ಕಾಫಿ ಸೊರಗರಿಯುತ್ತ

"ಕ್ವರೆ ಬದ್ದಷ್ಟು ಆವುರೆ ಗಿಡಕೆ ವಳ್ಳೆದು ಕಣ ಬಾರೆ" ಎಂದ.

"ಆವ್ರುರೆ ಗಿಡದ ಕತೆ ಅಂಗಿರ್ಲಿ. ಇಂತ ಸಳಿಯಾರ್ಲ ತಡಕಂದರು."

"ನೀನು ಮನೆಲಿ ಮನಿಗಿದ್ವೇ ಹಿಂಗಂತಿಯಲ್ಲಾ, ಬೀದಿಲಿ ಮನಿಕಳೊ ಜನಕೆ ಇನ್ನೇಟು ಸಳಿಯಾಗನ ಹೇಳು?"

"ಇನ್ನಮ್ಯಾಲ್ಯಾರು ಬೀದಿಲಿ ಮನಿಕಳಂಗೇಯಿಲ್ಲ ತಗೊ, ಕುಮಾರಸ್ವಾಮಿ ಮನೆ ಕಟ್ಸಿ ಕೊಡ್ತನಂತೆ."

"ಯಾವಾಗ ಕಟ್ಸಕೊಟ್ಸನಂತೆ?"

"ಅವುನಿಳಿಯದ್ರಲ್ಲಿ ಯಲ್ಲಾರಿಗೂ ಮನೆ ಕಟ್ಸಿ ಕೊಟ್ಟನಂತೆ ಕಂಡ್ಯ ಅಂಗಂತ ಪಂಚಾತಿ ಮೆಂಬ್ಯಲ್ಲ ಮಾತಾಡಿ ಕತ್ತಿದ್ರು."

"ಅಲ್ಲಾ ಕಣೆ ಅವುನಿರದು ಇನ್ನು ಹತ್ತು ತಿಂಗುಳು ಆದು ಇದ್ರೆ, ಅಷ್ಟರಲ್ಲಿ ಯಲ್ಲಾರಿಗೂ ಮನೆ ಕಟ್ಸಕೊಡ್ತಿನಿ ಅಂದ್ರೆ ಸುಳ್ಳ ಹಿಂಗೂ ಹೇಳ್ಯಾರೇನೆ?"

"ಅಂಗರೆ ಸುಳ್ಳು ಅಂತಿಯಾ?"

"ಇಲ್ಲ, ಕಾಯ್ಕಂಡಿರು. ಕಟ್ಟಿ ಕೊಡ್ತನೆ ಅಂತವ. ಅವುನ ಮಾತ ಕಟಿಗಂಡು ಯಾರಿಗೂ ಆಸೆ ತೋರಕ್ಕೋಬ್ಯಾಡ."

"ಆಗ್ಲೆ ಐದಾರು ಜನಕೇಳಿದ್ದಿನಿ ಕಂಡ್ಯ."

"ಅಂಗರೆ ನೀನು ಅವುನಂಗೆ ಆಗಿದ್ದಿ ಬುಡು. ಅಲ್ಲ ಕಣೆ ಮನಿಲ್ಲದೋರಿಗೆ ಮನೆ ಕೊಡಬೇಕಾದ್ರೆ ಒಂದು ಸರ್ಕಾರ ಕನಿಷ್ಠ ಐದೊರ್ಷ ಕ್ಯಲಸ ಮಾಡಬೇಕು. ಮನಿಲ್ಲದೋರ ಸೈಟು, ಚಕ್ಕು ಬಂದಿಯಾಗಬೇಕು, ಪಾಯಮೆಟ್ಟಬೇಕು, ಗ್ವಾಡೆ ಹಾಕಬೇಕು. ಹಂಚೊಚ್ಚಬೇಕು. ಇದಕ್ಯಲ್ಲ ಕಾಲಕಾಲಕೆ ಹಣ ಬಡುಗಡೆ ಆಗಬೇಕು. ಆಟೊಂತರ ದುಡ್ಡೆಲ್ಲಿದ್ದತಿವುರತ್ರಾ?"

"ಅಂಗರೆ ದುಡ್ಡಿಲ್ಲವೆ ಇವುರತ್ರ?"

"ದುಡ್ಡಿನ ವಿಷಯ ಕುಮಾರಸ್ವಾಮಿಗೇನು ಗೊತ್ತೆ? ಆ ಎಡೂರಪ್ಪ ಹೇಳಬೇಕು. ಅವುನಿಗೆ ಇನ್ನು ಹಣಕಾಸಿನ ಕಾತೆ ಪುಕಾರಗಳೇ ಗೊತ್ತಾಗಿಲ್ಲ, ಆದ್ರಿಂದ ಈ ಮುಂಡೆ ಮಕ್ಕಳೇಳೋ ಸುಳ್ಳನ್ನಲ್ಲ ನಚ್ಚಿಗಂಡು ಜನಗಳಿಗೆ ಮಾತು ಕೊಡಕ್ಕೋಗಬ್ಯಾಡ."

"ಅಂಗಂತಿಯಾ?"

"ಇನ್ನೇನು ಮತ್ತೆ ಹತ್ತು ತಿಂಗಳಾದ ಮ್ಯಾಲೆ ಏನು ಮಾಡನೆ ಅಂತ ಕುಮಾರಸ್ವಾಮಿ ಈಗ್ಲೆ ಯೋಚನೆ ಮಾಡ್ತಕುಂತವುನೆ. ಹತ್ತು ತಿಂಗಳಾದ ಮ್ಯಾಲೆ ನನ್ನ ಮುಖ್ಯಮಂತ್ರಿ ಮಾಡ್ತರೊ ಇಲವೊ ಅಂತ ಎಡೂರ ಯೋಚನೆ ಮಾಡ್ತ ಅವುನೆ. ಇಂತ ಟೇಮುಲ್ಲಿ ಬಾಯಿಗೆ ಬಂದ ಆಸ್ವಾಸನೆ ಕೊಡ್ತರೆ ಅದ್ನೆ ನಂಬುಬಾರದು."

"ಕುಮಾರಸ್ವಾಮಿನೆ ಕರೆಸಿ ಕೇಳನಿರು."

"ನಮ್ಮೂರಿಗೆ ಕರುಸ್ತಿಯಾ?"

"ಕರಿಯನ ತಗೊ. ಈಗಿನೇನು ಎಲ್ಲಿ ಕರುದ್ರು ಬಂದನಂತೆ. ನೋಡಾ ಬೇವುಕಲ್ಲಿಗೆ ಬಂದೋಗ್ಯವುನೆ?"

"ಬೇವುಕಲ್ಲಿಗೆ ಬಂದೋದ ಕತೆ ಗೊತ್ತಿಲವೆ ನಿನಿಗೆ? ಆ ಊರಿಗೆ ಬಂದು ನಿಮ್ಮೂರು ಜಮೀನಿಗ್ಯಲ್ಲ ನೀರು ಕೊಡ್ತಿನಿ ಅಂದನಂತೆ. ಜನ್ಯಲ್ಲ ಕರಿನ ಮ್ಯಾಲೆ ನೀರ್ಯಸ್ತಂಗೆ ಕುಣಿದಾಡಿದರಂತೆ. ಆಮ್ಯಾಲೆ ಅಧಿಕಾರಿಗಳತ್ರಕೋಗಿ ಕೇಳಿದ್ರೆ ನಿಮ್ಮೂರಿಗೆ ನೀರ ಎಲ್ಲಿಂದ ತರನ್ರಿ ಅಂದರಂತೆ."

"ಅಂಗಂದ್ರೆ!"

"ಅನ್ನದಿಲವೆ ಮತ್ತೆ. ಒಂದೂರಿಗೆ ನೀರು ತರದು ಅಂದ್ರೆ ಹುಡುಗಾಟಗುಳಿನೆ? ಚಾನಲ್ಲಿದ್ರೆ ಕವುಲೆ ಮಾಡಬೇಕು. ನದಿ ಇದ್ರೆ ಏತ ನೀರಾವರಿ ಮಾಡಬೇಕು. ಇಲ್ಲ ಅಂದ್ರೆ ಕ್ಯರೆ ಕೆಟ್ಟಬೇಕು. ಇದ್ಯಾವುದೂ ಇಲ್ಲದೆ ಯಾವೊ ಪೋಲಿ ಬಡ್ಡೆತ್ತವು ಕುಮಾರಣ್ಣ ನಮ್ಮೂರಿಗೆ ನೀರು ಬೇಕು ಅಂದವಂತೆ ಇವುನು ಆಯ್ತು ಕೊಡನ ಅಂತ ಹೋದ" ಎಂದು ಉಗ್ರಿ ಕುಮಾರಸ್ವಾಮಿ ಕಾರ್ಯಕ್ರಮಗಳನ್ನು ಬಣ್ಣಿಸುತ್ತಿರುವಾಗ ಜುಮ್ಮಿ ಏನನ್ನೊ ಯೋಚಿಸಿ.

"ಅಂಗರೆ ನಮ್ಮೂರಿಗೆ ಕರಸಿ ಏನು ಕೇಳನಾ?" ಎಂದಳು.

"ಏನು ಕೇಳಬಾರ್ದು ಕಣೆ, ಅವುನು ಬಂದು ಮನಿಗಿದ್ದು ವತ್ತರಿಕೆದ್ದು ಹೋಯ್ತನೆ ಅಷ್ಟೆಯಾ. ನೋಡಾ ಬೇವುಕಲ್ಲಿಗೆ ಬಂದು ಸುಮಾರು ಜನಕೆ ಫೋನ್ ನಂಬರ್ ಕೊಟ್ಟು ಹೋದನಂತೆ. ಆ ಬಡ್ಡೆತ್ತವು ಮಂಡೇವುಕೋಗಿ ಫೋನು ಮಾಡಿದ್ದು ಮಾಡಿದ್ದೆಯ ಇಲ್ಲಿ ಗಂಟ ಯಾರ ಫೋನಿಗೂ ಸಿಕ್ಕಿಲವಂತೆ ಇದಕೇನೇಳ್ತಿ?"

"ನೋಡು ಮತ್ತೆ ಅವುನು ಮಾಡಿರೊ ಕ್ಯಲಸವ. ಅಂಗರೆ ಕುಮಾರಸ್ವಾಮಿ ನಮ್ಮೂರಿಗೆ ಬರದಬ್ಯಾಡ ಬುಡ್ಡ."

"ಬರ್ಲಿ ಕಣಕ್ಕ, ಅವುನು ಬರದ್ರಿಂದ ಸುಮಾರ ಜನಕೆ ಬೆನಿಫಿಟ್ಟದೆ" ಎಂದುಕೊಂಡು ವಾಟಿಸ್ಸೆ ಬಂದ.

"ಅದೇನು ಬೆನಿಪಿಟ್ಟದ್ದ?"

"ನೋಡಕ್ಕ ಕುಮಾರಸ್ವಾಮಿಯ ಬೇವುಕಲ್ಲಿಗೆ ಕರುಸ್ತಿವಿ ಅಂತಾ ಜೆಡಿಎಸ್ ಕಳ್ರು ಜನಗಳತ್ರ ದುಡ್ಡೆತ್ತಿದ್ರು. ಅಧಿಕಾರಿಗಳತ್ರನೂ ಕಿತ್ರು ಕುಮಾರಸ್ವಾಮಿ ಬಂದ ಹೋದ. ಆದರೆ ಅವ್ರುನೆಸರೇಳಿಕಂಡು ಕಾಸು ಕಿತ್ತೊರಿಗೆ ವಳ್ಳೆ ಅನುಕೂಲನೆ ಆಯ್ತು. ಆದ್ರಿಂದ ಬರ್ಲಿ ಬುಡು."

"ಅಂಗರೆ ನೀನು ಕಾಸು ಕೀಳಕೆ ತಯಾರಾಗಿದ್ದಿ?"

"ಥೂಥೂ ಇದೇನಕ್ಕ ಹಿಂಗಂತಿ. ನಾನು ಇಂತ ಲೀಡ್ರೆಸರೇಳಿಕಂಡು ಯಾವತ್ತೂ ಬದಿಕಿಲ್ಲ, ಬದಕದೂ ಇಲ್ಲ, ನಾನು ನಿನಿಗೆ ಮದ್ಲೆ ಹೇಳಿದ್ದಿನಿ. ಈ ರಾಜ್ಯದ ಮುಖ್ಯಮಂತ್ರಿಯಾಗಿರೊ ನಾನು ನಿನ್ನ ಮನೆಗೆ ಬಂದು ಮನಗ್ತಿನಿ ಅನ್ನದೇ ಅನ್‌ಟಚಬಲಟಿಗೆ ಸಮನಾದ ಅಂಕಾರ ಕಣಕ್ಕ. ಅಂತ ಕಾರ್ಯಕ್ರಮ ಹಾಯ್ಕಂಡಿರೋರ ನಾನು ಚಿಲ್ಲರೆ ಮನಸಿನ ರಾಜಕಾರಣಿಗಳು ಅಂತಿನಿ, ಅಂತಾ ನಾನು ಕುಮಾರಸ್ವಾಮಿ ಹೆಸರೇಳಿ ಕಾಸು ಕೀಳ್ತಿನಿ ಅಂತಿಯಲ್ಲಕ್ಕಾ?"

"ಹಾಕ್ಲಾಸುಕ್ಯಂಗಂದೆ ಕಂಡ್ಯ."

"ಅಂಗಾದ್ರೆ ಸರಿ. ನೋಡಕ್ಕ ಬಡಬಗ್ಗರ ಮನಿಗೆ ಬಂದು ಮನಗೊ ಕುಮಾರ ಈಗೆಲ್ಲಿಗೋಗ್ಯವುನೆ ಗೊತ್ತೆ?"

"ಎಲ್ಲಿಗೋಗಿದ್ದನ್ಲ?"

"ಪೂನಾದತ್ರ ಇರೊ ರೆಸಾರ್ಟ್‌ಗೆ ಯಮ್ಮೆಲ್ಲೆನ್ಯಲ್ಲ ಕರಕಂಡೋಗ್ಯವುನೆ."



"ಅಂಗಂದ್ರೇನೂ?"

"ಆಯ್ಯೋ ಅದೊಂದು ಭೂಲೋಕದ ಸ್ವರ್ಗವಂತೆ ಕಣಕ್ಕ. ಅಲ್ಲಿಗೆ ಜೆಡಿಎಸ್ ಎಮ್ಮೆಲ್ಲೆಗಳನ್ಯಲ್ಲ ಕರಕಂಡೋಗಿ ಕುಡಿಸಿ, ತಿನ್ನಿಸಿ ಮಸಾಜ್ ಮಾಡಿಸಿಕೊಂಡು ಯಲ್ಲಾರ ಕ್ಯನ್ನೆಗೂ ಮುತ್ತು ಕೊಟ್ಟು ಬೇಜಾರಾಗಬ್ಯಾಡಿ ಅಂತ ಸಮಾಧಾನ ಮಾಡಿ ಕರಕಂಡು ಬತ್ತನೆ."

"ಮುತ್ತು ಕೊಡಕ್ಕೋದನೆ? ಏನು ಪೋಲಿ ಮಾತಾಡ್ತಿಲ ನೀನು?"

"ಯಕ್ಕಾ ತಗೊ ಇಲ್ಲಿ ಈ ಪೇಪ್ರು ನೋಡು. ಇವುನ್ಯಾರೇಳು?"

"ಕುಮಾರಸ್ವಾಮಿ."

"ಅವುನ ಯಮ್ಮೆಕರಿನ ತುಟಿಗೆ ಕ್ಯನ್ನೆ ಕೊಟ್ಟಿರೋ... ಗೊತ್ತೆ?"

"ಯಾರೊ ಗೊತ್ತಿಲ್ಲ ಕಂಡ್ಯ."

"ಜಮೀರಮದ್ ಕಣಕ್ಕ. ಅವುನು ಚಾಮರಾಜಪೇ... ಗೆದ್ದಾಗ ಈ ಕುಮಾರಸ್ವಾಮಿ ಮುತ್ತು ಕೊಟ್ಟದ್ದ"

"ಗಂಡುಸ್ರು ಗಂಡುಸುರಿಗೆ ಮುತ್ತು ಕೊಡ... ಹಿಂಗೂ ಮಾಡ್ಯರೆ?"

"ಕೆಲುವುರು ಅಂಗೆ ಕಣಕ್ಕ ಗಂಡುಸ್ರಿಗೆ ಮ... ಕೊಡದ್ರಲ್ಲೇ ರೊಮಾಂಚನ ಪಡಿತರೆ. ಅದರಲ್ಲಿ ಇ... ವಬ್ಬ, ಒಂದೇ ಒಂದು ಎತ್ವಾಸ ಏನವ್ವ ಅ... ಕುಮಾರಸ್ವಾಮಿ ಟೈಂ ಬಂದಾಗ ಕಾಲಿಡಿತನೆ, ... ಆಯ್ತ ಅಂದ್ರೆ ಕಾಲಲ್ಲಿ ವದಿತನೆ. ಅದ್ಕೆ ನೋ... ಜಮೀರಮದ್ದನ ಬಸ್ಸ ಪೊಲೀಸ್‌ನೋರು ತಡಿತ... ದ್ದರಂತೆ."

"ಲೈ. ಆ ಕತೆ ಇರ್ಲಿ, ಇಲ್ಲಿಂದ ಪೂನಾ... ಯಾಕೋದ್ರು ಮದ್ಲದೇಳು?" ಎಂದ ಕಾಳಮಾವ...

"ಅತೃಪ್ತ ಎಮ್ಮೆಲ್ಲೆಗಳಿಗ್ಯಲ್ಲ ಕುಡಿಸಿ, ತಿನ್ನಿಸಿ, ... ಮಸಾಜ್ ಮಾಡಿಸಿ, ಲಾಸ್ಟಿಗೆ ಸೂಟುಕೇಸು ಕೊ... ಅದುಬ್ಯಾಡ ಅಂದೋರಿಗೆ ಸೈ... ಮನೆ ಇನ್ನು ಏನೇನೊ ಕೊ... ಸಮಾಧಾನ ಮಾಡಿಕಂಡು ... ಹೋಗಿದ್ದರಂತೆ ದ್ವಡಪ್ಪ."

"ಪೋಲಿ ಬಡ್ಡೆತ್ತುದ್ದು ... ನೀನು. ಪಾಪ ಅವುರ ಮ್ಯಾಲೆ ... ಹೇಳ್ತಿ. ನೀನೇಳ್ಳ ಉಗ್ರಿ?" ... ಕಾಳಮಾವ.

"ಅದು ಹಿಂಗಂತೆ ಕಣಮ... ಈ ಹತ್ತು ತಿಂಗಳು ಕರ್ನಾಟ... ಏನೇನು ಮಾಡಿದ್ದಿವಿ ಅನ್ನದ ಅ... ಸುರುದು ಹಂಚಿಗಂಡು, ಮು... ಏನು ಮಾಡಬೇಕು ಅ... ಮಾತಾಡಕ್ಕೆ ಹೋಗಿದ್ದರಂತೆ."

"ಅದ ಇಲ್ಲೆ ಎಲ್ಯಾರ ... ಗಂಡು ಮಾತಾಡಕ್ಯಾಯ್ತಿರಲಿಲ...

"ಆಯ್ತಿತ್ತು, ಒಂದಲ್ಲ ... ಯರಡು ವಿಧಾನಸೌಧ ಕಟ್ಯವರೆ. ಅದರಲ್ಲೇ ಮಾ... ಬವುದಿತ್ತು, ಅದೂ ಬ್ಯಾಡ ಅಂದ್ರೆ ನಮ್ಮ ಕೃಷ್ಣ... ಗುಂಡಿಗಾರ ಹೋಗಬವುದಿತ್ತು, ಆದ್ರು ಪೂನಾ... ಗ್ಯವುರೆ."

"ಈ ಮನಿಯಾಳ ನನಮಕ್ಕಳು ಪೂನಾದಿಂದ ಬ... ಕಡದೆತ್ತಾಕದ ನಾನು ನೋಡದಿಲವೆ ತಗೊ."

"ನಮ್ಮ ದ್ವಡಪ್ಪೊಂದ ವಳ್ಳೆ ಡೈಲಾಗ್ ವ... ಎಂದ ವಾಟಿಸ್ಸೆ.

"!?"

–ಬಿ. ಚಂದ್ರೇಗ...

ಬೆಂಗಳೂರು ವಿ.ವಿ: ಕತ್ತಲೆಯಲ್ಲಿ ವಿದ್ಯಾರ್ಥಿಗಳ ಭವಿಷ್ಯ

ಬೆಂಗಳೂರು ವಿಶ್ವವಿದ್ಯಾಲಯದ ಎಡವಟ್ಟಿನ ಕೃಪೆಯಿಂದಾಗಿ ಪದವಿ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಬಾರಿ ಚಳಿಗಾಲದಲ್ಲೇ ಬೇಸಿಗೆಯ ರಜಾದಿನಗಳು ಲಭ್ಯವಾಗಿವೆ! ನವೆಂಬರ್ 1 ರಿಂದ ಆರಂಭವಾದ ರಜೆ ಈ ತಿಂಗಳ 29ರ ವರೆಗೂ ಮುಂದುವರೆದಿರುವುದರಿಂದ ಮೂರು ತಿಂಗಳ ಕಡ್ಡಾಯ ದೀರ್ಘ ರಜೆ ಅನಾಯಾಸವಾಗಿ ಸಿಕ್ಕಿದೆ. ಸಾಮಾನ್ಯವಾಗಿ ನವೆಂಬರ್‌ನಲ್ಲಿ ನಡೆಯುತ್ತಿದ್ದ ಪರೀಕ್ಷೆಗಳು ಈ ಬಾರಿ ಡಿಸೆಂಬರ್ ತಿಂಗಳು ಪೂರ್ತಿ ನಡೆದಿದ್ದರಿಂದ ಉತ್ತರಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಜನವರಿ ಕೊನೆಯ ವರೆಗೂ ಚಾಚಿಕೊಂಡಿದೆ. ಸದ್ಯಕ್ಕೆ ಈ ಬಿಟ್ಟಿ ರಜೆಯ ಮಜಾವನ್ನು ಅನುಭವಿಸುತ್ತಿರುವ ವಿದ್ಯಾರ್ಥಿ-ಅಧ್ಯಾಪಕರಿಬ್ಬರಿಗೂ ಮುಂದಿನ ಬೇಸಿಗೆಯ ರಣಬಿಸಿಲು ಕಾದಿದೆ.



ಆದರೆ ಇದರಿಂದ ನಿಜವಾಗಿಯೂ ಅನ್ಯಾಯವಾಗುವುದು ಅಂತಿಮ ಸೆಮಿಸ್ಟರ್ ಪರೀಕ್ಷೆ ಬರೆಯುವ ಮಕ್ಕಳಿಗೆ. ಏಕೆಂದರೆ, ಮಾರ್ಚ್ 31ಕ್ಕೆ ಮುಗಿಯುತ್ತಿದ್ದ ಶೈಕ್ಷಣಿಕ ಅವಧಿ ಈಗ ಎರಡು ತಿಂಗಳು ಮುಂದಕ್ಕೆ ಹೋಗಬೇಕಾಗಿರುವುದರಿಂದ, ಜುಲೈ 2007ರಲ್ಲಿ ಮಾತ್ರ ಅಂತಿಮ ಪರೀಕ್ಷೆ ನಡೆಯಲು ಸಾಧ್ಯ. ಇನ್ನು ಅವರ ಫಲಿತಾಂಶ ಬರುವುದಕ್ಕೆ ಬೆಂವಿವಿ ಎಷ್ಟೇ ಕಷ್ಟಪಟ್ಟರೂ, ಆಗಸ್ಟ್ ಕೊನೆಯವರೆಗೂ ಕಾಯಬೇಕಾಗುತ್ತದೆ. ಬೇರೆ ವಿಶ್ವವಿದ್ಯಾಲಯಕ್ಕಾಗಲೀ, ಇತರೆ ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಲೀ ಸೇರಬೇಕೆಂಬ ಆಸೆ ಇಟ್ಟುಕೊಂಡಿರುವ ಪ್ರತಿಭಾವಂತ ಮಕ್ಕಳಿಗೆ ಇದರಿಂದ ತುಂಬಾ ಅನ್ಯಾಯವಾಗಲಿದೆ.

'ಬೆಂಗಳೂರು ವಿವಿಯ ವಿದ್ಯಾರ್ಥಿಗಳು ಅರ್ಜಿಹಾಕುವಂತಿಲ್ಲ' ಎಂಬ ಲೋಕಾಭಿಪ್ರಾಯಕ್ಕೆ ಈಗ ವಿವಿಯ ಅಧಿಕೃತ ಮುದ್ರೆ ಬೀಳಲಿದೆ. ಇದರಿಂದಾಗಿ ಇನ್ನು ಮುಂದೆ ವಿದ್ಯಾರ್ಥಿಗಳು ಬೆಂವಿವಿಗೆ ಸೇರಿದ ಕಾಲೇಜುಗಳಿಗೆ ಬದಲು ಸ್ವಾಯತ್ತತೆ ಇರುವ ಖಾಸಗೀ ಕಾಲೇಜುಗಳಿಗೆ ಹೆಚ್ಚು ಹಣ ಕೊಟ್ಟು ಸೇರಿಕೊಳ್ಳುವ ಅನಿವಾರ್ಯತೆ ಉಂಟಾಗುತ್ತದೆ. ಇನ್ನು ಮೂರು ವರ್ಷದ ಕೋರ್ಸಿಗೆ ಮೂರುವರೆ ವರ್ಷ ಕಾಯುವ ಬದಲು ಬಹುಪಾಲು ವಿದ್ಯಾರ್ಥಿಗಳು ಮೂಲ ಪದವಿ ಕೋರ್ಸುಗಳಿಗೆ ಖಾಯಂ ತಿಲಾಂಜಲಿ ಇತ್ತು, ಮಾರುಕಟ್ಟೆ ಸರಕಾಗಿರುವ ದೈನೇಸಿ ವೃತ್ತಿಪರ ಕೋರ್ಸುಗಳಿಗೆ ಮುಗಿಬೀಳುವಂತಾಗುತ್ತದೆ. ಮುಂದಿನ ವರ್ಷದಿಂದ ಬಹುರಾಷ್ಟ್ರೀಯ ಕಂಪನಿಗಳಿಗೆ ಯಾವುದಕ್ಕೂ ಕಮ್ಮಿ ಇಲ್ಲದ ಪರದೇಶದ ವಿಶ್ವವಿದ್ಯಾಲಯಗಳಿಗೆ ಈ ದೇಶದಲ್ಲಿ ಬಾಗಿಲು ತೆಗೆಯಲು ಪರವಾನಗಿಯನ್ನು ಕೇಂದ್ರ ಸರ್ಕಾರ ಈಗಾಗಲೇ ಕೊಟ್ಟಾಗಿದೆ. ಇವೆಲ್ಲದರ ಒಟ್ಟಾರೆ ಪರಿಣಾಮದಿಂದಾಗಿ, ಬೆಂವಿವಿ ಕೂಡ ಒಂದೋ ನಮ್ಮ ಸರ್ಕಾರಿ ಶಾಲೆಗಳಂತೆ ಎಕ್ಕುಟ್ಟಿ ಹೋಗಬೇಕಾಗುತ್ತದೆ, ಇಲ್ಲವೇ ಪೂರ್ತಿ ಬಾಗಿಲು ಹಾಕಿಕೊಂಡು ಮಾನ ಉಳಿಸಿಕೊಳ್ಳಬೇಕಾಗುತ್ತದೆ.

• ಈ ಅವನತಿಯ ಮೂಲ ಹೊಸ ಕರ್ನಾಟಕ ... ಕಾಯಿದೆಯ ಮೂಲಕ ವಿಶ್ವವಿದ್ಯಾಲಯಗಳ ಚುನಾ... ಅಂಗಗಳನ್ನು ರದ್ದುಮಾಡಿ, ಕೇವಲ ನೇಮಕಾತಿಗಳಿ... ಸೆನೆಟ್ ಮತ್ತು ಸಿಂಡಿಕೇಟ್‌ಗಳನ್ನು ರಚಿಸಿದ್ದರಲ್ಲಿ... ಇದೆ. ನಮ್ಮ ವಿವಿಗಳ ಪ್ರಜಾತಾಂತ್ರಿಕ ಸ್ವರೂಪವ... ನಾಶಮಾಡಿ, ಯಾವುದೇ ಆರೋಗ್ಯಪೂರ್ಣ ಚ... ಇಲ್ಲದೆಯೇ ಸೆಮಿಸ್ಟರ್ ಪದ್ಧತಿಯನ್ನು ಹೇರಲಾಯಿ... ಇದರಿಂದಾದ ಏಕಮೇವ ವ್ಯತ್ಯಾಸವೆಂದರೆ ವರ್ಷ... ಒಂದರ ಬದಲು ಎರಡೆರಡು ಪರೀಕ್ಷೆ ; ಆದರೆ ... ವಿಷಯಗಳ ಒನ್-ಬೈ-ಟು ಸರ್ವಿಸ್ ಅಷ್ಟೆ! ಇ... ಮುಂದಿನ ಅವತಾರವೆಂಬಂತೆ ಮುಂದಿನ ವರ್ಷದಿ... ಎಲ್ಲ ಪದವಿ ವಿಷಯಗಳಲ್ಲೂ, ಮೌಲ್ಯಮಾಪನ ... ಮುಗಿಯಲಿ ಎಂಬ ಏಕೈಕ ಉದ್ದೇಶದಿಂದ, ಮಲ್ಟಿಪ... ಚಾಯ್ಸ್ ಮಾದರಿಯ ಪ್ರಶ್ನೆಪತ್ರಿಕೆಯನ್ನು ಅನುಷ್ಠಾ... ಗೊಳಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಕಲಿ... ಕೆಯ ಪ್ರಕ್ರಿಯೆಗೆ ಏನಾಗಬಹುದು ಎಂಬ ... ಯಾವ ಶೈಕ್ಷಣಿಕ ಚರ್ಚೆಯೂ ಇಲ್ಲದೆ ಈ ಪ್ರಯೋ... ವನ್ನು ಮಕ್ಕಳ ಮೇಲೆ ಹೇರಲಾಗುತ್ತಿದೆ.

ಖಾಸಗೀಕರಣದ ಸ್ವರ್ಗವಾದ ನವ ಜಾಗ... ವ್ಯವಸ್ಥೆಯನ್ನು ಬರಮಾಡಿಕೊಳ್ಳಲು ನಮ್ಮ ... ಮಾಡಿಕೊಂಡಿರುವ ಸಿದ್ಧತೆ ಇದು!


–ವರದಿಗಾ...

ಸುಖಕ್ಕೊಂದು ಅಸುಖ

ಇದೆಷ್ಟು ವಿಚಿತ್ರ ಜಗತ್ತೆಂದರೆ... ಇಲ್ಲಿ ಮನುಷ್ಯ ಕಾತರದಿಂದ ಪಡೆವ ಪ್ರತಿಯೊಂದು ಸುಖಕ್ಕೂ ಬೆಲೆ ತೆರಬೇಕಾಗುತ್ತದೆ. ನಾನು ಇದನ್ನು ಬರೆವಾಗ ಬೆಂಗಳೂರಿನ ಜಲಪ್ರಳಯ ಮತ್ತು ಸಿಯೋಲ್‌ನ ಒಲಂಪಿಕ್ಸ್ ಬಗ್ಗೆ ಚಿಂತಿಸುತ್ತಿದ್ದೇನೆ. ಬೆಂಗಳೂರು ಕರ್ನಾಟಕದ ಎಲ್ ಡೊರ್ಯಾಡೋ; ಉದ್ಯೋಗ ಒದಗಿಸುವ, ಎಲ್ಲರಿಗಿಂತ ಮುಂಚೆ ನೆಮ್ಮದಿ ಪಡೆವ ಜಾಗವೆಂದು ಜನ ಇಲ್ಲಿಗೆ ನುಗ್ಗುತ್ತಾರೆ. ಇಲ್ಲಿಗೆ ಬಂದ ಬಹುಪಾಲು ಶಾಸಕರು ತಮ್ಮ ಊರಿಗೆ ಹಿಂದಿರುಗುವುದಿಲ್ಲ; ...ನಿಕರು, ಅಧ್ಯಾಪಕರು, ಗುಮಾಸ್ತರು ಕೂಡ. ಮೊನ್ನೆ ಶುಕ್ರವಾರದ ಮಳೆ; ಜನರನ್ನು ...ಂದು ಹಾಕಿತು. ಇದರ ಬಗ್ಗೆ ನಾವು ಭಾನುವಾರ ಮಾತಾಡುತ್ತಿದ್ದಾಗ ಮಳೆ ...ರುವಾಯಿತು. ಶುಕ್ರವಾರದ ಮಳೆಯಲ್ಲಿ ತಂದೆಯೊಬ್ಬ ಇಬ್ಬರು ಮಕ್ಕಳನ್ನು ...ವಚಿಕೊಂಡು ಜೀವ ಉಳಿಸಿಕೊಳ್ಳಲು ಓಡುತ್ತಿದ್ದಂತೆಯೇ ಆಕಾಶ ಕವಚಿಕೊಂಡು ...ರು ನಾಲ್ಕಾಳೆತ್ತರ ಬಂದು ಮಕ್ಕಳನ್ನು ಅವಚಿಕೊಂಡೇ ಮಕ್ಕಳೊಂದಿಗೆ ಅಸು ...ನೀಗಿದ. ಭಾನುವಾರದ ಮಳೆ ಇನ್ನೂ ಭಯಂಕರ. ವಿದ್ಯುತ್ ದೀಪ ಬೇಕೆನ್ನುತ್ತೇವೆ; ...ದೇ ಕೊಲ್ಲುತ್ತದೆ. ಮನೆ ಸಮಾಧಿಯಾಗುತ್ತದೆ. ಜೀವ ನೀಡುವ ನೀರು ಜೀವ ...ಗೆದುಕೊಳ್ಳುತ್ತದೆ.

ದಕ್ಷಿಣ ಕೊರಿಯಾ, ಜಪಾನ್‌ಗಳಲ್ಲಿ ಪ್ರತಿಯೊಂದು ವ್ಯವಹಾರದ ಭೇಟಿಗೂ ...ಹೊರದೇಶದ ಅತಿಥಿಗಾಗಿ ಹೆಣ್ಣುಗಳನ್ನು ರಂಜನೆಯ ಭಾಗವಾಗಿ ಮಾಡಿಕೊಳ್ಳುವುದಾಗಿ ...ಬ್ಬರು ಹೇಳಿದರು. ಭಾರತದ ಇಪ್ಪತ್ತರಷ್ಟು ಸರಾಸರಿ ಆದಾಯವುಳ್ಳ ದಕ್ಷಿಣ ಕೊರಿಯಾ ಸಂಪತ್ತು, ಐಹಿಕ ನೆಮ್ಮದಿಯ ಉತ್ತುಂಗ ತಲುಪುತ್ತಿದೆ. ಹಾಗೆಯೇ ...ಲ್ಲಣದ ತಾರಕವನ್ನು ಕೂಡ. ಈಗ ಜಗತ್ತಿನ ಎಲ್ಲೆಡೆಯಿಂದ ಸಿಯೋಲ್‌ಗೆ ಆಟಗಾರರು ...ಂದಿದ್ದಾರೆ. ಸಿಯೋಲ್ ನಗರ ಅಲಂಕರಿಸಿಕೊಂಡು ಅತಿಥಿ ಸತ್ಕಾರದಲ್ಲಿ ತೊಡಗಿದೆ. ಸಿಯೋಲ್ ಎಲ್ಲಿದೆ ಎಂದು ಗೊತ್ತಿಲ್ಲದವರು ಕೂಡ ಅತ್ತ ಕಣ್ಣು ಹಾಯಿಸುತ್ತಿದ್ದಾರೆ. ...ಚಾರ ಮತ್ತು ವ್ಯವಹಾರ ಹೇಗೆ ಒಂದನ್ನೊಂದು ಅವಲಂಬಿಸಿವೆ ಎಂಬುದು ಆಧುನಿಕ ಜೀವನ ಬಲ್ಲ ಎಲ್ಲರಿಗೂ ಗೊತ್ತು. ದಕ್ಷಿಣ ಕೊರಿಯಾದ ವ್ಯವಹಾರ ಇನ್ನೂ ಕುದುರಲಿದೆ. ಹಾಗೆಯೇ ಅದರ ಹಿಂಸೆ, ಗೋಳುಗಳು ಕೂಡ. ಅಮೆರಿಕಾದ ಮಡಿಲಲ್ಲಿ ಬೆಳೆದ ಜಪಾನ್‌ನಂತೆಯೇ, ಕೊರಿಯಾ ಕೂಡ ಗುಲಾಮನ ಗೈರತ್ತು, ಸಿರಿವಂತನ ಪ್ರತಿಷ್ಠೆ ಇವೆರಡರೊಂದಿಗೇ ಇದೆಲ್ಲದರ ...ರರ್ಥಕತೆಯನ್ನು ಕೂಡ ಅರಿತಿದೆ.


ಸಾವಿರಾರು ಜನ ಕ್ರೀಡಾಪಟುಗಳು ಸಿಯೋಲ್‌ನಲ್ಲಿ ನೆರೆದಿದ್ದಾರೆ. ದೈಹಿಕ, ಮಾನಸಿಕ ತರಬೇತಿಯ ...ಟುಜೀವನ ನಡೆಸಿದ ಇವರೆಲ್ಲರೂ ಗೆಲ್ಲುವುದಿಲ್ಲ; ಸೋಲು ನೂರಾರು ಜನರನ್ನು ಕಂಗೆಡಿಸಲಿದೆ. ಅತ್ಯಂತ ಅಹಿಂಸಾತ್ಮಕವಾದ ಕ್ರೀಡಾಜಗತ್ತು ಮನುಷ್ಯನಾಟದ ಶ್ರೇಷ್ಠತೆಯನ್ನು ಹೊರತರಲು ಹಿಂಸೆಯಿದಲೇ ...ಕಾಗ್ರತೆ, ತರಬೇತಿಯನ್ನು, ಸೋಲು, ಹತಾಶೆಯನ್ನು ಅನಿವಾರ್ಯವಾಗಿಸಿದೆ. ರುಮೇನಿಯಾ, ರಷ್ಯಾ, ಪೂರ್ವಜರ್ಮನಿಯಂಥ ದೇಶಗಳು ತಮ್ಮ ರಾಷ್ಟ್ರದ ಹಿರಿಮೆಗಾಗಿ ಕ್ರೀಡಾಪಟುಗಳನ್ನು ...ತ್ತಾಯಿಸಿದರೆ, ಜಪಾನ್, ಫಿಲಿಫೈನ್ಸನಂಥ ರಾಷ್ಟ್ರಗಳು ವೈಯಕ್ತಿಕ, ಸಾಮಾಜಿಕ ಮಟ್ಟದಲ್ಲಿ ಒತ್ತಡ ...ಹೇರುತ್ತವೆ. ಮೇರಿ ರೆಟ್ಟನ್ ಲೋ ಎಂಬ ಅಮೆರಿಕಾದ ಹುಡುಗಿ ಲಾಸ್ ಏಂಜಲೀಸ್ ಒಲಂಪಿಕ್ಸ್ ಮುಗಿದ ಮೇಲೆ ತನ್ನ ದಿಗ್ವಿಜಯದ ಕ್ಷಣದಲ್ಲೇ ತನ್ನ ಬದುಕಿನ ಒಬ್ಬಂಟಿತನದ ದುರಂತದ ಬಗ್ಗೆ ಮಾತಾಡಿ ಕ್ರೀಡೆಯಿಂದ ನಿವೃತ್ತಳಾದಳು. ಆದರೆ ಒಲಂಪಿಕ್ಸ್ ಗೆಲ್ಲುವುದು ಎಷ್ಟು ಹೆಮ್ಮೆಯ ...ಯೆ! ಎಂಭತ್ತು ಕೋಟಿ ಜನಸಂಖ್ಯೆಯ ಭಾರತ ಸ್ವತಂತ್ರ್ಯ ಬಂದು ನಲವತ್ತೊಂದು ವರ್ಷದ ಬಳಿಕ ಕೂಡ ದ್ರಾಕ್ಷಿಯನ್ನು ಹುಳಿಯೆಂದೇ ತಿರಸ್ಕರಿಸಬೇಕಾಗಿದೆ. ಇಲ್ಲಿ ಪಡೆದ ಸುಖಕ್ಕೆ ಅಸುಖದ ಮುಖವಿರುವಂತೆಯೇ ಪಡೆಯಲಾಗದರ ಬಗ್ಗೆ ಸಿನಿಕತನ ಇದೆ.



ಸೆಪ್ಟಂಬರ್ 25, 1988

ಕೊಪ್ಪ- ಜಮಖಂಡಿ

ಬಯಲುಸೀಮೆ ಮತ್ತು ಮಲೆನಾಡಿನ ಜನರ ನಡುವಿನ ವ್ಯತ್ಯಾಸ ಕುರಿತು ಯೋಚಿಸಿದ್ದೀರಾ? ಮಲೆನಾಡಿನ ಜನ ಸಂಕೋಚದವರು, ಬಿಳಿಚಿಕೊಂಡವರು, ನಯವಂತರು; ಬಯಲುಸೀಮೆಯವರು ಒರಟರು, ಸಂಘಜೀವಿಗಳು, ಕಂದು, ಕಪ್ಪು ಬಣ್ಣದವರು. ಮಲೆನಾಡಿನ ಮನುಷ್ಯ ತನ್ನದೊಂದೇ ಮನೆಯನ್ನು ಕಾಡಿನ ನಡುವೆ ಕಟ್ಟಿಕೊಂಡು ತನ್ನ ಕೋಟೆಕ್ಕೆ ಮಾರಿ, ಪಂಜೊಳ್ಳಿಗಳನ್ನು ಕಾಯಲು ನೇಮಿಸಿದಂತೆ ನಟಿಸಿ, ಒಂದೇ ಮನೆಗೆ ಒಂದು ಊರಿನ ಹೆಸರಿಡಬಲ್ಲ, ಬೇಲಿ ಇಲ್ಲದೆ ಗದ್ದೆ, ಮನೆ ನಿಭಾಯಿಸಬಲ್ಲ, ಬಯಲು ಸೀಮೆಯವ ನೂರಾರು ಮನೆಗಳುಳ್ಳ, ಹೊಲದಿಂದ ದೂರದ ಹಳ್ಳಿಯಲ್ಲಿ ಇರುತ್ತಾನೆ; ತನ್ನ ಹೊಲ ತನ್ನ ಊರಿಗಿಂತಲೂ ಸ್ವಚ್ಛವಾಗಿದ್ದರೂ ಊರಲ್ಲೇ ವಾಸಿಸುತ್ತಾನೆ.




ನಾನು ಹೇಳಬೇಕೆಂದಿದ್ದುದು ಈ ವ್ಯತ್ಯಾಸವಲ್ಲ, ಪ್ರತಿಯೊಂದು ಮಳೆಗೂ ಒಂದು ಟಿಪ್ಪಣಿ ಬರೆಯಬಲ್ಲ ನಾನು ಈ ಸಲ ಬೇಕೆಂತಲೇ ಬರೆಯಲಿಲ್ಲ, ಮಲೆನಾಡು ಮತ್ತು ಬಯಲುಸೀಮೆಯ ಸಂಗಮದ ಜಾಗದಲ್ಲಿ ಹುಟ್ಟಿ ಬೆಳೆದ ನನಗೆ ಇವೆರಡರ ನಡುವಿನ ವಿಪರ್ಯಾಸ ಮೋಜಿನದೆನ್ನಿಸುತ್ತದೆ. ಮಲೆನಾಡಿನ ಮನುಷ್ಯ ಬಯಲು ಸೀಮೆಯ ಜನರ ಸ್ವಾತಂತ್ರ್ಯ, ಎಷ್ಟು ಬೇಕೋ ಅಷ್ಟು ಮಳೆ ಪಡೆದು ಬೆಳೆ ತೆಗೆದು ಅಡ್ಡಾಡುವ ಸ್ವಾತಂತ್ರ್ಯವನ್ನು ಕರುಬುತ್ತಾನೆ. ಆದರೆ ಬಯಲುಸೀಮೆಯವನ ಗೋಳು ಒಂದಲ್ಲ, ಎರಡಲ್ಲ. ಬಯಲುಸೀಮೆಯಲ್ಲಿ ಬೆಳೆ ಕಮ್ಮಿಯಾದರೂ ಮಕ್ಕಳು ಜಾಸ್ತಿ. ಆತನ ಹೊಲಗಳು ನೀಡುವ ವರಮಾನ ಕಮ್ಮಿ. ಆದ್ದರಿಂದ ಬಯಲುಸೀಮೆಯ ಮನುಷ್ಯ ಮಲೆನಾಡಿನ ಭೇಟಿಗೆ ಬಂದು ಹೋದ ಮೇಲೆ ಮಲೆನಾಡಿನವನ ಸುಖ ಕಂಡು ಅಸೂಯೆಪಡುತ್ತಾನೆ.



ಆತನ ಪ್ರಕಾರ... ತೊಳೆದಿಟ್ಟಂಥ ಹಸಿರು ಜಾಗ ಮಲೆನಾಡು. ಅಸಂಖ್ಯ ಬಣ್ಣದ, ಪರಿಮಳದ ಹೂವುಗಳು. ಹೊಟ್ಟೆಗಿಲ್ಲದಾಗ ಕಾಡು ಸೇರಿದರೆ ಹಣ್ಣು, ಗೆಡ್ಡೆ, ಪ್ರಾಣಿಗಳು. ಸುಂದರ ಜಲಪಾತಗಳು, ಕಣಿವೆಗಳು, ಸುರಿವ ಮಳೆ, ಅಭ್ಯಂಜನ, ಮಳೆ ಹಿಡಿದುಕೊಳ್ಳುತ್ತದೆ; ವಾರಗಟ್ಟಲೆ ಕೆಲಸ ಮಾಡದೆ ಒಲೆಯ ಸುತ್ತ ಕೂತ ಜನ ಉರಿಯುತ್ತ, ಕೆಂಡದ ಬಿಸಿ, ಪುಳಿ ಸೂಸುತ್ತಾ ಇರುವ ಒಲೆಗಳು. ಓದಲು ಪುಸ್ತಕ, ಹರಟಲು ಜನ, ಇಸ್ಪೀಟಾಡಲು ಗೆಳೆಯರು, ಕುರುಕುತ್ತಾ ಹೋಗಲು ಹುರಿಗಾಳು. ಕಾದಂಬರಿಯ ಲೋಕ ಅದು! ಪ್ರೇಮ ಕೂತಲ್ಲಿ, ಕಲ್ಪನೆಯಲ್ಲಿ ತೆರೆದುಕೊಳ್ಳುವ ರೀತಿ ಆಹ್ಲಾದಕರ. ಬಿಡದ ಮಳೆ. ತೆರೆದ ಮನಸ್ಸಿನ ಲೋಕ. ಬಯಲು ಸೀಮೆಯವನ ಕಲ್ಪನೆಯಲ್ಲಿ ಕೊಂಚ ಮಬ್ಬಾದ, ಹೊರಗೆ ಜನ ಆವರಿಸಿದ, ಹಸಿರು ಉಕ್ಕುತ್ತಿರುವ ಜಲಪಾತ ಸಂಗೀತ ಹಾಡುತ್ತಿರುವ ಮಲೆನಾಡು.... ಆದರೆ ಮಳೆ ಆಕಾಶ ಕಳಚಿದ್ದಂತೆ ಮೊನ್ನೆ ಬೆಂಗಳೂರಲ್ಲಿ ಮಗುಚಿದಂತೆ ಆದಾಗ ಆತನಿಗೆ ಆಘಾತವಾಗುತ್ತದೆ. ಪ್ರಕೃತಿ ಕೇವಲ ಚಿತ್ರವಲ್ಲ ಎಂಬುದು ತಿಳಿಯುತ್ತದೆ. ಮಲೆನಾಡಿನಲ್ಲಿ ಜನಸಂಖ್ಯೆ ಸ್ವಲ್ಪ ಕಮ್ಮಿ ಯಾಕೆ ಎಂಬುದು ಗೊತ್ತಾಗುತ್ತದೆ. ಆದರೆ ಮನುಷ್ಯ ಮನಸ್ಸಿನಲ್ಲೇ ಬಹುಕಾಲ ಬದುಕುತ್ತಾನೆ- ಮಲೆನಾಡಿನ ಮತ್ತು ಬಯಲುನಾಡಿಗನ ಪರಸ್ಪರ ಅಸೂಯೆ, ಸಂದೇಹ ಮುಂದುವರಿಯುತ್ತವೆ.

ಮಲೆನಾಡಿನವ ಕಾವ್ಯದಲ್ಲಿ ಬರೆಯುತ್ತಾನೆ; ಬಯಲು ಸೀಮೆಯವ ದೊಡ್ಡಾಟ ಕಟ್ಟಿ ಆಡುತ್ತಾನೆ.

ನಾಗರಹಾವನ್ನು ನಂಬಿದರೂ ನಗುವ ಹೆಣ್ಣನ್ನು ನಂಬಬಾರದು ಅಂತಾರಲ್ಲಾ?



ಡಿ.ಎಲ್. ಶ್ವೇತಾ, ಹರಪನಹಳ್ಳಿ
ಭೂಗಳ್ಳರ ವಿರುದ್ಧ ಬ್ರಹ್ಮಾಸ್ತ್ರ ಬಿಡ್ತಾರಂತೆ ಮುಖ್ಯಮಂತ್ರಿ?
* ತನ್ನ ತಲೆಗೆ ಗುಂಡಿಟ್ಟುಕೊಳ್ಳುವಷ್ಟು ಪೆದ್ದಾ ಅಂದುಕೊಂಡಿದ್ದೀರಾ ಕುಮಾರಸ್ವಾಮಿನಾ.

ಬಿ.ಭೀಮಣ್ಣ, ಎಂ.ಎಂ.ಹಳ್ಳಿ
ರೇವಣ್ಣ-ಮುಖ್ಯಮಂತ್ರಿ, ಕುಮಾರಸ್ವಾಮಿ- ಪ್ರಧಾನಮಂತ್ರಿ, ದೇವೇಗೌಡರು- ರಾಷ್ಟ್ರಪತಿ ಆಗುವ ಕಾಲ ಬರಬಹುದೇ?
* ಇದಕ್ಕೆ ಸರಿಯಾಗಿ ನಿಖಿಲ್‌ಗೌಡ ಗೃಹಮಂತ್ರಿ ಆದರೆ ಟೋಟಲ್ ಡಿಸಾಸ್ಟರ್!

ಡಿ.ಎಲ್. ಚಂದ್ರಿಕ, ಹರಪನಹಳ್ಳಿ
ರಾಜ್ಯವನ್ನು ಸಾರಾಯಿ ಮುಕ್ತ ಮಾಡ್ತಾರಂತೆ?
* ಅವತ್ತೇ ಸಾರ್ವಜನಿಕ ದಂಗೆ ಶುರುವಾಗುತ್ತೆ ಅಂತ ಗ್ಯಾರಂಟಿಯಾಗಿ ಹೇಳಬಹುದು.

ಮಂಚಾಲಿ ಗುರುರಾಜಾಚಾರ್, ಬಳ್ಳಾರಿ
ಸರ್ಕಾರಿ ಆಸ್ಪತ್ರೆ ಮಂಚಕ್ಕೂ, ಲಂಚಕ್ಕೂ ಏನು ಸಂಬಂಧ?
* ...ರಡನೆಯದು ಎಷ್ಟೇ ಕೊಟ್ಟರೂ, ಮೊದಲನೆ ...ದರಲ್ಲಿರುವ ತಿಗಣೆಗಳು ತಾರತಮ್ಯ ಮಾಡುವುದಿಲ್ಲ.

ರಾಂಕೊ, ತೀರ್ಥಹಳ್ಳಿ
ಯಡಿಯೂರಪ್ಪನವರ ಕನಸಲ್ಲೂ 'ಚಂಪಾ' ಬರ್ತಾರಂತೆ?
* ಏಟು ಜೋರಾಗೇ ಬಿದ್ದಿರಬೇಕು.

ಸಾಬಿಯಾ ಬೇಗಂ, ದೇವದುರ್ಗ
ಹೆಣ್ಣು ನಕ್ಕರೆ ನೂರಾರು ಅರ್ಥ, ಗಂಡು ನಕ್ಕರೆ?
* ದೇವೇಗೌಡ ನಕ್ಕರೆ ಸಾವಿರಾರು ಅನರ್ಥ!

ದಿ.ಎಲ್.ಸುರೇಶ್, ಹರಪನಹಳ್ಳಿ
ಆರ್ಥಿಕ, ಸಾಮಾಜಿಕ ಕಾರ್ಯಸೂಚಿಯೇ ಇಲ್ಲದಿರುವ ಪಕ್ಷ-ಸರ್ಕಾರ ಯಾವುದು?
* ಇರುವ ಪಕ್ಷ ಯಾವುದು ಎಂದು ಮೊದಲು ಹೇಳಿ.

ಕೆ.ಶ್ರೀನಿವಾಸ್, ಮಂಡ್ಯ
ಪ್ರಪಂಚದ ಸುಂದರ ಸೃಷ್ಟಿಗಳಲ್ಲಿ ಹೆಣ್ಣು ಒಂದಂತೆ?
* ಇದನ್ನು ಕಂಡುಹಿಡಿದಿದ್ದೇ ಗಂಡು ಗೊತ್ತಾ ಶ್ರೀನಿವಾಸ್‌ರವರೆ.

ಜಿ.ದಿ.ಎಲ್. ಲಕ್ಷ್ಮಿ, ಗದ್ದಂಬಚ್ಚಹಳ್ಳಿ
ಡಿಸೆಂಬರ್ ಚಳಿ ಶುರುವಾಗುತ್ತಿದ್ದಂತೆ ಯಜಮಾನರು ಆಮಿಷಗಳನ್ನು ಒಡ್ಡಲು ಶುರುಮಾಡುತ್ತಾರಲ್ಲಾ?
* ಚಳಿಗಾಲದಲ್ಲಿ ಅತಿವೃಷ್ಟಿಯಾದರೆ ಬೇಸಿಗೆಯಲ್ಲಿ ಅನಾವೃಷ್ಟಿ ಆದಾತು, ಹುಷಾರ್!

ಜೆ.ಎ. ಖಲಂದರ್ ಅಜೀಜ್, ಜಾವಗಲ್
ಚೆಡ್ಡಿಗಳಿಗೆ ಸೇನೆಯಲ್ಲಿ ಮೀಸಲಾತಿ ನೀಡಿದರೆ?
* ಕುವೆಂಪು ಹೇಳಿರುವಂತೆ,
ಶಾಸ್ತ್ರಗಳನ್ನೆಲ್ಲ ಕೇರಿ ತೂರಿ
ಬಹು ಸಂಶೋಧನೆ ಮಾಡುವರು
ಮಂತ್ರವೊಂದನ್ನು ಕಂಡುಹಿಡಿದು ಪ್ರಯೋಗಿಸುವರು,
ಶತ್ರುಗಳನ್ನು ಸತ್ತೆ ಸಾಯುವರು,
ಬಹು ಕಾಲ ನಂತರದಲ್ಲಿ(!)

ಉಪೇಂದ್ರ ಬೇನಾಳ್, ಆಲಮಟ್ಟಿ ಡ್ಯಾಂ
ದೇವೇಗೌಡ್ರು ಅಂದ್ರೆ ಮಾಜಿ ಪ್ರಧಾನಿ ಅಲ್ಲಾ; ಪಂಚಾಯತಿ ಮೆಂಬರ್ (PM) ಅಂತೆ ಹೌದಾ?
* ಒರಿಜಿನಲ್ ಆಗಿ ಆತ ಪಂಚಾಯತಿ ಲೆವಲ್ಲೇ. ಪ್ರಧಾನಿ ಮಾಡಿದ್ದು ನಮ್ಮ ತಪ್ಪು ಅಷ್ಟೇ.

ಕುಬೇರಪ್ಪ, ಎಂ. ವಿಭೂತಿ, ಹರಿಹರ
ಸಂಸಾರಿಗಿಂತ ಸನ್ಯಾಸಿಗಳೇ ಹೆಚ್ಚು ಆತ್ಮಾನಂದ ಹೊಂದುವರಂತೆ ಹೌದಾ?
* ಭಕ್ತೆಯರ ಸಾನಿಧ್ಯ ಇದಕ್ಕೆ ಕಾರಣವಿರಬಹುದೇ.

ಬಸವರಾಜ್ ಬೆಸ್ತರ್, ಗುಲ್ಬರ್ಗ
ಹಣವೆಂದರೆ ಹೆಣಾನು ಬಾಯಿ ಬಿಡುತ್ತದೆಯಂತೆ; ಹೆಣ್ಣೆಂದರೆ...?
* ಸ್ಮಶಾನಾನೇ ಬಾಯಿ ತೆರೆಯುತ್ತಂತೆ ಹೌದಾ.

ಎಂ.ಸುರೇಶ್, ದಾಸಣ್ಣನ ಮಾಳಿಗೆ
ನಾಗರಹಾವನ್ನು ನಂಬಿದರೂ ನಗುವ ಹೆಣ್ಣನ್ನು ನಂಬಬಾರದು ಅಂತಾರಲ್ಲಾ?
* ಸರಿಯಾಗಿ ಪುಂಗಿ ಬಾರಿಸಲು ಬಾರದವರ ಫಿಲಾಸಫಿ ಇದು.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ರೆವೆನ್ಯೂ ಇಲಾಖೆಯಲ್ಲಿದ್ದ ಸರಕಾರಿ ನೌಕರನೊಬ್ಬ ತನ್ನ ಅನುಮತಿ ಇಲ್ಲದೇ ಯಾವ ಹಣಕಾಸೂ ಬಿಡುಗಡೆ ಆಗದಿರುವುದನ್ನು ಕಂಡು ಚಕಿತಗೊಂಡ; ಅದೇ ಪದ್ಧತಿಯನ್ನು ತನ್ನ ಮನೆಯಲ್ಲೂ ಪಾಲಿಸಲಾರಂಭಿಸಿದ.

ಒಂದು ಸಂಜೆ ಮಕ್ಕಳಿಗೆ ತಿಂಡಿ ತಿನಿಸುಗಳನ್ನು ಮಾಡಲು 50 ರೂ. ಬೇಕೆಂದು ಅವನ ಹೆಂಡತಿ ಅರ್ಜಿ ಸಲ್ಲಿಸಿದಳು. "ಅದು ಬಹಳ ದುಬಾರಿ" ಎಂದು ನೌಕರ ಆಕೆಯ ಅರ್ಜಿಯನ್ನು ತಿರಸ್ಕರಿಸಿದ. ಕೆಲ ದಿನಗಳ ನಂತರ ಆಕೆಗೆ ಸಿನಿಮಾ ನೋಡಲು ಆಸೆಯಾಗಿ 20 ರೂ.ಗಳಿಗೆ ಅರ್ಜಿ ಸಲ್ಲಿಸಿದಳು. "ತಿಂಗಳ ಕೊನೆಯಾಗಿದ್ದರಿಂದ ಸಾಧ್ಯವಿಲ್ಲ" ಎಂದು ನೌಕರ ಆ ಅರ್ಜಿಯನ್ನು ತಿರಸ್ಕರಿಸಿದ.

ಇದು ಹೀಗೇ ಮುಂದುವರೆದು ರೋಸತ್ತ ಹೆಂಡತಿ ತನ್ನ ತಾಯಿಯ ಮನೆಗೆ ಹೋಗುವುದಾಗಿಯೂ, ಅದಕ್ಕೆಂದು ರಜೆ ಬೇಕೆಂದೂ ಅರ್ಜಿ ಸಲ್ಲಿಸಿದಳು. ಅದನ್ನು ತಕ್ಷಣವೇ ಸ್ವೀಕರಿಸಿದ ಗಂಡ "ರಜೆಯನ್ನು ನೀಡಲಾಗಿದೆ. ನಿಮ್ಮ ಜಾಗಕ್ಕೆ ತಾತ್ಕಾಲಿಕ ಬದಲಿ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ" ಎಂದು ಬರೆದು ಹೆಂಡತಿಗೆ ಕಳುಹಿಸಿದ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ನಾರಾಯಣಮೂರ್ತಿಯವರ ಪ್ರಕಾರ ದೇಶಭಕ್ತಿ ಎಂದರೇನು?


ಜನವರಿ 3ರ ಸಂಚಿಕೆಯ ನಮ್ಮ ಪ್ರಶ್ನೆ: ಯಡಿಯೂರಪ್ಪನವರು ಸಾಹಿತ್ಯ ಪರಿಷತ್ ಅಧ್ಯಕ್ಷರಾದಾಗ ನಡೆಯುವ ಗೋಷ್ಠಿಗಳ್ಯಾವುವು?

ನಿಮ್ಮ ಉತ್ತರ: ಗೋಷ್ಠಿ 1 : ಸಾಬರ ಕೊಲೆ = ದೇಶಭಕ್ತಿ
ಗೋಷ್ಠಿ 2 : ಕನ್ನಡಿಗರು-ಚಡ್ಡಿಗಳು = ನಕ್ಸಲರು
ಗೋಷ್ಠಿ 3 : ಚಿಮೂ, ಬೈರಪ್ಪ ಇವರಿಗೆ ಜ್ಞಾನಪೀಠ ಯಾಕೆ ಕೊಟ್ಟಿಲ್ಲ?
ಗೋಷ್ಠಿ 4 : ರಾಷ್ಟ್ರಪಿತ ಗಾಂಧಿಯಲ್ಲ, ಗೋಡ್ಸೆ

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಹಸೀನಾ, ಸಾಗರ



ಜಮೀರ್-ಕುಮಾರ್ ಮಂಗ ದೊಂಗ



ಕುಮಾರ್ ಬಿಟ್ಟರೆ ಜಮೀರ್‌ಗೆ ಗತಿಯಿಲ್ಲ, ಜಮೀರ್‌ಗೆ ಮಸ್ಕಾ ಹೊಡೆಯದೇ ಕುಮಾರ್‌ಗೆ ವಿಧಿಯಿಲ್ಲ. ಜಾತ್ರೆಗೆ ಬಂದಾಗಿದೆ. ಮಿಠಾಯಿ ಕದ್ದಾಗಿದೆ. ಸಿಕ್ಕಿ ಬೀಳದೇ ತಿನ್ನಬೇಕಷ್ಟೇ. ಇದು ಇಬ್ಬರು ಫಟಿಂಗರ ಹರಕತ್ತೂ ಹೌದು ಮಸಲತ್ತೂ ಹೌದು.

ಜಾತ್ರೆಗೆ ಬಂದ ಫಟಿಂಗರಿಬ್ಬರು ಮಿಠಾಯಿ ಕದ್ದ ಕತೆಗೂ ಜಮೀರ್-ಕುಮಾರ್ ಜಗಳಕ್ಕೂ ಎಂಥಾ ಹೋಲಿಕೆಯಂತೀರಿ?


ಕದ್ದ ಮಿಠಾಯಿಗಾಗಿ ಕಚ್ಚಾಡಿದ ಫಟಿಂಗರನ್ನು ಜನ ಹಿಡಿದು ಬಡಿದರೆ, ಜಮೀರ್-ಕುಮಾರ್ ಮಾತ್ರ ಹುಷಾರಾಗಿ ಸಿಕ್ಕಿ ಬೀಳುವ ಮೊದಲೇ ಒಂದಾಗಿದ್ದಾರೆ. ಅಷ್ಟೇ...!

ಬಕ್ರೀದ್ ನಮಾಜಿಗೆ ಬರಲಿಲ್ಲ ಎಂಬ ಒಂದೇ ಕಾರಣಕ್ಕೆ ಮುಖ್ಯಮಂತ್ರಿ ಮುಸ್ಲಿಮರ ಕ್ಷಮೆ ಕೇಳಬೇಕೆಂದು ಜಮೀರ್ ಬಾಯಿ ಬಡಿದುಕೊಂಡಿದ್ದು, ತಿರುಗಿಬಿದ್ದು ಮಂತ್ರಿಗಿರಿಗೇ ರಾಜೀನಾಮೆ ಬಿಸಾಕಿದ್ದು, ಅದಕ್ಕೆ ಅಪ್ಪಾಜಿ ದೇವೇಗೌಡರೇ ಡೋಂಟ್‌ಕೇರ್ ಅಂತ ತಿಪ್ಪೆಗುಡಿಸಿದ್ದು ಮತ್ತು ಇಡೀ ಪ್ರಹಸನವೇ ಉಲ್ಟಾ ಹೊಡೆದು ಸದ್ಯ ಜಮೀರಣ್ಣ ಮತ್ತು ಕುಮಾರಣ್ಣ ಪುಣೆಯ ಅಂಬಿ ವ್ಯಾಲಿ ರೆಸಾರ್ಟಿನಲ್ಲಿ ಮುದ್ದಾಡಿಕೊಂಡದ್ದು... ಎಂಥವರಿಗೂ ಮಂಗಾಟವೆನಿಸಬಹುದು. ನಡುಬೀದಿಯಲ್ಲಿ ಮೆಟ್ಟು ಮೆಟ್ಟಲ್ಲಿ ಹೊಡೆದಾಡಿಕೊಂಡವರು ರೆಸಾರ್ಟಿನಲ್ಲಿ ಅಪ್ಪಿಕೊಂಡೇನು ಫಲ?


ಹಕೀಕತ್ತೇನೆಂದರೆ; ಕುಮಾರ್ ಬಿಟ್ಟರೆ ಜಮೀರ್‌ಗೆ ಗತಿಯಿಲ್ಲ, ಜಮೀರ್‌ಗೆ ಮಸ್ಕಾ ಹೊಡೆಯದೇ ಕುಮಾರ್‌ಗೆ ವಿಧಿಯಿಲ್ಲ. ಜಾತ್ರೆಗೆ ಬಂದಾಗಿದೆ. ಮಿಠಾಯಿ ಕದ್ದಾಗಿದೆ. ಸಿಕ್ಕಿ ಬೀಳದೇ ತಿನ್ನಬೇಕಷ್ಟೇ. ಇದು ಇಬ್ಬರು ಫಟಿಂಗರ ಹರಕತ್ತೂ ಹೌದು ಮಸಲತ್ತೂ ಹೌದು.

ರಾ. ಸೋಮನಾಥ್

ಕಳೆದ ಆರು ತಿಂಗಳಿನಿಂದೀಚೆಯ ಜೆಡಿಎಸ್ ಶಾಸಕರ ಬೇಗುದಿಯನ್ನು ಕಂಡವರಿಗೆ ಜಮೀರ್ ಪೀಕಲಾಟದ ಆಳ-ಅಗಲ ಎರಡೂ ಗೊತ್ತಿತ್ತು. ಜಮೀರ್‌ಗಿಂತಲೂ ಮುನ್ನ ಹೊಸಪೇಟೆ ಶಾಸಕ ಸಂತೋಷ್ ಲಾಡ್ ತಿರುಗಿ ಬೀಳುತ್ತಾರೆಂದೇ ಅನೇಕರ ನಿರೀಕ್ಷೆಯಾಗಿತ್ತು. ಇದೆಲ್ಲಕ್ಕೂ ಮೊದಲು ಸಾರಿಗೆ ಮಂತ್ರಿ ಚೆಲುವರಾಯಸ್ವಾಮಿಯೇ ಬಂಡೇಳುತ್ತಾರೆಂಬ ಮತ್ತೊಂದು ನಿರೀಕ್ಷೆ ಕೂಡ ಇತ್ತು. ಮಹಿಮಾ ಪಟೇಲ್, ಮಾಗಡಿ ಶಾಸಕ ಬಾಲಕೃಷ್ಣ ಹುಲಿಯೂರು ದುರ್ಗದ ನಾಗರಾಜಯ್ಯ, ದೇವನಹಳ್ಳಿಯ ಎಮ್ಮೆಲ್ಲೇ ಚಂದ್ರಣ್ಣ; ಹೀಗೆ ಒಂದಾನೊಂದು ಕಾಲದ ಕುಮಾರಣ್ಣನ ನೆಚ್ಚಿನ ಬಂಟರ ಪೈಕಿ ಯಾರು ಬೇಕಾದರೂ ದಂಗೆ ಏಳುವ ಲಕ್ಷಣಗಳಿದ್ದವು. ವಿಕಟವೆಂಬಂತೆ ಬೇರೆಲ್ಲರಿಗಿಂತಲೂ ಮೊದಲ ಘಾತವೆಸಗಿದ್ದು ಕುಮಾರಣ್ಣನ ಅತ್ಯಂತ ಪರಮಾಪ್ತ ಮತ್ತು **glass mate** ಎಂಬ ಹೆಗ್ಗಳಿಕೆಯ ಜಮೀರ್ ಅಹ್ಮದ್!



ಆದಕ್ಕಿದ್ದ ಕಾರಣವೇ ಬೇರೆ. ಚೆಲುವ, ಚೆನ್ನಿಗ, ಬಾಲಕೃಷ್ಣ ಎಮ್ಮೆಲ್ಸಿ ಪುಟ್ಟಣ್ಣ ಇತ್ಯಾದಿ ಕಿಚನ್ ಕ್ಯಾಬಿನೆಟ್ಟಿನ ಪರಮಾಪ್ತರ ಪೈಕಿ ಗೌಡರ ಫ್ಯಾಮಿಲಿಗಾಗಿ ಅತೀಹೆಚ್ಚು ದುಡ್ಡು ಸುರಿದು ಕೈಖಾಲಿ ಮಾಡಿಕೊಂಡದ್ದು ಇದೇ ಜಮೀರ್. ಎಸ್ಸೆಮ್ ಕೃಷ್ಣರ ಕಾಲಕ್ಕೆ ದೇವೇಗೌಡರಿಗೆ ಏನೇನಕ್ಕೂ ಗತಿಯಿಲ್ಲದ ಕಾಲದಲ್ಲಿ ದೆಹಲಿಯ ಫ್ಲೈಟ್ ಟಿಕೆಟ್, ಕುಮಾರಣ್ಣನ ಓಡಾಟಕ್ಕೆ ಕಾರು, ಆದಿಚುಂಚನಗಿರಿ ಬಾಲಗಂಗಾಧರನಾಥರ ವಿರುದ್ಧ ಕೆಂಗೇರಿ ಸಮಾವೇಶಕ್ಕೆ ಲಕ್ಷಗಟ್ಟಲೇ ಖರ್ಚು, ಸಿಕ್ಕಾಪಟ್ಟೆ ಬಸ್ಸುಗಳು ಇತ್ಯಾದಿಗಳೆಲ್ಲವನ್ನೂ ನಿಭಾಯಿಸಿದ್ದೇ ಜಮೀರ್.


ಜಮೀರ್‌ನ ನ್ಯಾಷನಲ್ ಟ್ರಾವೆಲ್ಸ್

ಪ್ರತಿ ಸಂಜೆಯಾದರೆ ಸದಾಶಿವ ನಗರದ ಜಮೀರ್ ಗೆಸ್ಟ್‌ಹೌಸಿನಲ್ಲಿ ನಡೆಯುತ್ತಿದ್ದ ಗುಂಡು-ತುಂಡಿನ ಗೋಷ್ಠಿಗೆ ಕುಮಾರಣ್ಣನೇ ಖಾಯಂ ಅತಿಥಿಯಾಗಿರುತ್ತಿದ್ದ. ಹಲವಾರು ರೀತಿಗಳಲ್ಲಿ ಇಬ್ಬರೂ ಸಮಾನ ಮನಸ್ಕರು. ಇಂಥಾ ದೋಸ್ತಿಯ ಪ್ರತೀಕವಾಗೇ ಕಳೆದ ಚುನಾವಣೆಯಲ್ಲಿ ಗೌಡರು ರಾಮಲಿಂಗಾರೆಡ್ಡಿ ವಿರುದ್ಧ ಜಮೀರ್‌ಗೆ ಜಯನಗರಕ್ಕೆ ಟಿಕೆಟ್ಟು ಕೊಟ್ಟಿದ್ದರು. ಗೆಲ್ಲಲು ರಾಮಲಿಂಗಾರೆಡ್ಡಿ ಸಾಕಷ್ಟು ನೀರು ಕುಡಿಯಬೇಕಾಯಿತು. ಅಷ್ಟಾಗ್ಯೂ ಚಾಮರಾಜಪೇಟೆ ಉಪಚುನಾವಣೆ ಬಂದಾಗ ಮತ್ತೆ ಅದೇ ಜಮೀರ್‌ಗೇ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡರು ಕುಮಾರಣ್ಣ.



ಅಂಥಾ ದೋಸ್ತಿ ಮೊದಲ ಬಾರಿಗೆ ಜಖಮ್ಮಾಗಿದ್ದು ಧರಮ್ ಸರ್ಕಾರ ಬಿದ್ದ ನಂತರವೇ. ಈ ಹೊತ್ತಿಗಾಗಲೇ ಗೌಡರ ಫ್ಯಾಮಿಲಿ ಸಾಕಲು ಹೋಗಿ ಜಮೀರ್ ತನ್ನ ಬಿಟಿಎಂ ಲೇಔಟ್ ಬಂಗಲೆ ಸೇರಿದಂತೆ ಒಟ್ಟೂ ಐದು ಆಸ್ತಿಗಳನ್ನು ಮಾರಿಕೊಂಡಿದ್ದ. ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡುವಲ್ಲಿ ಚೆಲುವ, ಚೆನ್ನಿಗ, ಬಾಲಕೃಷ್ಣ ಪುಟ್ಟಣ್ಣ ಸಂತೋಷ್ ಲಾಡ್ ಇತ್ಯಾದಿಗಳ ಕೊಡುಗೆ ಎಷ್ಟಿತ್ತೋ ಅದರಲ್ಲಿ ಒಂದು ಪಾಲು ಜಮೀರ್‌ದಾಗಿತ್ತು. ಚೆಲುವ-ಚೆನ್ನಿಗರಂತೆ ತಾನೂ ಮೊದಲ ಸುತ್ತಿನಲ್ಲೇ ಕ್ಯಾಬಿನೆಟ್ ಮಂತ್ರಿಯಾಗಿ ಬಿಡುತ್ತೇನೆಂಬ ಜಮೀರ್ ಲೆಕ್ಕಾಚಾರ ಇನ್ನಿಲ್ಲದಂತೆ ತಲೆಕೆಳಗಾಗಿತ್ತು. ಮೊದಲ ಕಂತಿನಲ್ಲಿ ಜಮೀರ್ ಹೆಸರೇ ನಾಪತ್ತೆಯಾಗಿತ್ತು.

ಅದು ಮೈಮರೆವಿನಿಂದಾದ ಅಚಾತುರ್ಯವಾಗಿರದೇ ಉದ್ದೇಶಪೂರ್ವಕ ನಿರ್ಧಾರವಾಗಿತ್ತೆಂಬುದು ಕಾಲಕ್ರಮೇಣ ಜಮೀರ್‌ಗೆ ಮನದಟ್ಟಾಗಿತ್ತು. ಅದಕ್ಕೆ ಕಾರಣನಾದವನು ತಿಲಕ್ ಶೆಟ್ಟಿ. ಈತ ಕೂಡ ಜಮೀರ್ ಬಂಟನೇ. ಜಮೀರ್‌ನ ಮುಂಬಯಿಯ ನ್ಯಾಷನಲ್ ಟ್ರಾವೆಲ್ಸ್‌ನಲ್ಲಿ ಮ್ಯಾನೇಜರ್ ಆಗಿದ್ದ ಈ ತಿಲಕ್ ಶೆಟ್ಟಿ ಹುಟ್ಟಾ ಕಾರ್ಯಸಮರ್ಥ ಮತ್ತು ಪಕ್ಕಾ ಡೀಲರ್. ಈತನ ಕೈಚಳಕ ನೋಡಿಯೇ ಮುಖ್ಯಮಂತ್ರಿಯಾದ ಕುಮಾರಣ್ಣ ಆತನನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದರು. ತನ್ನ ಬಂಟನೊಬ್ಬ ಮುಖ್ಯಮಂತ್ರಿಯ ಬಳಿಯಿದ್ದರೆ ತನಗೆ ತಾನೇ ಲಾಭ!

ಹಾಗೆಂದೇ ಜಮೀರ್ ಲೆಕ್ಕಹಾಕಿದ್ದ. ಆದರೆ ಬರುಬರುತ್ತ ತಿಲಕ್ ಶೆಟ್ಟಿ ಜಮೀರ್‌ಗೇ ಟಾಂಗ್ ಕೊಟ್ಟು ತಾನೇ ಮುಖ್ಯಮಂತ್ರಿಯ ಪರಮಾಪ್ತನಾದ. ಮುಂಬಯಿಯ ಮೂವರು ಪ್ರಮುಖ ಲ್ಯಾಂಡ್ ಡೀಲರುಗಳಿಂದ ಮುಖ್ಯಮಂತ್ರಿಗೆ ಎಂದು ಜಮೀರ್ ಹತ್ತು ಕೋಟಿ ಪಡೆದನಂತೆ, ಹಾಗೇ ದುಡ್ಡು ಪಡೆದು ಕೆಲಸವನ್ನೂ ಮಾಡಿಸಿಕೊಂಡನಂತೆ, ಆದರೆ ಆ ಹಣವನ್ನು ಕುಮಾರಣ್ಣನಿಗೆ ಕೊಡದೇ ವಂಚಿಸಿದನಂತೆ.... ಇತ್ಯಾದಿಯೆಲ್ಲವನ್ನೂ ತಿಲಕ್ ದೇವೇಗೌಡರಿಗೂ ಕಿವಿಕಚ್ಚಿದ್ದ.


ಅಲ್ಲಿಗೆ ಜಮೀರ್ ತಮಗೆ ಮಾಡಿದ ಉಪಕಾರಕ್ಕೆ ಪ್ರತಿಫಲ ಗಿಟ್ಟಿಸಿದಂತಾಯ್ತು. ಪಾಲು ಕೊಡದೇ ಹೋದರೂ ಕನಿಷ್ಠ ತನಗೊಂದು ಮಾತನ್ನಾದರೂ ಹೇಳಬಹುದಿತ್ತು ಎಂದು ಲೆಕ್ಕ ಹಾಕಿದ ಕುಮಾರಣ್ಣನ ಸಣ್ಣಬುದ್ಧಿಗೆ ಆತನಕ ಜಮೀರ್ ಮಾಡಿದ ಉಪಕಾರವೆಲ್ಲ ಮರೆತುಹೋಗಿತ್ತು. ಅದಕ್ಕೆ ತಕ್ಕಂತೆ ದೇವೇಗೌಡರು 'ನೋಡಿದ್ಯಾ? ನಿನಗ್ಗೊತ್ತಿಲ್ಲದ ಹಾಗೇ ಹೆಂಗೆ ದುಡ್ಡು ಮಾಡವ್ನೆ ಅಂತ! ಅವ್ನು ಲೋಫರ್. ಸ್ಲಂ ಲೆವೆಲ್ಲು, ಅಂಥವನ್ನ ಮಂತ್ರಿ ಮಾಡಿ ಸುಮ್ನೆ ಯಾಕೆ ಕಳಂಕ ತಂದ್ಕೋತಿಯಾ?' ಎಂದುಬಿಟ್ಟರು.

ಬಹುಶಃ ಎರಡನೇ ಕಂತಿನಲ್ಲೂ ಜಮೀ[...] ಮಂತ್ರಿಯಾಗುವುದು ಕಷ್ಟವಿತ್ತೇನೊ. ಈ ಹಂತ[...] ಅವರ ನೆರವಿಗೆ ಬಂದದ್ದು ಸಾರಿಗೆ ಮಂ[...] ಚೆಲುವರಾಯಸ್ವಾಮಿ. 'ಏನೇ ತಪ್ಪಾಗಿದ್ರೂ ಜಮೀ[...] ಮಂತ್ರಿ ಮಾಡದೇ ಹೋದ್ರೆ ಅದು ಇಡೀ ನ[...] ಫ್ರೆಂಡ್ಸ್ ಸರ್ಕಲ್ಲಿಗೇ ರಾಂಗ್ ಮೆಸೇಜ್ ಕಳಿಸಿದಂತಾಗು[...] ಸುಮ್ನೆ ತರ್ಲೆ ಯಾಕೆ? ಯಾವುದಾದ್ರೂ ಒಂದು ಖಾ[...] ಮಂತ್ರಿ ಮಾಡಿ ಒಗಾಯ್ಸಿಬಿಡಿ' ಎಂದು ಚೆಲು[...] ತೇಪೆ ಹಾಕಿದ್ದ!

ತಮಾಷೆಯೆಂದರೆ ಹಾಗೇ ಜಮೀರ್ ಪರ[...] ಕುಮಾರಣ್ಣನ ತಲೆ ತಿಕ್ಕಿದ ಚೆಲುವರಾಯ[...] ಜಮೀರ್‌ನಿಂದ ಮಂತ್ರಿ ಮಾಡಿಸ್ತೀನಿ ಎಂದು ದು[...] ಮೊತ್ತ ಕಿತ್ತಿದ್ದ!

ಕುಮಾರಣ್ಣ ಮುಖ್ಯಮಂತ್ರಿಯಾದ್ರೆ ನಾನೇ ಹೋ[...] ಮಿನಿಸ್ಟರು ಎಂದು ಕಂಡಕಂಡಲ್ಲಿ ಫೋಜು ಕೊ[...] ಜಮೀರ್ ಪಾಡು ಏನಾಗಿರಬೇಡ? ಇದು ಜಮೀ[...] ಪಾಡಷ್ಟೇ ಅಲ್ಲ; ಗೌಡರನ್ನು ಆ ಕಾಲದಿಂದ[...] ಬೆಂಬಲಿಸಿಕೊಂಡೇ ಬಂದಿದ್ದ ಮಾಗಡಿ ಬಾಲಕೃಷ್ಣ[...] ನಾಗರಾಜಯ್ಯ, ಚಂದ್ರಣ್ಣ, ಸಂತೋಷ್ ಲಾಡ್ ಇತ[...]

ಮತ್ತೊಬ್ಬ 'ಮಾರ್ಕೆಟ್ ದೇವಿ!'


ಮಾಹಿನ್


ಜಮೀರ್ ಮಾಡಿಕೊಂಡ ರಾದ್ಧಾಂತಗಳು ಒಂದೆರಡಲ್ಲ. ಇತ್ತ ಕುಮಾರಣ್ಣನ ವಿರುದ್ಧ ಕತ್ತಿ ಮಸೆಯುತ್ತಿದ್ದರೆ ಸ್ವಕ್ಷೇತ್ರ ಚಾಮರಾಜಪೇಟೆಯಲ್ಲಿ ಆತನ ಜನಪ್ರಿಯತೆ ನೆಲಕಚ್ಚಿತು. 'ನನಗೆ ಮುಸ್ಲಿಮರು ಮಾತ್ರವೇ ಓಟ್ ಹಾಕಿದ್ದು ಹಿಂದೂಗಳಲ್ಲ' ಎಂದು ಬಹಿರಂಗವಾಗಿ ಮುಸ್ಲಿಮರ ಓಲೈಕೆಗಿಳಿದ. ಇದರ ಲಾಭ ಪಡೆದದ್ದು ಬಿಜೆಪಿ ಮತ್ತು ಕಾಂಗ್ರೆಸ್ಸಿನ ಮಾರ್ಕೆಟ್ ದೇವಿ!

ತನ್ನ ಕಾರ್ ಡ್ರೈವರ್‌ನಿಂದ ಹಿಡಿದು ವಂದಿಮಾಗಧರ ತನಕ ಮುಸ್ಲಿಮರನ್ನೇ ತುಂಬಿಕೊಂಡ ಜಮೀರ್ ರೌಡಿ ಮಾಹಿನ್‌ನಂಥ ಕ್ರಿಮಿಗಳ ಜೊತೆ ಬಹಿರಂಗರಾಗಿ ಓಡಾಟಕ್ಕಿಳಿದ. ಹಜ್ ಕಮಿಟಿ ಅಧ್ಯಕ್ಷ ಟಿಪ್ಪು, ಪುಢಾರಿನನ್ನು, ಕೌನ್ಸಿಲರ್ ಯಾಸ್ಮೀನ್ ತಾಜ್ ಎಂಬಾಕೆಯ ಪತಿ ಜಿಯಾ, ಮೇಯರ್ ಮಮ್ತಾಜ್ ಬೇಗಮ್ ತಮ್ಮ ಅಫ್ಜಲ್‌ಖಾನ್ ಮುಂತಾದವರೆಲ್ಲ ಜಮೀರ್ ಸುತ್ತ ಕೋಟೆ ಕಟ್ಟಿಕೊಂಡರು. ಜಮೀರ್ ಪಿಎ ತಮೀಮ್ ಪಾಷಾ ಸಣ್ಣಪುಟ್ಟ ಕೆಲಸಕ್ಕೂ ಕಮೀಷನ್ ವಸೂಲಿ ಶುರು ಹಚ್ಚಿಕೊಂಡ. ಸುಧಾಮ ನಗರದ ಮುನ್ನಾಭಾಯಿ ಒಬ್ಬನೇ ಮೂರಂತಸ್ತಿನ ಬಂಗಲೆಯೆಬ್ಬಿಸಿದ.

ರೌಡಿ ಮಾಹಿನ್ ಮಾತು ಕೇಳಿ ಅರ್ಧ ಡಜನ್ ಪೊಲೀಸ್ ಅಧಿಕಾರಿಗಳನ್ನು ತನ್ನ ವ್ಯಾಪ್ತಿಗೆ ಹಾಕಿಸಿಕೊಂಡ ಜಮೀರ್‌ಗೆ ಇತ್ತ ಜನಪ್ರಿಯತೆ ಕುಸಿಯಿತು. ಮತ್ತೊಂದೆಡೆ ಧಣಿ ಕುಮಾರಣ್ಣನ ನಂಬಿಕೆಯೂ ಮಣ್ಣುಪಾಲಾಯಿತು. ಯಾವ ಮಾರ್ಕೆಟ್ ದೇವಿಯ ರೌಡಿ ಪಟಾಲಮ್ಮಿಗೆ ಬೇಸತ್ತು ಚಾಮರಾಜಪೇಟೆಯ ಜನ ಜಮೀರ್‌ಗೆ ಓಟು ಕೊಟ್ಟರೋ, ಅದೇ ಜನಕ್ಕೆ ಜಮೀರ್ ಮತ್ತೊಬ್ಬ 'ಮಾರ್ಕೆಟ್ ದೇವಿ'ಯಾಗಿ ಕಾಣಿಸುತ್ತಿರುವುದು ದುರಂತ.


ನನ್ನು ಟಿಪ್ಪು ಜಿಯಾ

ಓಟು ಕೊಟ್ಟವರೇ ತಿರುಗಿ ಬಿದ್ದರು



ಚಲಕರಿ

ಸದ್ಯ ಚಾಮರಾಜಪೇಟೆಯ ಇಡೀ ಜೆಡಿ[...] ಜಮೀರ್ ವಿರುದ್ಧ ತಿರುಗಿಬಿದ್ದಿದೆ. ಅದಕ್ಕೆ ಮು[...] ಕಾರಣ ಜಮೀರ್ ಉಡಾಫೆ ಮತ್ತು ಅಸಡ್ಡೆ. ಚಾ[...] ರಾಜಪೇಟೆ ಜೆಡಿಎಸ್ ಅಧ್ಯಕ್ಷ ಚಲಕರಿ ನಾರಾಯ[...] ಸ್ವಾಮಿ ಕರೆದ ಒಂದೇ ಒಂದು ಸಭೆಗೂ ಜಮೀ[...] ಹಾಜರಾಗಿಲ್ಲ. ಜಮೀರ್ ಬೆಳೆಸಿದ್ದಾದರೂ ಎ[...] ವರನ್ನು? ತಿಗಳರಪೇಟೆಯ ಎಸ್. ಕೋದಂಡರಾ[...] ಮತ್ತು ಕೆ. ಗಿರೀಶ್ ಥರದ ಭಟ್ಟಂಗಿಗಳನ್ನ[...] ಜಮೀರ್ ವಿರುದ್ಧ ಯಾರೇ ಸೊಲ್ಲೆತ್ತಿದರೆಂ[...] ಅಂಥವರ ವಿರುದ್ಧವೇ ಹಾವಳಿಯಿಡುತ್ತಾರೆ. ಇವರಿ[...] ಪೈಕಿ ಯಾರನ್ನಾದರೂ ಧರ್ಮರಾಯಸ್ವಾಮಿ ವಾ[...] ನಿಂದ ಕೌನ್ಸಿಲರ್ ಮಾಡುವುದು ಜಮೀರ್ ಹುನಾ[...] ಮಂದಿ ಗಂಗಾಧರ, ಬಿ.ಎಂ. ಷಣ್ಮುಗ, ಕುಂಬ[...] ಗುಂಡಿ ಗುಣಶೇಖರ ಇತ್ಯಾದಿ ಬೆರಳೆಣಿಕೆಯ ಜಮೀ[...] ಶಿಷ್ಯರ ಹೊರತಾಗಿ ಬೇರೆ ಯಾರಿಗೂ ಜಮೀ[...] ಕಂಡರೆ ಅಸಹ್ಯ.

ಕಲಾಸಿಪಾಳ್ಯದ ಹಳೇ ರೌಡಿ ಕೋಟೆ ನಾಗರಾ[...] ಗ್ಯಾಂಗ್ ಕೂಡ ಇತ್ತೀಚೆಗೆ ಜಮೀರ್ ವಿರುದ್ಧ ತಿರು[...] ಬಿದ್ದಿದೆ. ಮಾಜಿ ಕೌನ್ಸಿಲರ್ ಅಪ್ಪೋಡಾ ಚಂದ್ರಶೇಖ[...] ತನ್ನನ್ನು ಮೀರಿ ಬೆಳೆಯಬಹುದೋ ಎಂಬ ಭಯ[...] ಜೊತೆಗೆ ಮತ್ತೊಬ್ಬ ಮಾಜಿ ಕೌನ್ಸಿಲರ್ ಗಣೇ[...] ರೋಸತ್ತೇ ಬಿಜೆಪಿಗೆ ಹಾರಿದ್ದಾನೆ. ಇನ್ನೂ ಜಮೀ[...] ಕೇಡುಗಾಲಕ್ಕೋ ಎಂಬಂತೆ ಧರ್ಮರಾಯಸ್ವಾ[...] ವಾರ್ಡಿನ ಹಳೇ ಕೌನ್ಸಿಲರ್ ರಾಮಕೃಷ್ಣಪ್ಪ ಇತ್ತೀ[...] ಜಮೀರ್ ರಾಶಿಗೆ ಪ್ರವೇಶಿಸಿದ್ದಾನೆ. ಮೂರ್ತಿಯ[...] ನೆಲಸಮ ಮಾಡಿಸಿ ಅಲ್ಲಿ ಗಣೇಶನನ್ನು ಕೂರಿ[...] ಹುಂಡಿ ದೋಚುವುದು ಈತನ ಕಾಯಕ. ಇಂ[...] ಹುಂಡಿಕಳ್ಳನ ಹೊರತಾಗಿ ಜಮೀರ್‌ಗೆ ಇನ್ನೊ[...] ಗತಿಯಿಲ್ಲವೆಂದರೆ ಅದು ಆತನ ದುರಂತವಲ್ಲವ[...]


ಗಿರೀಶ್ ಕೋದಂಡರಾಮ ಷಣ್ಮುಗ

ಡೀಕೆ ಜೊತೆ ಗಪ್‌ಚುಪ್ ದೋಸ್ತಿ



ಕಾಂಗ್ರೆಸ್ ನಾಯಕ ಡೀಕೆಗೂ ಜಮೀರ್‌ಗೂ ಇರುವ ನಂಟು ಮುಖ್ಯಮಂತ್ರಿ ಕುಮಾರಣ್ಣನಿಗಾಗಲಿ ದೇವೇಗೌಡರಿಗಾಗಲಿ ಗೊತ್ತಿಲ್ಲವೆಂದೇನಲ್ಲ, ಹಾಗೇ ಜಮೀರ್‌ನನ್ನು ಡೀಕೆಗೆ ಪರಿಚಯಿಸಿದ್ದೇ ಹೊಸಕೋಟೆ ಶಾಸಕ ನಾಗರಾಜ್ ಎಂಬುದೂ ರಹಸ್ಯವೇನಲ್ಲ, ಸದ್ಯ ಪಲ್ಲವಿ ಟಾಕೀಸ್ ಎದುರಿಗಿದ್ದ ಪೆಟ್ರೋಲ್ ಬಂಕ್ ಜಾಗದಲ್ಲಿ ವಿದೇಶಿ ಕಾರುಗಳ ಮಳಿಗೆ ನಡೆಸುವ ಮಾರುತಿ ಮತ್ತು ಸೋಮಣ್ಣರ ಜೊತೆ ಜಮೀರ್ ಪಾಲುದಾರಿಕೆಯಿದೆ.

ಇವರಿಬ್ಬರೂ ಹೊಸಕೋಟೆ ಶಾಸಕ ನಾಗರಾಜ್ ಸಂಬಂಧಿಗಳು, ಇವರನ್ನು ಮುಂದಿಟ್ಟುಕೊಂಡೇ ಜಮೀರ್ ಹೊಸಕೋಟೆ ನಾಗರಾಜ್ ಮೂಲಕ ಡೀಕೆಯ ಜೊತೆ ಡೀಲು ಕುದುರಿಸಿದ್ದು!

ಚೆಲುವ-ಚೆನ್ನಿಗರು ಕೈಕೊಡದೇ ಹೋಗಿದ್ದರೆ ಜಮೀರ್‌ಗೆ ಈ ಗತಿ ಬರುತ್ತಿತ್ತಾ?

ಅನೇಕರ ಅನುಭವವಾಗಿತ್ತು. ಎರಡನೇ ಕಂತಿಗೆ ಮಂತ್ರಿಯಾದರೂ ಸಿಕ್ಕಿದ್ದು ಏನೇನಕ್ಕೂ ಪ್ರಯೋಜನವಿಲ್ಲದ ವಕ್ಫ್ ಖಾತೆ. ಮುಖ್ಯಮಂತ್ರಿಯಾದ ಮೇಲಂತೂ ಕುಮಾರ್ ಸಂಪೂರ್ಣ ಬದಲಾಗಿಬಿಟ್ಟರು. ಹಿಂದಿದ್ದಂತೆ ಪ್ರತಿಯೊಂದಕ್ಕೂ ಜಮೀರ್ ಸಲಹೆ ಕೇಳುತ್ತಿದ್ದದ್ದು ಸಂಪೂರ್ಣವಾಗಿ ನಿಂತೇ ಹೋಯಿತು. ಹೆಸರಿಗೆ ಕುಮಾರಣ್ಣ ಮುಖ್ಯಮಂತ್ರಿ ಆಗಿದ್ದರೆ, ಸಮಸ್ತ ಆಡಳಿತ ಸೂತ್ರವೆಲ್ಲ ತಂದೆ ದೇವೇಗೌಡರ ಪಾಲಾಗಿತ್ತು. ಅದನ್ನೂ ಮೀರಿ ಅಣ್ಣಂದಿರಾದ ರೇವಣ್ಣ, ಬಾಲಕೃಷ್ಣೇಗೌಡ ಸರ್ಕಾರದ ಪ್ರತಿಯೊಂದಕ್ಕೂ ಮೂಗು ತೂರಿಸಲಾರಂಭಿಸಿದ್ದರು.

ಸಾಲದ್ದಕ್ಕೆ ಗೌಡರ ಸೊಸೆಯಂದಿರ ಕಾರುಬಾರು ಕೂಡ ವಿಪರೀತವಾಯಿತು.


ಈ ಹಂತದಲ್ಲೇ ಕುಮಾರ್ ವಿರುದ್ಧ ಸಣ್ಣಗೆ ಅಪಸ್ವರವೆತ್ತಿದ್ದು ಸಾರಿಗೆ ಮಂತ್ರಿ ಚೆಲುವರಾಯಸ್ವಾಮಿ!

ಅವತ್ತು ಕುಮಾರಣ್ಣನನ್ನು ಮುಖ್ಯಮಂತ್ರಿ ಮಾಡುವಲ್ಲಿ ಅತೀ ಮಹತ್ತರ ಪಾತ್ರ ವಹಿಸಿದ್ದು ಚೆಲುವ, ಚೆನ್ನಿಗ, ಜಮೀರ್, ಮಾಗಡಿ ಬಾಲಕೃಷ್ಣ ಸಂತೋಷ್ ಲಾಡ್ ಮತ್ತು ಎಮ್ಮೆಲ್ಸಿ ಪುಟ್ಟಣ್ಣ. ಈ ಪೈಕಿ ಪುಟ್ಟಣ್ಣನನ್ನು ಹೊರತುಪಡಿಸಿದರೆ ಮಿಕ್ಕ ಐವರೂ ಒಳಗೊಳಗೇ ಕತ್ತಿ ಮಸೆಯುತ್ತಿದ್ದರು. ಇವರೆಲ್ಲ ಸೇರಿಕೊಂಡೇ ಆಗಸ್ಟ್ ಹದಿನೈದರಂದು ಮೊಟ್ಟಮೊದಲ ದಳ ಭಿನ್ನಮತೀಯರ ಸಭೆ ಕರೆದರೆ, ಜಿ.ಟಿ. ದೇವೇಗೌಡ, ಆಲಂಗೂರು ಶ್ರೀನಿವಾಸ್, ಜೆ. ನಾಗರಾಜಯ್ಯ, ಚಂದ್ರಣ್ಣ ಸಂತೋಷ್ ಲಾಡ್, ಮಾಗಡಿ ಬಾಲಕೃಷ್ಣ ಚೆಲುವರಾಯ, ಚೆನ್ನಿಗಪ್ಪ ಸೇರಿದಂತೆ ಒಟ್ಟೂ ಹದಿನೈದು ಮಂದಿ ಶಾಸಕರ ಹಿಂಡೇ ಸೇರಿತ್ತು. ಅದು ಆವತ್ತಿನ ಮಟ್ಟಿಗೆ ಜೆಡಿಎಸ್ ಬಂಡುಕೋರರರ ದೊಡ್ಡ ಮೊತ್ತವಾಗಿತ್ತು. ಮತ್ತು ಅದರ ಹಿಂದಿದ್ದದ್ದು ಕಾಂಗ್ರೆಸ್ ನಾಯಕ ಡೀಕೆ!

ಹಾಲಿ ಹದಿನೈದು ಶಾಸಕರಷ್ಟೇ ಅಲ್ಲದೇ ಇನ್ನೂ ಹದಿನೈದು ಮಂದಿ ಶಾಸಕರು ಬಂದೆದ್ದು ಬಂದರೆ ಚೆಲುವರಾಯಸ್ವಾಮಿಯನ್ನೇ ಉಪಮುಖ್ಯಮಂತ್ರಿ ಮಾಡಿ ತಾನು ಮುಖ್ಯಮಂತ್ರಿಯಾಗುವುದು ಡೀಕೆ ಹುನ್ನಾರವಾಗಿತ್ತು, ಹಾಗೊಮ್ಮೆ ಡೀಕೆಗೆ ಹೈಕಮಾಂಡ್ ಸಮ್ಮತಿಸದೇ ಹೋದರೆ ತಾನೇ ಮುಖ್ಯಮಂತ್ರಿಯಾಗುತ್ತೇನೆಂದು ಖದೀಮ ಆರ್.ವಿ. ದೇಶಪಾಂಡೆ ಮತ್ತೊಂದೆಡೆಯಿಂದ ಖರಾಮತ್ತು ನಡೆಸಿದ್ದ.

ಇದು ಹೇಗೋ ದೇವೇಗೌಡರಿಗೆ ಗೊತ್ತಾಗಿ ಹೋಯಿತು. ತಾಪಡತೋಪು ಇದ್ದುದರಲ್ಲಿ ತಳ್ಳಿಬಳ್ಳಿಯಂತಿದ್ದ ಚೆನ್ನಿಗಪ್ಪನನ್ನು ಕರೆಸಿಕೊಂಡಿದ್ದೇ ಕಣ್ಣೀರಿಟ್ಟಿದ್ದಾರೆ. ಅಪ್ಪಾಜಿಯ ಕಣ್ಣೀರು ನೋಡಿದ್ದೇ ಬುಟ್ಟಿಗೆ ಬಿದ್ದ ಚೆನ್ನಿಗಪ್ಪ ನಡೆದದ್ದೆಲ್ಲವನ್ನೂ ಬಾಯಿಬಿಟ್ಟಿದ್ದಾನೆ. ಅಲ್ಲಿಗೆ ಚೆಲುವರಾಯಸ್ವಾಮಿ ಕೂಡ ಉಲ್ಟಾ ಹೊಡೆದು ಮತ್ತೆ ಗೌಡರ ಪಾದಕ್ಕೇ ಶರಣಾಗಿಬಿಟ್ಟಿದ್ದ. ಮಾಗಡಿ ಬಾಲಕೃಷ್ಣರ ಒಂದೆರಡು ಟಾಕ ಡೀಲುಗಳು ಸೆಟಲ್ ಆದವು. ಉಳಿದದ್ದು ಸಂತೋಷ್ ಲಾಡ್ ಮತ್ತು ಜಮೀರ್ ಮಾತ್ರ.

ಏಕೆಂದರೆ ಸಂತೋಷ್ ಲಾಡ್ ವಿರುದ್ಧ ಸ್ವತಃ ಆತನ ಅಣ್ಣ ಬಿಜೆಪಿ ಶಾಸಕ ಅನಿಲ್‌ಲಾಡ್ ಕುಮಾರಣ್ಣನ ಕಿಚನ್ ಹೊಕ್ಕಿದ್ದ. ಇನ್ನು ಆ ಸಾಬಿ ಕೈಲೇನಾಗುತ್ತೆ? ಎಂದು ದೇವೇಗೌಡರೇ ಮಗನ ತಲೆತಿಕ್ಕಿದ್ದರು. ಯಾವತ್ತು ತನ್ನನ್ನು ಇನ್ನಷ್ಟು ಮೂಲೆಗುಂಪು ಮಾಡಿದ್ದು ಜಮೀರ್ ಗಮನಕ್ಕೆ ಬಂತೋ ಜಮೀರ್ ಮತ್ತೊಂದು ಅಪಾಯಕಾರಿ ಕೆಲಸಕ್ಕೆ ಕೈಯಿಟ್ಟ. ಅದು ಗೌಡರ ಪಕ್ಕಾ ವಿರೋಧಿ ಬಳ್ಳಾರಿಯ ಜನಾರ್ದನ ರೆಡ್ಡಿಯ ಸುಬ್ಬ, ಜೊತೆಗೆ ಡೀಕೆ ಸಹವಾಸ ಕೂಡ ವಿಪರೀತವಾಯಿತು. ಚಾಮುಂಡೇಶ್ವರಿ ಚುನಾವಣೆಯಲ್ಲೂ ಜಮೀರ್ ದುಡಿಯಲಿಲ್ಲ, ಬರುಬರುತ್ತ ಕುಮಾರಣ್ಣ ಮಾತಾಡಿಸುವುದನ್ನೇ ನಿಲ್ಲಿಸಿಬಿಟ್ಟ. ಗತಿಯಿಲ್ಲದೇ ಬಕ್ರೀದ್ ನಮಾಜಿಗೆಂದು ಜಮೀರ್ ಕರೆಯಲು ಹೋದರೆ ಇನ್ನೇನೋ ಕೆಲಸದಲ್ಲಿ ಬಿಜಿಯಾಗಿದ್ದಂತೆ ನಟಿಸಿದ ಕುಮಾರ್ ದರ್ಶನವನ್ನೇ ಕೊಡಲಿಲ್ಲ.



ಸಂತೋಷ್ ಲಾಡ್

ಅಲ್ಲಿಗೆ ಜಮೀರ್ ಹತಾಶೆಯ ಕಟ್ಟೆಯೊಡೆದಿತ್ತು, ಜನವರಿ ಒಂದರ ಬೆಳಿಗ್ಗೆ ನಮಾಜ್ ಮುಗಿಸಿದ್ದೇ ದುಡುಕಿಗೆ ಬಿದ್ದು ರಾಜಭವನಕ್ಕೆ ಹೋಗಿದ್ದೇ ರಾಜೀನಾಮೆ ಕೊಟ್ಟು ಬಿಟ್ಟ. ಇದೀ ಗೌಡರ ಪರಿವಾರವೇ ಬಂದು ದಮ್ಮಯ್ಯಗುಡ್ಡೆ ಹಾಕುತ್ತದೆ ಎಂದು ಜಮೀರ್ ನಿರೀಕ್ಷೆ ಹುಸಿಯಾಗಿತ್ತು, ಕುಮಾರ್ ಜಗ್ಗಲಿಲ್ಲ, ದೇವೇಗೌಡರೇ ರೋಲಿಂಗ್‌ಕೀರ್ ಎಂದುಬಿಟ್ಟರು. ಹಿಪ್ಪೊಬ್ಬರು ಹೊರಹಾಗಿ ಬೇರೆಲ್ಲಾ ಶಾಸಕರು ಪ್ರಗೆಗೆ ಹೋಗಿದ್ದು ಜಮೀರ್ ಹತಾಶೆಯನ್ನು ಇನ್ನಷ್ಟು ಹೆಚ್ಚಿಸಿದೆ. ಇತ್ತ ಕಾಂಗ್ರೆಸ್ಸಿನಲ್ಲಿ ಸಂಬಿದ್ದ ಡೀಕೆ ಕೂಡ ಕೈ ಚೆಲ್ಲಿದ ಮೇಲೆ ಹಳೇಗಂಡನ ಪಾದ ಬಿಟ್ಟರೆ ಗತಿಯೇ ಇಲ್ಲ.

ಇದು ಜಮೀರ್ ಪಾಡಾದರೆ ತನ್ನ ಮಾನ ಮುಚ್ಚಿಕೊಳ್ಳುವುದಕ್ಕಾದರೂ ಹಳೇ ಗೆಳೆಯನನ್ನೇ ಅಪ್ಪಿಕೊಳ್ಳಬೇಕಾದ ದುರ್ಗತಿ ಕುಮಾರಣ್ಣನಿಗಿದೆ. ಇಬ್ಬರೂ ಸೇರಿ ಎಸಗಿದ ಪಾಪಗಳ ಪಟ್ಟಿಯೂ ದೊಡ್ಡದಿದೆ. ಯಾರ ಬಟ್ಟೆ ಹರಿದರೂ ಮುಚ್ಚಿಟ್ಟಿದ್ದ ಪ್ಯ ಚಿತ್ರವಾಗುತ್ತದೆ. ಅದು ಕೊಳ್ಳಿಗೆ ಬಂದ ಘಟಿಂಗರಿಗಿರಬೇಕಾದ ಅನಿವಾರ್ಯತೆ!


ಕರ್ನಾಟಕಕ್ಕೆ ಬರಕ್ಕೆ ಮನಸಾಯ್ತಾಯಿಲ್ಲ ಕಂಡ್ರೀ!



ಹೊನ್ನಾಳಿ ಶಾಸಕನಿಗೆ ಕಡೆಗೂ ಹೊನ್ನಾಳಿ ಹೊಡೆತಗಳು ಬಿದ್ದೇ ಬಿಟ್ಟವಂತಲ್ಲಾ. ಅಸಂಬದ್ಧ ಮಾತುಗಳು, ಅಸಂಬದ್ಧ ನಡವಳಿಕೆಗಳು, ಕೆಳಜಾತಿ ಮತ್ತು ಅಲ್ಪಸಂಖ್ಯಾತರ ಬಗ್ಗೆ ಅವಹೇಳನಕರವಾಗಿ ಮಾತನಾಡಿಕೊಂಡು ಬರುತ್ತಿದ್ದ ರೇಣುಕಾರ್ಯ ಎಂಬ ಹೊನ್ನಾಳಿ ಶಾಸಕ, ಎಲ್ಲವನ್ನು ಬಿಟ್ಟ ಎಂದುಕೊಂಡು ಓಟು ಕೊಟ್ಟವರೇ ಬೆಚ್ಚಿ ಬೀಳುವಂತೆ ತನ್ನೆಲ್ಲಾ ಹಳೆ ಕೆಲಸಗಳನ್ನು ಶುರು ಮಾಡಿಕೊಂಡಿದ್ದಾನಂತಲ್ಲಾ. ಇದರಿಂದ ಪೊಲೀಸ್ ಇಲಾಖೆ ಈತನ ಹಳೆಯ ರೌಡಿ ಫೈಲ್ ತೆಗೆಯುವ ರಿಸ್ಕ್ ತೆಗೆದುಕೊಳ್ಳುವ ಮುನ್ನವೇ ಸೋನಿಯಾ ನಾರಂಗ್ ಎಂಬ ಎಸ್ಪಿ ರೇಣುಕಾಚಾರಿ ಕೆನ್ನೆಗೆ ಎರಡು ಬಾರಿಸಿದಳಂತಲ್ಲಾ. ಕೆನ್ನೆಗೆ ಏಟು ಬಿದ್ದ ಕೂಡಲೇ "ಅಯ್ಯಯ್ಯೋ, ಇದು ಖಂಡಿತ ಹೆಣ್ಣಿನ ಕೈಯಲ್ಲ. ಯಾವುದೋ ದೆವ್ವ, ಪಿಶಾಚಿಯ ಕೈ" ಎಂದು ಚೀರಿಕೊಂಡು ರೇಣುಕಾಚಾರ್ಯ ಕುಸಿದನಂತಲ್ಲಾ. ಕೂಡಲೇ ಪೊಲೀಸರು ತಮ್ಮ ಸಾಹೇಬರಿಗೆ ಹೆಚ್ಚು ಶ್ರಮವಾಗದಂತೆ, ರೇಣುಕಾಚಾರ್ಯನ ತಿಗದ ಮೇಲೆ ಎರಡು ಬಿಟ್ಟರಂತಲ್ಲಾ. ಆಗ ಎದ್ದು ಓಟ ಕಿತ್ತ ರೇಣುಕ "ನಿಮ್ಮನ್ನ ಇಪ್ಪತ್ತನಾಲ್ಕು ಗಂಟೆಯಲ್ಲಿ ವರ್ಗಾ ಮಾಡಿಸದಿದ್ದರೆ ನಾನು ಎಮ್ಮೆಲ್ಲೆ ಅಲ್ಲ" ಎಂದು ಹೇಳಿದ್ದರೂ ಆಗಲೇ ನೂರಇಪ್ಪತ್ತುನಾಲ್ಕು ಗಂಟೆ ಆದವಂತಲ್ಲಾ, ಥೂತ್ತೇರಿ!

* * * * * * * * * * *

ಊರಿನ ಸಿಕ್ಕಸಿಕ್ಕ ಲೈಟ್ ಕಂಬಗಳಿಗೆಲ್ಲಾ ಕೆಟ್ಟ ರಕ್ತದ ಬಣ್ಣದ ಬಾವುಟ ಕಟ್ಟಿಕೊಂಡು ಕುಣಿಯುತ್ತಿದ್ದ ಚೆಡ್ಡಿಗಳು, ಗೌರಿ ಲಂಕೇಶ್ ವರದಿಯೊಂದಕ್ಕೆ ಸಂಬಂಧಿಸಿದಂತೆ ಜಾಮೀನು ಪಡೆದರೆಂಬ ಸುದ್ದಿ ಕೇಳಿ ಕೇಕೆ ಹಾಕಿ ಕುಣಿದಾಡಿದವಂತಲ್ಲಾ. ಅದರಲ್ಲೂ ಇಳಿಹೊತ್ತಿನಲ್ಲಿ ಬೈಟಕ್ ನಡೆಸುತ್ತಿದ್ದ ಚೆಡ್ಡಿಗಳು ಸದರಿ ವಾರ್ತೆಯಿಂದ ಆದ ಖುಷಿಯನ್ನು ಹಂಚಿಕೊಳ್ಳಲು ಅಲ್ಲಲ್ಲೇ ಕುಳಿತು ಮಾತನಾಡುತ್ತಿದ್ದರಂತಲ್ಲಾ. ತಮ್ಮ ದೊಗಳೆ ಚೆಡ್ಡಿಯೊಳಕ್ಕೋದ ಸೊಳ್ಳೆಗಳು ಏನು ಮಾಡಿಕೊಂಡು ಬಂದರೂ ನೆದರಿಲ್ಲದಂತೆ ಅವರೆಲ್ಲ ಚರ್ಚಿಸುತ್ತಿರುವಾಗ, ಇವರ ಗುರುವರ್ಯರಾದ ಪೇಜಾವರ ಶ್ರೀಗಳು ಕೊಲೆಯತ್ನದ ತನಿಖೆಗೆ ಗುರಿಯಾದರೆಂಬ ಸುದ್ದಿ ಕೇಳಿ ಬೆಚ್ಚಿ ಹೋದವಂತಲ್ಲಾ. "ಹಿಂದೂಗಳ ಹತ್ಯೆಯನ್ನು ಕನಸಿನಲ್ಲೂ ಎಣಿಸದ ನಮ್ಮ ಪೇಜಾವರರು ಕೊಲೆ ಯತ್ನ ಮಾಡಿದ್ದಾರೆಂದರೇನು? ಇದು ಗ್ಯಾರಂಟಿ ನಕ್ಸಲರು ಅಥವಾ ಮುಸ್ಲಿಮರ ಸಂಚಿರಬೇಕು. ಲ್ಯಾಡನ್ ಕಡೆಯವರ ಪಿತೂರಿಯಿರಬೇಕು" ಎಂದುಕೊಂಡು ಬರಖಾಸ್ತಾದವಂತಲ್ಲಾ, ಥೂತ್ತೇರಿ!



* * * * * * * * * * *

ಪೂನಾದ ರೆಸಾರ್ಟ್‌ನಲ್ಲಿ ನಡೆದ ಮೇಜವಾನಿಗೆ ಎಂ.ಪಿ. ಪ್ರಕಾಶ್‌ರನ್ನು ಕರೆಯಲಾಗಿ ಅವರು "ನಾನು ತಿನ್ನುವುದಿಲ್ಲ, ಕುಡಿಯುವ ಅಭ್ಯಾಸವಂತೂ ಇಲ್ಲವೇ ಇಲ್ಲ, ಆದ್ದರಿಂದ ನಾನು ಬರುವುದಿಲ್ಲ" ಎಂದರಂತಲ್ಲಾ. ಇದರಿಂದ ಬೇಸರಗೊಂಡ ಚೆಲುವರಾಯಸ್ವಾಮಿ "ಸುಮ್ಮನೆ ನಮ್ಮ ಜೊತೆ ಇರಿ ಸಾರ್. ಬೇಜಾರಾದ್ರೆ ಕ್ಯಾಬರೆ ನೋಡಿ, ಇಲ್ಲ ಅಂದ್ರೆ ಅಲ್ಲೆಲ್ಲಾ ತಿರುಗಾಡಿ. ಐಶ್ವರ್ಯ ರೈ ಇರೋ ಜಾಗವಂತೆ ಅದು. ಅದೂ ಅಲ್ಲದೆ ಅಮಿತಾಬ್ ಬಚ್ಚನ್ ಕೂಡ ನೋಡಕ್ಕೆ ಸಿಕ್ತರಂತೆ ಸಾರ್" ಎಂದನಂತಲ್ಲಾ. ಒಳಗೊಳಗೇ ನಕ್ಕ ಪ್ರಕಾಶ್ "ನೀವು ಹೋಗಿ ಬನ್ನಿ. ಒಂದು ವೇಳೆ ನಾನು ಬಂದ್ರೂ ಕೂಡ ನನ್ನ ಜೊತೆ ಮಾತಾಡೋರು ಯಾರೂ ಇಲ್ಲ ನಿಮ್ಮ ಗುಂಪಲ್ಲಿ" ಎಂದು ನುಣುಚಿಕೊಳ್ಳಲು ಯತ್ನಿಸಿದರಂತಲ್ಲಾ. "ಸಾರ್ ನಿಮಗಷ್ಟು ಬೇಜಾರಾದ್ರೆ ನಮ್ಮ ಚೆನ್ನಿಗಪ್ಪನ ಜೊತೆ ಮಾತಾಡಿ. ಇಲ್ಲ ಯಾರ ಜೊತೆನೂ ಬೇಡ ಅಂದ್ರೆ ನಮ್ಮ ಚನ್ನರಾಯಪಟ್ಟದ ಪುಟ್ಟೇಗೌಡ್ರ ಜೊತೆ ಮಾತಾಡಿ" ಎಂದು ಚೆಲುವ ಹೇಳಿದಾಗ ಪ್ರಕಾಶ್ "ನೋಡಿ ಚಲುವರಾಯಸ್ವಾಮಿ, ಸದ್ಯಕ್ಕೆ ನಾನು ಈ ಎರಡು ದಿನ ಒಂದಿಷ್ಟು ಹಿಂದೂಸ್ತಾನಿ ಸಂಗೀತ, ಆಮೇಲೆ ಕನ್ನಡ ಸಾಹಿತ್ಯದಲ್ಲಿ ಈಚೆಗೆ ಏನು ಬರವಣಿಗೆ ಬಂದಿದೆ, ಜೆ.ಪಿ. ಲೋಹಿಯಾ ಬಗ್ಗೆ ಎಲ್ಲ ಮಾತಾಡಬೇಕಾಗಿದೆ" ಎಂದರಂತಲ್ಲಾ, ಇದನ್ನು ಕೇಳಿ ಚಲುವ "ಅಂಗಾದ್ರೆ ನೀವು ಬರದುಬೇಡಿ ಸಾ. ನಿಮ್ಮ ಜೊತೆ ಮಾತಾಡೊ ಅಂಥೋರು ನಮ್ಮ ಗುಂಪಲ್ಲೇ ಯಾರು ಇಲ್ಲ" ಎಂದು ತಪ್ಪಿಸಿಕೊಂಡನಂತಲ್ಲಾ, ಥೂತ್ತೇರಿ!!!

* * * * * * * * * * *

ಪೂನಾದ ಅಂಬಿ ವ್ಯಾಲಿಯಲ್ಲಿರುವ ಸಹಾರಾ ಲೇಕ್‌ನಲ್ಲಿ ತಂಗಿರುವ ನಮ್ಮ ಮಂತ್ರಿಗಳನ್ನು ಶಾಸಕರನ್ನು ಮಾತನಾಡಿಸಬೇಕೆನಿಸಿತಲ್ಲಾ, ಕೂಡಲೇ ಚಲುವರಾಯಸ್ವಾಮಿಗೆ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

"ಹಲೋ, ಚಲುವರಾಯ ಸ್ವಾಮಿಗಳಾ?"

"ಹೌದು, ನೀವ್ಯಾರೂ?"

"ನಾನು ಯಾಹೂ ಸಾರ್, ಮೋಡಂ ನಿಮ್ಮನ್ನು ಮಾತಾಡ್ಸಿ ಅಂದ್ರು."

"ಏನ್ಹೇಳಿ?"

"ಎಲ್ಲಿದ್ದಿರಿ ಸಾರ್?"

"ಎಲ್ಲಿದ್ದಿರಿ ಅಂದ್ರೆ ಏನೇಳಲಿ? ಇಂತ ಜಾಗ ನಮ್ಮ ದೇಶದಲ್ಲಿದಿಯಾ ಅನ್ನೋ ಅನುಮಾನಾಯ್ತಾಯಿದೆ ನನಿಗೆ."

"ಅಷ್ಟು ಚೆನ್ನಾಗಿದಿಯಾ ಸಾರ್?"

"ನಾನು ದುಬಾಯ್‌ನಲ್ಲಿ ಕೆಲವು ರೆಸಾರ್ಟ್ಸ್ ನೋಡಿದ್ದಿನಿ. ಅಲ್ಲೂ ಬಾದಿ ಮಸಾಜ್ ಮಾಡಿಸಿಕೊಂಡಿದ್ದಿನಿ. ಆದ್ರೆ ಇಲ್ಲಿರುವ ಸುಖ ಅಲ್ಲೆಲ್ಲೂ ಸಿಗಲಿಲ್ಲ ಕಂಡ್ರಿ."

"ಏನೇನು ಮಾಡಿದ್ರಿ ಸಾರ್ ಅಲ್ಲಿ?"

"ಅದೆ, ಬೆಂಗಳೂರಿನಿಂದ ಬಂದಮೇಲೆಲ್ಲೂ ರೆಸ್ಟ್ ತಗೊಂಡೊ. ಅನಂತರ ಆಯುರ್ವೇದಿಕ್ ಮಸಾಜ್ ಮಾಡಿಸಿಕೊಂಡೊ. ಕೆಲವರು ಕ್ಯಾಬರೆ ನೋಡಿದ್ರು. ಇನ್ನು ಕೆಲವರು ಡಿಸ್ಕೋ ನೋಡಿದ್ರು. ಇನ್ನು ಕೆಲವರು ಆರ್ಟಿಫಿಸಿಯಲ್ ಲೇಕಲ್ಲಿ ಈಜಾಡಿದ್ರು. ಬಾಯಿಗೆ ಬೇಕಾದ್ದನ್ನೆಲ್ಲಾ ತರಿಸಿಕೊಂಡು ತಿಂದ್ರು. ಅಂತೂ ಎರಡು ದಿನ ಹೋಗಿದ್ದೆ ಗೊತ್ತಾಗಲಿಲ್ಲ ಕಂಡ್ರಿ."

"ಇನ್ನೇನೇನು ಮಾಡಿದ್ರಿ ಸಾರ್?"

"ಅದೆ, ಕೆಲವರು ಜೋಕ್ ಮಾಡಿದ್ರು. ನಮ್ಮ ಚೆನ್ನಿಗಪ್ಪನಂತೂ ಸೆಕ್ಸ್ ಜೋಕ್ ಮಾಡಿದ!"

"ಅವ್ರುರು ಬಾಯಿಬಿಟ್ರೆ ಸೆಕ್ಸ್ ಮಾತಲ್ಲವ?"

"ಹೌದು, ಅವ್ರನ ಪೊಲೀಸ್ ಬುದ್ದಿ ಇನ್ನು ಹೋಗೇಯಿಲ್ಲ. ಆಮೇಲೆ ಕುಮಾರಣ್ಣನ ಜೊತೆ ಕೆಲವುರು ಒಂದೈದು ನಿಮಿಷ ಮಾತಾಡಿದ್ರು."

"ನಿಜ ಸಾರ್, ಕುಮಾರಸ್ವಾಮಿ ಜೊತೆ ಯಾರೂ ಗಂಟೆಗಟ್ಲೆ ಮಾತಾಡಕ್ಕಾಗಲ್ಲ, ಅವರ ವ್ಯವಹಾರಗಳೆಲ್ಲಾ ಐದೇ ನಿಮಿಷದವಲ್ಲವೆ?"

"ಆದ್ರು ಯಲ್ಲಾರ್ನು ನಿಭಾಯಿಸೊ ಕ್ಯಪಾಸಿಟಿ ಇದೆ. ನೋಡಿ ಬೆಂಗಳೂರಲ್ಲಿ ಹಾರಾಡತಿದ್ದೋರ್‍ಯಲ್ಲ ಇಲ್ಲಿ ಆರಾಮಾಗಿ ಮನಿಗ್ಯವ್ರುರೆ!"

"ಯಾವಾಗ ಬತ್ತಿರಿ ಸಾರ್?"

"ಕರ್ನಾಟಕಕ್ಕೆ ಬರಕ್ಕೆ ಮನಸಾಯ್ತಾಯಿಲ್ಲ ಕಂಡ್ರಿ. ಏನಾದ್ರು ಮಾಡಿ ಇಲ್ಲೊಂದು ಮನೆ ಕಟ್ಟಿಸಿಕೊಳಣಾ ಅನ್ನಸ್ತಾಯಿದೆ."

"ಕಟ್ಟಿಸಿ ಸಾರ್, ಈ ದರಿದ್ರ ಕರ್ನಾಟಕದಲ್ಲಿ ಕಟ್ಟಿಸಿದ್ರೆ ಜನಗಳ ಕಣ್ಣು ಬೀಳ್ತದೆ. ಅಲ್ಲಾದ್ರೆ ಯಾರಿಗೂ ಗೊತ್ತಾಗಲ್ಲ."

"ಕುಮಾರಣ್ಣ ಈಗಾಗ್ಲೆ ಮನಸು ಮಾಡಿದಾರೆ. ನಾನು ಇಲ್ಲಿ ವಿಚಾರಿಸಿ ನೋಡಿದೆ, ಮನೆನೂ ಅಷ್ಟೇನು ದುಬಾರಿಯಲ್ಲ. ಎರಡೂವರೆ ಕೋಟಿ ರೂಪಾಯಿಗೆ ಒಂದು ಮನೆ ಆರಾಮಾಗಿ ಸಿಗತವೆ."

"ತಗೊಳಿ ಸಾರ್ ಬಿಡಬೇಡಿ."

"ಮೊದ್ಲು ಕುಮಾರಣ್ಣ ತಗೊಳ್ಳಿ. ಇಲ್ಲ ಅಂದ್ರೆ ನನ್ನ ಮೇಲೆ ಕಣ್ಣು ಬೀಳ್ತದೆ."

"ಈಗಾಗ್ಲೆ ಬಿದ್ದಿರಬೇಕಲ್ಲಾ?"

"ಹೌದು, ಅದಿಂಗಾಯ್ತು ಕಂಣ್ರಿ. ಮಂಡ್ಯದಲ್ಲೊಂದು ಸಭೆಲಿ ನಮ್ಮ ಹುಡುಗ್ರು ಮುಂದಿನ ಮುಖ್ಯಮಂತ್ರಿ ಚೆಲುವರಾಯಸ್ವಾಮಿ ಅಂತ ಕೂಗಿದ್ರು. ಆ ಸಭೆಲಿ ಈ ಹೊರಟ್ಟಿ ಇದ್ದ. ಅವ್ರುನು ತಗಂಡೋಗಿ ದೇವೇಗೌಡ್ರಿಗೇಳಿದ. ಅಲ್ಲಿಂದ ಸುರುವಾಯ್ತು ನೋಡಿ."

"ಅದೇನೆ ಆಗ್ಲಿ, ಆ ದೇವೇಗೌಡನ ಮಕ್ಕಳಿಗಿಂತ ನೀವೇ ಪರವಾಗಿಲ್ಲ ಸಾರ್. ನೀವು ಮಾತಾಡದು ನಮಿಗೆ ಅರ್ಥವಾಯ್ತದೆ. ಆ ಕುಮಾರಸ್ವಾಮಿಗಿಂತ ಒಂದು ಪದ ಇಂಗ್ಲಿಷ್ ಜಾಸ್ತಿನೆ ಮಾತಾಡ್ತಿರಿ. ಅಂತ ಕುಮಾರಸ್ವಾಮಿನೆ ಮುಖ್ಯಮಂತ್ರಿಯಾಗಿರುವಾಗ ನಿಮ್ಮಂತ ನೀವು ಯಾಕೆ ಆಗಬಾರದು ಅಂತ?"

"ನನಿಗೂ ಅಂಗೆ ಅನ್ನಿಸಿತ್ತು. ಅಷ್ಟರಲ್ಲಿ ಅವರ ಗುಮಾನಿಗೆ ತುತ್ತಾಗಿ ಈಗ ಯಲ್ಲಾರಿಗಿಂತ ಹೆಚ್ಚು ನಿಷ್ಠೆ ತೋರಬೇಕಾಗ್ಯದೆ ಕಂಡ್ರಿ."

"ಥೂತ್ತೇರಿ!!!"

-ಯಾಹೂ

ರಿಂಗ್‌ಮಾಸ್ಟರ್ ಕುಮಾರಣ್ಣನ ಪೂನಾ ಸರ್ಕಸ್

ರಿರಿಂಗ್‌ಮಾಸ್ಟರ್ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಶಾಸಕರು ನಡೆಸಿದ 'ಪೂನಾ ಸರ್ಕಸ್' ಟ್ರಿಪ್ ಮುಗಿದಿದೆ.

ಪಾರ್ಟಿಯೊಳಗಿನ ಶಾಸಕರ ಭಿನ್ನಾಭಿಪ್ರಾಯ, ಅತೃಪ್ತಿಗಳನ್ನು ಕೇಳಿ ಬಗೆಹರಿಸುವ ಉದ್ದೇಶವಿದ್ದ ಈ 'ರೆಸಾರ್ಟ್ ರಾಜಕೀಯ ಸಭೆ' ಈ ಸರ್ಕಸ್ ಕಂಪನಿಯ ಮಾಲೀಕ ದೇವೇಗೌಡರ ನಿರೀಕ್ಷೆಯಂತೆಯೇ ಸುಖಾಂತ್ಯ ಕಂಡಿದೆ.

ಅಲ್ಲಿ ಸಿಡಿದೇಳುತ್ತಾರೆ ಎಂದೇ ನಿರೀಕ್ಷಿಸಿದ್ದ ಬಿ.ಸಿ. ಪಾಟೀಲ್, ಮಹಿಮಾ ಪಟೇಲ್, ಚೆಲುವರಾಯಸ್ವಾಮಿ, ಮಾಗಡಿ ಬಾಲಕೃಷ್ಣ, ಆಲಂಗೂರ್ ಶ್ರೀನಿವಾಸ್, ಸಂತೋಷ್ ಲಾಡ್ ತೀರಾ ಬಾಲ ಅಲ್ಲಾಡಿಸುತ್ತಾ ಮುಖೇಡಿತನ ಪ್ರದರ್ಶಿಸಿಬಿಟ್ಟರು. ಹೀಗೆ ತಮ್ಮ ಬೇಗುದಿ ಅಸಮಾಧಾನಗಳನ್ನೆಲ್ಲಾ ಅದುಮಿಟ್ಟುಕೊಂಡು ಪಕ್ಕೆ ಹೈಕಳಂತೆ 'ಕುಮಾರಸ್ವಾಮಿಕಿ ಜೈ' ಎಂದು ಎಲ್ಲರೂ ವಾಪಸ್ ಬಂದಿದ್ದಾರೆ.



ಪೂನಾದಲ್ಲಿ ಮಜಾ ಉಡಾಯಿಸಲು ಹೊರಟಿರುವ ಶಾಸಕರು

ಸಂಪುಟ ಪುನರ್‌ರಚನೆ, ನಿಗಮ ಮಂಡಳಿಗೆ ಶೀಘ್ರ ನೇಮಕ ಎಂಬ ಬಿಸ್ಕತ್ ತೋರಿಸಿ ಇವರೆಲ್ಲರನ್ನೂ ಸುಮ್ಮನಾಗಿಸಿಬಿಟ್ಟಿದ್ದಾರೆ ರಿಂಗ್‌ಮಾಸ್ಟರ್ ಕುಮಾರಸ್ವಾಮಿ.

ಒಂದೂವರೆ ದಿನ ಪಾರ್ಟಿ ಶಾಸಕರೆಲ್ಲಾ ಒಂದೇ ಜಾಗದಲ್ಲಿ ಸೇರಿ ಚರ್ಚೆ (ಹರಟೆ) ನಡೆಸಲು 800 ಕಿಲೋಮೀಟರ್ ಪ್ರಯಾಣ ಮಾಡಿಬರುತ್ತಾರೆಂದರೆ, ಅದಕ್ಕಾಗಿ ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆಂದರೆ ಅದನ್ನು ಐಲುಪೈಲಾಟ ಎನ್ನದೇ ಬೇರೇನು ಹೇಳಲು ಸಾಧ್ಯ?

ಹಾಗೆ ನೋಡಿದರೆ ಪೂನಾದಲ್ಲಿ ನಡೆದ ಜೆಡಿಎಸ್ ಶಾಸಕರ ಸಮಾಲೋಚನಾ ಸಭೆ ಯಾವ ಕಾರಣಕ್ಕೂ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿರಲಿಲ್ಲ ಅಥವಾ ಪಾರ್ಟಿ ಬಲಪಡಿಸುವ ಚರ್ಚೆಯೂ ಆಗಿರಲಿಲ್ಲ. ಬದಲಾಗಿ ಜನತಾದಳ ಪಾರ್ಟಿಯ ಮೇಲೆ ದೇವೇಗೌಡರ ಕುಟುಂಬದ ಹಿಡಿತವನ್ನು ಇನ್ನಷ್ಟು ಗಟ್ಟಿ ಮಾಡಿಕೊಂಡು, ಗೌಡರ ಸುಪುತ್ರ ಕುಮಾರಸ್ವಾಮಿಯ ಕುರ್ಚಿಗೆ ಯಾವ ಸಂಚಕಾರವೂ ಬರದಂತೆ ಖಚಿತಪಡಿಸಿಕೊಳ್ಳುವ ಒಂದು ತ್ಯಾಪೇದಾರಿ ಟೂರ್ ಆಗಿತ್ತು ಮಾತ್ರ.

ಜಾತ್ಯತೀತ ದಳವೆಂಬ ಸರ್ಕಸ್ ಕಂಪನಿಯ ರಿಂಗ್ ಮಾಸ್ಟರ್ ಕುಮಾರಸ್ವಾಮಿ ತುರ್ತಾಗಿ ಇಂತಾದ್ದೊಂದು ವಿಶ್ವಾಸ ಕುದುರಿಸಿಕೊಳ್ಳುವ ಸಭೆ ನಡೆಸಲೇ ಬೇಕಿತ್ತು. ಅದು ಈಗ ಮುಗಿದಿದೆ ಅಷ್ಟೆ.

ಬ್ಲಾಕ್‌ಮೇಲ್ ಸಮಾಲೋಚನಾ ಸಭೆ

ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಸಿದ್ಧರಾಮಯ್ಯ ವಿರುದ್ಧ ನಿಂತಿರುವುದು 'ನಾನೇ' ಎಂದುಕೊಳ್ಳಿ ಎನ್ನುವ ಮಟ್ಟಿಗೆ ಕುಮಾರಸ್ವಾಮಿ ಮುಂದುವರೆದಿದ್ದರು. ಆದರೆ ಜನ ಸಿದ್ದುರನ್ನು ಗೆಲ್ಲಿಸಿ ಕುಮಾರಸ್ವಾಮಿಗೆ ಮುಖಭಂಗ ಮಾಡಿದ್ದರು. ಇದೂ ಸೇರಿ ಅಷ್ಟರೊಳಗೆ ಜಾತ್ಯತೀತ ದಳದಲ್ಲಿ ಕುಮಾರಸ್ವಾಮಿ ವಿರುದ್ಧ ಬಹುತೇಕ ಶಾಸಕರಲ್ಲಿ, ಪಾರ್ಟಿ ಕಾರ್ಯಕರ್ತರಲ್ಲಿ ಅಸಹನೆ ಬೆಳೆದು ನಿಂತಿತ್ತು.

ಗೌಡರ ಕುಟುಂಬದ ಅಕ್ರಮ ಆಸ್ತಿ ಖರೀದಿ, ರೆಡ್ಡಿ ಸಿಡಿ ಹಗರಣಗಳೆಲ್ಲಾ ಪಕ್ಷದ ಬಲ ಕುಗ್ಗಿಸಿದ್ದವು. ಜನ ದೇವೇಗೌಡ ಕುಮಾರಸ್ವಾಮಿ ಹೆಸರೆತ್ತಿದ್ದರೆ ಥೂ, ಛಿ ಎನ್ನಲು ಶುರುಮಾಡಿದ್ದರು. ಇಷ್ಟು ಸಾಲದೆಂಬಂತೆ ಕೋ-ಜಾ ಸರ್ಕಾರ ರಚನೆಯಾದಾಗಿನಿಂದ ನಡೆದ ಹಗರಣಗಳೆಲ್ಲವೂ ಕುಮಾರಸ್ವಾಮಿ ಮುಖಕ್ಕೆ ಮಸಿ ಬಳಿಯುತ್ತಾ ಬಂದಿವೆಯೇಹೊರತು ಅವರ ಪಾರ್ಟನರ್‌ಗಳಾದ ಬಜೆಪಿ ಸಚಿವರುಗಳ ಭ್ರಷ್ಟಾಚಾರ ಬಯಲಿಗೇ ಬರಲಿಲ್ಲ.

ಇದೆಲ್ಲದರಿಂದಾಗಿ ಜೆಡಿಎಸ್ ಶಾಸಕರುಗಳಿಗೆ ತಮ್ಮ ಶಾಸಕಾಂಗ ನಾಯಕ ಕುಮಾರಸ್ವಾಮಿ ಬಗ್ಗೆ ನಂಬಿಕೆ ಕುಸಿದು ಹೋಗಿತ್ತು. ಈಗಿನ ಪೂನಾ ಸರ್ಕಸ್ ಯಾತ್ರೆ ಇದೆಲ್ಲದರ ತೇಪೆಗೆಂದೇ ಆಯೋಜಿಸಲ್ಪಟ್ಟಿತ್ತು.

ಮೋಜು ಮಜಾ-ಒಣ ಚರ್ಚೆ

ಶುಕ್ರವಾರ ನಡೆದ ಮೊದಲ ದಿನದ ಸಭೆಯಲ್ಲಿ ಪ್ರತಿ ಶಾಸಕನಿಗೂ 20 ನಿಮಿಷ ಮಾತಾಡಲು ಅವಕಾಶ ನೀಡಲಾಗಿತ್ತು. ಆದರೆ ಚೆಲುವರಾಯಸ್ವಾಮಿ, ಬಿ.ಸಿ. ಪಾಟೀಲ್ ಸೇರಿದಂತೆ ಯಾರೂ ಅಲ್ಲಿ ನಿಷ್ಠುರವಾಗಿ ಮಾತಾಡುವ ಧೈರ್ಯ ತೋರಲೇ ಇಲ್ಲ. ಇದ್ದುದರಲ್ಲಿ ಒಬ್ಬ ಪುಟ್ಟೇಗೌಡ ಮಾತಾಡಿ "ಸರ್ಕಾರ ಮತ್ತು ಪಕ್ಷದೊಳಗೆ ದೇವೇಗೌಡರ ಕುಟುಂಬದ ಹಸ್ತಕ್ಷೇಪ ಜಾಸ್ತಿ ಆಗ್ತಾ ಇದೆ. ಇದು ಸರಿ ಅಲ್ಲ!" ಎಂದಿದ್ದಾರೆ. ಇದಕ್ಕೆ ಕುಮಾರಸ್ವಾಮಿ "ನೀವು ಹೇಳೋದು ನಿಜ. ಆದರೆ ಇದನ್ನು ಕಟ್ಟಿಕೊಳ್ಳೋಕು ಆಗಲ್ಲ, ಬಿಟ್ಟರೋಕೂ ಆಗಲ್ಲ. ಆದರೂ ಇದನ್ನು ತಪ್ಪಿಸೋಕೆ ನಾನು ಪ್ರಯತ್ನಿಸ್ತೀನಿ" ಎಂದು ತಿಪ್ಪೇ ಸಾರಿಸಿದ್ದಾರೆ. ಇದನ್ನು ಕೇಳುತ್ತಿದ್ದ ಇನ್ನಿತರ ಶಾಸಕರು ತಮ್ಮ ತಮ್ಮಲ್ಲೇ "ಇನ್ನು ಪುಟ್ಟೇಗೌಡನ ಕತೆ ಮುಗೀತು" ಎಂದುಕೊಂಡಿದ್ದಾರೆ.

ಇನ್ನು ಅಮರೇಗೌಡ ಭಯ್ಯಾಪುರ ಧೈರ್ಯವಾಗಿ ಕುಮಾರಸ್ವಾಮಿ ಮುಖಕ್ಕೆ ಹೊಡೆದಂತೆ ಮಾತನಾಡುತ್ತಾ "ನಿಮ್ಮ ಸುತ್ತಾ ಬರೀ ಹೊಗಳುಭಟ್ಟರು, ಭಟ್ಟಂಗಿಗಳೇ ಸೇರಿಕೊಂಡಿದ್ದಾರೆ. ಅವರು ಹೇಳೋದನ್ನೆಲ್ಲ ಕೇಳಿಸಿಕೊಂಡು ನೀವು ಉಬ್ಬಿಹೋದರೆ ನಮ್ಮ ಕತೆ ಮುಗಿದಂತೆ. ನೀವು ಹೀಗೇ ಆಡಳಿತ ನಡೆಸಿದರೆ ಮುಂದಿನ ಎಲೆಕ್ಷನ್‌ನಲ್ಲಿ ನಾವು 20 ಸೀಟ್ ಗೆಲ್ಲೋದೂ ಕಷ್ಟ" ಎಂದು ರೇಗಾಡಿ ಬಿಟ್ಟರು.

"ನಾವೀಗ ಬಜೆಪಿ ಜೊತೇಲಿರೋದ್ರಿಂದ ನಾಳೆ ಎಲೆಕ್ಷನ್ ಬಂದಾಗ ಮತದಾರರಿಗೆ ಏನು ಉತ್ತರ ಕೊಡೋದು?" ಎಂದೂ ಹತಾಶರಾಗಿ ಪ್ರಶ್ನಿಸಿಬಿಟ್ಟರು.

ಅದಕ್ಕೆ "ಅದನ್ನೆಲ್ಲಾ ಗೌಡ್ರಿಗೆ ಬಿಡೋಣ. ನಾಳೆದು ಈಗ ಬೇಡ, ಸದ್ಯಕ್ಕೆ ನಮ್ಮ ಭಿನ್ನಾಭಿಪ್ರಾಯಗಳನ್ನು ಸರಿ ಮಾಡಿಕೊಳ್ಳೋಣ" ಎಂಬ ಸಮಾಜಾಯಿಷಿ ಕುಮಾರಸ್ವಾಮಿಯಿಂದ. ಜೊತೆಗೆ ತಮ್ಮ ಮೇಲಿನ ಭ್ರಷ್ಟಾಚಾರದ ಆರೋಪಗಳ ಬಗ್ಗೆ ಕುಮಾರಸ್ವಾಮಿ ಮಾತನಾಡಿ "ಆ ಜನಾರ್ಧನ ರೆಡ್ಡಿನೇ ನನ್ನ ಹತ್ತಿರ ಆಶ್ರಯ ಕೇಳಿಕೊಂಡು ಬಂದಿದ್ದ. ಅವನ ಹತ್ರ ಯಾವ ಸಿಡಿನೂ ಇಲ್ಲಾ, ನನ್ನ ನಂಬಿ" ಎಂಬ ಗೋಗೆರೆದರು.

ತಮಾಷೆ ಎಂದರೆ ಚೆಲುವರಾಯಸ್ವಾಮಿ ಮಾತಾಡಿದ್ದು:

"ನನ್ ಬಗ್ಗೆ ಯಾರ್‍ಯಾರೋ ಏನೇನೋ ಹೇಳ್ತಿದ್ದಾರೆ, ಅವೆಲ್ಲಾ ನಿಜಾ ಅಲ್ಲಾ, ನಾನು ಕುಮಾರಸ್ವಾಮಿ ಹೇಳಿದಂತೆ ಕೇಳ್ತೀನಿ" ಎಂದು ಪೂರಾ ಶರಣಾಗತಿ ಘೋಷಿಸಿದ್ದು.

ಇಷ್ಟು ಬಿಟ್ಟರೆ ಕುಮಾರಸ್ವಾಮಿ ಒಬ್ಬ ನಾಲಾಯಕ್ ಮುಖ್ಯಮಂತ್ರಿ ಎಂದು ಹೇಳುವ ಧೈರ್ಯ ಅಲ್ಲಿ ಯಾರಿಗೂ ಬರಲಿಲ್ಲ.

ಪಾರ್ಟಿ ಸಂಘಟನೆ ಬಗ್ಗೆಯೇ ಅಲ್ಲಿ ಭಾರಿ ಚರ್ಚೆಯಾಯಿತೆಂದು ಎಲ್ಲರೂ ಈಗ ರೈಲು ಬಿಡುತ್ತಿದ್ದಾರೆ. ಆದರೆ ನಡೆದದ್ದು ಮಾತ್ರ "ಮುಂದೆ ಎಲೆಕ್ಷನ್ ಬರೋ ಅಷ್ಟರಲ್ಲಿ ನಾವು ಸಾಕಷ್ಟು ಹಣ ಸಂಗ್ರಹಣೆ ಮಾಡಬೇಕು, ಇವತ್ತಿನ ಎಲೆಕ್ಷನ್ ಪೂರ್ತಿ ಭ್ರಷ್ಟ ಆಗಿಹೋಗಿದೆ" ಎಂಬ ಗುರುಬೋಧನೆ ಕುಮಾರಸ್ವಾಮಿಗಳಿಂದ.

ಈ ಎಳಸು ರಾಜಕಾರಣಿ ಕುಮಾರಸ್ವಾಮಿಗೆ ಪಕ್ಷ ಬಲಪಡಿಸುವುದೆಂದರೆ ಈಗಲೂ ಸಾಕಷ್ಟು ಹಣ ಸಂಗ್ರಹಿಸುವುದಾಗಿಯೇ ವಿನಃ ಜನಪರ ಆಡಳಿತ-ಕಾರ್ಯಕ್ರಮಗಳಲ್ಲವೆಂಬುದು ಪೂನಾದಲ್ಲಿ ಮತ್ತೆ ಸಾಬೀತಾಗಿದೆ.

ಚೂರುಪಾರು ಮಾತಾಡಲೇಬೇಕೆಂದು ಕೆಲವರು ರೆಡಿಯಾಗಿದ್ದಾರೆಂಬುದು ಕುಮಾರಸ್ವಾಮಿಗೆ ಮೊದ[ಲೇ] ಗೊತ್ತಿತ್ತು. ಹಾಗಾಗಿ ಅವರು "ಇದೇ 25 ರೊ[...] ಸಂಪುಟ ಪುನರ್‌ರಚನೆ, ಕನಿಷ್ಠ 15 ಶಾಸಕರಿಗೆ ನಿಗ[ಮ] ಮಂಡಳಿ ಅಧ್ಯಕ್ಷಗಿರಿ ಕೊಡುತ್ತೇನೆ" ಎಂಬ ಆಮಿ[ಷ]ವನ್ನು ಮೊದಲೇ ಒಡ್ಡಿದ್ದರು.

ಜೆಡಿಎಸ್‌ನಲ್ಲಂತೂ ಅವಕಾಶ ಸಿಕ್ಕರದ ಎಲ್ಲ[...] ಈಗ ಸಚಿವ ಪದವಿ ಆಕಾಂಕ್ಷಿಗಳೇ. ಸಂಪುಟ ಪುನರ್‌ರ[ಚನೆ] ಆಗುವ ಸಂದರ್ಭದಲ್ಲಿ ಯಾರಾದರೂ ಮುಖ್ಯಮಂತ್ರಿ[...] ಆಡಳಿತ ವೈಖರಿಯನ್ನು ಖಂಡಿಸಲು ಹೋ[...]ತ್ತಾರೆಯೇ?

ಅತೃಪ್ತರನ್ನು ಸಮಾಧಾನಿಸಲು ಕುಮಾರಸ್ವಾ[ಮಿ] ಈಗ ಇನ್ನೊಂದು ಆಮಿಷ ಒಡ್ಡಿದ್ದಾರೆ. "ಮುಂ[...] ಬಜೆಪಿ ಮುಖ್ಯಮಂತ್ರಿ ಬಂದಾಗ ನಮ್ಮ ಕಡೆಯಿ[...] ಹೊಸಬರಿಗೆ ಸಚಿವ ಸ್ಥಾನ ಕೊಡಿಸಿ ಈಗ ಸಚಿವರ[ಾಗಿ]ರುವ ನಾವೆಲ್ಲಾ ಪಾರ್ಟಿ ಕೆಲಸಕ್ಕೆ ಹೋಗುತ್ತೇವೆ" ಎಂಬ ಸವಕಲು ಆಶ್ವಾಸನೆ ನೀಡಿದ್ದಾರೆ.

ಇದನ್ನು ಯಾರಾದರೂ ನಂಬಲು ಸಾಧ್ಯವೇ??

ತಮ್ಮ ಮಕ್ಕಳ ಕೈಲಿದ್ದ ಅಧಿಕಾರ ಹೋಗಿಬಿಡು[ವ] ಸಂದರ್ಭ ಬಂದಾಗ ದೊಡ್ಡಗೌಡರೇನು ಮ[...] ನುಂಗುತ್ತಾ ಸುಮ್ಮನೆ ಕುಳಿತಿರುತ್ತಾರಾ? ನಂಬೋ ಮಾ[ತಾ] ಇದು?

ಪೂನಾ ಸರ್ಕಸ್‌ನಲ್ಲಿ ಅತೃಪ್ತರ ದನಿ ಕೇಳಿಸದಿರು[ವುದಕ್ಕೆ] ಇನ್ನೊಂದು ಮುಖ್ಯ ಕಾರಣ ಶಾಸಕ ಜಮೀರ್ ಅಹ್ಮ[ದ್] ಹಾಗೂ ಸಂತೋಷ್ ಲಾಡ್ ಬಂದಿದ್ದು.

ಇವರಿಬ್ಬರೂ ಕುಮಾರಸ್ವಾಮಿ ವಿರುದ್ಧ ಬಂ[...]ದ್ದವರು. ಅಂತವರೇ ಸಭೆಗೆ ಬಂದ ಮೇಲೆ ಇ[...] ನಮ್ಮದೇನೆಂದು ಇನ್ನುಳಿದವರು ತೆಪ್ಪಗಾಗಿ 'ಕುಮಾ[ರ]ಸ್ವಾಮಿಕೀ ಜೈ' ಎಂದು ಪೂನಾ ಟ್ರಿಪ್ ಮುಗಿಸಿದ[ರು].

ಅಲ್ಲಾ ಈ ಜಾತ್ಯತೀತ ಜನತಾದಳದವರು [...] ಬಲಪಡಿಸುವುದೆಂದರೆ ಕುಮಾರಸ್ವಾಮಿಗೆ ನಿಷ್ಠೆ ತೋ[ರಿ]ಸುವುದು ಎಂದುಕೊಂಡಿದ್ದಾರಲ್ಲ... ಈ ಪಾರ್ಟಿ ಉದ್[ಧಾರ] ಮಾಡೋ ಲಕ್ಷಣಾನಾ ಇದು?

–ಈ[...]

ರಾತ್ರಿಯೆಲ್ಲಾ ಬೈಯ್ದು[...] ಬೆಳಗ್ಗೆ ಬಂದು ತಬ್ಕೊಂಡ್ನಂತೆ

ಜಮೀರ್ ಅಹಮದ್ ವರಸೆ ಇದು. ಅ[...] ಜೆಡಿಎಸ್ ಶಾಸಕರೆಲ್ಲಾ ಗುರುವಾರ ಬೆಳಗ್ಗೆ ಪೂನಾ[ಕ್ಕೆ] ಹೊರಡಲು ರೆಡಿಯಾಗುತ್ತಿದ್ದಾಗ ರಾಜೀನಾಮೆ 'ವೀ[...] ಜಮೀರ್ ಬುಧವಾರ ರಾತ್ರಿ, ಕಾಂಗ್ರೆಸ್ಸಿನ ಸಿ[ದ್ಧ]ರಾಮಯ್ಯನವರಿಗೆ ಫೋನ್ ಮಾಡಿ ಕುಮಾರಸ್ವಾ[ಮಿ] ಹಾಗೂ ಗೌಡರನ್ನು ಬಾಯಿಗೆ ಬಂದಂತೆ ಬೈಯ್ದಿದ್ದಾ[ನೆ]. "ಸಾರ್ ನಾನು ನಿಮ್ಮ ಪಾರ್ಟಿಗೆ ಬಂದ್ ಬಿಡ್ತೀ[ನಿ] ಗೌಡ ಮತ್ತು ಕುಮಾರಣ್ಣ ವಿರುದ್ಧ ಹೋರಾಡುತ್ತೇ[ನೆ] ಅವರ ಸಹವಾಸ ಸಾಕಾಗಿದೆ" ಎಂದೆಲ್ಲಾ ಅತ್ತಿದ್ದಾ[ನೆ]. ಆದರೆ ಹಾಗಂದ ಮಾರನೇ ದಿನವೇ ಜಮೀ[ರ್] ಪೂನಾದಲ್ಲಿ ಹಾಜರಾಗಿ ಕುಮಾರಸ್ವಾಮಿಯನ್[ನು] ತಬ್ಬಿಕೊಂಡು, ಅವರ ಕೈಗೆ ಮುತ್ತಿಟ್ಟಿದ್ದಾನೆ. "ನೀನ[ೇ] ನನ್ನ ರಾಜ" ಎಂದು ಹಲ್ಲು ಕಿರಿದಿದ್ದಾನೆ!

ಸ್ಪಾರ್ಕ್ ಡಿಸ್ಕೋ
ಬೌನ್ಸರ್ ಕೊಲೆ ಹಿಂದೆ ಡ್ರಗ್ಗು?

ಕೊಂದವನು ಪೊಲೀಸ್ ಪುತ್ರ. ಕೊಲೆಯಾದವನು ಹಳೇರೌಡಿ. ಕಾರಣ ಮಾತ್ರ ಡಿಸ್ಕೋ, ಡ್ಯಾನ್ಸು, ಲಿಕ್ಕರ್, ಡ್ರಗ್ಗು ಮತ್ತು ಹೆಣ್ಣು ಇತ್ಯಾದಿ ಇತ್ಯಾದಿ!

ಕಾಂಬಿನೇಷನ್ ವಿಚಿತ್ರವಾಗಿದೆಯಲ್ಲವೆ? ಜನವರಿ ಆರರ ರಾತ್ರಿ ಬ್ರಿಗೇಡ್ ರಸ್ತೆಯ ಸ್ಪಾರ್ಕ್ ಎಂಬ ಹಳೇ ಡಿಸ್ಕೋ ಥೆಕ್‌ನಲ್ಲಿ ಕೊಲೆಯಾದ ಬೌನ್ಸರ್ ಗುಣಶೇಖರನ ಹತ್ಯೆಗೆ ಡ್ರಗ್ಗು ಕಾರಣವೋ, ಡ್ರಿಂಕು ಕಾರಣವೋ ಎಂಬುದೇ ಕನ್‌ಫ್ಯೂಸು. ಕೊಂದವರೆಲ್ಲ ಪೋಕರಿ ಹುಡುಗರು. ಹುಡುಗಿ ಚುಡಾಯಿಸಿದ್ದನ್ನು ಕೇಳಿದ್ದಕ್ಕೇ ಬಂದು ಕೊಲೆ ಮಾಡಿದ್ದಾರೆ ಎಂದು ಡಿಸ್ಕೋ ಧಣಿ ಪ್ರಭಾಕರ ಆಣೆ ಪ್ರಮಾಣ ಮಾಡುತ್ತಿದ್ದಾನೆ. ಅದನ್ನೇ ಅಶೋಕ್‌ನಗರದ ಪೊಲೀಸರು ನಂಬಿದ್ದಾರೆ. ಆದರೆ ಪೋಕರಿ ಹುಡುಗರೆಂದು ಗೊತ್ತಿದ್ದೂ ಅವರನ್ನೇಕೆ ಒಳಕ್ಕೆ ಬಿಟ್ಟುಕೊಂಡ? ಹಾಗೊಮ್ಮೆ ಹುಡುಗಿ ಚುಡಾಯಿಸಿದ್ದೇ ಆಗಿದ್ದರೆ ಆಕೆಯೇಕೆ ದೂರು ಕೊಟ್ಟಿಲ್ಲ? ಅರೆಬೆತ್ತಲೆ ಹುಡುಗಿಯರನ್ನೇ ಕರೆಸಿ ಕುಣಿಸುವ ಸ್ಪಾರ್ಕ್ ಧಣಿಗೆ ಇದ್ದಕ್ಕಿದ್ದಂತೆ ಹೆಣ್ಣುಮಕ್ಕಳ ಬಗ್ಗೆ ಕಾಳಜಿ ಬಂತೆ?

ವಾಸ್ತವವೇ ಬೇರೆ. ಇಂಥ ಡಿಸ್ಕೋಗಳಲ್ಲಿ ಹೊಡೆದಾಟ, ಫೈರಿಂಗು (ಈ ಹಿಂದೆ ಮಾಜಿ ಮಂತ್ರಿ ಗುರುಪಾದಪ್ಪನ ಮಗ ಸೂರ್ಯಕಾಂತ್ ನಾಗಮಾರಪಲ್ಲಿ



ಕೊಲೆಯಾದ ಗುಣಶೇಖರ್

ತನ್ನ ಗೆಳತಿಯ ಸೊಂಟಕ್ಕೆ ಕೈಹಾಕಿದ ಮಲೆಯಾಳಿ ಅಜಿತ್ ಎಂಬ ಡ್ರಗ್ ಪೆಡ್ಲರ್ ಮೇಲೆ ಗುಂಡು ಹಾರಿಸಿದ್ದ) ಇದ್ದದ್ದೆ. ಅದಕ್ಕೆ ಕಾರಣ ಡ್ರಗ್ಗು. ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವೊಮ್ಮಗ ಎಂದು ರೈಲು ಬಿಡುವ ಸಂಗೀತ್ ಮತ್ತು ಮಲೆಯಾಳಿ ಅಜಿತ್ ಎಂಬಿಬ್ಬರು ಆ ಕಾಲದಿಂದಲೂ ಬೆಂಗಳೂರಿನ ಡಿಸ್ಕೋಗಳಿಗೆ ಡ್ರಗ್ ಪೂರೈಸುತ್ತಿದ್ದಾರೆ. ಇವರಿಗೆ ಬೆಂಬಲವಾಗಿರುವವನು ಹಲಸೂರಿನ ಕೌನ್ಸಿಲರ್ ಶರವಣ. ಈತ ಹಳೇ ರೌಡಿ. ತನ್ನ ಗ್ಯಾಂಗಿನ ರೌಡಿಗಳಾದ ಬೌನ್ಸರ್ ಬಾಬು, ಗುಣಾ ಇತ್ಯಾದಿಗಳನ್ನೆಲ್ಲ ಬ್ರಿಗೇಡ್ ರಸ್ತೆಯ ಡಿಸ್ಕೋ ಅಡ್ಡೆಗಳಿಗೆ ಬೌನ್ಸರ್‌ಗಳನ್ನಾಗಿ ಮಾಡಿದ್ದೂ ಅಲ್ಲದೆ ಅವರ ಮೂಲಕ ಮಲೆಯಾಳಿ ಅಜೀತನ ಡ್ರಗ್ ಮಾರಿಸುತ್ತಾನೆ.



ಶರವಣ

ಇದಕ್ಕೆಂದು ಸ್ಪಾರ್ಕ್ ಅಡ್ಡೆಗೆ ಬೌನ್ಸರ್ ಆಗಿ ಸ್ಥಾಪಿತನಾದ ಗುಣಾ ಉರ್ಫ್ ಗುಣಶೇಖರ್ ಈ ಹಿಂದೆ ಇನ್‌ಸೋಮ್ನಿಯಾ, ಸ್ಪಿನ್ ಮುಂತಾದ ಡಿಸ್ಕೋ ಅಡ್ಡೆಗಳಲ್ಲಿ ಬಡಿದಾಡಿದ ಆಸಾಮಿಯೇ. ಜನವರಿ 6[...] ಮಧ್ಯಾಹ್ನ ಡಿಸ್ಕೋ ಹೊಕ್ಕ ಪಡ್ಡೆ ಗ್ಯಾಂಗಿ[ಗೆ] ಈತನೇ ಡ್ರಗ್ ಒದಗಿಸಿದ್ದಾನೆ. ನಶೆಯೇರಿ[ದ] ಹುಡುಗರು ಮಂಗಾಟಕ್ಕಿಳಿದಾಗ ತಾನೇ ತ[...]ಕಿದ್ದಾನೆ. ಮೊದಲೇ ಡ್ರಗ್ಗು, ಜೊತೆಗೆ ಬ[...] ಹೊಡೆಸಿಕೊಂಡ ಹುಡುಗರ ಪೈಕಿ ಅಜಂ[...] ಎಂಬಾತ ಹೆಬ್ಬಾಳದ ಲೇಡಿ ಟ್ರಾಫಿಕ್ ಇ[ನ್ಸ್]ಪೆಕ್ಟರ್ ಮುನಿರತ್ನಮ್ಮನ ಮಗ. ಜೊ[ತೆಗೆ] ಬಿಲ್ಡರ್ ಅಜಯ್ ಶರ್ಮನ ಮಗ ಅಂಕಿ[ತ್] ಶರ್ಮಾ ಎಂಬ ಹತ್ತೊಂಬತ್ತರ ಹುಡು[ಗ] ಆರ್.ಟಿ. ನಗರದ ಕಮಲ್ ಎಂಬ ಮತ್ತೊಬ್ಬ ಪಡ್ಡೆಯು ಬೌನ್ಸರ್ ಗುಣನಿಂದ ಒದೆ ತಿಂದಿದ್ದಾರೆ.

ಡ್ರಗ್ಗಿನ ಮತ್ತು ಬಿಡುತ್ತಾ? ಒದೆ ತಿಂದ ಜಿದ್ದಿಗೆ ಬಿ[...] ಡಿಸ್ಕೋದಿಂದ ಹೊರಬಿದ್ದ ಗುಣನನ್ನು ಕಾದಿದ್ದು ಕತ್ತರಿಸಿದ[ರು]. ಸತ್ತವನು ಬೌನ್ಸರ್. ಕೊಂದವನು ಪೊಲೀಸಮ್ಮನ ಪು[ತ್ರ]. ಹುಡುಗಿ ಚುಡಾಯಿಸಿದ ಕತೆ ಹೊಡೆಯುತ್ತಿರು[ವ] ಪೊಲೀಸರು.... ರೌಡಿಗಳೇ ಬೌನ್ಸರ್‌ಗಳಾದರೆ, ಡಿಸ್[ಕೋ] ಅಡ್ಡೆಗಳೇ ಡ್ರಗ್ ಜಾಯಿಂಟುಗಳಾದರೆ ಇನ್ನೇನಾಗು[ತ್ತೆ]? ಇಷ್ಟಾದ ಮೇಲೂ ಹಲಸೂರಿನ ರೌಡಿ ಕೌನ್ಸಿಲ[ರ್] ಶರವಣನನ್ನು ಏಕೆ ಲಾಕಪ್ಪಿಗೆ ದಬ್ಬುತ್ತಿಲ್ಲ?

–ರಾ. ಸೋ[...]

ಭಕ್ತರ ದುಡ್ಡು ವಂಚಕರ ಕೈಗೆ

ಭಾರತದ ಅಗ್ರಗಣ್ಯ ಧರ್ಮಗುರು, ಹಿಂದೂ ...ಜೋದ್ಧಾರಕ, ಮಾಧ್ವ ಬ್ರಾಹ್ಮಣರ ಚಾಂಪಿಯನ್ ...ಾಧೀಶ ಪೇಜಾವರ ವಿಶ್ವೇಶತೀರ್ಥ ಸ್ವಾಮಿಯನ್ನು ...ಗಳೂರಿನ ಕೆಂಪೇಗೌಡ ನಗರ ಪೊಲೀಸರು ಹುಡು...ತ್ತಿದ್ದಾರೆ.

...ಇಂಡಿಯನ್ ಪೀನಲ್ ಕೋಡ್‌ನ 307, 326, ...0, 506(ಬಿ) ಪ್ರಕಾರ ಸಿಟಿ ಪೊಲೀಸರು ಪ್ರಕರಣ ...ಂದನ್ನು ಕೋರ್ಟ್ ಆದೇಶದಂತೆ ...ಖಲಿಸಿಕೊಂಡಿದ್ದಾರೆ. ಇವರಲ್ಲಿ ಒಟ್ಟು ...ಟು ಜನ ಆರೋಪಿಗಳಿದ್ದು ಮಾಧ್ವ ...ಠಾಧೀಶ ಪೇಜಾವರ ನಂ. 1 ...ರೋಪಿ. ಷೇರು ವ್ಯವಹಾರವೊಂದರಲ್ಲಿ ... ಹಾಕಲು ಬಯಸಿದ್ದ ಪೇಜಾವರರಿಗೆ ...ವರ ಪರಮಾಪ್ತ ಪುಂಡ ಶಿಷ್ಯ ...ನುಮಂತನಗರದ ಗಿರೀಶನೇ ಕೈಕೊಟ್ಟು ...2 ಲಕ್ಷ ರೂಪಾಯಿ ಕದ್ದು ನಾಪತ್ತೆ ...ಾಗಿರುವುದು ಮತ್ತು ಪೇಜಾವರ ...ವು ಕಳಕೊಂಡ ಹಣವನ್ನು ವಾಪಸ್ ...ಡೆಯಲು ಗಿರೀಶನ ಪಾರ್ಟ್‌ನರ್ ...ನಿಧಿ ಮತ್ತವನ ಭಾವ ವೆಂಕಟೇಶ್‌ರಿಗೆ ...ವ ಬೆದರಿಕೆ ಹಾಕಿ ಮಾರಣಾಂತಿಕ ...ಲ್ಲೆ ಮಾಡಿಸಿದರೆಂಬುದೇ ಈ ಇಡೀ ...ಕರಣದ ಸಾರಾಂಶ.

...ಪಾಪ ಹಣ-ಮಾನ ಎರಡನ್ನೂ ...ಳೆದುಕೊಂಡಿರುವ ಪೇಜಾವರ ಈಗ ...ನನ್ನನ್ನು ಕ್ಷಮಿಸು ಭಗವಂತಾ, ಭಕ್ತರು ...ನಗೆ ಕೊಟ್ಟಿದ್ದ ಕಾಣಿಕೆ ಹಣವನ್ನು ...ಪಾತ್ರರಿಗೆ ನೀಡಿ ನಿನಗೆ ದ್ರೋಹ ...ಮಾಡಿಬಿಟ್ಟೆ" ಎಂದು ಹಲುಬುತ್ತಿದ್ದಾರೆ. ...ದಕ್ಕೆ ಪ್ರಾಯಶ್ಚಿತ್ತವಾಗಿ ಉಪವಾಸವನ್ನು ...ಮಾಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ.





...ಪಾಪ, ಭಗವಂತಾ ಎಂಬುವವನೇನಾದರೂ ಮೋಡಗ...ಾಟೆ ಇದ್ದರೆ ಅವನು ಪೇಜಾವರರಿಗೆ ಕ್ಷಮೆ ನೀಡ...ಹುದೇನೊ, ಆದರೆ ಐಪಿಸಿ ಸೆಕ್ಷನ್‌ಗಳು 'ಪರಮಾತ್ಮ'ನ ...ಚ್ಛಾನುಸಾರ ನಡೆಯುವುದಿಲ್ಲವಲ್ಲ, ಅಲ್ಲೇನಿದ್ದರೂ ಪೊಲೀಸ್ ತನಿಖೆ, ಸಾಕ್ಷ್ಯ ವಿಚಾರಣೆಗಳೇ ತಾನೇ ನಿರ್ಣಾ...ಯಕ.

ಅದಿರಲಿ, ಈ ಷೇರು ಹಾಗೂ ಹಲ್ಲೆ ಪ್ರಕರಣದಲ್ಲಿ ...ಸಿಲುಕಿಸಲ್ಪಟ್ಟಿರುವ ಗಿರೀಶ್ ಹಾಗೂ ಶ್ರೀನಿಧಿ ಎಂಬುವರ ದೋಸ್ತಿ-ದುಷ್ಮನ್ ಕತೆಯುದ್ದಕ್ಕೂ ಪೇಜಾವರರ ನೆರಳಿದೆ. ಆರೋಪಿ ಗಿರೀಶನ ಲೇವಾದೇವಿ, ಡಬ್ಲಿಂಗ್ ದಂಧೆ, ಷೇರು ಮಾರ್ಕೆಟ್ ಡೀಲುಗಳೆಲ್ಲಾ ಪೇಜಾವರರಿಗೆ ಗೊತ್ತಿದ್ದೇ ಆಗಿದ್ದವು.

ಭಕ್ತರ ದುಡ್ಡು ದುರುಪಯೋಗ

ಪೇಜಾವರ ಎದುರಿಸುತ್ತಿರುವ ಕ್ರಿಮಿನಲ್ ಕೇಸಿನ ಹಿನ್ನೆಲೆ ಹೀಗಿದೆ: ಶ್ರೀನಿಧಿ ಹಾಗೂ ಗಿರೀಶ್ ಎಂಬ ಬ್ರಾಹ್ಮಣ ಯುವಕರಿಬ್ಬರು ಷೇರ್ ಟ್ರೇಡಿಂಗ್ ದಂಧೆ ನಡೆಸುತ್ತಿದ್ದು, ಈಗ್ಗೆ ನಾಲ್ಕು ತಿಂಗಳ ಹಿಂದೆ ಷೇರ್ ಮಾರ್ಕೆಟ್ ಹಠಾತ್ತನೆ ಕುಸಿದಾಗ ಲಕ್ಷಾಂತರ ರೂಪಾಯಿ ಲಾಸ್ ಮಾಡಿಕೊಂಡಿದ್ದರು. ಕಳೆದುಕೊಂಡ ದುಡ್ಡನ್ನು ಮತ್ತೆ ಅಲ್ಲೇ ದುಡಿಯಬೇಕೆಂದು ಇವರಿಬ್ಬರೂ ನಿರ್ಧರಿಸಿ ಪಾರ್ಟನರ್‌ಶಿಪ್‌ನಲ್ಲಿ ಒಂದು ಷೇರ್ ಟ್ರೇಡಿಂಗ್ ಕಂಪನಿ ಸ್ಥಾಪಿಸಲು ತಲಾ 12 ಲಕ್ಷ ಬಂಡವಾಳ

ಈತ

ಹಾಕಲು ಬಾಯಿ ಮಾತಿನ ಒಪ್ಪಂದ ಮಾಡಿಕೊಂಡಿದ್ದರು. ಅದರಂತೆ ಗಿರೀಶ್ ತನ್ನ ಪಾಲಿನ 12 ಲಕ್ಷ ರೆಡಿಯಿದೆ ಎಂದಾಗ ಶ್ರೀನಿಧಿ ಹಣಕ್ಕಾಗಿ ಹೋಗಿ ಕಂಡಿದ್ದು ತನ್ನ ತಾಯಿ ರುಕ್ಮಿಣಿಯ 'ಅಣ್ಣ ಬಿಎಂಎಸ್ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ವೆಂಕಟೇಶರನ್ನು. ಆಮೇಲೆ ವೆಂಕಟೇಶರು ಶ್ರೀನಿಧಿಯನ್ನು ಕರೆದುಕೊಂಡು ಪೇಜಾವರ ಹತ್ತಿರ ಹೋಗಿ ಧನಸಹಾಯ ಕೇಳಿದಾಗ 12 ಲಕ್ಷ ಕೊಡಲು ಪೇಜಾವರ ಒಪ್ಪಿಕೊಂಡಿದ್ದರಂತೆ. ಅದರಂತೆ ನವೆಂಬರ್ 24 ರಂದು ಆಂಧ್ರ ಬ್ಯಾಂಕಿನ ತಮ್ಮ ಪರ್ಸನಲ್ ಅಕೌಂಟಿನಿಂದ 12 ಲಕ್ಷ ತರಿಸಿದ ಪೇಜಾವರ ದುಡ್ಡನ್ನು ತಮ್ಮ ಇನ್ನೊಬ್ಬ ಶಿಷ್ಯ ವೆಂಕಟರಮಣಚಾರ್ಯನ ಕೈಗೆ ಕೊಟ್ಟು ಅದಕ್ಕೆ ಗಿರೀಶನ 12 ಲಕ್ಷ ಸೇರಿಸಿ ಒಟ್ಟು 24 ಲಕ್ಷ ರೂ.ಗೆ ಡಿಡಿ ತರಲು ಬೀಳ್ಕೊಟ್ಟಿದ್ದಾರೆ. ಗಿರೀಶನ ಹಣ ವಿಜಯನಗರದ ಸಿಂಡಿಕೇಟ್ ಬ್ಯಾಂಕ್‌ನಲ್ಲಿದೆ ಎಂದಾಗ ಎಲ್ಲರೂ ಅಲ್ಲಿಗೇ ಹೋಗಿದ್ದಾರೆ. ಅಲ್ಲಿ ಪೇಜಾವರ ಶ್ರೀನಿಧಿಗೆಂದು ದಯ ಪಾಲಿಸಿದ್ದ ಮಠದ ಹಣ 12 ಲಕ್ಷಗಳನ್ನು ಗಿರೀಶ್ ತೆಗೆದುಕೊಂಡು ಡಿಡಿ ತರಲು ಹೋದವನು ಈಗ ನಾಪತ್ತೆಯಾಗಿದ್ದಾನೆ.

ಇತ್ತ 24 ಲಕ್ಷ ರೂ. ಡಿಡಿಗಾಗಿ ಕಾದಿದ್ದ ಪೇಜಾವರ ಆ ಡಿಡಿಗೆ ಮಂತ್ರ ಹಾಕಿ ಪೂಜೆ ಮಾಡಿ ತಮ್ಮ ಶಿಷ್ಯಂದಿರನ್ನು ಷೇರು ವ್ಯವಹಾರಕ್ಕೆ ಬೀಳ್ಕೊಡಲು ಕಾದಿದ್ದರೆ, ಡಿಡಿ ಬರೋದು ಇರಲಿ, ಗಿರೀಶನೇ ನಾಪತ್ತೆಯಾಗಿದ್ದಾನೆ.

ಇದಕ್ಕೆಲ್ಲಾ ಶ್ರೀನಿಧಿ ಮತ್ತವನ ಭಾವ ವೆಂಕಟೇಶರೇ ಹೊಣೆ ಎಂದು ತಾವೇ ನಿರ್ಧರಿಸಿಕೊಂಡ ಪೇಜಾವರ ಅದೇ ದಿನ ರಾತ್ರಿ ಅವರಿಬ್ಬರನ್ನು ಮಠಕ್ಕೆ ಕರೆಸಿ ಹಣಕ್ಕಾಗಿ ಒತ್ತಾಯಿಸಿ ಮಾರಣಾಂತಿಕ ಹಲ್ಲೆ ಮಾಡಿಸಿಬಿಟ್ಟರೆಂಬುದೇ ಈಗವರ ಮೇಲಿರುವ ಕ್ರಿಮಿನಲ್ ಆರೋಪ. ಇದರ ಸತ್ಯಾಸತ್ಯತೆಗಳೇನಿದ್ದರೂ ಪೊಲೀಸ್ ತನಿಖೆ ಹಾಗೂ ಕೋರ್ಟ್ ವಿಚಾರಣೆಯಲ್ಲಿ ಹೊರಬರುತ್ತವೆ.

ಆದರೆ ಭಕ್ತರು ಕೊಟ್ಟಿದ್ದ ಕಾಣಿಕೆ ದುಡ್ಡನ್ನು ಮತ್ಯಾರದ್ದೋ ಬ್ಯುಸಿನೆಸ್‌ಗೆ ಕೊಡಲು ಈ ಪೇಜಾವರ ಸ್ವಾಮಿಗೆ ಯಾವ ಹಕ್ಕಿದೆ? ಸರ್ವಸಂಗ ಪರಿತ್ಯಾಗಿಯಾಗಿರಬೇಕಿದ್ದ ಪೇಜಾವರರಿಗೇಕೆ ಷೇರ್ ವ್ಯವಹಾರ? ಇಷ್ಟಕ್ಕೂ ಪೇಜಾವರರ ದುಡ್ಡು ಎಗರಿಸಿಕೊಂಡು ಪರಾರಿಯಾಗಿದ್ದಾನೆ ಎನ್ನಲಾಗುತ್ತಿರುವ ಗಿರೀಶನ ಜಾತಕ ಪೇಜಾವರರಿಗೆ ಗೊತ್ತಿದ್ದೂ ಅವನನ್ನು ಹೇಗೆ ನಂಬಿದರೂಂತ!

ಕ್ರಿಮಿನಲ್ ಗಿರೀಶ್

ಹನುಮಂತನಗರದ ಮರಡಿ ಸುಬ್ಬಯ್ಯ ಛತ್ರದ ಹಿಂದಿನ ರಸ್ತೆಯಲ್ಲಿರುವ ಗಿರೀಶ ಸಾಧಾರಣ ಮಧ್ಯಮ ವರ್ಗದವನು. ತಂದೆ ನಿವೃತ್ತ ಸರ್ಕಾರಿ ನೌಕರ, ವಾಸ ಬಾಡಿಗೆ ಮನೆಯಲ್ಲಿ. ಹೀಗಿದ್ದಾಗಲೂ ಗಿರೀಶ್ ಲಕ್ಷಾಂತರ ರೂಪಾಯಿ ಲೇವಾದೇವಿ ನಡೆಸುತ್ತಿದ್ದಾನೆ. ಕೆಲವರ ಪ್ರಕಾರ ಪೇಜಾವರರೇ ಮಠದ ದುಡ್ಡನ್ನು ಗಿರೀಶನ ಮೂಲಕ ಲೇವಾದೇವಿಗೆ ಬಿಡುತ್ತಿದ್ದಾರೆ ಎಂಬುದಾಗಿದೆ. ಪರಮ ವೈರಾಗ್ಯಮೂರ್ತಿ ಪೇಜಾವರ ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆಂದರೆ ನಂಬಲಾದೀತೆ? ಅದೇನೆ ಇರಲಿ, ಈ ಗಿರೀಶ ಅನೇಕ ವರ್ಷಗಳಿಂದಲೂ ವಿದ್ಯಾಪೀಠದಲ್ಲಿರುವ ಪೇಜಾವರರ ಸಂಸ್ಕೃತ ಶಾಲೆಯ-ಮಠದೊಳಗೆ ಓಡಾಡಿಕೊಂಡಿದ್ದವನೆ. ಅರ್ಜೆಂಟಾಗಿ ಹಣ ಸಂಪಾದಿಸುವ ಯಾವ ಛಾನ್ಸ್ ಸಿಕ್ಕರೂ ಅದರ ಬೆನ್ನತ್ತಿ ಹೊರಡುತ್ತಿದ್ದ ಗಿರೀಶ್ ಈ ಹಿಂದೆ ಪೇಜಾವರರನ್ನು ನಂಬಿಸಿ ವಿನಿವಿಂಕ್ ಶಾಸ್ತ್ರಿಗೆ 30 ಲಕ್ಷ ಕೊಡಿಸಿದ್ದನಂತೆ. ಕೊಟ್ಟ ಮೂರೇ ತಿಂಗಳಲ್ಲಿ ದುಡ್ಡು ಡಬಲ್ ಆಗುತ್ತೇಂತಾ ನಂಬಿಸಿ....!

ಆಮೇಲೆ ಶಾಸ್ತ್ರಿ ನಂಬಿದವರಿಗೆಲ್ಲಾ ಹೇಗೆ ನಾಮ ಹಾಕಿದ ಎಂಬುದು ನಿಮಗೂ ಗೊತ್ತಿರಬೇಕು. ಕೊನೆಗೆ ಪೇಜಾವರರು ಶಾಸ್ತ್ರಿಯನ್ನು ಹಿಡಿದೆಳೆದು ತರಿಸಿ ತಮ್ಮ ಹಣ ವಸೂಲ್ಮಾಡಿಕೊಂಡರೆಂದೂ ಪುಕಾರಗಳಿವೆ.



ಇಷ್ಟು ಸಾಲದೆಂಬಂತೆ ಈ ಗಿರೀಶ್ ಈಗ ಇಸ್ರೋ ಲೇಔಟನಲ್ಲಿರುವ ಗಂಗಾಧರ ಎಂಬ ಇನ್ನೊಬ್ಬ ಚೀಟರ್ ಜೊತೆ ಸೇರಿ ಮನಿ ಚೈನ್ ಸ್ಕೀಂ ನಡೆಸುತ್ತಿದ್ದಾನೆ. ಇವತ್ತು ಎರಡೂವರೆ ಸಾವಿರ ಕೊಟ್ಟರೆ ಇನ್ನಾರು ತಿಂಗಳಿಗೆ ಏಳೂವರೆ ಸಾವಿರ ಕೊಡುತ್ತೇನೆಂಬ ಮನಿ ಡಬ್ಲಿಂಗ್ ಜಾಲವಿದು. ಈ ದಂಧೆಯಲ್ಲಿ ಗಿರೀಶ್-ಗಂಗಾಧರ್ ಇಬ್ಬರೂ ಸಾವಿರಾರು ಜನಕ್ಕೆ ವಂಚಿಸಿದ್ದಾರೆ. ಜೊತೆಗೆ ICICI ಬ್ಯಾಂಕ್ ಕ್ರೆಡಿಟ್ ಕಾರ್ಡ್ ಕೊಡಿಸುವ ಆಶ್ವಾಸನೆ ಕೊಟ್ಟು ನೂರಾರು ಜನರಿಂದ ಹಣ ವಸೂಲಿ ಮಾಡಿ ಕೈಎತ್ತಿದ್ದಾರೆ.

ಪೇಜಾವರರಿಗೆ ತಮ್ಮ ನೆಚ್ಚಿನ ಶಿಷ್ಯ ಗಿರೀಶನ ಈ ಪ್ರತಿಭೆಗಳೆಲ್ಲಾ ಗೊತ್ತಿದ್ದೂ ಸುಮ್ಮನಿದ್ದರೇಕೆ? ಪೇಜಾವರ ಶ್ರೀನಿಧಿಗೆ ಕೊಡಲು ಹೊರಟಿದ್ದ 12 ಲಕ್ಷ ರೂ.ಗಳನ್ನು ಗಿರೀಶನೇ ಕದ್ದಿರಲಿ ಅಥವಾ ಶ್ರೀನಿಧಿಯೇ ವಂಚಿಸಿರಲಿ ಅದರ ಬಗ್ಗೆ ಪೊಲೀಸರಿಗೆ ದೂರು ನೀಡುವ ಬದಲು ಪೇಜಾವರರು ತಾವೇ ಶಿಕ್ಷಿಸಲು ಹೊರಟಿದ್ದೇಕೆ?

ಈತ ಧರ್ಮಗುರುವಾಗಿದ್ದರೆ ಅದು ಉಡುಪಿ ಮಠಕ್ಕೆ ಮತ್ತು ಮಾಧ್ವ ಬ್ರಾಹ್ಮಣರಿಗೆ ಮಾತ್ರವೇ ವಿನಃ ಇಡೀ ದೇಶಕ್ಕೆ ಧರ್ಮಗುರುವಲ್ಲ, ನಮ್ಮ ಸಂವಿಧಾನ, ಕಾಯ್ದೆ ಕಾನೂನುಗಳು ಈತನ ಅಡಿಯಾಳೂ ಅಲ್ಲ.

ಈ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರೂ ಈಗ ನಿಷ್ಪಕ್ಷಪಾತವಾಗಿ ವರ್ತಿಸದಿದ್ದಲ್ಲಿ ನಾಗರಿಕರಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ.

ಈ ದೇಶದ ಕಾನೂನಿನ ಮುಂದೆ ಸಾಮಾನ್ಯ ಪ್ರಜೆ-ಪೇಜಾವರ ಇಬ್ಬರೂ ಒಂದೇ ಎಂಬುದನ್ನು ಸಾಬೀತು ಪಡಿಸಬೇಕಿದೆ.

ಯಡಿಯೂರಪ್ಪ ಬಾಯಿ ಮುಚ್ಚಿಕೊಂಡಿರಲಿ


ಸೆಂಟ್ರಲ್ ವಿಭಾಗದ ಎಸಿಪಿ ನಾಯಕ್ ಪೇಜಾವರ ಕೇಸಿನ ತನಿಖೆ ಶುರು ಮಾಡುತ್ತಿದ್ದಂತೆ ಉಪಮುಖ್ಯಮಂತ್ರಿ ಯಡಿಯೂರಪ್ಪನಿಗೆ ತೋಣಚಿ ಹೊಕ್ಕಂತಾಗಿರಬೇಕು....

"ಇದರಲ್ಲಿ ಪೇಜಾವರರದು ಏನೂ ತಪ್ಪಿಲ್ಲ, ಅವರ ಮೇಲೆ ಕಂಪ್ಲೇಂಟ್ ಕೊಟ್ಟಿರುವವರೇ ಅಪರಾಧಿಗಳು" ಎಂದು ಚೀರಿಕೊಂಡಿದ್ದಾರೆ.

ಹೀಗೆ ತಲೆಬುಡ ಇರದೆ ಬಡಬಡಿಸುವ ಯಡ್ಡಿಗೆ ಈ ದೇಶದ ಕಾಯ್ದೆ ಕಾನೂನು ನ್ಯಾಯಾಂಗಗಳ ಕಾರ್ಯವೈಖರಿ ಗೊತ್ತಿಲ್ಲವೆ? ಪೊಲೀಸ್ ತನಿಖೆ ನಡೆಯುತ್ತಿರುವಾಗ, ಕೋರ್ಟ್ ವಿಚಾರಣೆ ಇನ್ನೂ ಪೂರ್ಣಗೊಂಡಿಲ್ಲದಿರುವಾಗಲೇ ಉಪಮುಖ್ಯಮಂತ್ರಿಯೇ ಹೀಗೆ ಆರೋಪಿ ಪೇಜಾವರ ಪರ ಹೇಳಿಕೆ ಕೊಟ್ಟರೆ ಅದು ತನಿಖೆಯ ಮೇಲೆ ಪರಿಣಾಮ ಬೀರುತ್ತದೆ. ಅಷ್ಟೇ ಅಲ್ಲ, ತನಿಖೆ ಹೇಗಿರಬೇಕೆಂದು ಪೊಲೀಸರಿಗೆ ಒತ್ತಡ ಹಾಕಿದಂತೆಯೂ ಹೌದು.

ಯಡ್ಡಿಯ ಈ ತಲೆಹರಟೆ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ವೆಂಕಟೇಶ್ ಪರ ವಕೀಲ ಸಿ.ಎಸ್. ದ್ವಾರಕಾನಾಥ್ ಈಗ ನ್ಯಾಯಾಂಗ ನಿಂದನೆ ಕೇಸ್ ಹಾಕಲು ರೆಡಿಯಾಗಿದ್ದಾರೆ.

ಇಷ್ಟಕ್ಕೂ ಪೇಜಾವರ ಪರ ಹೇಳಿಕೆ ನೀಡಿರುವ ಯಡ್ಡಿಗೆ ಪೇಜಾವರ ಬಗ್ಗೆ ಎಷ್ಟು ಗೊತ್ತಿದೆ? ಈ ಪೇಜಾವರ ಸ್ವಾಮಿ ಅವತಾರ ಪುರುಷನೇನಲ್ಲ, ಆಸ್ತಿ, ದುಡ್ಡು, ಒಡವೆಗಳ ಜಗಳ, ಕೋರ್ಟ್ ಕೇಸ್‌ಗಳು ಪೇಜಾವರರಿಗೆ ಹೊಸದೇನೂ ಅಲ್ಲ.



1992 ರಲ್ಲಿ ಅನಾಥ ಬ್ರಾಹ್ಮಣ ಸ್ತ್ರೀ ಲಕ್ಷ್ಮಮ್ಮ ಎಂಬುವವರ ಒಡವೆಗಳನ್ನು ಲಪಟಾಯಿಸಿದ ಆರೋಪದ ಮೇಲೆ ಪೇಜಾವರ ವಿರುದ್ಧ ಒಂದು ಕೇಸ್ ದಾಖಲಾಗಿತ್ತು, (ಓ.ಎಸ್. 6050/92)

[illegible] ಲಕ್ಷ್ಮಮ್ಮ ಎಂಬುವರಿಗೆ 10 ನೇ ಕಾಸ್‌ನ 319/1 [illegible] ಅಪಾರ ನಗದು ಹಾಗೂ ಲಕ್ಷಾಂತರ ಬೆಲೆಯ ಒಡವೆಗಳಿದ್ದವು. [illegible] ಹಾಗೂ ಪೇಜಾವರ ಸದಸ್ಯರಾಗಿದ್ದ ಟ್ರಸ್ಟ್ ಒಂದನ್ನು ಲಕ್ಷ್ಮಮ್ಮ ರಚಿಸಿದ್ದರು. ಮಕ್ಕಳಿರದ ಲಕ್ಷ್ಮಮ್ಮ 25.1.92 ರಲ್ಲಿ ಅನಾರೋಗ್ಯದಿಂದ ಸಾಯುವಾಗ ತಮ್ಮ ಎಲ್ಲಾ ಆಸ್ತಿಗೂ ಸೋದರ ವೆಂಕಟೇಶರ ಮಗ ಲಾಯರ್ ಬದರೀನಾಥ್ ಹಕ್ಕುದಾರರೆಂದು ವಿಲ್ ಮಾಡಿಸಿದ್ದರು. ಲಕ್ಷ್ಮಮ್ಮರ ಸಾವಿನ ನಂತರ ಆಕೆಯ ಒಡವೆಗಳೆಲ್ಲಿ ಎಂದು ಹೋಗಿ ನೋಡಿದರೆ ಅವೆಲ್ಲಾ ಲಾಕರ್‌ನಿಂದ ಆಗಲೇ ಮಾಯವಾಗಿಬಿಟ್ಟಿದ್ದವು.

ಟ್ರಸ್ಟ್ ಸದಸ್ಯ ಪೇಜಾವರ ಹಾಗೂ ಅಖಿಲ ಭಾರತ ಮಾಧ್ವ ಮಹಾಮಂಡಳಿಯ ಜಯತೀರ್ಥ ಯಾರಿಗೂ ಹೇಳದೆ ಲಕ್ಷ್ಮಮ್ಮರ ಒಡವೆಗಳನ್ನು ಎತ್ತಿಕೊಂಡು ಹೋಗಿದ್ದರು. ಕೊನೆಗೆ ಇದು ಕೇಸಾಯಿತು. ತಾವು ಸೋಲುವುದು ಖಚಿತ ಎಂದು ಪೇಜಾವರಗೆ ಗೊತ್ತಾಗಿ ತಪ್ಪೊಪ್ಪಿಕೊಂಡು ಕೋರ್ಟಿನ ಹೊರಗೆ ವಿವಾದ ಬಗೆಹರಿಸಿಕೊಂಡು ಒಡವೆಗಳನ್ನು ವಾಪಸ್ ಕೊಟ್ಟಿದ್ದರು.

ವಿದ್ಯಾಪೀಠ ಸರ್ಕಲ್ಲಿನಲ್ಲಿರುವ ಪೇಜಾವರರ ಸಂಸ್ಕೃತ ವಿದ್ಯಾಪೀಠದ್ದು ಇನ್ನೊಂದು ಅಸಹ್ಯ ಚರಿತ್ರೆಯಿದೆ.

ಸರ್ಕಾರದಿಂದ ಸಂಪೂರ್ಣ ಅನುದಾನ ಪಡೆಯುತ್ತಿರುವ ಈ ಶಾಲೆಯಲ್ಲಿರುವ ಎಲ್ಲಾ 20 ಮಂದಿ ಸಿಬ್ಬಂದಿಯೂ ಮಾಧ್ವ ಬ್ರಾಹ್ಮಣರೇ. ರೋಸ್ಟರ್ ಸಿಸ್ಟಂನ ಮಾತೇ ಇಲ್ಲಿಲ್ಲ, ಜೊತೆಗೆ ಇಲ್ಲಿ ಮಾಧ್ವ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ ನೀಡಲಾಗುತ್ತಿದೆ. ಪೇಜಾವರರ ವಿರುದ್ಧ ಇನ್ನೊಂದು ಕ್ರಿಮಿನಲ್ ಕೇಸ್ ಹಾಕಲು ಇಷ್ಟು ಸಾಕು.

ದಿನಬೆಳಗಾದರೆ ಹಿಂದೂ ಸಮಾಜ, ಹಿಂದೂ ಏಕತೆ ಎಂದು ಬೊಗಳೆ ಮಾತಾಡುವ ಪೇಜಾವರ ತನ್ನ ಮಠದಲ್ಲಿ, ಸಂಸ್ಕೃತ ಶಾಲೆಯೊಳಕ್ಕೆ ಬ್ರಾಹ್ಮಣರನ್ನು ಬಿಟ್ಟು ಲಿಂಗಾಯತರು, ಒಕ್ಕಲಿಗರು, ದಲಿತರು, ಕುರುಬರು, ಗೊಲ್ಲರನ್ನೇಕೆ ಸೇರಿಸಿಕೊಳ್ಳುತ್ತಿಲ್ಲ?

ಇವರೆಲ್ಲಾ ಬೇಡ ಎನ್ನುವ ಅಷ್ಟು ಮಡಿವಂತನಾದವನು ಸರ್ಕಾರಿ ಅನುದಾನ ಪಡೆಯುವುದೇಕೆ?

ಟಿವಿ ಕ್ರೈಂ ಪ್ರೋಗ್ರಾಂನಲ್ಲಿ ಪೇಜಾವರ ಬರಲಿಲ್ಲ

ಕನ್ನಡ ಟಿವಿ ಚಾನಲ್‌ಗಳಲ್ಲಿ ಪ್ರತಿದಿನ ಪ್ರಸಾರವಾಗುವ ಕ್ರೈಂ ಪ್ರೋಗ್ರಾಂಗಳ ಭರಾಟೆ ನೀವೂ ನೋಡಿರುತ್ತೀರಿ. ಚೀಟಿಂಗ್, ಮರ್ಡರ್, ಸೂಸೈಡ್, ಮಾಫಿಯಾ ಚಟುವಟಿಕೆಗಳೇ ಅವುಗಳ ದಿನನಿತ್ಯದ ಆಹಾರ.

ಇಂಥ ಘಟನೆಗಳು ನಡೆದಾಗ ಅವು ಕರ್ನಾಟಕದ ಯಾವುದೇ ಮೂಲೆಯಲ್ಲಿದ್ದರೂ ಬಿಡದೆ ಸಂದಿಗೊಂದಿ ನುಗ್ಗಿ ತಲಾಶ್ ಮಾಡಿ ಮೂವತ್ತು ನಿಮಿಷದ ಭರ್ತಿ ರಕ್ತರಂಜಿತ ಕ್ರೈಂ ಪ್ರೋಗ್ರಾಂ ಅನ್ನು ವೀಕ್ಷಕರಿಗೆ ಉಣಬಡಿಸುತ್ತವೆ. ಮಠಾಧಿಪತಿಗಳಿಂದ ಹಿಡಿದು ನಿನ್ನೆ ಮೊನ್ನೆ ಮಚ್ಚು ಹಿಡಿದವರನ್ನು ಕ್ಯಾಮರಾದೆದುರು ನಿಲ್ಲಿಸಿ ಜನ್ಮ ಜಾಲಾಡಿಸುತ್ತಾರೆ.

ಆದರೆ ಪೇಜಾವರ ಕೇಸ್‌ನಲ್ಲೇನಾಗಿದೆ ನೋಡಿ. ಭಕ್ತರು ತನಗೆ ಕೊಟ್ಟಿದ್ದ ಕಾಣಿಕೆಯನ್ನು ಪೇಜಾವರ ಷೇರ್ ಬ್ಯುಸಿನೆಸ್‌ನಲ್ಲಿ ಹಾಕಲು ಹೋಗಿ ಮಂಗಾ ಆಗಿದ್ದಾರೆ. ದುಡ್ಡೆತ್ತಿಕೊಂಡು ನಾಪತ್ತೆಯಾಗಿರುವ ಗಿರೀಶ್ ಡಬ್ಲಿಂಗ್ ದಂಧೆಯ ಪ್ರವೀಣ. ಇವನೂ ಪೇಜಾವರ ಶಿಷ್ಯನೇ! ಈಗ ವೆಂಕಟೇಶ್ ಪೇಜಾವರ ವಿರುದ್ಧ ಹಲ್ಲೆ, ಬೆದರಿಕೆಗಳ ಕಂಪ್ಲೇಂಟ್ ಕೊಟ್ಟು ಪೊಲೀಸ್ ತನಿಖೆ ನಡೆಯುತ್ತಿದೆ. [illegible]

ಪೇಜಾವರರ [illegible]

[illegible]


ರಿವೇಂಜ್ ಕಿಲ್ಲಿಂಗ್ಸ್ 12

ಡಾ. ಸೋಮನಾಥ್

ಹರಿಯ ಜೊತೆಗೆ ಗ್ಯಾಂಗ್ ಇಲ್ಲ ಮತ್ತು ಕುಡಿದು ಚಿತ್ತಾಗಿದ್ದಾನೆಂಬುದು ಖಾತರಿಯಾಗುತ್ತಿದ್ದಂತೆ ಹಂತಕ ಪಡೆ ನೇರವಾಗಿ ತಿಮ್ಮೇನಹಳ್ಳಿಗೆ ಬಂದಿದ್ದೇ ಚಲಪತಿಯ ವೈನ್‌ಸ್ಟೋರಿಗೆ ನುಗ್ಗಿತು. ಅಷ್ಟೇ- ಹರಿ on the spot ಹೆಣವಾಗಿದ್ದ. ಕ್ರೂರಿ ಹಂತಕ ನಾದನ್ ಬೀಸಿದ ಲಾಂಗ್ ಹರಿಯ ತಲೆಯನ್ನೇ ಸೀಳಿ ಹಾಕಿತ್ತು. ಅದು ತಿಮ್ಮೇನ ಹಳ್ಳಿಯ ಗ್ಯಾಂಗ್ ವಾರ್ ಇತಿಹಾಸದಲ್ಲಿ ನಡೆದ ಮೊದಲ ಕೊಲೆಯಾಗಿತ್ತು.

ಬೇಕಾರ್ ಹುಡುಗಿ ಜಗಳವೊಂದು ಮುಂದೆ ಎಂತೆಂಥಾ ಭೀಕರ ಹತ್ಯೆಗಳಿಗೆ ಕಾರಣವಾಗಬಹುದೆಂಬ ಲೆಕ್ಕಾಚಾರ ತಾನೇ ಯಾರಿಗಿತ್ತು?

ಪೋರ್ಕಿಗಳ ಭಾಷೆಯಲ್ಲಿ ಅದನ್ನು 'ಡವ್ವು' ಅಂತಾರೆ. ಅಂದರೆ ಯಾವ ಹುಡುಗನಿಗೆ ಯಾವ ಹುಡುಗಿಯ ಮೇಲೆ ಕಣ್ಣಿರುತ್ತೋ ಆಕೆಯೇ ಆತನ ಡವ್ವು! ಹೀಗೆ 'ಡವ್'



ತಿಮ್ಮೇನಹಳ್ಳಿ ತಮ್ಮಯ್ಯ

ಗೋವಿಂದನ ಬಗ್ಗೆ ಇನ್ನಷ್ಟು ಗರಮ್ಮಾದರು. ಅವನನ್ನು ಮುಗಿಸದೇ ತಿಮ್ಮೇನಹಳ್ಳಿಯಲ್ಲಿ ತಮಗೆ ಉಳಿಗಾಲವಿಲ್ಲ ಎಂಬ ಹಂತಕ ಮನಸ್ಥಿತಿಗೆ ಬದ್ದರು. ಕಾರ್ ಮಾಡಿಕೊಂಡು, ದುಡ್ಡು ಹಂಚಿಕೊಂಡು ರೌಂಡಿಂಗ್ ಶುರು ಹಚ್ಚಿಕೊಂಡರು.

ಹಾಗಂಥ ಒಂಟೊಂಟಿಯಾಗಿ ಗೋವಿಂದ ಸಿಗಬೇಕಲ್ಲ!

ಈ ಮಧ್ಯೆ ಗೋವಿಂದನ ಜೊತೆಗೇ ಇದ್ದ ರೆಡ್ಡಿ ಎಂಬ ಹುಡುಗನನ್ನು ಹರಿ ಬುಟ್ಟಿಗೆ ಹಾಕಿಕೊಂಡ. ಪ್ರತಿ ಶನಿವಾರ ಮಾಗಡಿ ರೋಡ್ ಟೋಲ್‌ಗೇಟಿನ ಹನುಮಂತನ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುವುದು, ಆನಂತರ ಅದರ ಹಿಂಭಾಗಕ್ಕಿದ್ದ ಮಯೂರ ಬಾರಿಗೆ ಹೋಗಿ ಬಿಯರ್ ಕುಡಿಯುವುದು ಗೋವಿಂದನ ಹಳೇ ಚಾಳಿ. ಅಂಥಾದೊಂದು ಶನಿವಾರ ಇದ್ದಕ್ಕಿದ್ದಂತೆ ಕುಮಾರ್ ಶನೇಶ್ವರ ದೇವಸ್ಥಾನದ ಎದುರು ಸಿಕ್ಕು 'ಬಾ ಬಿಯರ್ ಕುಡೀವಂತೆ' ಎಂದು ಗೋವಿಂದನನ್ನು ಕರೆದಾಗ ಅದು ತನಗಿಟ್ಟ ಸ್ಕೆಚ್ಚು ಎಂಬುದು ಗೋವಿಂದನ ಹುಂಬ ತಲೆಗೆ ತೋಚಲೇ ಇಲ್ಲ.

ಕುಮಾರ್ ಮತ್ತು ಗೋವಿಂದನ ಜೊತೆ ರೆಡ್ಡಿ ಎಂಬ ಹುಡುಗನೂ ಸೇರಿ ಮಯೂರ ಬಾರ್‌ನಲ್ಲಿ ರಾತ್ರಿ ಒಂಭತ್ತರ ತನಕ ಸಮಾ ಕುಡಿದಿದ್ದಾರೆ. ಒಂಭತ್ತೂವರೆಯ ಹೊತ್ತಿಗೆ ಇದ್ದಕ್ಕಿದ್ದಂತೆ ರೆಡ್ಡಿ ಬಾತ್‌ರೂಮಿಗೆ ಅಂತ ಎದ್ದು ಹೊರಬಂದಿದ್ದಾನೆ. ಅಲ್ಲಿಂದಲೇ ಹರಿಯ ಕಡೆಯ

ಗೋವಿಂದ ಹಿಡಿದು ಬಡಿಯುತ್ತಿದ್ದ. ಇತ್ತ ಮಾರೇನಹಳ್ಳಿಯಲ್ಲೂ ಜಗ್ಗ ಮತ್ತು ಶಿವರಾಜನ ಹುಡುಗರ ಮಧ್ಯೆ ಪದೇಪದೇ ರಸ್ತೆ ಕಾಳಗಗಳಾದವು. ತಿಮ್ಮೇನಹಳ್ಳಿ ಸ್ಲಂ ಪಕ್ಕದ ಗ್ರೌಂಡಿನಲ್ಲಿ ಹುಡುಗರ ಪ್ರತಿನಿತ್ಯ ಕ್ರಿಕೆಟ್ ಆಡುತ್ತಿದ್ದರೆ ಗ್ಯಾಂಗ್‌ವಾರ್ ಅಲ್ಲಿಗೂ ಕಾಲಿಟ್ಟಿತ್ತು. ಗೋವಿಂದನ ಬಲಗೈ ಬಂಟನಂತಿದ್ದ ಅರುಣ ಮತ್ತು ತಮ್ಮಯ್ಯನ ಶಿಷ್ಯ ಶ್ರೀಕಂಠ ಕ್ರಿಕೆಟ್ ಆಡುತ್ತಲೇ ಹೊಡೆದಾಡಿಕೊಂಡಿದ್ದರು. ಬಹುಶಃ ಒಬ್ಬ ಹರಿ ಬದುಕಿದ್ದರೆ ತಿಮ್ಮೇನಹಳ್ಳಿಯ ಇವತ್ತಿನ ಚಿತ್ರಣ ಏನಾಗಿರುತ್ತಿತ್ತೊ. ಕನಿಷ್ಠ ತಮ್ಮಯ್ಯನಾದರೂ ಬದುಕಿರುತ್ತಿದ್ದನೇನೊ!

ಆದರೆ ಹುಂಬ ಹರಿ ದುಡುಕಿಗೆ ಬಿದ್ದು ಆ ಕಾಲಕ್ಕೆ ಕುಖ್ಯಾತ ಪಂಟರ್ ಎನ್ನಿಸಿಕೊಂಡಿದ್ದ ರೌಡಿ ಬಲರಾಮನ ಮೇಲೆ ಜಿದ್ದಿಗೆ ಬಿದ್ದ. ಅದೊಂದು ವಿನಾಕಾರಣದ ಲ್ಯಾಂಡ್ ಡಿಸ್‌ಪ್ಯೂಟ್. ಅತ್ತಿಗುಪ್ಪೆಯ ಹಾಲುಸೀನ ಎಂಬಾತನ ಜಮೀನಿಗೆ ರೌಡಿ ಬಲರಾಮ ಕೈ ಹಾಕಿದ್ದ. ಆ ಕಾಲಕ್ಕೆ ಬಲರಾಮನ ಬಲಗೈ ಬಂಟನಂತಿದ್ದವನು ಮುಲಾಮ. ಹಾಲು ಸೀನನ ಪರವಾಗಿ ತಿಮ್ಮೇನಹಳ್ಳಿ ತಮ್ಮಯ್ಯನೇ ಕೈ ಹಾಕಿದ್ದ ತಮ್ಮಯ್ಯನ ಪರವಾಗಿ ಫೀಲ್ಡಿಗಿಳಿದಿದ್ದ ಹರಿಗೂ


ಪರಾಕ್ರಮಿಯ... ಕೋಲೊಂದ... ಕೈಗೆತ್ತಿಕೊಂಡ... ನೆಲಕ್ಕೆ ಗೆರೆಯೊಂದ... ಗೀಚಿ 'ನನ್ನ... ಇವತ್ತೇನಾದ್ರು... ಗೆರೆ ದಾಟಿ ಈಚೆಗೆ ಕಾಲ... ಅಂದ್ರೆ ನಿಮ್ಮ... ಪೀಸ್ ಮಾಡಿ... ಕತ್ತರಿಸಿ ಹಾಕ್ತೀ... ಎಂದು ಹೂಂಕರಿಸಿಬಿಟ್ಟ...

ಬಹುಶಃ ತಾನು ಕೊಟ್ಟ ಒದೆಗೆ ಮುಲಾಮನ ಗ್ಯಾಂಗ್ ತಾನೇ ಹಾಕಿದ ಗೆರೆ ದಾಟೋಲ್ಲ ಎಂಬ... ಹರಿಯ ಬಾಲಿಶ ಲೆಕ್ಕಾಚಾರವಾಗಿತ್ತೇನೊ!

ಹರಿ ಎಂಥಾ ಅವಿವೇಕಿಯೆಂದರೆ, ಹಾಗೇ ಚ... ನುಗ್ಗಿ ಮುಲಾಮ ಮತ್ತು ದಡಿಯಾ ಹರೀಶನನ್ನು ಹಿ... ಬಡಿದವನು ಸೀದಾ ತಿಮ್ಮೇನಹಳ್ಳಿಗೆ ಬಂದಿದ್ದಾನೆ. ಜೊ... ಮಚ್ಚ ಮತ್ತು ಅತ್ತಿಗುಪ್ಪೆ ಸ್ವಾಮಿಯನ್ನೂ ಕಳಿಸಿಕೊ... ಜೊತೆಗೊಬ್ಬ ಹುಡುಗನನ್ನು ಕರಕೊಂಡಿದ್ದೇ ತಮ್ಮ... ಮನೆ ಎದುರಿಗಿದ್ದ ಚಲಪತಿ ವೈನ್‌ಸ್ಟೋರ್ ... ಕುಡಿಯುತ್ತಾ ಕೂತಿದ್ದಾನೆ...

ಇತ್ತ ಒದೆ ತಿಂದ ಮುಲಾಮ ಬುಸುಗುಡು... ವಿಜಯನಗರದ ಗುಂಡಾ ಮತ್ತು ಪಕ್ಕಾ ಫೈ...

ಚಲಪತಿ ವೈನ್ಸ್‌ನಲ್ಲಿ ಮೊದಲ ಹೆಣ ಬಿತ್ತು



ತಿಮ್ಮೇನಹಳ್ಳಿಯ ಗ್ಯಾಂಗ್‌ವಾರ್‌ನಲ್ಲಿ ಮೊದಲ ಹೆಣ ಬಿದ್ದ ಚಲಪತಿ ವೈನ್ಸ್

ಹೊಡೆಯೋದಕ್ಕೆಂದು ನ್ಯೂ ಪಬ್ಲಿಕ್ ಸ್ಕೂಲ್ ಗ್ರೌಂಡಿಗೆ ಬಂದಿದ್ದ ಜಗ್ಗನನ್ನು ತಿಮ್ಮೇನಹಳ್ಳಿಯ ಗೋವಿಂದನ ಗ್ಯಾಂಗ್ ಅಟಕಾಯಿಸಿ ಕೊಂದಿದ್ದಕ್ಕೆ ಇನ್ನೂ ಒಂದು ಕಾರಣವಿತ್ತು. ಅದು ಮಾರೇನಹಳ್ಳಿಯ ಕೇಬಲ್ ವಾರ್. 1993 ರ ಸುಮಾರಿಗೆ ಮಾರೇನಹಳ್ಳಿಯಲ್ಲಿ ಶಿವರಾಜ್ ಎಂಬಾತ ಕೇಬಲ್ ಆರಂಭಿಸಿದರೆ ಮತ್ತೊಂದೆಡೆಯಿಂದ ಜಗ್ಗನ ಅಣ್ಣಂದಿರ ಕೇಬಲ್ ದಂಧೆ ಕೂಡ ಶುರುವಾಗಿತ್ತು. ಕೇಬಲ್ ವೈರ್ ಎಳೆಯುವ ಮತ್ತು ಗಲ್ಲಿಗಳನ್ನು ಆಕ್ರಮಿಸಿ ಕೊಳ್ಳುವ ವಿಷಯದಲ್ಲಿ ಇಬ್ಬರಿಗೂ ಹೊಡೆದಾಟವಾಗಿತ್ತು.

ಈ ಪೈಕಿ ಶಿವರಾಜ್‌ಗೆ ಗೋವಿಂದನ ದೋಸ್ತಿಯಾದರೆ ಜಗ್ಗ ತಮ್ಮಯ್ಯನ ಚಡ್ಡಿದೋಸ್ತು. ಯಾವತ್ತು ಜಗ್ಗನ ಮೇಲೆ ಗೋವಿಂದನನ್ನು ಶಿವರಾಜ್ ಛೂ ಬಿಟ್ಟನೋ ಅಷ್ಟೇ ಸಹಜವಾಗಿ ತಮ್ಮಯ್ಯ ಜಗ್ಗನ ಬೆನ್ನಿಗೆ ನಿಂತುಬಿಟ್ಟ. ಇವರೆಲ್ಲರಿಗಿಂತಲೂ ಇನ್ನೊಂದು ಹೆಜ್ಜೆ ಮುಂದಿಟ್ಟವನು ಹರಿ. ತಿಮ್ಮೇನಹಳ್ಳಿ ಸ್ಲಮ್ಮಿನ ಬೋವಿ ಹುಡುಗನಾಗಿದ್ದ ಹರಿ ಹುಟ್ಟಾ ಹುಂಬ. ಪಕ್ಕಾ ತಮ್ಮಯ್ಯನ ಬಂಟ. ಜೊತೆಗೆ ಜಗ್ಗನಿಗೂ ಆತ್ಮೀಯ. ಜಗ್ಗನ ಮೇಲೆ ಕೈ ಮಾಡಿದ್ದಕ್ಕೆ, ಗೋವಿಂದನನ್ನು ತಿಂದು ಬಿಡ್ತೀನಿ ಎಂದೇ ಎಲ್ಲರ ಎದುರು ಹೂಂಕರಿಸಿದ್ದ ಆದೊಮ್ಮೆ ಗೋವಿಂದನನ್ನು ತಿಮ್ಮೇನಹಳ್ಳಿಯ ಅರಳಿಮರದ ಕಟ್ಟೆಯ ಮೇಲೇ ತದುಕಿಕೊಂಡ. ಇಬ್ಬರ ಮಧ್ಯೆ ಸಣ್ಣದೊಂದು ಹೊಡೆದಾಟವೇ ನಡೆಯಿತಾದರೂ ಊರಿನ ಹಿರಿಯ ಮುನಿಯಪ್ಪನವರ ಮಗ ಕುಮಾರ್ ಎಂಬಾತ ಧಾವಿಸಿಬಂದು ಜಗಳ ಬಿಡಿಸಿದ್ದ.

ಮಾಡಲು ಕೆಲಸವಿಲ್ಲ, ಓದು ಹತ್ತೊಲ್ಲ, ಪೋಲಿ ಅಲೆಯುವುದು ಬಿಟ್ಟರೆ ಮತ್ತೊಂದು ಗೊತ್ತಿಲ್ಲ, ಇಂಥಾ ಸ್ಥಿತಿಯಲ್ಲಿದ್ದ ತಿಮ್ಮೇನಹಳ್ಳಿ ಹುಡುಗರಲ್ಲೇ ಎರಡು ತಂಡಗಳಾದವು. ಅರಳಿಮರದ ಗಲಾಟೆಯ ನಂತರವಂತೂ ಹರಿ, ತಮ್ಮಯ್ಯ, ಕುಮಾರ್, ಕುಲ್ಲಾ ಅನಂತ, ಜಗ್ಗ, ಅತ್ತಿಗುಪ್ಪೆ ಸ್ವಾಮಿ, ಕೋಳಿ ರಾಜೇಶ ಮುಂತಾದವರೆಲ್ಲ

ಹುಡುಗನಿಗೆ ಸುದ್ದಿ ಮುಟ್ಟಿಸಿದ್ದಾನೆ. ಅದಾಗಿ ಐದೇ ನಿಮಿಷಕ್ಕೆ ಹರಿ, ಕೋಳಿ ರಾಜೇಶ ಮತ್ತು ಐದು ಮಂದಿಯಿದ್ದ ಹುಡುಗರ ಗ್ಯಾಂಗೊಂದು ಬಾರಿಗೆ ನುಗ್ಗಿದ್ದೇ ಕುಡಿಯುತ್ತಾ ಕುಳಿತಿದ್ದ ಗೋವಿಂದನ ತಲೆಗೆ ಮಚ್ಚು ಬೀಸಿದೆ. ಆಯುಸ್ಸಿನ್ನೂ ಗಟ್ಟಿಯಿತ್ತೋ ಏನೋ, ಬೀಸಿದ ಲಾಂಗಿಗೆ ತನ್ನ ಎಡಗೈ ಅಡ್ಡಕೊಟ್ಟದ್ದೇ ಗೋವಿಂದ ಕೂತಿದ್ದ ಟೇಬಲ್ಲನ್ನೇ ತಳ್ಳಿ ಮಯೂರ್ ಬಾರ್‌ನ ಟಾಯ್ಲೆಟ್‌ಗೆ ಓಡಿ ಬಾಗಿಲು ಹಾಕಿಕೊಂಡಿದ್ದಾನೆ. ಹಂತಕರ ಗ್ಯಾಂಗ್ ಟಾಯ್ಲೆಟ್ ಬಾಗಿಲಿಗೇ ಮಚ್ಚು ಬೀಸಿತಾದರೂ ಇನ್ನೂ ಸೆಣಸಿ ಫಲವಿಲ್ಲ ಎನ್ನಿಸಿ ವಾಪಸ್ಸಾಗಿದೆ. ಪಾಪಿ ಚಿರಾಯು ಎಂಬಂತೆ ಬಚಾವಾಗಿದ್ದ ಗೋವಿಂದ.


ಕೈ ಕತ್ತರಿಸಿ, ರಕ್ತ ಸುರಿಸುತ್ತಾ ಮನೆ ಬಳಿ ಬಂದುಬಿದ್ದ ಗೋವಿಂದನನ್ನು ಆತನ ಅಣ್ಣತಮ್ಮಂದಿರು ಹೊತ್ತೊಯ್ದು ಶರಾವತಿ ನರ್ಸಿಂಗ್ ಹೋಮಿಗೆ ದಾಖಲಿಸಿದ್ದರು. ನಡೆದ ದಾಳಿಗೂ ತನಗೂ ಏನೇನೂ ಸಂಬಂಧವಿಲ್ಲ ಎಂಬಂತೆ ಕುಮಾರ್ ಮತ್ತೆ ಗೋವಿಂದನ ಮುಂದೆ ನಿಂತು ತಲೆ ಕೆರೆದಿದ್ದ. ಒಂದು ವಾರಕ್ಕೇ ಆಸ್ಪತ್ರೆಯಿಂದ ಹೊರಬಿದ್ದ ಗೋವಿಂದ ಕ್ರಮೇಣ ಎಂಥಾ ಜಿದ್ದಿಗೆ ಬಿದ್ದನೆಂದರೆ; ತಮ್ಮಯ್ಯ ಎಲ್ಲೇ ಕಣ್ಣಿಗೆ ಬಿದ್ದರೂ ಅಟ್ಟಾಡಿಸುತ್ತಿದ್ದ. ತಮ್ಮಯ್ಯನ ಮನೆ ಎದುರಿಗೇ ಇದ್ದ ಚಲಪತಿಯ ವೈನ್‌ಸ್ಟೋರಿನಲ್ಲಿ ಕಂಠಮಟ್ಟ ಕುಡಿದು ನಡುರಸ್ತೆಯಲ್ಲಿ ನಿಂತು ತಮ್ಮಯ್ಯನ ತಾಯಿ ಜಯಮ್ಮನನ್ನು ಬಯ್ಯುತ್ತಿದ್ದ.

ಅದೇ ಹೊತ್ತಿಗೆ ತಮ್ಮಯ್ಯನ ಮನೆಯಲ್ಲಿ ಬಾಡಿಗೆಗಿದ್ದ ಶೆಟ್ಟಿಯೊಬ್ಬ ತಿಮ್ಮೇನಹಳ್ಳಿಯಲ್ಲಿ ಕೇಬಲ್ ಆರಂಭಿಸಿ ಅದಕ್ಕೆ ತಮ್ಮಯ್ಯನನ್ನೇ ಪಾರ್ಟನರ್ ಮಾಡಿಕೊಂಡದ್ದು ಗ್ಯಾಂಗ್‌ವಾರ್ ಬೆಂಕಿಗೆ ತುಪ್ಪ ಸುರಿದಂತಾಗಿತ್ತು. ತಮ್ಮಯ್ಯ ಎಲ್ಲೆಲ್ಲಿ ಕೇಬಲ್ ಎಳೆದಿದ್ದಾನೋ ಅದನ್ನೆಲ್ಲ ಶಿಷ್ಯ ಸೂರಿಯನ್ನುಬಿಟ್ಟು ಗೋವಿಂದ ಕತ್ತರಿಸಿ ಹಾಕಿಸಿದ. ತಮ್ಮಯ್ಯನ ಕಡೆಯ ಯಾರೇ ಹುಡುಗ ಕಣ್ಣಿಗೆ ಬಿದ್ದರೂ

ಮುಲಾಮನ ಶಿಷ್ಯ ದಡಿಯಾ ಹರೀಶನಿಗೂ ಜಮೀನಿನಲ್ಲೇ ಹೊಡೆದಾಟವಾಗಿತ್ತು. ಅದೇ ಹೊತ್ತಿಗೆ ತಮ್ಮಯ್ಯ ವಿಜಯನಗರದ ಹಳೇ ಪಂಟರ್ ಎಸ್.ಆರ್. ಟ್ರಾವಲ್ಸ್ ಆನಂದನ ಅಡ್ಡೆಗೆ ಹೋದರೆ ಅದೇ ಆನಂದನನ್ನು ನೋಡಲೆಂದು ರೌಡಿ ಬಲರಾಮನೂ ಬಂದ. ಜೊತೆಗೆ ಮುಲಾಮನೂ ಇದ್ದ. ತಮ್ಮಯ್ಯನನ್ನು ನೋಡಿದ್ದೇ ಬಲರಾಮ 'ಆವಾಜ್' ಹಾಕಿಬಿಟ್ಟ.

ಹಾಗಂಥ ತಮ್ಮಯ್ಯ ತೆಪ್ಪಗಾಗಲಿಲ್ಲ. ತಿರುಗಿಬಿದ್ದು ಆತನೂ ರೋಪು ಹಾಕಿಬಿಟ್ಟ. ಅದೆಲ್ಲಿತ್ತೋ, ಬಲರಾಮ ರಿವಾಲ್ವರ್ ತೆಗೆದಿದ್ದೇ ತಮ್ಮಯ್ಯನ ತಲೆಗಿಟ್ಟು "ಹಾಲುಸೀನನ ಜಮೀನಿನ ವಿಷಯಕ್ಕೇನಾದ್ರೂ ಬಂದೆ ಅಂದ್ರೆ ಸುಟ್ಟು ಬಿಡ್ತೀನಿ" ಎಂದು ಹೂಂಕರಿಸಿಬಿಟ್ಟ.

ಗನ್ನು ನೋಡಿದ್ದೇ ತಮ್ಮಯ್ಯ ತೆಪ್ಪಗಾಗಿ ಜಾಗ ಖಾಲಿ ಮಾಡಿದನಾದರೂ ಅದನ್ನು ಅಲ್ಲಿಗೇ ಕೈಬಿಡಲಿಲ್ಲ. ಬಂದವನೇ ಹರಿಯನ್ನು ಕರೆದು ಬಲರಾಮನ ಬಂಟ ಮುಲಾಮನನ್ನು ಹಿಡಿದು ಬಿಸಿ ಮುಟ್ಟಿಸುವಂತೆ ಕಿವಿಕಚ್ಚಿದ. ಹುಂಬ ಹರಿಗೆ ಇಷ್ಟೇ ಸಾಕಾಗಿತ್ತು. ಕಂಡಕಂಡಲ್ಲಿ ಮುಲಾಮ ಸಿಕ್ಕರೆ ಕತ್ತರಿಸ್ತೀನಿ ಎಂದು ಪೋಜು ಕೊಟ್ಟುಕೊಂಡೇ ಇದ್ದ. ಅದು 1994 ರ ನವೆಂಬರ್ 18. ಮಾಗಡಿ ರೋಡಿನ ಎಚ್.ಎಸ್.ಕೆ. ಚೌಲ್ಟ್ರಿಯಲ್ಲಿ ಮುಲಾಮ ಯಾರದೋ ಮದುವೆಗೆ ಬಂದಿದ್ದಾನೆಂದು ಹರಿಗೆ ಸುದ್ದಿ ಬಂತು. ಮೊದಲೇ ಕುಡಿದಿದ್ದ. ಜೊತೆಗೆ ಕಾಮಾಕ್ಷಿಪಾಳ್ಯದ



ತಿಮ್ಮೇನಹಳ್ಳಿ ಗೋವಿಂದ ಮುಲಾಮ ಬಲರಾಮ ಮಚ್ಚ ಮು...

ಮಚ್ಚ ಮತ್ತು ಅತ್ತಿಗುಪ್ಪೆ ಸ್ವಾಮಿ ಇದ್ದರು. ಇನ್ನೂ ಮೂರ್‍ನಾಲ್ಕು ಮಂದಿ ಹುಡುಗರನ್ನು ಕರಕೊಂಡಿದ್ದೇ ಹರಿಯ ಗ್ಯಾಂಗ್ ಮೂರು ಆಟೋಗಳಲ್ಲಿ ಎಚ್.ಎಸ್.ಕೆ. ಚೌಲ್ಟ್ರಿಗೆ ಬಂದಿಳಿಯಿತು. ಮುಲಾಮ ಇಸ್ಪೀಟ್ ಆಡುತ್ತಾ ಕುಳಿತಿದ್ದ. ಜೊತೆಗೆ ದಡಿಯಾ ಹರೀಶನೂ ಇದ್ದ.

ಏಕಾಏಕಿ ಮೂರು ಆಟೋಗಳಿಂದ ಲಾಂಗ್ ಹಿಡಿದು ಇಳಿದ ಹರಿಯ ಗ್ಯಾಂಗನ್ನು ನೋಡಿದ್ದೇ ತಡ ಮುಲಾಮನಿಗೆ ಇದ್ದಕ್ಕಿದ್ದಂತೆ ಮೀಟರ್ ಆಫ್ ಆಗಿತ್ತು. ಹರಿ, ಮಚ್ಚ, ಅತ್ತಿಗುಪ್ಪೆ ಸ್ವಾಮಿ ಮೊದಲು ದಡಿಯಾ ಹರೀಶನನ್ನು ನೆಲಕ್ಕೆ ಹಾಕಿ ತುಳಿದರು. ತದನಂತರ ಮುಲಾಮನನ್ನು ಹಿಡಿದು ಬಡಿದರು. ಹರಿಯ ಹಾವಳಿಗೆ ಇಡೀ ಕಲ್ಯಾಣ ಮಂಟಪವೇ ಥರಗುಡುತ್ತಿದ್ದರೆ; ಹರಿ ಮಹಾನ್

ನಾದನ್‌ನನ್ನು ಕರೆಸಿಕೊಂಡಿದ್ದಾನೆ. ಅಷ್ಟೊತ್ತಿಗಾಗಲೇ ... ಚಲಪತಿ ವೈನ್‌ಸ್ಟೋರ್‌ನಲ್ಲಿ ಕುಡಿಯುತ್ತಾ ಕೂತಿದ್ದಾ... ಮಾಹಿತಿಯನ್ನೂ ಪಡೆದಿದ್ದಾನೆ. ಹರಿಯ ಜೊತೆಗೆ ಗ್ಯಾ... ಇಲ್ಲ ಮತ್ತು ಕುಡಿದು ಚಿತ್ತಾಗಿದ್ದಾನೆಂಬು... ಖಾತರಿಯಾಗುತ್ತಿದ್ದಂತೆ, ಮುಲಾಮ, ದಡಿಯಾ ಹ... ಗುಂಡಾ ಮತ್ತು ನಾದನ್ ನೇರವಾಗಿ ತಿಮ್ಮೇನಹ... ಬಂದಿದ್ದೇ ಚಲಪತಿಯ ವೈನ್‌ಸ್ಟೋರಿಗೆ ನುಗ್ಗಿದ್ದಾ...

ಅಷ್ಟೇ-

ಹರಿ on the spot ಹೆಣವಾಗಿದ್ದ. ಕ್ರೂರಿ ಹ... ನಾದನ್ ಬೀಸಿದ ಲಾಂಗ್ ಹರಿಯ ತಲೆಯನ್ನೇ ... ಹಾಕಿತ್ತು. ಅದು ತಿಮ್ಮೇನಹಳ್ಳಿಯ ಗ್ಯಾಂಗ್ ... ಇತಿಹಾಸದಲ್ಲಿ ನಡೆದ ಮೊದಲ ಕೊಲೆಯಾಗಿತ್ತು. ...

ಆವತ್ತು ಮಯೂರ್ ಬಾರ್‌ನಲ್ಲಿ ಗೋವಿಂದನ ... ಯತ್ನಿಸಿದ್ದ ಹರಿಯ ಜೊತೆ ತಮ್ಮಯ್ಯ ಮತ್ತು ... ಇರಲಿಲ್ಲವಾದರೂ ಹೇಗೆ ಗೋವಿಂದ ಇದಕ್ಕೆಲ್ಲ ಅವರಿ... ಕಾರಣವೆಂದು ಭಾವಿಸಿದ್ದನೋ ಹಾಗೆ ಹರಿಯ... ಮುಲಾಮನ ಗ್ಯಾಂಗ್ ಕೊಚ್ಚಿ ಹಾಕಿತ್ತಾದರೂ ಅ... ಹರಿ ಕುಡಿಯುತ್ತಿದ್ದ ಮಾಹಿತಿ ಕೊಟ್ಟದ್ದೂ ಅ... ಕರೆತಂದು ತೋರಿಸಿ ಕೊಟ್ಟದ್ದೂ ತಿಮ್ಮೇನ... ಗೋವಿಂದನೇ ಎಂದು ತಮ್ಮಯ್ಯನ ಗ್ಯಾಂಗ್ ಭಾವಿ...

ಅದಕ್ಕೆ ಕಾರಣನಾದವನು ಆಳ್ಕಾಟ ಪಾಪ!

ಹರಿಯನ್ನು ಗೋವಿಂದನೇ ಹೇಳಿಸಿ ಕೊಲ್ಲಿಸಿ... ಎಂದು ತಮ್ಮಯ್ಯನ ಕಿವಿ ಕಚ್ಚಿದ್ದೇ ಈತ. ... ವಿಜಯನಗರದ ಇನ್ಸ್‌ಪೆಕ್ಟರ್ ಆಗಿದ್ದುದು ಮೈಲಾ... ಹರಿಯ ಹತ್ಯೆಗೆ ಪ್ರತೀಕಾರವಾಗಿ ತಮ್ಮಯ್ಯ, ... ಶ್ರೀಕಂಠ, ಪರಮೇಶ ಇತ್ಯಾದಿ ನೂರಕ್ಕೂ ಹೆಚ್ಚು ... ಹುಡುಗರು ರಾತ್ರೋರಾತ್ರಿ ವಿದ್ಯುತ್ ತಂತಿಗಳನ್ನು ಕ... ಹಾಕಿ ಇಡೀ ತಿಮ್ಮೇನಹಳ್ಳಿಯನ್ನೇ ಚಿಂದಿಯೆಬ್ಬಿಸಿಬಿಟ...

ಬೆಂಗಳೂರು ಪಾತಕ ಜಗತ್ತಿನಲ್ಲಿ ಈ ಘ... ಸುಸಂಘಟಿತ ಇಡೀ ಏರಿಯಾವನ್ನೇ ಚಿಂದಿಯೆ... ಮತ್ತೊಂದು ಘಟನೆ ಆತನಕ ನಡೆದಿರಲೇ ಇಲ್ಲ.

(ಮುಂದಿನ ವಾ...

ಚಿತ್ರದುರ್ಗ: ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ

ಠೇವಣಿದಾರರಿಗೆ ಬೀಳಲಿದೆ ನಾಮ!

ಚಿತ್ರದುರ್ಗ ನಗರದಲ್ಲೇ ಅತ್ಯಂತ ಹಳೆಯದಾದ ...ಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿಯ ...ಳಿತ ಮಂಡಳಿಯ ದುರಾಡಳಿತದಿಂದಾಗಿ ಬರ್ಬಾದ್ ...ಂವ ಲಕ್ಷಣಗಳು ಕಂಡುಬರುತ್ತಿವೆ. ಈ ...ಸೈಟಿ ಸಹಕಾರಿ ಕಾಯ್ದೆಯನ್ವಯ ...ಂದಣಿಯಾಗಿದ್ದರೂ ಅದು ಪೂರ್ತಿ ...ಶ್ಯ ಸಮುದಾಯದ ಖಾಸಗಿ ಆಸ್ತಿಯಂತೆ ...ದುವರೆಗೂ ನಡೆದುಕೊಂಡು ಬಂದಿದೆ. ...ದಸ್ಯತ್ವ ನೀಡುವಲ್ಲಾಗಲೀ, ಉದ್ಯೋಗ ...ಮಕಾತಿಯಲ್ಲಾಗಲೀ, ಸಾಲ ನೀಡಿಕೆ-...ಟುಲಿಯಲ್ಲಾಗಲೀ ಸಹಕಾರಿ ಕಾಯ್ದೆ ...ನೂನುಗಳನ್ನು ಪಾಲಿಸದೇ ಆಡಳಿತ ...ಂಡಳಿಗೆ ಇಷ್ಟ ಬಂದ ರೀತಿಯಲ್ಲಿ ವ್ಯವಹರಿಸಿ ...ಂಡು ಬರಲಾಗಿದೆ. ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ...ಮುಕ್ತವಾಗಿರಬೇಕೆಂಬ ನಿಯಮವಿದೆಯಾದರೂ ಈ ...ಸೊಸೈಟಿಯ ಇತಿಹಾಸದಲ್ಲಿ ಅದು ಪಾಲನೆಯಾಗಿಲ್ಲ. ...ಲ್ಲಿ ಷೇರುದಾರರೆಲ್ಲರೂ ವೈಶ್ಯ ಸಮುದಾಯಕ್ಕೆ ಸೇರಿದವರೇ ...ದ್ದು ಠೇವಣಿ ಇಡುವುದು, ಸಾಲ ಪಡೆಯುವುದು ...ಸೇರಿದಂತೆ ಪ್ರತಿಯೊಂದು ವೈಶ್ಯ ಸಮುದಾಯಕ್ಕೆ ...ಸೀಸಲಾಗಿದೆ. ಈಗಿರುವ ಆಡಳಿತ ಮಂಡಳಿ ಅಸ್ತಿತ್ವಕ್ಕೆ ...ಂದು ಸರಿಸುಮಾರು ಹದಿನೈದು ವರ್ಷಗಳೇ ಕಳೆದಿವೆ. ...ತಿಬಾರಿಯ ಚುನಾವಣೆಯಲ್ಲೂ ಇದೇ ಆಡಳಿತ ಮಂಡಳಿ ...ನರಾಯ್ಕೆ ಆಗುತ್ತಿದೆ. ಇಲ್ಲಿ ಚುನಾವಣೆಗಳೂ ಮುಕ್ತವಾಗಿ ...ಡೆಯುತ್ತಿಲ್ಲ.

1929-2005

ಹಾಲಿ ಆಡಳಿತ ಮಂಡಳಿಯ ಅಧ್ಯಕ್ಷರಾದ ಪಿ.ಎಸ್. ...ನಾಗರಾಜ ಶೆಟ್ಟಿ, ಕಾರ್ಯದರ್ಶಿ ಎಂ. ಶ್ರೀಧರಮೂರ್ತಿ ...ಪಾಸಣೆಗೆ ಆಗಮಿಸುವ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ...ಏನೇನು ಮೋಡಿ ಮಾಡುತ್ತಾರೋ ಗೊತ್ತಿಲ್ಲ. ಆದರೆ ...ಮ್ಮ ಅಂದಾದುಂದಿ ಕಾರ್ಯನಿರ್ವಹಣೆಯ ಬಗ್ಗೆ ಮಾತ್ರ ...ಟಿಕ್ ಪಿಟಿಕ್ ಅನ್ನದಂತಹ ವ್ಯವಸ್ಥೆಯನ್ನಂತೂ ...ಮಾಡಿಕೊಂಡಿದ್ದಾರೆ. ಈ ಮಹಾಶಯರು ಅಧಿಕಾರಕ್ಕೆ ...ಬಂದ ನಂತರ ಸೊಸೈಟಿಯ ಆಡಳಿತಾತ್ಮಕ ವೆಚ್ಚಗಳು ...ಮಿತಿಮೀರಿ ಬೆಳೆಯುತ್ತಿವೆ. ಬ್ಯಾಂಕಿಂಗ್ ರೆಗ್ಯುಲೇಷನ್ ...ಆ್ಯಕ್ಟ್‌ಗೆ ವಿರುದ್ಧವಾಗಿ ಬ್ಯಾಂಕಿನ ಸದಸ್ಯೇತರರಿಂದಲೂ ...ಠೇವಣಿಗಳನ್ನು ಸಂಗ್ರಹಿಸಲಾಗುತ್ತಿದೆ. ರಿಸರ್ವ್ ಬ್ಯಾಂಕಿನ ...ಲೈಸನ್ಸ್ ಇಲ್ಲದಿದ್ದರೂ ಚೆಕ್ ಮುಖಾಂತರ ಡಿಪಾಸಿಟ್ ...ಖಾತೆಗಳಲ್ಲಿ ವ್ಯವಹರಿಸಲಾಗುತ್ತಿದೆ. ಸಹಕಾರಿ ನಿಯಮಾವಳಿ ...ಪಾಲಿಸದೇ ನಿಧಿಗಳನ್ನು ಸ್ಥಾಪಿಸಲಾಗಿದೆ. ಸೊಸೈಟಿಯ ...ಬೈಲಾ ಉಲ್ಲಂಘಿಸಿ ಜಾಮೀನುದಾರರಾಗಿ ಸುಸ್ತಿದಾರರಾ...ದವರಿಗೂ ಸಾಲ ಮಂಜೂರಾತಿ ಮಾಡಲಾಗಿದೆ.

...ಆರ್ಯ ವೈಶ್ಯ ಸಮಾಜದ ಕೆಲಮುಖಂಡರು ಈ ...ಆಡಳಿತ ಮಂಡಳಿಯ ಬೆನ್ನಿಗೆ ನಿಂತಿರುವುದು ಕೂಡಾ ...ಈ ಅದ್ವಾನದ ಬೆಳವಣಿಗೆಗೆ ಕಾರಣವಾಗಿದೆ. ಮತ್ತೆ ...ಹಲವರಿಗೆ ತೀವ್ರ ಅಸಮಾಧಾನಗಳಿದ್ದರೂ ಸಮುದಾಯದ ...ಹೆಸರಿನಲ್ಲಿರುವ ಸಂಸ್ಥೆ ಎಂಬ ಕಾರಣಕ್ಕೆ ತುಟಿ ಬಿಚ್ಚುತ್ತಿಲ್ಲ. ...ಹೀಗಾಗಿ ಅಲ್ಲಿನ ಹುಳುಕುಗಳೂ ಹೊರಬರುತ್ತಿಲ್ಲ. ...ಲೋಪದೋಷಗಳನ್ನೂ ಸರಿಪಡಿಸಲಾಗುತ್ತಿಲ್ಲ.

ಹೆಚ್ಚುವರಿ ಬಡ್ಡಿ ವಸೂಲಿ

ಸಹಕಾರಿ ಉಪನಿಯಮ 46 ರಂತೆ ...ಸೊಸೈಟಿಯು ಸಾಲಗಾರರ ಮೇಲೆ ಶೇ. 17 ...ಮೀರದಂತೆ ಬಡ್ಡಿಯನ್ನೂ, ಸುಸ್ತಿಯಾದ ...ಸಂದರ್ಭದಲ್ಲಿ ಸಾಧಾರಣ ಬಡ್ಡಿಯ ಮೇಲೆ ...ಶೇ. 3 ರಂತೆ ಸುಸ್ತಿ ಬಡ್ಡಿ ವಿಧಿಸಬೇಕೆಂಬ ...ನಿಬಂಧನೆಯಿದೆ. ಆದರೆ ಆಡಳಿತ ಮಂಡಳಿ ...ಸ್ವ ಬೈಲಾದಲ್ಲೇ ಆ ನಿಬಂಧನೆಯನ್ನು ...ಉಲ್ಲಂಘಿಸಿ ಕೆಲವರಿಗೆ 18 ಮತ್ತು 19, 20ರ ...ದರದಲ್ಲಿ ಬಡ್ಡಿ ವಿಧಿಸಿ ಜೊತೆಗೆ 3 ರಷ್ಟು ...ಸುಸ್ತಿ ಬಡ್ಡಿಯನ್ನೂ ವಿಧಿಸಿದೆ. ಈ ಬಡ್ಡಿ ದರಕ್ಕೆ ...ಸಂಬಂಧಿಸಿದಂತೆ ಕಾಲಕಾಲಕ್ಕೆ ಪರಿಷ್ಕರಣೆಯಾಗುವ ಸಹಕಾರಿ ...ನಿಯಮಗಳನ್ನು ಗಣನೆಗೇ ತೆಗೆದುಕೊಂಡಿಲ್ಲ. ಹೀಗೆ ಅನಗತ್ಯ ...ಬಡ್ಡಿದರವನ್ನು ವಿಧಿಸಿ ಸಾಲಗಾರರನ್ನು ವ್ಯವಸ್ಥಿತವಾಗಿ ...ಶೋಷಿಸಲಾಗುತ್ತಿದೆ. ಇದು ಬಡ್ಡಿ ಅರಾಜಕತೆಯಾದರೆ ...ಸಾಲ ನೀಡುವಲ್ಲೂ ಇಂಥದ್ದೇ ಬೇಜವಾಬ್ದಾರಿತನ ...ದರ್ಶಿಸಲಾಗಿದೆ.

...ಸಹಕಾರ ಇಲಾಖೆಯ ಲೆಕ್ಕ ಪರಿಶೋಧನಾ ...ವರದಿಯಲ್ಲಿ ಈ ಬಗ್ಗೆ ಸೂಚನೆ ನೀಡಿದ್ದರೂ ಇಂಥ ...ಲೋಪದೋಷ ಎಸಗಿರುವ ಆಡಳಿತ ಮಂಡಳಿಯ ...ಮೇಲೆ ಕಾನೂನುಕ್ರಮಕ್ಕೆ ಶಿಫಾರಸ್ಸು ಮಾಡಿಲ್ಲ. ಕನಿಷ್ಠ ...ಸಾಲಗಾರರಿಂದ ವಸೂಲಿ ಮಾಡಲಾದ ಹೆಚ್ಚುವರಿ ...ಬಡ್ಡಿಯನ್ನು ವಾಪಸು ಮಾಡಬೇಕೆಂಬುದನ್ನೂ ಹೇಳಿಲ್ಲ. ...ಸದಸ್ಯರು ಈ ಬಗ್ಗೆ ಕೋರಿದ್ದರೂ ಕೂಡ ಹೆಚ್ಚುವರಿ ...ವಾಪಸು ಪಡೆದಿದ್ದಾರೆ. ಕಳೆದ ಐದಾರು ವರ್ಷಗಳಿಂದ ಹೀಗೆ ಹೆಚ್ಚುವರಿ ಬಡ್ಡಿ ವಸೂಲಿ ಮಾಡಿ ಪ್ರಾಫಿಟ್ ತೋರಿಸಿರುವ ಆಡಳಿತ ಮಂಡಳಿ ಈ ಹಣವನ್ನು ರೀಫಂಡ್ ಮಾಡಿದರೆ ಅದು ಬ್ಯಾಲೆನ್ಸ್ ಶೀಟ್‌ನ ಮೇಲೆ ಪರಿಣಾಮ ಬೀರುತ್ತದೆ. ಸಹಕಾರ ಇಲಾಖೆಯ ಲೆಕ್ಕ ಪರಿಶೋಧಕರು ಮಾಡಿದ ಕೆಲಸವೇನು ಎಂಬ ಪ್ರಶ್ನೆ ಹೀಗೂ ಪೂರ್ಣಗೊಳ್ಳುತ್ತದೆ.

ನಿವೃತ್ತ ನೌಕರನ ನೇಮಕಾತಿ

ಸೊಸೈಟಿ ಮಾಡಿಕೊಳ್ಳಲಾಗುವ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ ಬ್ಯಾಕ್‌ಲಾಗ್ ಮುಂತಾದವುಗಳನ್ನು ಪಾಲಿಸಲು ಸ್ಪಷ್ಟ ಆದೇಶವಿದ್ದರೂ ಅದನ್ನು ಉಲ್ಲಂಘಿಸಲಾಗಿದೆ. ನೌಕರರೆಲ್ಲಾ ವೈಶ್ಯರು, ಬ್ರಾಹ್ಮಣರೇ ಆಗಿದ್ದಾರೆ. ಜವಾನನ ಕೆಲಸ ಮಾಡುವಾತ ಲಿಂಗಾಯಿತ ಜಾತಿಗೆ ಸೇರಿದ್ದಾನೆ. ಇದು ಸಾಲದೆಂಬಂತೆ ಬೇರೆ ಬ್ಯಾಂಕುಗಳಲ್ಲಿ ಸೇವೆ ಸಲ್ಲಿಸಿರುವವರನ್ನು ಪುನರ್‌ನೇಮಕಾತಿ ಮಾಡಿಕೊಳ್ಳಲು ನಿಷೇಧವಿದ್ದರೂ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕ್ಯಾಷಿಯರ್ ಆಗಿ ಸೇವೆ ಸಲ್ಲಿಸಿದ್ದ ನಿವೃತ್ತ ನೌಕರ ಸಿ. ಭೀಮರಾವ್ ಎಂಬುವವರನ್ನು ಮರು ನೇಮಕಾತಿ ಮಾಡಿಕೊಳ್ಳಲಾಗಿದೆ.




ನುಂಗಣ್ಣ ನಾಗರಾಜ ಶೆಟ್ಟಿ

ಗಾಯತ್ರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಇದೇ ರೀತಿ ನೇಮಕಾತಿ ಮಾಡಿಕೊಂಡ ನೌಕರರೊಬ್ಬರನ್ನು ವಜಾ ಮಾಡಿರುವ ಸಹಕಾರ ಇಲಾಖೆಯ ನಿಬಂಧಕರು ಸಿ. ಭೀಮರಾವ್ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನೆಂಬುದೇ ಗುಟ್ಟಾಗಿದೆ.

ಅಕ್ರಮ ವ್ಯವಹಾರ

ಬೈಲಾ ಪ್ರಕಾರ ಕನ್ಯಕಾ ಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿಯ ಕಾರ್ಯವ್ಯಾಪ್ತಿ ಚಿತ್ರದುರ್ಗ ನಗರದ ಮುನಿಸಿಪಲ್ ಸರಹದ್ದಿಗೆ ಮಾತ್ರ ಸೀಮಿತವಾಗಿದ್ದರೂ ಇದನ್ನು ಮೀರಿ ಹಿರಿಯೂರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ 60 ಲಕ್ಷ ರೂ. ಠೇವಣಿ ಇಡಲಾಗಿದೆ. ಚಿತ್ರದುರ್ಗ ನಗರ ವ್ಯಾಪ್ತಿಯಲ್ಲಿರುವ ಶ್ರೀಸಂಪಿಗೆ ಸಿದ್ದೇಶ್ವರ ಬ್ಯಾಂಕ್‌ನಲ್ಲಿ 19 ಲಕ್ಷ ರೂ. ಠೇವಣಿ ಇಡಲಾಗಿದೆ. ಸಹಕಾರಿ ಸಂಘಗಳ ಕಾಯ್ದೆಯನ್ವಯ ಯಾವುದೇ ಕೋ-ಆಪರೇಟಿವ್ ಸೊಸೈಟಿಗಳು ಹೆಚ್ಚುವರಿ ನಗದು, ಠೇವಣಿ ಇಡುವುದು ಸೇರಿದಂತೆ ಯಾವುದೇ ಹಣಕಾಸು ವ್ಯವಹಾರವನ್ನು ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲೇ ಮಾಡಬೇಕು. ಈಗ ಈ ಎರಡೂ ಬ್ಯಾಂಕುಗಳು ನಷ್ಟದ ಹಾದಿಯಲ್ಲಿದ್ದು ಇಂದೋ-ನಾಳೆಯೋ ಮುಳುಗುವ ಪರಿಸ್ಥಿತಿಯಲ್ಲಿವೆ. ಆಡಳಿತ-ಮಂಡಳಿಯ ನಿರ್ಲಕ್ಷ್ಯ ಹಾಗೂ ನಿಯಮಬಾಹಿರ ವ್ಯವಹಾರದಿಂದಾಗಿ ಇಷ್ಟೊಂದು ದೊಡ್ಡಮಟ್ಟದ ಹಣ ಅನುತ್ಪಾದಕ ಮೊತ್ತವಾಗಿ ಪರಿಣಮಿಸಿ ಷೇರುದಾರರಿಗೆ ಹೊರೆಯಾಗಿದೆ. ಸೊಸೈಟಿಯಲ್ಲಿ ಯಾವುದೇ ರೀತಿಯ ಹಣಕಾಸು ವ್ಯವಹಾರದಲ್ಲಾಗುವ ಲೋಪದೋಷಗಳಿಗೆ ಕಾರ್ಯದರ್ಶಿಗಳೇ ಹೊಣೆಗಾರರಾಗುತ್ತಾರೆಂದು ಬೈಲಾದಲ್ಲೇ ಸ್ಪಷ್ಟವಾಗಿ ಹೇಳಲಾಗಿದೆ. ಸಹಕಾರ ಉಪನಿಬಂಧಕರಾದ ಸುನಂದಮ್ಮ, ಲೆಕ್ಕಪರಿಶೋಧಕ ನಾಯ್ಕ್‌ಗೆ ಇದು ಗೊತ್ತಿಲ್ಲವೇ? ಇಂತಹ ಗಂಭೀರ ಲೋಪದ ಬಗ್ಗೆ ಯಾವುದೇ ರೀತಿಯ ಕಾನೂನುಕ್ರಮ ಕೈಗೊಂಡಿಲ್ಲವೆಂದರೇನರ್ಥ?



ರಾಘವೇಂದ್ರ

ಸಿಬ್ಬಂದಿ ಬಲಿ

ಬಿ. ಮಹಂತೇಶ್ ಎಂಬುವರು ಸೊಸೈಟಿಯ ತಮ್ಮ ಉಳಿತಾಯ ಖಾತೆಗೆ ಬೇರೆ ಬ್ಯಾಂಕಿನಿಂದ 50 ಸಾವಿರ ರೂ. ಚೆಕ್‌ನ್ನು ತಮ್ಮ ಖಾತೆಗೆ ಜಮಾ ಮಾಡಲು ಕೊಟ್ಟು ಈ ಹಣ ನಗದೀಕರಣ ಆಗುವ ಮೊದಲೇ ಕಾರ್ಯದರ್ಶಿ ಶ್ರೀಧರಮೂರ್ತಿಯಿಂದ ಪ್ರಭಾವ ಬೀರಿ ತಮ್ಮ ಖಾತೆಗೆ 50 ಸಾವಿರ ರೂ.ಗಳನ್ನು ಜಮಾ ಮಾಡಿಸಿಕೊಂಡು ಹಣ ಪಡೆದಿದ್ದಾರೆ. ನಂತರ ಖಾತೆದಾರ ಮಹಾಂತೇಶ್ ಕೊಟ್ಟ ಚೆಕ್ ನಗದೀಕರಣ ಆಗದೇ ವಾಪಸಾಗಿದೆ. ಚೆಕ್ ನಗದೀಕರಣವಾಗದೆಯೇ ಹಣ ಪಡೆಯಲು ಅವಕಾಶ ಮಾಡಿಕೊಟ್ಟು, ಕಾರ್ಯದರ್ಶಿ ಶ್ರೀಧರಮೂರ್ತಿ ಸದರಿ ಹಣವನ್ನು ಮಹಂತೇಶ್‌ರಿಂದ ವಸೂಲಿ ಮಾಡುವುದನ್ನು ಬಿಟ್ಟು, ಚೆಲುವರಾಯಶೆಟ್ಟಿ ಎಂಬ ನೌಕರನನ್ನು ಬಲಿಪಶು ಮಾಡಿ ಆತನಿಂದ 50 ಸಾವಿರ ರೂ. ಜಮಾ ಮಾಡಿಸಿಕೊಂಡು ಇನ್ನಿಲ್ಲದ ಮಾನಸಿಕ ಹಿಂಸೆ ನೀಡಿ ಕೆಲಸವನ್ನೇ ಬಿಟ್ಟು ಹೋಗುವಂತೆ ಮಾಡಲಾಗಿದೆ. ವಿಪರ್ಯಾಸವೆಂದರೆ ಚೆಕ್ ನೀಡಿ ಹಣ ನಗದೀಕರಿಸದೇ ವಂಚಿಸಿದ ಮಹಂತೇಶ್‌ಗೆ ಇದುವರೆಗೂ ಒಂದು ನೋಟೀಸನ್ನೂ ಕೊಟ್ಟಿಲ್ಲ.

ಸಾಲಗಾರನನ್ನು ಕೈಬಿಟ್ಟರು.


ಸೊಸೈಟಿಯಲ್ಲಿ ವೈ.ಆರ್. ಜಯಕುಮಾರ್ ಎಂಬುವರೊಂದಿಗೆ ಜಂಟಿ ಸಾಲ ಪಡೆದಿದ್ದ ಚಿರದೀಪ್ ಎಂಬುವರು ಕಳೆದ ಎರಡು ವರ್ಷಗಳ ಕೆಳಗೆ ಮೃತಪಟ್ಟರು. ಆಡಳಿತ ಮಂಡಳಿ ಚಿರದೀಪ್ ತಂದೆತಾಯಿಗಳಿಗೆ ಮರಣನಿಧಿಯನ್ನು ಕೊಟ್ಟಿತು. ಇದಕ್ಕೆ ಹೊರತಾಗಿ ಆಡಳಿತ ಮಂಡಳಿ ತನ್ನ ಬ್ಯಾಂಕ್ ಸದಸ್ಯನಾಗಿದ್ದ ಚಿರದೀಪ್ ಮರಣದ ನಂತರ ಆತನ ಸಾಲ ಇದ್ದಲ್ಲಿ ಆತನ ಹೆಸರಲ್ಲಿರುವ ಷೇರು ಹಾಗೂ ಠೇವಣಿ ಹಣವನ್ನು ತಕ್ಷಣವೇ ಸಾಲಕ್ಕೆ ಜಮಾ ಮಾಡಿಕೊಂಡು ಉಳಿದ ಸಾಲದ ವಸೂಲಾತಿಗೆ ಜಂಟಿ ಸಾಲಗಾರನಾಗಿದ್ದ ವೈ.ಆರ್. ಜಯಕುಮಾರ್ ಮೇಲೆ ಕಾನೂನು ಕ್ರಮ ಜರುಗಿಸಬೇಕಿತ್ತು. ಬೈಲಾ ಪ್ರಕಾರ ಈ ಪ್ರಕ್ರಿಯೆಯನ್ನು ಜರುಗಿಸದೇ ಮೌನವಾಗಿದ್ದ ಆಡಳಿತ ಮಂಡಳಿ 3 ತಿಂಗಳ ನಂತರ ಮೃತನ ತಾಯಿ ಎ.ಆರ್. ಅನ್ನಪೂರ್ಣಮ್ಮ (ನಾಮಿನಿ) ಚಿರದೀಪನ ಹೆಸರಲ್ಲಿರುವ ಷೇರು ಹಣ ಕೊಡುವಂತೆ ಮನವಿ ಮಾಡಿಕೊಂಡಾಗ ಆಡಳಿತ ಮಂಡಳಿ 'ಮೃತ ಸದಸ್ಯನ ಹೆಸರಲ್ಲಿ 20 ಸಾವಿರ ಸಾಲ ಇದ್ದು ಸಾಲ ತಿರುವಳಿ ಸಂದರ್ಭದಲ್ಲಿ ವರ್ಗಾವಣೆ ಮಾಡಿಕೊಳ್ಳುವುದಾಗಿ ತಿಳಿಸಿ, ಅಷ್ಟೂ ಹಣಕ್ಕೆ ಬಡ್ಡಿ ವಿಧಿಸಿ ಅದನ್ನು ಪಾವತಿಸಬೇಕೆಂದು ಮೃತ ಸದಸ್ಯನ ತಂದೆ ರಾಘವೇಂದ್ರ ಅವರ ಮೇಲೆ ಒತ್ತಡ ತರುತ್ತಾರೆ.

ಈ ಬೆಳವಣಿಗೆಗಳಿಂದ ನೊಂದ ಚಿರದೀಪ್‌ನ ತಂದೆ ರಾಘವೇಂದ್ರರವರು ಸೊಸೈಟಿಯ ಈ ಕ್ರಮವನ್ನು ಡಿಸಿಆರ್‌ಸಿಎಸ್‌ನಲ್ಲಿ ಪ್ರಶ್ನಿಸಿದ್ದಾರೆ. ಸಹಕಾರ ಇಲಾಖೆಯ ಆರ್ಬಿಟ್ರೇಟರ್ ತಂದೆ-ತಾಯಿಗಳು ಕೊಟ್ಟ ಹೇಳಿಕೆಯನ್ನು ದಾಖಲಿಸದೇ ಏಕಪಕ್ಷೀಯವಾಗಿ ಸೊಸೈಟಿಯ ಪರವಾಗಿ ತೀರ್ಪು ನೀಡಿ ಕೈತೊಳೆದುಕೊಂಡಿದ್ದಾರೆ.

ಸೊಸೈಟಿಯ ಆಡಳಿತ ಮಂಡಳಿಯ ಅಂದಾದುಂದಿಯ ಕಾರ್ಯಶೈಲಿಯ ಬಗ್ಗೆ ಷೇರುದಾರರಿಗೆ ಆಗುತ್ತಿರುವ ಅನ್ಯಾಯಗಳನ್ನು ಗಮನಿಸಿ ಸುಮಾರು 20 ಕ್ಕೂ ಹೆಚ್ಚು ಆಪಾದನೆಗಳನ್ನು ಪಟ್ಟಿ ಮಾಡಿ ಆಡಳಿತ ಮಂಡಳಿಯನ್ನು ರದ್ದು ಮಾಡಿ ಸೊಸೈಟಿಗೆ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಮನವಿ ಮಾಡಿಕೊಂಡಿದ್ದಾರೆ. ಈ ಆಪಾದನೆಗಳಲ್ಲಿ 14 ನ್ನು ಪರಿಗಣಿಸಿ ಸಹಕಾರ ಸಂಘಗಳ ಉಪನಿಬಂಧಕರು ಆಡಳಿತ ಮಂಡಳಿಗೆ ನೋಟೀಸ್ ಜಾರಿ ಮಾಡಿದ್ದರೂ ಆಡಳಿತ ಮಂಡಳಿ ಉತ್ತರಿಸಿಲ್ಲ.

ಅರ್ಜಿದಾರರಾದ ರಾಘವೇಂದ್ರರವರು ಪುನಃ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ಪತ್ರ ಬರೆದು ಗಮನ ಸೆಳೆದ ಹಿನ್ನೆಲೆಯಲ್ಲಿ ಜಂಟಿ ನಿಬಂಧಕರು, ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಿಗೆ ಪತ್ರ ಬರೆದು ಅರ್ಜಿದಾರರ ಆರೋಪಗಳು ಗಂಭೀರವಾಗಿದ್ದಲ್ಲಿ, ಅವುಗಳನ್ನು ಸರಿಪಡಿಸಲು ಆಡಳಿತ ಮಂಡಳಿಯನ್ನು ರದ್ದುಮಾಡಿ, ಆಡಳಿತಾಧಿಕಾರಿಯನ್ನು ನೇಮಿಸಲು ಸೂಚಿಸಿದ್ದಾರೆ. ಈ ಪತ್ರ ಬಂದು 25 ದಿನಗಳಾದರೂ ಸುನಂದಮ್ಮನವರು ಕುರ್ಚಿ ಬಿಟ್ಟು ಕದಲಿದಂತೆ ಕಾಣಿಸುತ್ತಿಲ್ಲ. ಸುನಂದಮ್ಮನವರ ಇಂತಹ ಧೋರಣೆಯಿಂದಾಗಿಯೇ ಜಿಲ್ಲೆಯಲ್ಲಿ ಹಲವು ಸಹಕಾರ ಸಂಘಗಳು ಹರೋಹರ ಎನ್ನುತ್ತಿವೆ ಎಂಬ ಟೀಕೆಗಳು ಸಹಕಾರಿ ವಲಯದಿಂದ ಕೇಳಿಬರುತ್ತಿವೆ. ಇಂತಹ ಅವಿಶ್ವಾಸದ ಪರಿಸ್ಥಿತಿಯಲ್ಲಿ ರಾಜ್ಯ ಸಹಕಾರಿ ನಿಬಂಧಕರೇ ಖುದ್ದು ತನಿಖೆ ನಡೆಸಿ ಆಡಳಿತ ಮಂಡಳಿಯ ಮೇಲೆ ಸೂಕ್ತ ಕಾನೂನಿನ ಕ್ರಮ ಜರುಗಿಸದ ಹೊರತು ಕನ್ಯಕಾಪರಮೇಶ್ವರಿ ಸೊಸೈಟಿಯ ಸದಸ್ಯರಿಗೆ ನ್ಯಾಯ ಸಿಗುವುದಿಲ್ಲ.

-ವರದಿಗಾರ



ಫುಲ್‌ನೈಟ್ ಕುಡಿತವೋ ಕುಡಿತ... ಫುಲ್ ಟೈಟಾಗಿ ಹಾಸಿಗೆಗೆ ಬಿದ್ದನೆಂದರೆ ಏಳೋದು ಮಧ್ಯಾಹ್ನ ರೊಟ್ಟಿ ಬಡಿಯುವ ಸಪ್ಪಳ ಕೇಳಿದಾಗಲೇ....


Next what?

ಶುರು ಇಸ್ಪೀಟು ಆಟ!

ಇದು ಗುಲ್ಬರ್ಗಾದ ಚಡ್ಡಿ ಶಾಸಕ ಚಂದ್ರಶೇಖರ ಪಾಟೀಲ್ ರೇವೂರ್‌ನ ನಿತ್ಯ ದಿನಚರಿ. ಜನಸಂಪರ್ಕ ಹೇಗಾಗುತ್ತೆ? ಹೋಗಲಿ ಬಿಡಿ, ಈ ಪಾಪಿ ಕುಡಿತ, ಇಸ್ಪೀಟನಲ್ಲಿ ಸಾಯಲಿ, ಜನರಿಗೆ ಕೆಟ್ಟದು ಮಾಡದಿದ್ದರೆ ಅಷ್ಟೇ ಸಾಕು ಎನ್ನಲೂ ಆಗೋದಿಲ್ಲ. ಏಕೆಂದರೆ ತನ್ನ 'ಚಟ'ವಟಿಕೆಗಳ ಬ್ಯುಸಿ ಶೆಡ್ಯೂಲ್ ನಡುವೆಯೂ ನೆಲಗಳ್ಳತನ ಅದ್ಯಾವ ಪರಿ ಮಾಡಿದ್ದಾನೆ ಎಂದರೆ ಇನ್ನೊಂದು ವರ್ಷದಲ್ಲಿ ಖಮರುಲ್ಲಾ ಇಸ್ಲಾಂನೇ ರೇವೂರ್‌ನ ಬಳಿ ಟ್ರೇನಿಂಗ್‌ಗೆ ಬರುವುದು ಗ್ಯಾರಂಟಿ. ಇಂತಹ ಖದೀಮ ಮಂತ್ರಿಯಾಗುವ ಆಶೆಯಿಂದ ದೆಹಲಿಗೆ ಹೋಗಿ ಸಿಕ್ಕಾಪಟ್ಟೆ ರೊಕ್ಕ ಕಳಕೊಂಡು ರಿಟರ್ನ್ ಆಗಿದ್ದಾನೆ.

ಗುಲ್ಬರ್ಗಾ: ಚಡ್ಡಿ ಶಾಸಕ ರೇವೂರ್‌ನ ಕುಡಿತ, ಇಸ್ಪೀಟು, ಲ್ಯಾಂಡ್ ಗ್ರ್ಯಾಬಿಂಗು...

ನಗರದ ಹೃದಯಭಾಗದಲ್ಲಿನ ಎರಡು ಅಮೂಲ್ಯ ನಿವೇಶನಗಳನ್ನು ಚೇಲಾ ವಿಶ್ವನಾಥ ಗೌಡನ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿಯಾಯಿತು. ಅಲ್ಲೀಗ ವಿಕ್ರಮ್ ಪ್ಲಾಜಾ ಎಂಬ ಅಕ್ರಮ ಪ್ಲಾಜಾ ತಲೆಯೆತ್ತುತ್ತಿದೆ. ನಗರದ ಗಾರ್ಡನ್, ಜೆಡಿಎ, ಕಾರ್ಪೊರೇಷನ್ ಜಾಗಗಳನ್ನು ಅಕ್ರಮವಾಗಿ ಮಾರಾಟ ಮಾಡಿಸುವುದರಲ್ಲೂ ರೇವೂರ್ ತುಂಬಾ ಫಾಸ್ಟು.. ಇಂತಹ ಕೆಲಸಕ್ಕೆಲ್ಲ ಇನ್ನಷ್ಟು ಸ್ಪೀಡು ತರಲು ಕಾರ್ಪೊರೇಷನ್ನಿನ ಜೂನಿಯರ್ ಇಂಜಿನಿಯರ್ ಮಾಜಿದ್ ಸದಾ ರೆಡಿ. ಅಂತಿಮವಾಗಿ ಡಿಸಿ ಪಂಕಜ್ ಕುಮಾರ್ ಪಾಂಡೆ ಪುಶ್ ಕೊಡುತ್ತಾರೆ.



ಕಮೀಷನರ್ ಮುಧೋಳ, ಡಿಸಿ ಠಾಕೂರ್

ಅಶೋಕನಗರದ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಜೇಮ್ಸ್‌ನ ಕಳ್ಳಾಟ ನೋಡಿದ ಜನತೆ ಆವನ ವರ್ಗಾ ಮಾಡಿಸಿತ್ತು. ಆದರೆ ಬಹದ್ದೂರ್ ಗಂಡು ರೇವೂರ್ 'ಜೇಮ್ಸ್'ಬಾಂಡ್‌ನಿಂದ ಎಷ್ಟು ತಿಂದನೋ ಗೊತ್ತಿಲ್ಲ; ಈಗ ಜೇಮ್ಸ್ ಮತ್ತೆ ಅಶೋಕ ನಗರಕ್ಕೆ ವಕ್ಕರಿಸಿ ವರಾತ ಶುರು ಹಚ್ಚಿದ್ದಾನೆ. ಕಾರ್ಪೊರೇಷನ್ ಕಮೀಶನರ್ ಮುಧೋಳನನ್ನು ಟ್ರಾನ್ಸ್‌ಫರ್ ಮಾಡಿಸಿದ ರೇವೂರ್, ನಂತರ ವ್ಯವಹಾರ ಕುದುರಿಸಿ ಮುಧೋಳನನ್ನು ಮತ್ತೆ ಕಾರ್ಪೊರೇಷನ್‌ಗೆ ತಂದಿದ್ದಾನೆ.

15 ವರ್ಷದ ಹಿಂದೆ ತನ್ನ ತಮ್ಮನನ್ನೇ ಕೊಂದು ಗುಲ್ಬರ್ಗಾವನ್ನು ತಲ್ಲಣಗೊಳಿಸಿದ್ದ ಈ ರೇವೂರ್ ನಂತರ ಭೀಮಾ ತೀರದ ಘಾತಕಿ ಚಂದಪ್ಪ ಹರಿಜನನೊಂದಿಗೆ ಗೆಳೆತನ ಮಾಡಿದ್ದ. ರೇವೂರ್‌ನ ಮೊದಲ [illegible] ನಡೆಸಿದ್ದ. ಕೆಲ ಸಲ ಖಮರುಲ್ಲಾನನ್ನು ಸೋಲಿಸಿ [illegible] ಮುಂಗಾರಾತಿ ಶತಾಸಿದ್ಧ

-[illegible]

ಹೊನ್ನಾಳಿ ಶಾಸಕನಿಗೆ ಧರ್ಮದೇಟು!

ದಾವಣಗೆರೆ ಜಿಲ್ಲೆ ಹೊನ್ನಾಳಿಯಲ್ಲಿ ಮಾಜಿ ಮತ್ತು ಹಾಲಿ ಶಾಸಕರಿಬ್ಬರು ತಮ್ಮ ಭ್ರಷ್ಟತೆಗಳನ್ನು ಬಯಲು ಗೊಳಿಸಿಕೊಳ್ಳಲು ಬಸ್ ನಿಲ್ದಾಣದಲ್ಲಿ ಬಟ್ಟೆ ಬಿಚ್ಚಿದ್ದಾರೆ. ಪರಸ್ಪರರ ಬೆಂಬಲಿಗರು ಕಲ್ಲು ತೂರಾಟದಲ್ಲಿ ನಿರತರಾಗಿ ಬಡಿದಾಟ ಪ್ರಾರಂಭವಾದಾಗ ಪೊಲೀಸರು ಬಂದು ಜನರನ್ನು ಚದುರಿಸುವುದರೊಂದಿಗೆ ಮಾಜಿ ಮತ್ತು ಹಾಲಿ ಶಾಸಕರಿಬ್ಬರನ್ನು ಪೊಲೀಸ್ ಠಾಣೆಗೆ ಎಳೆದೊಯ್ದಿದ್ದಾರೆ.


'ಹೊನ್ನಾಳಿ ವ್ಯಾಪ್ತಿಯ ಭದ್ರಾನಾಲೆ ಆಧುನೀಕರಣ ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ' ಎಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಆರೋಪಿಸಿದ್ದೇ ತಡ, 'ಮಾಜಿ ಶಾಸಕ ಶಾಂತನಗೌಡರ ಆಡಳಿತಾವಧಿಯಲ್ಲಿ ತುಂಗಾನಾಲೆಯ ದುರಸ್ತಿ, ಕೂಲಂಬಿ ಕೆರೆಗಳ ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ' ಎಂದು ಹಾಲಿ ಚೆಡ್ಡಿ ಶಾಸಕ ಎಂ.ಪಿ. ರೇಣುಕಾಚಾರ್ಯ ದೂರಿದ್ದಾನೆ. ಈ ಆರೋಪ-ಪ್ರತ್ಯಾರೋಪಗಳು ಹೀಗೆ ಶುರುವಾಗಿ, ಕೆರೆದುಕೊಂಡು ಗಾಯ ಮಾಡಿಕೊಳ್ಳುವುದನ್ನೇ ಚಾಳಿಯಾಗಿಸಿಕೊಂಡಿರುವ ಶಾಸಕ ರೇಣುಕಪ್ರಸಾದ ಭ್ರಷ್ಟಾಚಾರದ ಬಗ್ಗೆ ಬಹಿರಂಗ ಚರ್ಚೆಗೆ ಬರಲು ಮಾಜಿ ಶಾಸಕ ಶಾಂತನಗೌಡನಿಗೆ ಸವಾಲೆಸೆದಿದ್ದಾನೆ-ಅದೂ ಬಸ್‌ನಿಲ್ದಾಣದಲ್ಲಿ!

ಸವಾಲನ್ನು ಸ್ವೀಕರಿಸುತ್ತೇನೆಂದು ಹೇಳಿದ ಶಾಂತನಗೌಡ 2.1.2007 ರಂದು ತಮ್ಮ ಬೆಂಬಲಿಗರೊಂದಿಗೆ ಬಸ್‌ನಿಲ್ದಾಣಕ್ಕೆ ಬಂದಿದ್ದಾನೆ. ಒಂದು ಗಂಟೆ ತಡವಾಗಿ ಶಾಸಕ ರೇಣುಕಾಚಾರ್ಯ ತನ್ನ ಬೆಂಬಲಿಗರೊಂದಿಗೆ ಹಾಜರಾಗಿ 'ಬಹಿರಂಗ ಚರ್ಚೆಯಲ್ಲಿ ಭಾಗವಹಿಸ ಬಾರದೆಂದು ಪಕ್ಷದ ಹೈಕಮಾಂಡ್ ನಿರ್ದೇಶನವಿರುವುದರಿಂದ ನಾನು ಚರ್ಚೆಯಲ್ಲಿ ಭಾಗವಹಿಸುವುದಿಲ್ಲ' ಎಂದಿದ್ದಾನೆ. 'ನಿಮ್ಮ ಭ್ರಷ್ಟಾಚಾರದ ಬಗ್ಗೆ ನನ್ನಲ್ಲಿ ಎಲ್ಲಾ ದಾಖಲೆಗಳಿವೆ' ಎಂದು ಶಾಂತನಗೌಡ ಪಟ್ಟು ಹಿಡಿದಾಗ ಸವಾಲ್-ಜವಾಬ್ ಗರಂಗೊಂಡು ಮಾಜಿ ಹಾಗೂ ಹಾಲಿ ಶಾಸಕರಿಬ್ಬರ ಬೆಂಬಲಿಗರು ಮಾರಾಮಾರಿಗೆ ಇಳಿದಿದ್ದಾರೆ.



ಧರ್ಮದೇಟು ತಿನ್ನುತ್ತಿರುವ ಶಾಸಕ ರೇಣುಕಾಚಾರ್ಯ

ಆದರೆ ಅಷ್ಟೊತ್ತಿಗಾಗಲೇ ಪರಿಸ್ಥಿತಿ ಏನಾಗ ಬಹುದೆಂದು ಗ್ರಹಿಸಿದ್ದ ಎಸ್.ಪಿ. ಸೋನಿಯಾ ನಾರಂಗ್ ನಿಷೇಧಾಜ್ಞೆ ಹೇರಿದ್ದರಿಂದ, ಪೊಲೀಸರು ಜನರನ್ನು ಚದುರಿಸಿದಾಗಲೇ ರೇಣುಕಾಚಾರ್ಯನ ಅಸಲಿ ರಂಗು ಬಯಲುಗೊಂಡದ್ದು. ಜಾಗ ಖಾಲಿ ಮಾಡಲು ಎಸ್.ಪಿ. ಸೋನಿಯಾ ರೇಣುಕಾಚಾರ್ಯನಿಗೆ ಗದರಿಸಿದ್ದನ್ನೇ ನೆಪವಾಗಿಟ್ಟುಕೊಂಡು ಕೀಳು ವಾಗ್ವಾದಕ್ಕಿಳಿದದ್ದಲ್ಲದೇ ಕುರ್ಚಿಯನ್ನೆತ್ತಿ ಧಮಕಿ ಹಾಕಲು ಮುಂದಾದಾಗ ಪೊಲೀಸರು ರೇಣುಕಾಚಾರ್ಯನಿಗೆ ನಾಲ್ಕು ಬಾರಿಸಿ ಠಾಣೆಗೆ ಎಳೆದುಕೊಂಡು ಹೋಗಲೆತ್ನಿಸಿದ್ದಾರೆ. ರಸ್ತೆಯಲ್ಲಿ ಮತ್ತು ಪೊಲೀಸ್ ಠಾಣೆಯ ಮುಂದೆ ಕುಂತು-ಮಲಗಿ ರಂಪಾಟ ಮಾಡಿದಾಗ ಎತ್ತಿಕೊಂಡು ಹೋಗಿದ್ದಾರೆ. ಸಣ್ಣ ವಿಷಯಗಳಿಗೆ ರಂಪಾಟ ಮಾಡಿ ತನ್ನ ದೊಡ್ಡ ಹಗರಣಗಳನ್ನು ಮುಚ್ಚಿಕೊಳ್ಳುವ ಚೆಡ್ಡಿ ತಂತ್ರವನ್ನು ರೇಣುಕಾಚಾರ್ಯ ಚೆನ್ನಾಗಿ ರೂಢಿಸಿಕೊಂಡಿದ್ದಾನೆ.



ಮಾಜಿ ಶಾಸಕ ಶಾಂತನಗೌಡ

ರೇಣುಕಾಚಾರ್ಯ ಸಾಚಾನಾ?

ರೇಣುಕಾಚಾರ್ಯನಿಗೆ ಶಿವಮೊಗ್ಗದಲ್ಲಿ ಬಾಪೂಜಿ ಆಯುರ್ವೇದಿಕ್ ಕಾಲೇಜಿದೆ. ನಿಗದಿತ ಸೀಟುಗಳಿಗಿಂತ ಹೆಚ್ಚು ಸೀಟುಗಳನ್ನು ತುಂಬುವ ರೇಣುಕಾಚಾರ್ಯ ಪ್ರತಿ ವರ್ಷ ವಿದ್ಯಾರ್ಥಿಗಳು ಇಂತಹ ಅನ್ಯಾಯಗಳ ವಿರುದ್ಧ ಕೋರ್ಟು ಕಚೇರಿಗಳ ಮೆಟ್ಟಲು ಹತ್ತಿದರೂ ಅವರನ್ನು ಕೇರ್ ಮಾಡುವುದಿಲ್ಲ. ಕೇರಳದಲ್ಲಿನ ತನ್ನ ಏಜೆಂಟರುಗಳ ಮೂಲಕ ಸೀಟುಗಳನ್ನು ತುಂಬಿಕೊಳ್ಳುವುದರೊಂದಿಗೆ ಹಣದ ಸೂಟುಕೇಸುಗಳನ್ನು ಭರ್ತಿ ಮಾಡಿಕೊಳ್ಳುತ್ತಾನೆ. 2005ರ ಗ್ರಾಮ ಪಂಚಾಯಿತಿ ಚುನಾವಣೆಯ ಸಂದರ್ಭದಲ್ಲಿ ರೇಣುಕಾಚಾರ್ಯನ ಕಾರಿನಲ್ಲೇ ಮದ್ಯದ ಬಾಕ್ಸುಗಳು ಸಿಕ್ಕಿದ್ದವು! ಈತನ ಡ್ರೈವರ್ ಮತ್ತು ಸಹಾಯಕನೊಬ್ಬ ಮಾಲು ಸಮೇತ ಸಿಕ್ಕಿಬಿದ್ದುದರಿಂದ ಈ ಬಗ್ಗೆ ಶಿವಮೊಗ್ಗ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ಪಂಚಾಯಿತಿ ವತಿಯಿಂದ ಜಲಸಂರಕ್ಷಣೆ ಮುಂತಾದ ಯೋಜನೆಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಸುವ ಗುತ್ತಿಗೆಯನ್ನು ರೇಣುಕಾಚಾರ್ಯನೇ ಪಡೆದುಕೊಂಡು 150 ಅಡಿ ಕೊರೆಸಿ 300 ಅಡಿಗಳ ಕೊರೆತದ ಬಿಲ್ಲುಗಳನ್ನು ಪಾಸು ಮಾಡಿಕೊಂಡಿದ್ದಾನೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮಂಜಪ್ಪ ಈ ಭ್ರಷ್ಟಾಚಾರ ಪ್ರಕರಣದ ವಿಚಾರಣೆಗೆ ಆದೇಶ ನೀಡಿದ್ದಾರೆ. ಮೂರು ತಿಂಗಳ ಹಿಂದೆ ಅಂಗನವಾಡಿ ಶಿಕ್ಷಕಿಯೊಬ್ಬರು ತುಂಬಿದ ಸಭೆಯಲ್ಲಿ ರೇಣುಕಾಚಾರ್ಯನನ್ನು ಚಪ್ಪಲಿಯಿಂದ ಹೊಡೆಯಲು ಮುನ್ನುಗ್ಗಿದಾಗ ಆಕೆಯನ್ನು ರೇಣುಕಾಚಾರ್ಯನ ಬೆಂಬಲಿಗರು ಮತ್ತು ಪೊಲೀಸರು ತಡೆದುದಲ್ಲದೆ ಆಕೆಗೆ ಹುಚ್ಚಿಯ ಪಟ್ಟವನ್ನು ನೀಡಿದ್ದರು.... ಇಂಥದೇ ಹಲವು ಹತ್ತು ಹಗರಣಗಳನ್ನು ಹೆಗಲಿಗೇರಿಸಿಕೊಂಡಿರುವ ರೇಣುಕಾಚಾರ್ಯ ಈ ಅಪಾದನೆಗಳನ್ನು ಮುಚ್ಚಿಕೊಳ್ಳಲು ಸಲ್ಲದ ಗಿಮಿಕ್ಕುಗಳನ್ನು ಶುರುಹಚ್ಚಿಕೊಂಡು ನಗೆಪಾಟಲಿಗೀಡಾಗುತ್ತಿದ್ದಾನೆ.

ಈಗ ಎಸ್.ಪಿ. ಸೋನಿಯಾ ನಾರಂಗ್ ಮೇಲೆ ಮುರಕೊಂಡು ಬೀಳಲು ಪ್ರಾರಂಭಿಸಿರುವ ಶಾಸಕ ರೇಣುಕಾಚಾರ್ಯ, ಸೋನಿಯಾ ನಾರಂಗ್ ಅಲ್ಪಸಂಖ್ಯಾತ ಕೋಮಿನವರೆಂಬ ಒಂದೇ ಕಾರಣಕ್ಕೆ ಜಿಲ್ಲಾ ರಕ್ಷಣಾಧಿಕಾರಿಯೊಬ್ಬರ ಕಾರ್ಯಕ್ಷೇತ್ರವನ್ನು ಮರೆತು 'ಹಿಂದೂಗಳನ್ನು ಮತಾಂತರ ಮಾಡಿಸುತ್ತಿದ್ದಾರೆ' ಎಂದು ಈ ಹಿಂದೆ ಆರೋಪಿಸಿದ್ದ. ಆಗ ದಾವಣಗೆರೆ ಜಿಲ್ಲೆಯ ಜನ ತಣ್ಣಗೆ ನಕ್ಕಿದ್ದರು. ಆದರೆ 2.1.07 ರ ಘಟನೆಯ ನಂತರ 'ಇಂತಿಂಥ ಜಾಗಕ್ಕೆ ಎಸ್ಪಿ ಸೋನಿಯಾ ಹೊಡೆದಿದ್ದಾರೆ' ಎಂದು ಬಿಚ್ಚಿ ತೋರಿಸಲು ಆರಂಭಿಸಿರುವುದಲ್ಲದೆ, ಎಸ್ಪಿ ಸೋನಿಯಾ ನಾರಂಗರಿಗೆ 'ರುದ್ರಕಾಳಿ', 'ನರಹಂತಕಿ' ಎಂಬಿತ್ಯಾದಿ ಸಲ್ಲದ ಬಿರುದುಗಳನ್ನು ಕೊಟ್ಟು ಜನರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿ ಬಫೂನ್ ಪಾತ್ರಕ್ಕೆ ಸರಿ ಹೊಂದುವಂತಹ ರಂಜನೆಯನ್ನು ನೀಡುತ್ತಿದ್ದಾನೆ.

ನಡೆದ ಘಟನೆಯಿಂದ ಗುಣಪಾಠವನ್ನು ಕಲಿಯುವುದಿರಲಿ ಪಶ್ಚಾತ್ತಾಪವನ್ನಾದರೂ ಪಡದ ನೈರ್ಮಲ್ಯ ಮತ್ತು ಸಕ್ಕರೆ ಸಚಿವ ಎಸ್.ಎ. ರವೀಂದ್ರನಾಥ್ 'ಎಸ್ಪಿ ಸೋನಿಯಾ ನಾರಂಗ್ ಉದ್ಧಟತನದಿಂದ ವರ್ತಿಸಿದ್ದಾರೆ, ಬೇರೆಡೆಗೆ ವರ್ಗಾಯಿಸಲು ಮುಖ್ಯಮಂತ್ರಿಯೊಂದಿಗೆ ಮಾತನಾಡುತ್ತೇನೆ' ಎಂದು ಮುಂತಾಗಿ ಕಾರಿಕೊಂಡಿದ್ದಾರೆ. ಇದಕ್ಕೆ ಪೂರಕವಾಗಿ ಕೋಮುವಾದಿಗಳ ಕೈಗೊಂಬೆಯಾಗಿರುವ ಮುಖ್ಯಮಂತ್ರಿ ಕುಮಾರಸ್ವಾಮಿ, ಎಸ್ಪಿ ಸೋನಿಯಾ ನಾರಂಗ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತೇನೆ' ಎಂದಿದ್ದಾರೆ. ಆದರೆ 2.1.2007 ರಂದು ಹಾಲಿ ಮತ್ತು ಮಾಜಿ ಶಾಸಕರುಗಳ ಮಂಗಾಟಗಳನ್ನು ನೋಡುತ್ತಾ ಎಸ್ಪಿ ಸೋನಿಯಾ ನಾರಂಗ್ ಕೈಕಟ್ಟಿಕೊಂಡು ನಿಂತಿದ್ದರೆ ಏನಾಗುತ್ತಿತ್ತು? 'ಹೊಡೆದಾಡಿ ಸಾಯುತ್ತಿದ್ದುದು ಯಕಶ್ಚಿತ್ ಸಾಮಾನ್ಯ ಜನರೆ ಅಲ್ಲವೇ-ಅದಕ್ಕೆ ಇಷ್ಟು ತೀವ್ರವಾದ ಕ್ರಮವನ್ನು ಜರುಗಿಸಬಾರದಿತ್ತು' ಎಂಬ ವಾದ ಕೋ-ಜಾ ಸರ್ಕಾರದ ಧಣಿಗಳದ್ದಾಗಿರುವುದರಿಂದಲೇ ಶಾಸಕ ರೇಣುಕಾಚಾರ್ಯನನ್ನು ತಲೆಯ ಮೇಲೆ ಹೊತ್ತು ಕುಣಿಸುತ್ತಿದ್ದಾರೆ.



ಎಸ್ಪಿ ಸೋನಿಯಾ ನಾರಂಗ್

-ಚಂದ್ರಶೇಖರ ತೋರಣಘಟ್ಟೆ

ಹೊನ್ನಾಳಿ ಗಲಾಟೆ

ಇದ್ದೋರಿಬ್ರು... ಕದ್ದೋರ್ಯಾರು!

ಶಾಸಕ ರೇಣುಕಾಚಾರ್ಯ ತೀರಾ ಎಡವಟ್ಟು. ಬೆಣೆ ಸಂಧಿಗೆ ಬಾಲ ಸಿಕ್ಕಿಸಿಕೊಂಡು ನರಳುವ ಪೈಕಿ.



ಹಾಲಿ ಶಾಸಕ ರೇಣುಕಾಚಾರ್ಯ

ಭ್ರಷ್ಟಾಚಾರದ ಬಗ್ಗೆ ಬಹಿರಂಗ ಚರ್ಚೆಯ ಈ ಎಪಿಸೋಡನ್ನೇ ತೆಗೆದುಕೊಳ್ಳಿ. ಭದ್ರಾ ನಾಲೆ ಆಧುನೀಕರಣ.. ಬರ ಪರಿಹಾರ ಕಾಮಗಾರಿ, ಕೂಲಂಬಿ ಕೆರೆ ಹೂಳೆತ್ತುವ ಕಾಮಗಾರಿಗಳಲ್ಲಿ ಅಧಿಕಾರಿಗಳು ಸಾಕಷ್ಟು ತಿಂದು ತೇಗಿದ್ದಾರೆ. ಇದು ಮಾಜಿ ಶಾಸಕ ಶಾಂತನಗೌಡ ಹಾಗೂ ಹಾಲಿ ಶಾಸಕ ರೇಣುಕಾಚಾರ್ಯ ಇಬ್ಬರಿಗೂ ಗೊತ್ತು.


ಹೀಗಿರುವಾಗ ಇದ್ದೋರು ಇಬ್ಬರಲ್ಲಿ ಕದ್ದೋರು ಯ... ಎಂಬ ಚರ್ಚೆ ಬೇಕಿತ್ತಾ ಇವರಿಗೆ? ಅದೂ ಹೊ... ಬಸ್‌ನಿಲ್ದಾಣದಲ್ಲಿ ಬಹಿರಂಗ ಚರ್ಚೆಯಂತೆ. ಈಗ ... ಹರಿಶ್ಚಂದ್ರನ ತುಂಡಿನಂತೆ ಮಾತನಾಡುತ್ತಿರುವ ... ರೇಣುಕಾಚಾರ್ಯನ ಕುಟುಂಬವೇ ಬೋರ್‌ವೆಲ್ ಹ... ದಲ್ಲಿ ಸಿಕ್ಕಿಬಿದ್ದಿದೆ. ರೇಣುಕಾಚಾರ್ಯನ ತಮ್ಮ ರಮೇ... ಎಂಬುವನು ಕೆಪಿಎಂ ಬೋರ್‌ವೆಲ್ಸ್‌ನ ಮಾಲೀಕನಾ... ಕುಡಿಯುವ ನೀರು ಸರಬರಾಜು ಯೋಜನೆ... ದಾವಣಗೆರೆ ಜಿಲ್ಲೆಯಾದ್ಯಂತ ಬೋರ್‌ವೆಲ್‌ಗಳ... ಕೊರೆಸುವ ಗುತ್ತಿಗೆ ಪಡೆದಿದ್ದಾನೆ. ಅದರಂತೆ ಹೊ... ತಾಲ್ಲೂಕಿನಲ್ಲೂ ಕೆಪಿಎಂ ಬೋರ್‌ವೆಲ್ ಕೊರೆದಿದೆ. ಆ... ಇತ್ತೀಚೆಗೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮಂಜಪ್ಪನ... ಈ ಕಾಮಗಾರಿ ಪರಿಶೀಲನೆಗೆ ಹೋಗಿ... ಮೇಲ್ನೋಟಕ್ಕೆ ಅವ್ಯವಹಾರ ನಡೆದದ್ದು ಕಂಡುಬಂದ... 150 ಅಡಿ ಆಳ ಕೊರೆದು 300 ಅಡಿಗೆ ಬಿಲ್ ಮಾಡಿ... ಕಳ್ಳತನ ಆಗ ಪತ್ತೆಯಾಗಿತ್ತು. ಶಾಸಕನ ತಮ್ಮನ ... ಭ್ರಷ್ಟಾಚಾರಕ್ಕೆ ಕೈಗೂಡಿಸಿರುವ ಜೂನಿಯರ್ ಇಂಜಿನಿಯ... ಗಳಾದ ಶಿವಯೋಗಿ, ಮಂಜಾ ನಾಯಕ್, ಚಂದ್ರಪ್ಪನ... ವಿರುದ್ಧ ಈಗ ತನಿಖೆ ನಡೆದಿದೆ. ಇವರೆಲ್ಲಾ ಇವತ್ತೋ ನಾಳೆಯೋ ಸಸ್ಪೆಂಡಾಗುವುದು ಗ್ಯಾರಂಟಿ.

ಶಾಸಕ ರೇಣುಕಾಚಾರ್ಯ ತನ್ನ ಸ್ವಂತ ತಮ್ಮನ ... ಕಳ್ಳತನದ ವಿರುದ್ಧ ಇದುವರೆಗೂ ದನಿ ಎತ್ತಿಲ್ಲ ಯಾ...

ಧಾರವಾಡ: ಪತ್ರಕರ್ತರ ಮೇಲಿನ ಹಲ್ಲೆ

ಮರೆಮಾಚಿದ ಚೆಡ್ಡಿಗಳ ದುಷ್ಕೃತ್ಯ!





ಹುಂಬ ಅಂಜುಮನ್ ಲೀಡರ್ ಐ.ಎಂ. ಜವಳಿಯ ಚಿತಾವಣೆಯಿಂದ ಪತ್ರಕರ್ತರು ಫೋಟೋಗ್ರಾಫರ್‌ಗಳ ಮೇಲೆ ಹಲ್ಲೆಯಾಗಿದೆ.


ಅದಕ್ಕಿಂತ ಮುಖ್ಯವಾಗಿ ಈ ಘಟನೆಗೆ ಮೂಲಕಾರಣ ಚೆಡ್ಡಿಗಳ ಧ್ವಂಸ ಬುದ್ಧಿ. ಧಾರವಾಡ ಸಮೀಪದ ಬಾಡ ಗ್ರಾಮದಲ್ಲಿ ಈದ್ಗಾ ಮೈದಾನದಲ್ಲಿದ್ದ ಮೂರು ಮಿನಾರ್ (ಗೋಪುರ)ಗಳನ್ನು ನೆಲಕ್ಕುರುಳಿಸುವ ಮೂಲಕ ಮುಸ್ಲಿಮರನ್ನು ಪ್ರಚೋದಿಸಲು ಪ್ರಯತ್ನಿಸಿದರು ಚೆಡ್ಡಿಗಳು. ಮಿನಾರ್‌ಗಳನ್ನು ಕೆಡವಿದ್ದು ಬಕ್ರೀದ್ ಹಿಂದಿನ ದಿನ. ಮರುದಿನ ಮುಂಜಾನೆ ಪ್ರಾರ್ಥನೆಗೆ ಬಂದ ಬಾಡ ಗ್ರಾಮದ ಮುಸ್ಲಿಮರಿಗೆ ಬರಸಿಡಿಲು ಬಡಿದಂತಾಗಿದೆ. ಆದರೆ ಸಹನೆ ಕಳೆದುಕೊಳ್ಳದ ಮುಸ್ಲಿಮರು ಶಾಂತಿಯುತವಾಗಿ ಪ್ರತಿಭಟಿಸಲು ಶುರು ಮಾಡಿದರು. ಹುಬ್ಬಳ್ಳಿಯ ಅಂಜುಮನ್‌ನ ಐ.ಎಂ. ಜವಳಿಗೆ ಬರಹೇಳಿದರೂ, ಈ ಪುಣ್ಯಾತ್ಮ ಆಗ ಅತ್ತ ತಲೆ ಹಾಕಲೇ ಇಲ್ಲ. ಧಾರವಾಡದ ಎಸ್‌ಪಿ ಕಾಲೆಮಿರ್ಜ ಬಾಡಕ್ಕೆ ಧಾವಿಸಿ, ಮುಸ್ಲಿಮರ ಮನವೊಲಿಸಿ ಪ್ರಾರ್ಥನೆ ನಡೆಯುವಂತೆ ಮಾಡಿ, ಶಾಂತಿ ಕಾಪಾಡಿದರು.

ಜವಳಿ ಹುಡುಗರ ಪೆದ್ದುತನ

ಧಾರವಾಡದ ಹಳೆ ಬಸ್‌ಸ್ಟ್ಯಾಂಡ್ ಬಳಿಯ ಅಂಜುಮನ್ ಕಾಲೇಜಿನಲ್ಲಿ ನಡೆಯುತ್ತಿದ್ದ ಮುಸ್ಲಿಮರ ಸಭೆಯಲ್ಲಿ ಹಲವು ಮುಸ್ಲಿಮ್ ಯುವಕರು, ಮಾಜಿ ಮೇಯರ್ ಐ.ಎಂ. ಜವಳಿಯ ಸೋಮಾರಿತನವನ್ನು ಆಕ್ಷೇಪಿಸಿದ್ದಾರೆ. ಇದನ್ನು ಸುದ್ದಿ ಮಾಡಲು ಹೋದ ಈಟಿವಿ ವರದಿಗಾರ ನಾಗರಾಜ ಕಿರಣಿ, ಸಂಯುಕ್ತ ಕರ್ನಾಟಕ ಛಾಯಾಗ್ರಾಹಕ ಶಿವಲಿಂಗ ಪಾಟೀಲರ ಮೇಲೆ ಜವಳಿಯ ಹುಂಬ, ಪೆದ್ದು ಹುಡುಗರು ಹಲ್ಲೆ ನಡೆಸಿ, ಕ್ಯಾಮರಾಗಳನ್ನೆಲ್ಲ ನುಚ್ಚುನೂರು ಮಾಡಿದ್ದಾರೆ.

ಮರೆಮಾಚುತ್ತಿರುವ ಚೆಡ್ಡಿ ದುಷ್ಕೃತ್ಯ

ಈ ಹಲ್ಲೆಯ ಘಟನೆಯಿಂದಾಗಿ ಚೆಡ್ಡಿಗಳ ಅನಾಹುತಕಾರಿ ದುಷ್ಕೃತ್ಯವೇ ಮರೆಮಾಚುತ್ತಿದೆ. ಚೆಡ್ಡಿಗಳ ಈ ಅಮಲಿಗೆ, ಸೊಕ್ಕಿಗೆ ನೀರು ಎರೆದದ್ದು 'ವಿಶಾಲ ಹಿಂದೂ ಸಮ್ಮೇಳನ' ಎಂಬ ತಲೆತಿರುಕ ಸಮ್ಮೇಳನ. 'ಹಿಂದೂಗಳು ಅಪಾಯದಲ್ಲಿ' ಎಂದೆಲ್ಲಾ ಅರಚಾಡಿದ್ದನ್ನೇ ನಂಬಿದ ಬಾಡಗ್ರಾಮದ ಮತಾಂಧ ಭಜರಂಗಿಗಳು ನಾಗಪ್ಪ ಜೋಡಳ್ಳಿ ಮತ್ತು ಈರಯ್ಯ ಪೂಜಾರ ಎಂಬ ಮಂಗಗಳ ನೇತೃತ್ವದಲ್ಲಿ ರಾತ್ರೋರಾತ್ರಿ ಮೂರು ಮಿನಾರ್‌ಗಳನ್ನು ಕೆಡುವುವ ಅಪಾಯಕಾರಿ ಕೆಲಸ ಮಾಡಿದ್ದಾರೆ. ಬಾಡದ ಮುಸ್ಲಿಮರು ಸಹನೆ ತೋರದಿದ್ದರೆ, ಇಡೀ ಹುಬ್ಬಳ್ಳಿ ಧಾರವಾಡವೇ ಹೊತ್ತಿ ಉರಿದು ಹಲವಾರು ಜೀವಗಳು ಬಲಿಯಾಗುತ್ತಿದ್ದವು. ಸದ್ಯ ಹಾಗಾಗಲಿಲ್ಲ, ಬಾಡದ ಶಾಂತಿಪ್ರಿಯ ಮುಸ್ಲಿಮರನ್ನು ಇದಕ್ಕಾಗಿ ಅಭಿನಂದಿಸಲೇಬೇಕು. ಹಿಂದಿನಿಂದಲೂ ಬಾಡದ ಈದ್ಗಾ ಮೈದಾನವನ್ನು ಮಂದಿರ ಕಟ್ಟಲು ಬಿಟ್ಟುಕೊಡಿ ಎಂದು ತಗಾದೆ ತೆಗೆಯುತ್ತಲೇ ಬಂದಿವೆ ವಾನರ ಚೆಡ್ಡಿಗಳು. ಈಗ ಜವಳಿಯ ಹುಡುಗರು ಪತ್ರಕರ್ತರ ಮೇಲೆ ಹಲ್ಲೆ ಮಾಡಿದ ಘಟನೆಯ ನೆಪದಲ್ಲಿ ಚೆಡ್ಡಿಗಳ ಪಾಪಕೃತ್ಯ ಮಸುಕಾಗುತ್ತಿದೆ.



ಡಿ.ಸಿ. ಶ್ರೀಕರ್

ಪೊಲೀಸ್ ರೈಟ್.... ಆದರೆ ಶೆಟ್ಟರ್?

ಪೊಲೀಸರು ಹಿಂದೆಮುಂದೆ ನೋಡದೇ ಭಜರಂಗಿಗಳಾದ ಈರಯ್ಯ ಪೂಜಾರ, ನಾಗಪ್ಪ ಜೋಡಳ್ಳಿಗಳನ್ನು ಜೈಲಿಗಟ್ಟಿದ್ದಾರೆ. ಆದರೆ ಜಿಲ್ಲಾಉಸ್ತುವಾರಿ ಸಚಿವ ಜಗದೀಶ್ ಶೆಟ್ಟರ್ ಮತ್ತು ಸಂಸದ ಪ್ರಹ್ಲಾದ್ ಜೋಶಿಗಳ ಕುಮ್ಮಕ್ಕಿನಿಂದ ಸ್ಫೂರ್ತಿಗೊಂಡ ದುಷ್ಟ ಭಜರಂಗಿಗಳು ಧಾರವಾಡ ಗ್ರಾಮೀಣ ಠಾಣೆ ಎ... ಹಗಲುರಾತ್ರಿ ಧರಣಿ ನಡೆಸಿ ತಮ್ಮ ಪುಡಿ ಲೀಡರು... ಬಿಡಲು ಒತ್ತಾಯಿಸಿ ಜನರಿಂದ ಛೀ, ಥೂ ಎನಿಸಿಕೊಂ... ಶೆಟ್ಟರ್ ಮತ್ತು ಪ್ರಹ್ಲಾದ್ ಜೋಶಿ ನೇರವಾಗಿ ... ಎಂ.ಎಸ್. ಶ್ರೀಕರ್ ಮತ್ತು ಎಸ್ಪಿ ಬಿ. ಶ್ರೀಕಂಠಪ್ಪ... ಮೇಲೆ ಒತ್ತಡ ತರುತ್ತಿದ್ದಾರೆ. ಇವರ ಒತ್ತಡದ ಕಾ... ಬಾಡ ಗ್ರಾಮಕ್ಕೆ ಹೊರಗಿನ ಮುಸ್ಲಿಮರು ಹೋಗ... ನಿರ್ಬಂಧ ವಿಧಿಸಿದ್ದಾರಲ್ಲದೇ, ಅಮಾಯಕ ಮುಸ್ಲಿಮ... ಬಂಧಿಸಿದ್ದಾರೆ.

ಇತ್ತ ಪತ್ರಕರ್ತರ ಮೇಲೆ ಹಲ್ಲೆ ಮಾಡಿದವ... ಜವಳಿ ಬೇಲ್ ಮೇಲೆ ಬಿಡುಗಡೆ ಮಾಡಿಸಿದ್ದಾನೆ. ಅ... ಮನ್ ಸಂಸ್ಥೆಯವರು ಹಲ್ಲೆ ಘಟನೆಗೆ ಕ್ಷಮೆಯಾ... ಗಾಯಗೊಂಡ ಪತ್ರಕರ್ತರಿಗೆ 30 ಸಾವಿರ ರೂ. ... ತಪ್ಪು ತಿದ್ದಿಕೊಂಡಿದ್ದಾರೆ.

ಪತ್ರಕರ್ತರ ಮೇಲಿನ ಹಲ್ಲೆಯ ವಿ... ಮುಗಿದು ಹೋಗಿದೆ. ಆದರೆ ಶೆ... ಜೋಶಿಗಳ ಚಿತಾವಣೆ ಮುಂದುವರಿದೇ ... ಮಿನಾರ್‌ಗಳನ್ನು ಕೆಡವಿ ಹಾಕುವ ಮ... ಈ ಭಾಗದಲ್ಲಿ ಶಾಂತಿ ಕದಡಲು ಯತ್ನ... ಎಲ್ಲ ಚೆಡ್ಡಿಗಳಿಗೂ ಪೊಲೀಸರು ಸರಿಯ... ಪಾಠ ಕಲಿಸದಿದ್ದರೆ ಮಿನಾರ್‌ಗಳು ಉರುಳು... ಇರುತ್ತವೆ. ಆದರೆ ಪ್ರತಿಸಾರಿ ಬಾಡ ಗ್ರಾ... ಮುಸ್ಲಿಮರಂತೆ ಇತರ ಮುಸ್ಲಿಮರೂ ಸಹನಾ... ರಾಗಿರುವುದು ಅಸಾಧ್ಯ.


ಶಾಂತಿ ಕದಡುವ ನೀಚರಿಗೆ ಬೆಂ... ನೀಡುತ್ತಿರುವ ಶೆಟ್ಟರ್, ಜೋಶಿಗಳಿಗೆ ನಾಚಿಕೆ, ... ಮರ್ಯಾದೆ ಯಾವೂ ಇಲ್ಲವಷ್ಟೇ.

-ಜಗಾಪ್ರ...

ಬಂಗೇರಾ ಬರುವಿಕೆಗಾಗಿ ಕಾಯುತ್ತಿದೆ ಕಾಂಗ್ರೆಸ್!

ರಾಜಕೀಯ ಹೀನ ಹಿತಾಸಕ್ತಿಯೊಂದರ ಪರಿಣಾಮ ...ವಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಸಾಧ್ಯವಾಗಿದ್ದರೂ, ...ನಲ್ ಕರ್ಮಭೂಮಿ ಎನಿಸಿರುವ ಮಂಗಳೂರಿನಲ್ಲಿ ಅಪವಿತ್ರ ಮೈತ್ರಿ ಸಾಧ್ಯವಾಗಿರಲಿಲ್ಲ. ಕಾರಣ ಬಿಜೆಪಿ ...ಕ್ಷಣ ಕಂಡವಾಗುವ ಜೆಡಿಎಸ್ ಜಿಲ್ಲಾಧ್ಯಕ್ಷ ವಸಂತ ...ಗೇರಾರ ಗಟ್ಟಿ ನಿಲುವು.

...ಜಿಲ್ಲಾ ಪಂಚಾಯತ್‌ನ 35 ಸ್ಥಾನಗಳ ಪೈಕಿ ಕಾಂಗ್ರೆಸ್-...ಪಿ 15 ಸ್ಥಾನಗಳನ್ನು ಸಮನಾಗಿ ಹಂಚಿಕೊಂಡಿದ್ದು ...ದ ಹಿಡಿಯಲು ಇವರಿಬ್ಬರೂ ಜೆಡಿಎಸ್‌ನ ಕೈಯಲ್ಲಿದ್ದ ...ನಗಳ ಋಣಕ್ಕೆ ಬಿದ್ದರು. ಅದೇ ಹೊತ್ತಿಗೆ ರಾಜ್ಯದಲ್ಲಿ ...ಪಿ-ಜೆಡಿಎಸ್ ನಡುವೆ ಮಿಲಾಕತ್ತು ನಡೆದು ಹೋಗಿದ್ದು ...ಯಲ್ಲೂ ಹಾಗೆಯೇ ಆಗುತ್ತದೆಂದು ...ರೂ ಲೆಕ್ಕ ಹಾಕಿದ್ದರು. ಆದರೆ ರಫ್ ...ಟಫ್ ಛಾತಿಯ ವಸಂತ ...ಗೇರಾ "ಬೇಕಾದರೆ ಪಕ್ಷ ಬಿಡುತ್ತೇನೆ ...ಪಿ ಜತೆ ಸುತಾರಾಂ ಗುರುತಿಸಿ ...ಕೊಳ್ಳುವುದಿಲ್ಲ" ಎಂದು ಗಟ್ಟಿಯಾಗಿ ...ದ್ದು. ಹೈಕಮಾಂಡ್ ಕೂಡಾ ...ಗೇರಾಗೆ ಸಮಜಾಯಿಷಿ ನೀಡುವಲ್ಲಿ ...ತದ್ದು. ಕೊನೆಗದು ಕಾಂಗ್ರೆಸ್-...ಎಸ್ ಮೈತ್ರಿಕೂಟದ ಜಿಲ್ಲಾ ಪಂಚಾ...ತಿ ಆಡಳಿತ ಆಗುವಲ್ಲಿ ಪರ್ಯಾವ...ವಾಗಿತ್ತು. ಕಾಂಗ್ರೆಸ್‌ನ ಮಮತಾ ... ಅಧ್ಯಕ್ಷೆಯಾಗಿ, ಜೆಡಿಎಸ್‌ನ ...ಗೇರಾ ಶಿಷ್ಯ ಧರಣೇಂದ್ರಕುಮಾರ್ ...ಉಪಾಧ್ಯಕ್ಷರಾಗಿ ಕಳೆದ 11 ತಿಂಗಳ ಕಾಲ ...ವೂ ಸುಸೂತ್ರವಾಗಿ ನಡೆದಿತ್ತು.



...ಆದರೆ ಇತ್ತ ಅಡಿಯಿಂದ ಮುಡಿಯತನಕ ಕರಾವಳಿಯ ...ಕಾರಣದಲ್ಲಿ ಬಿಜೆಪಿಯದ್ದೇ ಆರ್ಭಟವಿರುವಾಗ ಜಿಲ್ಲಾ ...ಚಾಯತ್‌ನ ಈ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಹೆಚ್ಚು ...ರಿ ನೀಡಿದ್ದು ಮೋದಿ ಶಿಷ್ಯ ಕಂ ಉಸ್ತುವಾರಿ ಮಂತ್ರಿ ...ರಾಜಶೆಟ್ಟಿಗೆ. ಪರಿಣಾಮವಾಗಿ ಒಳಗೊಳಗೇ ಕುದುರೆ ...ಪಾರ ಶುರುವಿಟ್ಟಿತು. ಆಸೆ-ಆಮಿಷ ಓಲೈಕೆಗಳೂ ...ಬಂದವು. ಜೆಡಿಎಸ್ ಹೈಕಮಾಂಡ್‌ನಿಂದಲೂ ಬಿಜೆಪಿಗೆ ... ಬದಲಾಯಿಸುವಂತೆ ಫರ್ಮಾನು ...ತು. ಆದರೆ ವಸಂತ ಬಂಗೇರಾ ಮಾತ್ರ ...ಡುವಾಗಲಿಲ್ಲ. "ನೀವು ಬಿಜೆಪಿಗೆ ಕೈ ...ಡುವುದಾದರೆ ಎತ್ತಿ ನಾನೇ ನಿಮ್ಮಿಂದ ದೂರ ಇರುತ್ತೇನೆ" ...ದುಬಿಟ್ಟರು. ಈ ನಡುವೆ ಬಿಜೆಪಿಯವರು ಅವಿಶ್ವಾಸ ...ರ್ಣಯ ಮಂಡಿಸಿ, ಎಲ್ಲಾ ವೈರುಧ್ಯಗಳ ನಡುವೆ ಮತ ...ಕುವ ದಿನವೂ ಬಂತು. ಜೆಡಿಎಸ್‌ನ ಅಜೀಜ್ ಮಲಾರ್, ...ಜಶ್ರೀ ಹೆಗ್ಡೆ ಮತ್ತು ಸುಚರಿತ ಶೆಟ್ಟಿ ಬಿಜೆಪಿಗೆ ...ಬಲಿಸಿದ್ದು ಜಿಲ್ಲಾ ಪಂಚಾಯ್ತಿಯಲ್ಲೂ ಬಿಜೆಪಿ ಅಧಿಕಾರ ...ಡಿಯಿತು.

ಮಂಗಳೂರು

...ಇದೆಲ್ಲದರ ಹಿನ್ನೆಲೆಯಲ್ಲಿ ಮೊನ್ನೆ ಬಂಗೇರಾ ಜೆಡಿಎಸ್ ...ಲ್ಲಾ ಅಧ್ಯಕ್ಷತೆಗೆ ರಾಜೀನಾಮೆ ಘೋಷಿಸಿದ್ದಾರೆ. ಅಲ್ಲಿಗೆ ...ಲ್ಲೆಯಲ್ಲಿ ಬಿಜೆಪಿಯ ಆರ್ಭಟದ ನಡುವೆ ತಣ್ಣಗೆ ...ಹಾರಾಡುತ್ತಿದ್ದ ಜೆಡಿಎಸ್‌ನ ಸ್ಥಿತಿ ಶವದ ಪೆಟ್ಟಿಗೆಗೆ ಮೊಳೆ ...ಹೊಡೆದಂತಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಜೆಡಿಎಸ್ ...ಎಂದರೆ ಅದು ಬಂಗೇರಾ ಅನ್ನುವ ಸ್ಥಿತಿ ಇದೆ. 1999 ರಿಂದ ಜೆಡಿಎಸ್‌ನ ಜಿಲ್ಲಾಧ್ಯಕ್ಷರಾಗಿರುವ ಬಂಗೇರಾರ ಅಸಭ್ಯ ಬೈಗುಳ, ಒರಟು ವರ್ತನೆಗಳೇನೇ ಇರಲಿ, ತನ್ನ ಸ್ವಂತ ತಾಕತ್ತಿನಿಂದಲೇ ಪಕ್ಷವನ್ನು ಕಟ್ಟಿ ಬೆಳೆಸಿದ ಹೆಗ್ಗಳಿಕೆ ಬಂಗೇರಾರಿಗೆ ಇದೆ. ಮೂರು ಬಾರಿ ಶಾಸಕರಾಗಿ, ಒಂದು ಸಲ ಮುಖ್ಯ ಸಚೇತಕರಾಗಿ ಮಿಂಚಿದ ಬಂಗೇರಾ ಬೆಳ್ತಂಗಡಿಯಲ್ಲಿ ಕಾಂಗ್ರೆಸ್‌ನ ಮನೋಪಲಿಯನ್ನು ಮುರಿದು ಶಾಸಕರಾದವರು. ಬಿಜೆಪಿಯ ಹೊಲಸು ರಾಜಕೀಯದಿಂದ ಬೇಸತ್ತು ಅಷ್ಟೇ ಬೇಗ ಜನತಾದಳಕ್ಕೆ ಬಂದು ರಾಮಕೃಷ್ಣ ಹೆಗಡೆಯ ಅನುಯಾಯಿಯಾದವರು. ಅಲ್ಲಿಂದ ಈತನಕ ಜೆಡಿಎಸ್‌ನಲ್ಲೇ ಇದ್ದು ರಾಜಕಾರಣ ಮಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷದ ಅಸ್ತಿತ್ವವನ್ನು ಉಳಿಸಿಕೊಂಡು ಬಂದವರು ಬಂಗೇರಾ.

ಬೆಳ್ತಂಗಡಿಯಲ್ಲಿ ಬಂಗೇರಾರನ್ನು ರಾಜಕೀಯವಾಗಿ ಮುಗಿಸಲು ಸ್ವಂತ ತಮ್ಮ ಪ್ರಭಾಕರ ಬಂಗೇರಾನಂತಹ ಪುಣ್ಯಕೋಟಿಯನ್ನೇ ಕಣಕ್ಕಿಳಿಸಿ, ಕಾಂಗ್ರೆಸ್-ಬಿಜೆಪಿ-ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟು ಕಳೆದ ಎರಡು ಚುನಾವಣೆಗಳಲ್ಲಿ ಬಿಜೆಪಿಗೆ ಗೆಲುವು ಅನಾಯಾಸವಾಗಿತ್ತು. ಕಳೆದ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಐದು ಜೆಡಿಎಸ್ ಸ್ಥಾನಗಳ ಪೈಕಿ ಮೂರು ಸ್ಥಾನಗಳು ಬಂಗೇರಾ ಸ್ವಂತ ವರ್ಚಸ್ಸಿನಿಂದಲೇ ಲಭಿಸಿದ್ದವು. ಇದೀಗ ಬಿಜೆಪಿ ಜಿಲ್ಲಾ ಪಂಚಾಯ್ತಿಯಲ್ಲಿ ಅಧಿಕಾರ ಹಿಡಿದಿರಬಹುದು. ಆದರೆ ಒಂದು ರೀತಿಯಲ್ಲಿ ಇದು ಜಿಲ್ಲಾ ರಾಜಕಾರಣದಲ್ಲಿ ಒಟ್ಟಾರೆ ಜೆಡಿಎಸ್‌ನ ಅವನತಿಯ ಜತೆಗೆ ಬಿಜೆಪಿಯ ಸೋಲು ಕೂಡಾ ಹೌದು.

ಯಾಕೆಂದರೆ ವಸಂತಾ ಬಂಗೇರಾ ಕಾಂಗ್ರೆಸ್‌ಗೆ ಸೇರುವ ಮಾತು ಈಗ ಎಲ್ಲೆಡೆ ಕೇಳಿಬರುತ್ತಿದೆ. ಈ ಮಾತು ಮೂರ್ನಾಲ್ಕು ತಿಂಗಳಿನಿಂದಲೇ ಊರ್ಜಿತದಲ್ಲಿದ್ದು ಅದಕ್ಕೀಗ ರೆಕ್ಕೆ-ಪುಕ್ಕ ಬಲಿತಿದೆ. ಜೆಡಿಎಸ್ ಅಧ್ಯಕ್ಷತೆಗೆ ರಾಜೀನಾಮೆ ಇತ್ತ ಕ್ಷಣದಿಂದಲೇ ಆಸ್ಕರ್-ಮೊಯ್ಲಿ ಜತೆ ಒಂದು ಸುತ್ತಿನ ಮಾತುಕತೆಯೂ ನಡೆದಿದೆ. ರಾಜ್ಯ ರಾಜಕಾರಣದಲ್ಲಿ ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದ್ದಷ್ಟೇ ಮಹತ್ವ ಬಂಗೇರಾ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ಗೆ ಸೇರುವಲ್ಲಿಯೂ ಇದೆ. ಕಾರಣ ಬಂಗೇರಾ ಜತೆಗೆ ಬೆಳ್ತಂಗಡಿಯ ಜೆಡಿಎಸ್ ಕಾಂಗ್ರೆಸ್ ಜತೆ ವಿಲೀನವಾಗುತ್ತದೆ. ಆ ಪ್ರಕ್ರಿಯೆಯಲ್ಲಿ ಬಂಗೇರಾ ಪರವಿರುವ ಕುಂಟಿಕಾನ ಲಕ್ಷ್ಮಣಗೌಡರನ್ನೊಳಗೊಂಡ ಪುತ್ತೂರು ಘಟಕ, ಉಳ್ಳಾಲದ ಅಲ್ಪಸಂಖ್ಯಾತರ ಲೀಡರ್ ಫಾರೂಕ್ ಉಳ್ಳಾಲ, ಜೆ.ಎಸ್. ನೊರಾನ್ಹಾ ಸೇರಿದಂತೆ ಜೆಡಿಎಸ್‌ನ ದೊಡ್ಡಪಾಲು ಕಾಂಗ್ರೆಸ್‌ನತ್ತ ಹರಿದುಬರಲಿದೆ.

ಕೊನೆಕಿಡಿ: ದುರಂತವೆಂದರೆ ಬಿಜೆಪಿ ಜತೆ ಜೆಡಿಎಸ್ ಕೈ ಜೋಡಿಸಿ ಜಾತ್ಯತೀತ ತತ್ವಗಳಿಗೆ ಎಳ್ಳುನೀರು ಬಿಡುವ ಈ ಪ್ರಕ್ರಿಯೆಯಲ್ಲಿ ಜೆಡಿಎಸ್‌ನ ಕೋಣಾಜೆಯ ಜಿಲ್ಲಾ ಪಂಚಾಯ್ತಿ ಸದಸ್ಯ ಅಜೀಜ್ ಮಲಾರ್ ಎನ್ನುವ ಅಲ್ಪಸಂಖ್ಯಾತ 'ಕಿಂಗ್ ಮೇಕರ್' ಎನಿಸಿದ್ದು!

–ಪ್ರಕಾಶ್ ಪಿಂಟೋ

ಹೈ.ಕ: ಕುಮಾರನಿಗೆ ನಿದ್ರೆ ಯೋಗ ಇಲ್ಲ

ಹೈದರಾಬಾದ್ ಕರ್ನಾಟಕದಲ್ಲಿ ಕುಮಾರಸ್ವಾಮಿಯ ಗ್ರಾಮವಾಸ್ತವ್ಯ ಯಶಸ್ವಿಯಾಗುವ ಲಕ್ಷಣಗಳೇ ಕಾಣಿಸುತ್ತಿಲ್ಲ. ಮೊದಲಿಗೆ ಕೊಪ್ಪಳದ ಯಲಬುರ್ಗಾ ತಾಲ್ಲೂಕಿನ ಅಡವಿಹಳ್ಳಿಯಲ್ಲಿ ಕುಮಾರಸ್ವಾಮಿ ಮಲಗಲು ನಿರ್ಧರಿಸಿದಾಗ ಕಾಂಗ್ರೆಸ್ ಶಾಸಕ ಬಸವರಾಜ ರಾಯರೆಡ್ಡಿ ಅಧಿಕಾರಿಗಳ ಮೂಲಕ ಎಲ್ಲ ಓಕೆ ಇದೆ; ನೀವ್ ಬರೋದ್ಯಾಕೆ? ಅಂತ ವರದಿ ಕೊಡಿಸಿ ಕ್ಯಾನ್ಸಲ್ ಮಾಡಿಸಿಬಿಟ್ಟ. ನಂತರ ಹೊಸಪೇಟೆಯ ಪೋತಲಕಟ್ಟೆ ಗ್ರಾಮದ ಕುರುಬರ ಮನೆಯಲ್ಲಿ ಮಲಗಲು ರೆಡಿಯಾದಾಗ, ಎಂ.ಪಿ. ಪ್ರಕಾಶ್ ಮತ್ತು ಸಂತೋಷ್ ಲಾಡ್‌ನ ಭಿನ್ನಮತ ಬಳಸಿಕೊಂಡ ಕಾಂಗ್ರೆಸ್ ಬೆಳಗಾಗುವುದರೊಳಗೆ ಸಿದ್ಧರಾಮಯ್ಯರ ಕಟೌಟ್ ನಿಲ್ಲಿಸಿದ ಕಾರಣ ಇಡೀ ಕಾರ್ಯಕ್ರಮ ರದ್ದಾಯಿತು. ಈಗ ಜನವರಿ 3 ರಂದು ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಈರಲಗಡ್ಡಿ ಗ್ರಾಮ ವಾಸ ಕೂಡ ಮುನಿಯಪ್ಪನ ಮುನಿಸು, ಅಮರೇಗೌಡ ಭಯ್ಯಾಪುರನ ಸಿಟ್ಟು, ರಾಯಚೂರಿನ ಭಾವೀ ಶಾಸಕನೆಂದೆ ಬಿಂಬಿಸಿಕೊಳ್ಳುವ ಎಂ. ಈರಣ್ಣನಿಗೆ ಕತ್ತರಿ ಹಾಕುವ ಜೆಡಿಎಸ್‌ನ ಪ್ರಯತ್ನ... ಇದೆಲ್ಲವನ್ನೂ ನೋಡಿಯೇ ಭಿನ್ನಮತಕ್ಕೆ ಬೆದರಿದ ಕುಮಾರಸ್ವಾಮಿ ಇಡೀ ಕಾರ್ಯಕ್ರಮ ರದ್ದು ಮಾಡಿ ಧರ್ಮಸ್ಥಳಕ್ಕೆ ಓಡಿಹೋಗಿಬಿಟ್ಟರು.

ಕಾಂಗ್ರೆಸ್‌ನ ಶಾಸಕ ಭೋಸರಾಜನ ಮಾನ್ವಿ ಕ್ಷೇತ್ರದ ಈರಲಗಡ್ಡಿ ಬಸ್ ಸಂಪರ್ಕ ಇಲ್ಲದ ಗ್ರಾಮ. ಈ ಹಿಂದೆ ಕುಮಾರಸ್ವಾಮಿ ಹೋದ ಹಳ್ಳಿಗಳಂತೆ ಇಲ್ಲೂ ಜಾಲಿ ಕಡಿಯಲಾಗಿದೆ. ಶಾಲೆಗೆ ಸುಣ್ಣ; ರಸ್ತೆಗೆ ಕಲ್ಲು ಮಣ್ಣು ಮಲಗುವ ಕೋಣೆ ರೀತಿ ಸ್ವಚ್ಛಗೊಂಡಿದೆ. ಅದರ ಜೊತೆಗೆ ಮುಖ್ಯಮಂತ್ರಿಗೆ ಭದ್ರತೆಗಾಗಿ ಅಂತ ಅವರು ಮಲಗಬೇಕಿದ್ದ ವಿರೇಶ ನಾಯಕನ ಮನೆಯ ಪಕ್ಕದ ಬಡ ಕರಿಯಪ್ಪನ ಮನೆಯನ್ನು ಒಡೆದು ಹಾಕಲಾಗಿದೆ. ಇದಕ್ಕೆ ಕಾರಣ ಈ ಹಿಂದೆ ಧಾರವಾಡ ಗ್ರಾಮ ವಾಸದ ಸಂದರ್ಭದಲ್ಲಿ ಹಾವಿನಿಂದ, ಮತ್ತೊಮ್ಮೆ ಚೇಳಿನಿಂದ ಬಚಾವಾಗಿದ್ದ ಮುಖ್ಯಮಂತ್ರಿಗೆ ಕರಿಯಪ್ಪ ಗುಡಿಸಲಿನಲ್ಲಿ ಏನಾದರೂ ವಿಷ ಜಂತುಗಳಿರಬಹುದೆಂದು. ಅದಕ್ಕೆ ಬಡ ಕರಿಯಪ್ಪನ ಮನೆ ಬಲಿಯಾಗಿದೆ.

ಇದೆಲ್ಲದರೊಂದಿಗೆ ಅತೃಪ್ತಿಯಿಂದ ಕುದಿಯುತ್ತಿರುವ ಜೆಡಿಎಸ್‌ನ ಬಣವೊಂದಿದೆ. ಸಿದ್ಧರಾಮಯ್ಯ ಗೆಲುವಿನಿಂದ ದಿಗಿಲುಗೊಂಡಿರುವ ಕಲ್ಮಲಾ ಶಾಸಕ ಮುನಿಯಪ್ಪ, ಲಿಂಗಸೂರಿನ ಅಮರೇಗೌಡ, ದೇವದುರ್ಗದ ಆಲ್ಕೋಡು ಹನುಮಂತಪ್ಪ ಇವರಿಗೆಲ್ಲ ಕುಮಾರಸ್ವಾಮಿ ಜೊತೆ ಕಾಣಿಸಿಕೊಂಡರೆ ನಾಳೆ ಕುರುಬರ ಓಟು ಬರಲಿಕ್ಕಿಲ್ಲ ಅನ್ನೋ ಭಯವಿದೆ. ಜೊತೆಗೆ ಸಿದ್ದು ಸಂಪರ್ಕದಲ್ಲಿರುವ ತನ್ನನ್ನು ಸಂಪುಟಕ್ಕೆ ತೆಗೆದುಕೊಳ್ಳದಿರುವುದರ ಬಗ್ಗೆ ಮುನಿಯಪ್ಪನಿಗೆ ಸಿಟ್ಟು. ಮತ್ತು ಲಿಂಗಸೂರಿನ ಅಮರೇಗೌಡನನ್ನು ಇದೇ ಕಾರಣದಿಂದಲೇ ದೂರ ಇಟ್ಟಿರುವುದು ಕೂಡ ಅಮರೇಗೌಡನ ಸಿಟ್ಟಿಗೆ ಕಾರಣವಾಗಿದೆ. ಹೀಗಾಗಿ ಬಹುತೇಕ ಜಿಲ್ಲೆಯ ಜೆಡಿಎಸ್‌ನ ಶಾಸಕರು ನಡೆಯುವರೆಗೂ ಇಲ್ಲಿರೋಣ, ನಂತರ ಕಾಂಗ್ರೆಸ್‌ಗೆ ಜಂಪ್ ಮಾಡೋಣ ಎಂದೇ ಕಾದು ಕುಂತಿದ್ದಾರೆ.




ಬಯ್ಯಾಪುರ



ಭೋಸರಾಜ

ರಾಯಚೂರಿನಲ್ಲಿ ಮುಂದೆ ತನ್ನ ಟಿಕೆಟ್‌ಗೆ ಅಡ್ಡ ಆಗುತ್ತಾನೆಂದು ಜಿಲ್ಲಾಧ್ಯಕ್ಷ ಶೇಖ್ ರಿಜ್ವಾನನ್ನು ಅಲ್ಲಿಂದ ಎತ್ತಿ ಆ ಜಾಗಕ್ಕೆ ಗಿರಿಜಾ ಶಂಕರನನ್ನು ತರಬೇಕೆಂದು ಒಂದು ಗುಂಪು ಹೋರಾಡುತ್ತಿದ್ದರೆ, ಅವರಿಗೆ ತಾನು ಈಗಾಗಲೇ ರಾಯಚೂರಿಗೆ ಶಾಸಕನೆಂಬಂತೆ ತಿರುಗುತ್ತಿರುವ ಈರಣ್ಣನ ಬೆಂಬಲ ಬೇರೆ. ಮುಯ್ಯಿಗೆ ಮುಯ್ಯಿ ...ಸ್ಟೇಟ್ ಹಗರಣವನ್ನು ಎತ್ತಿ ಪತ್ರಿಕೆಗಳಿಗೆ ಕೊಟ್ಟು ... ಬಿಟ್ಟಿತ್ತು.

ಇದಿಷ್ಟು ಮಾಹಿತಿ ಪಡೆದುಕೊಂಡ ಕಾಂಗ್ರೆಸ್‌ನ ಶಾಸಕ ಭೋಸರಾಜು ತನ್ನ ತಾಲ್ಲೂಕಿಗೆ ಮುಖ್ಯಮಂತ್ರಿ ಬಂದ್ರೆ ಜೆಡಿಎಸ್ ವರ್ಚಸ್ಸು ಹೆಚ್ಚುವುದು ಎಂಬ ಭಯದಿಂದ ಜೆಡಿಎಸ್‌ನ ಭಿನ್ನಮತವನ್ನು ಮುಖ್ಯಮಂತ್ರಿಗೆ ತಲುಪಿಸಿದ್ದಾನೆ. ಜೆಡಿಎಸ್. ಮೊದಲಿನಿಂದಲೂ ಜಿಲ್ಲಾ ಮಂತ್ರಿ ಆಲ್ಕೋಡ್ ಹನುಮಂತಪ್ಪ ಜಿಲ್ಲೆಯ ಯಾವ ಕಾರ್ಯಕರ್ತನನ್ನು ಹಚ್ಚಿಕೊಂಡಿಲ್ಲ. ಅದರಲ್ಲೂ ಆತ ವಾಸವಾಗಿರುವುದು ಧಾರವಾಡದಲ್ಲಿ! ಹೀಗಾಗಿ ಎರಡು ಜಿಲ್ಲೆ ದಾಟಿ ತಿಂಗಳಿಗೆರಡು ಬಾರಿ ಬಂದು ಹೋಗುವ ಆಲ್ಕೋಡ್ ಪಕ್ಷ ಸಂಘಟನೆಯನ್ನೇ ಕೈಬಿಟ್ಟಿದ್ದಾರೆ. ಹೀಗಿರುವಾಗ ಆಲ್ಕೋಡರ ಮಾತು ನಂಬಿ ಮುಖ್ಯಮಂತ್ರಿ ಬರುವ ತೀರ್ಮಾನಕ್ಕೆ ಶಾಸಕರಿಂದ ಆಸಕ್ತಿಯೇ ಕಂಡುಬಂದಿಲ್ಲ.



"ಬರೋದಾದ್ರೆ ಬರ್ರೀ, ನಮ್ಮದೇನು? ನೀವ್ ಬಂದ್ರೆ ನಿಮ್ಮ ಜೊತೆ ಸ್ಟೇಜ್ ಮ್ಯಾಲೆ ಕುಂತು ಎದ್ದು ಹೋಗ್ತಿವಿ" ಎಂಬರ್ಥದಲ್ಲಿ ಇಬ್ಬರೂ ಶಾಸಕರು ಸೀದಾ ಮುಖ್ಯಮಂತ್ರಿಗೆ ಚುಚ್ಚಿದ್ದಾರೆ.


ಸಿದ್ಧರಾಮಯ್ಯ ಗೆಲುವು ಮತ್ತು ಜಮೀರ್ ರಾಜೀನಾಮೆಯಿಂದ ಕಂಗೆಟ್ಟಿರುವ ಕುಮಾರಸ್ವಾಮಿಗೆ ಜೆಡಿಎಸ್‌ನ ಭಿನ್ನಮತ ಕಂಡು ಏನು ಮಾಡಬೇಕೆಂಬುದೇ ಗೊತ್ತಾಗಿಲ್ಲ. ಅದಕ್ಕೆ ಮಂಗಳವಾರ ಸಂಜೆಯಾದರೂ ಜಿಲ್ಲಾಡಳಿತಕ್ಕೆ ಯಾವುದೇ ಮಾಹಿತಿ ನೀಡದ ವಿಧಾನಸೌಧ ಬುಧವಾರದಂದು ಬರುವುದಿಲ್ಲ ಎಂದು ತಿಳಿಸಿದೆ. ಈ ಸುದ್ದಿಯಿಂದ ಖುಷಿಯಾಗಿದ್ದು ಕಾಂಗ್ರೆಸ್ ಮತ್ತು ಜೆಡಿಎಸ್‌ನ ಅತೃಪ್ತ ಬಣ.

ಎಲ್ಲ ಸರಿ, ಪ್ರಮಾಣವಚನ ಸಂದರ್ಭದಲ್ಲಿ ಪ್ರಜೆಗಳ ಹಿತ ಕಾಪಾಡ್ತೀನಿ ಅಂದಿದ್ದ ಕುಮಾರಸ್ವಾಮಿ ತನ್ನ ಭದ್ರತೆಗಾಗಿ ತಾನು ಮಲಗುವ ಈರಲಗಡ್ಡಿಯ ವಿರೇಶ ನಾಯಕನ ಮನೆ ಪಕ್ಕದ ಕರಿಯಪ್ಪನ ಮನೆ ಬೀಳಿಸಿದರಲ್ಲ, ಇದಕ್ಕೇನೆನ್ನಬೇಕು? ಮನೆಯಲ್ಲೊಬ್ಬರು ಮಾಜಿ ಪ್ರಧಾನಿ ಇರುವಾಗ ಅವರಿಂದ ಟ್ಯೂಷನ್ನನ್ನಾದರೂ ಹೇಳಿಸಿಕೊಳ್ಳಬಾರದೇ? ಹೇಗೂ ಕುಮಾರಸ್ವಾಮಿ ಮಾಜಿ ಪ್ರಧಾನಿಯಿಂದ ಪಾಠವನ್ನು ಕಲಿಯುತ್ತಿದ್ದಾರೆ. ಇದನ್ನೂ ಅಲ್ಲೇ ಕಲಿಯಲಿ ಮತ್ತು ವಿಧಾನಸೌಧದಲ್ಲಿ ನೆಟ್ಟಗೆ ಕುಂತು ಕೆಲಸ ಮಾಡಲಿ!

–ವರದಿಗಾರ

ಮುಂಡರಗಿಯ ಮೊಂಡ ಎಮ್ಮೆಲ್ಲೆಯೂ, ಅವನ ಭಂಡ ಶಿಷ್ಯ ಸಿಪಿಐ ಪಾಟೀಲನೂ...

ಮುಂಡರಗಿ ಶಾಸಕ ಎಸ್.ಎಸ್. ಪಾಟೀಲನ ಪೊಂದಾಟವಿದು. ಆತನಿಗೆ ತನ್ನ ಸಂಬಂಧಿ, ಲೂಟಿಕೋರ, ದಲಿತ ವಿರೋಧಿ ಸಿಪಿಐ ಪಿ.ಕೆ. ಪಾಟೀಲನನ್ನು ಬಿಟ್ಟಿರಲಾಗೊಲ್ಲ. ...ಮೊನ್ನೆ ದಲಿತ ವೃದ್ಧರೊಬ್ಬರ ಸಾವಿಗೆ ಕಾರಣವಾದ ಪಿ.ಕೆ. ಪಾಟೀಲನನ್ನು ಎತ್ತಿ ಗದಗಿಗೆ ಒಗೆಯಲಾಯ್ತು. ...'ಶರಣಪಿಂಡ' ಎಸ್.ಎಸ್. ಪಾಟೀಲ ಎಂ.ಪಿ. ಪ್ರಕಾಶರಿಗೆ ...ದ್ದು ಮತ್ತೆ ಮುಂಡರಗಿಗೆ ... ಸಿಪಿಐನನ್ನು ವಾಪಸ್ ...ದ್ದಾನೆ. So, ಎಂದಿನಂತೆ ಮಟ್ಕಾ, ..., ಮ್ಯಾಂಗನೀಸ್ ಲಾರಿಗಳಿಗೆ ... ಸಿಕ್ಕು, ಲೂಟಿ ನಿತ್ಯ ...ನಿರಂತರವಾಗಿ ಮುಂದುವರಿದೇ ಇದೆ.




ಮೊಂಡ ಎಮ್ಮೆಲ್ಲೆ ಎಸ್.ಎಸ್. ಪಾಟೀಲ್

ಹುಟ್ಟಿದ್ದೇ ತಿನ್ನಲಿಕ್ಕಾಗಿ....

ಇತ್ತೀಚೆಗಷ್ಟೇ ಸರ್ಕಾರದ ಅಕ್ಕಿಯ ಕಳ್ಳತನ ಪ್ರಕರಣದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಯೊಬ್ಬನಿಂದ ಹತ್ತುಸಾವಿರ ರೂಪಾಯಿ ಪಡೆದು, ಅಕ್ಕಿ ಕಳ್ಳರಿಗೆ ರಕ್ಷಣೆ ನೀಡಿ ಸುದ್ದಿಯಾಗಿದ್ದ ಪಿ.ಕೆ. ಪಾಟೀಲ್ ಈಗ ದಲಿತ ವೃದ್ಧ ಫಕೀರಪ್ಪ ಎಂಬುವವರ ಸಾವಿಗೆ ಕಾರಣನಾಗುವ ಮೂಲಕ ಇಡೀ ಮುಂಡರಗಿಗೆ ಬೇಸರವಾಗಿದ್ದಾನೆ. ಇತ್ತೀಚೆಗಷ್ಟೇ ಮ್ಯಾಂಗನೀಸ್ ಲಾರಿಗಳವರಿಂದ ತನ್ನ ಮನೆಯಲ್ಲೇ ದುಡ್ಡು ಪಡೆದಿದ್ದು ವಿಡಿಯೋ ರೆಕಾರ್ಡ್ ಆದ ಸುದ್ದಿ ಎದ್ದಿದ್ದು ಈ ಸಲವೂ ಶಾಸಕನ ಅಭಯಹಸ್ತ ಪಿ.ಕೆ. ಪಾಟೀಲ್ ಅಲಿಯಾಸ್ ಪುಥುಗೌಡ ಪಾಟೀಲನ ಮೇಲೆ ಇತ್ತು, ತಾಲ್ಲೂಕಿನ ಹಳ್ಳಿಕೇರಿ, ಕಲಕೇರಿ ಗ್ರಾಮಗಳಲ್ಲಿ ದಲಿತರ ಮೇಲೆ ಹಲ್ಲೆ ನಡೆದಾಗ, ಸವರ್ಣೀಯರ ಪರ ನಿಂತು ದಲಿತರನ್ನು ಹಣಿಯಲು ಮುಂದಾಗಿದ್ದ, ಮುಂಡರಗಿಯ ಸಾರಿಗೆ ಸಂಸ್ಥೆ ಡಿಪೋದಲ್ಲಿ 4 ಲಕ್ಷ ರೂ. ಕಳ್ಳತನವಾದಾಗ ದಲಿತ ಯುವಕ ಹನುಮಂತಪ್ಪ ಪೂಜಾರನನ್ನು ಸುಮ್ಮಸುಮ್ಮನೇ ನಾಲ್ಕು ದಿನ ಬಂಧನದಲ್ಲಿಟ್ಟು ಥಳಿಸಿಬಿಟ್ಟ. ಹನುಮಂತಪ್ಪನ ನೊಂದ ತಂದೆ ಫಕೀರಪ್ಪ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡುಬಿಟ್ಟರು. ಸದಾ ಪಿ.ಕೆ. ಪಾಟೀಲನ ವಿರುದ್ಧ ಕತ್ತಿ ಮಸೆಯುತ್ತಿದ್ದ ಜೆಡಿ(ಎಸ್) ಜಿಲ್ಲಾ ಕಾರ್ಯಾಧ್ಯಕ್ಷ ರವಿದಂಡಿನ ಇದೇ ಸಂದರ್ಭ ಬಳಸಿಕೊಂಡು ಪಾಟೀಲನನ್ನು ಗದಗಿನ ಡಿ.ಸಿ.ಆರ್.ಬಿ.ಗೆ ವರ್ಗಾ ಮಾಡಿಸಿದ. ಆದರೆ ಮುಂಡರಗಿಯ ಶನಿ ಶಾಸಕ ಎಸ್.ಎಸ್. ಪಾಟೀಲ್ ಜೆಡಿಎಸ್‌ನ ಮುತ್ತಿನ ಪೆಂಡಿಮಠನ ಸಪೋರ್ಟು ಪಡೆದು ಮತ್ತೆ ಪಿ.ಕೆ. ಪಾಟೀಲನನ್ನು ಮುಂಡರಗಿಗೆ ತಂದೇ ಬಿಟ್ಟಿದ್ದಾನೆ.



ಫಕೀರಪ್ಪ



ಭಂಡ ಸಿಪಿಐ ಪಿ.ಕೆ. ಪಾಟೀಲ್

ಮಟ್ಕಾ-ಮ್ಯಾಂಗನೀಸ್ ಮಂತ್ಲಿ

ಮುಂಡರಗಿಯ ಹಿರೇವಡ್ಡಟ್ಟಿ, ಮೇವುಂಡಿ, ಕೊರ್ಲಹಳ್ಳಿ, ಕದಾಂಪುರ, ಡಂಬಳ, ಕಲಕೇರಿ, ಹಾರೋಗೇರಿ ಸೇರಿದಂತೆ ಬಹುತೇಕ ಎಲ್ಲ ಹಳ್ಳಿಗಳಲ್ಲಿ ಮಟ್ಕಾ ಜನರ ಜೀವ ಹಿಂಡುತ್ತಿದೆ. ಮುಂಡರಗಿ ಪಟ್ಟಣಕ್ಕೆ ಕುಖ್ಯಾತ ದುರ್ಗಾಸಾ ತಪ್ಪಡಿಯ ಮಗ, ಎ.ಪಿ.ಎಂ.ಸಿ. ಸದಸ್ಯ ರಾಜೇಸಾಬನೇ ಮಟ್ಕಾ ದೊರೆಯಾದರೆ, ಗ್ರಾಮೀಣ ಪ್ರದೇಶಗಳಿಗೆ ಕಲಕೇರಿಯ ಅಪ್ಪಣ್ಣ ಮೇಟಿಯೇ ಬುಕ್ಕಿ. ಇವರಿಂದ ಪಿ.ಕೆ. ಪಾಟೀಲನಿಗೆ ಮಂತ್ಲಿ ಮಿನಿಮಮ್ ಒಂದು ಲಕ್ಷ ಗ್ಯಾರಂಟಿ. ಪ್ರತಿ ಟೆಂಪೊ, ಟ್ರ್ಯಾಕ್ಸ್‌ನಿಂದ ಮಂತ್ಲಿ 300 ರೂ., ಮ್ಯಾಂಗನೀಸ್ ಲಾರಿಯಿಂದ 500 ರೂ., ಸುಜಲಾನ್ ಕಂಪನಿಯಿಂದ 15 ಸಾವಿರ ಹೀಗೆ ಮಂತ್ಲಿಯೋ ಮಂತ್ಲಿ ಈ ಸಿಪಿಐಗೆ. ಈತನ ನೆಚ್ಚಿನ ಪೊಲೀಸ್ ಪೇದೆ ರಾಮೇನಹಳ್ಳಿಯೇ ವಸೂಲಿ ಪುವೀಣ.

ಮುಂಡರಗಿಯ ಬಡವರು, ದಲಿತರು ಉಸಿರಾಡಬೇಕೆಂದರೆ ಪಿ.ಕೆ. ಪಾಟೀಲನನ್ನು ಎತ್ತಂಗಡಿ ಮಾಡಬೇಕು. ಆದರೆ ಮೊಂಡ ಶಾಸಕ ಎಸ್.ಎಸ್. ಪಾಟೀಲ್ ಬಿಟ್ಟಾನೆಯೆ?

–ವರದಿಗಾರ

ಇನ್ನೊಂದು ಗಮನಾರ್ಹವಾದ ವಿಷಯವೆಂದರೆ ಸೀತಾವಿಯೋಗವೆಂದು ರಾಮನು ಮಾಡುವ ಪ್ರಲಾಪದ ರೀತಿ. ಅವನ ದುಃಖದ ಕಾರಣ. ರಾಮನಿಗೆ, ಸೀತೆ ಅಪಹೃತಳಾಗಿ ಯಾವ ಕ್ಷೋಭೆಗೋ ಸಿಕ್ಕು ನರಳುತ್ತಿರ ಬಹುದಾದ ಬಗೆಗಿನ ಸಂತಾಪ, ದುಃಖ, ಅನುಕಂಪ ಅಷ್ಟು ಕಾಡುವುದಿಲ್ಲ. ಅವಳ ನಷ್ಟ ಅವನಿಗೆ ವ್ಯಕ್ತಿ ವಿಶೇಷಳಾದ ಒಡನಾಡಿಯ ಆತ್ಮೀಯ ನಷ್ಟವಲ್ಲ; ಪ್ರಬಲವಾಗಿ ತನಗೆ ಸೀತೆ ಈಗ ಇಲ್ಲವಾದಳಲ್ಲಾ, ಅವಳ ಜೊತೆಗಿನ ತನ್ನ ಶೃಂಗಾರದ ಒಡನಾಟ, ವಿಲಾಸಗಳು ಇಲ್ಲವಾದವಲ್ಲಾ ಎಂದು ಗಿಡಮರಗಳನ್ನೂ, ಹೂ ಹಣ್ಣುಗಳನ್ನೂ, ನದಿ ಮರಳು ದಿಣ್ಣೆಗಳನ್ನೂ, ಹಕ್ಕಿಗಳನ್ನೂ ನೋಡುತ್ತಾ, ಅವುಗಳಲ್ಲಿ ಸೀತೆಯ ತುಟಿಗಳನ್ನು, ಸ್ತನಗಳನ್ನು, ಕೊರಳನ್ನು, ತೊಡೆ ತೋಳುಗಳನ್ನು, ನಡುವನ್ನು, ನಿತಂಬವನ್ನು ಕಾಣುತ್ತಾ ಕಾಮೋನ್ಮತ್ತನಾಗಿ ಪ್ರಲಾಪಿಸುವುದು. ಈ ಕಾಮೋದ್ರೇಕಿತ ಪ್ರಲಾಪ ದಂಡಕಾರಣ್ಯದ ಅನೇಕ ಕಡೆಗಳಲ್ಲಿ ಮತ್ತೆ ಮತ್ತೆ ಮರುಕಳಿಸಿ ಬಂದಾಗಲೆಲ್ಲಾ ಲಕ್ಷ್ಮಣನೂ, ಆಮೇಲೆ ಸುಗ್ರೀವ ಲಕ್ಷ್ಮಣರೂ ರಾಮನಿಗೆ ಈ 'ಕಾಮೋನ್ಮಾದ' ಸಲ್ಲದೆಂದು ರಾಮಾಯಣದುದ್ದಕ್ಕೂ 'ಜಿತೇಂದ್ರಿಯ'ನೆಂದು ಪದೇ ಪದೇ ಸಂಬೋಧಿಸಲ್ಪಟ್ಟ ರಾಮನಿಗೆ, ರಾಮ ನಂತೆಯೇ ವಿರಹಿಗಳಾದ (ಸುಗ್ರೀವನ ಹೆಂಡತಿ ರಮೆ ವಾಲಿಯಿಂದ ಅಪಹೃತಳಾಗಿದ್ದಾಳೆ. ಲಕ್ಷ್ಮಣ ಹೆಂಡತಿ ಊರ್ಮಿಳೆಯನ್ನು ಬಿಟ್ಟು ಬಂದಿದ್ದಾನೆ) ಅವರಿಬ್ಬರೂ ಸಂಯಮವನ್ನು ಬೋಧಿಸುತ್ತಾರೆ. ವಿಚಿತ್ರವೇನೆಂದರೆ, ರಾಮನು ವಿರಹಿಯಾಗಿ ಹಲುಬುತ್ತಿರುವಾಗ ತನ್ನಂತೆಯೇ ಮದುವೆಯಾಗಿ ಹೆಂಡತಿಯನ್ನಗಲಿದ ಲಕ್ಷ್ಮಣನಿಗೆ ಯಾವ ರೀತಿಯ ನೋವಾಗಲಿಕ್ಕಿಲ್ಲ, ಎಷ್ಟು ಮುಜುಗರ ವಾಗಲಿಕ್ಕಿಲ್ಲ ಎಂಬುದನ್ನು ಲೆಕ್ಕಿಸದೆ ತನ್ನ ಮತ್ತು ಸೀತೆಯ ಆತ್ಮೀಯ ಶೃಂಗಾರ ಚಿತ್ರಗಳನ್ನು ಬಣ್ಣಿಸುತ್ತಾ ಹೋಗು ತ್ತಾನೆ. ಅಲ್ಲದೆ ತನ್ನಂತೆಯೇ ಹೆಂಡತಿಯನ್ನು ಕಳೆದುಕೊಂಡ ಸುಗ್ರೀವನಿಗೆ ಇನ್ನೆಷ್ಟು ಪ್ರಚೋದಕವಾಗಿ ನೋವಾಗಲಿಕ್ಕಿಲ್ಲ ಎನ್ನುವ ಪರಿವೆಯೂ ಇಲ್ಲದವನಾಗುತ್ತಾನೆ. ಇತರರ ನೋವನ್ನು ಪರಿಗಣಿಸಲಾರದ, ತನ್ನಲ್ಲೇ ಕೇಂದ್ರೀಕೃತನಾದ ರಾಮ. ಉದಾಹರಣೆಗೆ ಲಕ್ಷ್ಮಣನೆದುರು ರಾಮನ ಈ ಕಾಮೋನ್ಮಾದ ಪ್ರಲಾಪ ಲಕ್ಷ್ಮಣನ ಮೇಲೆ ಯಾವ ಪರಿಣಾಮ ಮಾಡಬಲ್ಲದೆಂಬುದನ್ನು ಗಮನಿಸಬಹುದು:

ಕದಾನುಚಾರುಬಿಂಬೋಷ್ಠಂ ತಸ್ಯಾಃಪದ್ಮವಿವಾನನಮ್
ಈಷದುನ್ನಮ್ಯಪಾಸ್ಯಾಮಿ ರಸಾಯನಮಿವಾತುರಃ
ತಸ್ಯಾಸ್ತು ಸಂಹತೌಪೀನೌ ಸ್ತನೌತಾಲಫಲೋಪಮೌ
ಕದಾನುಖಲುಸೋತ್ಕಂಪೌಶ್ಲಿಷ್ಯಂತ್ಯಾಮಾಂಭಜಿಷ್ಯತಃ
(ಯು.ಪು.5, 13-4)


'ಅರಳಿದ ತಾವರೆಯಂತಿರುವ ಅವಳ ಮುಖವನ್ನು ಮೆಲ್ಲಗೆ ಮೇಲೆತ್ತಿ ತೊಂಡೆಯ ಹಣ್ಣಿನಂತಿರುವ ಚೆಂದುಟಿಯ ಸವಿಯನ್ನು ಯಾವಾಗ ಸವೆಯುವೆನೋ? ರೋಗಿಯು ರಸಾಯನವನ್ನು ಹೀರುವಂತೆ ಅಧರಾಮೃತ ವನ್ನು ಯಾವಾಗ ಹೀರುವೆನೋ! ಅವಳು ನನ್ನನ್ನು ಅಪ್ಪಿಕೊಳ್ಳುವಾಗ (ಭಾವೋದ್ವೇಗದಿಂದ) ಅದರುತ್ತ ತಾಳೆಯ ಹಣ್ಣಿನಂತಿರುವ ಒತ್ತಾದ ಪೀನಸ್ತನಗಳು ಯಾವಾಗ ನನ್ನ ಮೈಯನ್ನು ಸೋಕುತ್ತವೆಯೋ!' ಈ ರಾಮ-ವಿಪ್ರಲಂಭ ಅನುವಾದಕರಾದ ರಂಗನಾಥಶರ್ಮ ರನ್ನು ಎಷ್ಟು ಮುಜುಗರಗೊಳಿಸಿದೆಯೆಂದರೆ ಅವರು ಅದಕ್ಕೆ ಒಂದು ಅಡಿಟಿಪ್ಪಣಿಯ ಉಪಶಾಂತಿಯನ್ನು ಕೊಟ್ಟಿದ್ದಾರೆ:

'ಶ್ರೀರಾಮನು ಲಕ್ಷ್ಮಣನೆದುರಿಗೆ ಈ ಬಗೆಯಲ್ಲಿ ತಮ್ಮ ಕಾಮ ಸಂತಾಪವನ್ನು ಹೇಳಿಕೊಳ್ಳಬಹುದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಇದೆಲ್ಲವೂ ಶ್ರೀರಾಮನ ಬಾಯಿಂದ ಬಂದುದಲ್ಲ, ಅವನ ಚಿತ್ತವಿಕಾರವನ್ನು ವಾಲ್ಮೀಕಿ ಮುನಿಗಳು ವರ್ಣಿಸಿದ್ದಾರೆ ಎಂದು ತಿಳಿಯಬೇಕು ಮತ್ತು ಕಾಮಿಗಳಿಗೆ 'ಹ್ರೀತ್ಯಾಗ' ಎಂಬ ಒಂದು ಅವಸ್ಥೆಯುಂಟು. ಆ ಸಮಯದಲ್ಲಿ ನಾಚಿಕೆ, ಯುಕ್ತಾಯುಕ್ತ ವಿವೇಚನೆಗಳು ಇರುವುದಿಲ್ಲವೆಂಬುದು ಕವಿಸಮಯ.'

ಆದರೆ ಈ 'ಕವಿಸಮಯ'ದಲ್ಲಿ ಲಕ್ಷ್ಮಣ ಸುಗ್ರೀವ ರಿದ್ದಾರೆ! ಅವರಿಗೆ ಈ ಕಾಮಪ್ರಲಾಪ ವಿಪರೀತವಾಗಿ ಕಾಣುತ್ತದೆ, ಅಸಹ್ಯವಾಗುತ್ತದೆ. ರಾಮನಿಗೆ ಅವರು ಸಂಯಮ ಬೋಧಿಸುತ್ತಾರೆ. ರಾಮನ ಈ 'ಹ್ರೀತ್ಯಾಗ'ಕ್ಕೆ ಅವರು ಜೀವಂತವಾಗಿ ಪ್ರತಿಕ್ರಿಯಿಸುತ್ತಾರೆ.

ಇಲ್ಲಿ ನಾವು ತೀವ್ರವಾಗಿ ಗಮನಿಸಬೇಕಾದ ವಿಷಯ ವೆಂದರೆ ಸೀತೆಯು ಇಲ್ಲದಿರುವಿಕೆಯನ್ನು ರಾಮನು, ತನ್ನ ಭೋಗ ದೃಷ್ಟಿಯಿಂದಲೇ, ತನಗಾದ ವಿರಹತಾಪ ದಿಂದಲೇ, ರಾಮನ ದುಃಖ ಸೀತೆಯ ಬಗೆಗಿನ, ಅವಳ ಕಷ್ಟ ಕಾರ್ಪಣ್ಯಗಳ, ನಿಸ್ವಾರ್ಥದ, ದಯಾನುಕಂಪಗಳ, ಒಟ್ಟಿನಲ್ಲಿ ಪ್ರೇಮದ ಚಿಂತನೆ-ಚಿಂತೆಯಾಗುವುದಿಲ್ಲ, ಮುಖ್ಯವಾಗಿ ಸೀತೆಯ ಬಗೆಗಿನ ರಾಮನ ಸಂವೇದನೆ

ಸೀತೆಯ ಬಗೆಗಿನ ರಾಮನ ಸಂವೇದನೆ ಭೋಗಲಾಲಸೆಯಿಂದ, ಕಾಮದಿಂದ ಉದ್ದೀಪನಗೊಂಡದಾದ್ದರಿಂದ ಅದಕ್ಕೆ ಪ್ರೇಮದ ಆಯಾಮ ಅಷ್ಟಾಗಿ ಅಳವಡುವುದಿಲ್ಲ. ಆದ್ದರಿಂದಲೇ ರಾಮ, ಅನಾಯಾಸವಾಗಿ 'ಸೀತೆಯಿಂದ ನನಗೇನು' ಎಂದು ಪದೇ ಪದೇ ರಾಮಾಯಣದ ಗಂಭೀರ ಸನ್ನಿವೇಶಗಳಲ್ಲೆಲ್ಲಾ ಹೇಳುತ್ತಾ ಬರುತ್ತಾನೆ.



ಸೀತೆಯ ಮೇಲೆ ಲೈಂಗಿಕ ದುರಾಕ್ರಮಣ

ಭೋಗಲಾಲಸೆಯಿಂದ, ಕಾಮದಿಂದ ಉದ್ದೀಪನಗೊಂಡದಾದ್ದರಿಂದ ಅದಕ್ಕೆ ಪ್ರೇಮದ ಆಯಾಮ ಅಷ್ಟಾಗಿ ಅಳವಡು ವುದಿಲ್ಲ. ಆದ್ದರಿಂದಲೇ ರಾಮ, ಅನಾಯಾಸ ವಾಗಿ 'ಸೀತೆಯಿಂದ ನನಗೇನು' ಎಂದು ಪದೇ ಪದೇ ರಾಮಾಯಣದ ಗಂಭೀರ ಸನ್ನಿವೇಶಗಳಲ್ಲೆಲ್ಲಾ ಹೇಳುತ್ತಾ ಬರುತ್ತಾನೆ.

ಇನ್ನೊಂದು ಶೃಂಗಾರ ಸನ್ನಿವೇಶವನ್ನು-ಕಾಕಾಸುರವೃತ್ತಾಂತ-ಸೀತೆ ಹನುಮಂತನಿಗೆ ಹೇಳುವಲ್ಲಿ ರಾಮ ಸೀತೆಯರ ಆತ್ಮೀಯತೆ ಈ ಕಾಮ ಸನ್ನಿವೇಶಗಳಲ್ಲೇ ಹೇಗೆ ಕೇಂದ್ರೀಕೃತವಾಗಿದೆ ಎಂಬುದನ್ನು ಎತ್ತಿ ತೋರಿಸುತ್ತಾಳೆ.

"ಆ (ಚಿತ್ರಕೂಟ) ಪರ್ವತದ ವನತಂಡಗಳಲ್ಲಿ ವಿಹರಿಸಿ ಬೆವರಿ (ಸಲಿಲ) ನಿಂದ ನೆನಸಲ್ಪಟ್ಟವಳಾಗಿ ನಿನ್ನ (ರಾಮನ) ತೊಡೆಯ ಮೇಲೆ ಕುಳಿತಿದ್ದೆನು... ಬಳಿಕ ಮಾಂಸದಲ್ಲಿ ಆಸಕ್ತನಾದ ಕಾಗೆಯು ಕುಚಮಧ್ಯದಲ್ಲಿ ಕುಕ್ಕಿತು. ನಾನು ಹೆಂಟೆಯನ್ನು ಎತ್ತಿ ಹಾಕಿ ಆ ಕಾಗೆಯನ್ನು ನಿವಾರಿಸಿದೆ... ಬಲಿಯನ್ನು ಭಂಜಿಸುವ ಆ ಕಾಗೆ ನನ್ನನ್ನು ಸೀಳುತ್ತಿರುವುದಾಗಿ ಅಲ್ಲಿಯೇ ಔತುಕೊಂಡಿತು.... ಸೀರೆಯು ಜಾರಲು ಒಡ್ಯಾಣವನ್ನು ಸೆಳೆಯುತ್ತಿರುವ ನಾನು ಕಾಗೆಯ ವಿಷಯದಲ್ಲಿ ಕುಪಿತಳಾಗಿರಲು ನಿನ್ನಿಂದ ನೋಡಲ್ಪಟ್ಟೆನು... ಆ ಕಾಲದಲ್ಲಿ ಭುಜಿಸುವುದರಲ್ಲಿ ಆಸಕ್ತವಾದ ಕಾಗೆಯಿಂದ ಕುಕ್ಕಲ್ಪಟ್ಟ ನಾನು ನಿನ್ನಿಂದ ಅಪಹಾಸ್ಯ ಮಾಡಲ್ಪಟ್ಟವಳಾಗಿ ನಾಚಿಕೆಯುಳ್ಳವಳಾದ ಕಾರಣ ಕೋಪಗೊಂಡವಳೂ ಆಗಿ ನಿನ್ನನ್ನು ಹೊಂದಿದ ವಳಾದೆನು... ಪುನಃ ಆಯಾಸಗೊಂಡು ನಾನು ಕುಪಿತ ಳಾಗಿ, ಕುಳಿತಿರುವ ನಿನ್ನ ಸಮೀಪವನ್ನು ಹೊಂದಿದೆನು. ಸಂತೋಷಗೊಂಡ ನಿನ್ನಿಂದ ಸಮಾಧಾನಗೊಳಿಸಲ್ಪಟ್ಟೆನು... ಹೇ ನಾಥನೇ, ಕಾಗೆಯಿಂದ ಕೋಪಿಷ್ಠಳಾಗಿ ಮಾಡಲ್ಪಟ್ಟ ನಾನು ಕಂಬನಿಗಳಿಂದ ತುಂಬಿದ ಮುಖವುಳ್ಳವಳಾದ ಕಾರಣ, ಮೆಲ್ಲಗೆ ನೇತ್ರಗಳನ್ನು ಒರೆಸಿ ಕೊಳ್ಳುತ್ತಿರುವಳಾಗಿ ನಿನ್ನಿಂದ ನೋಡಲ್ಪಟ್ಟೆನು... ನಾನು ರಾಘವನ ತೊಡೆಯಲ್ಲಿಯೂ ಕೂಡ ಬಳಲಿಕೆಯಿಂದ ಬಹುಕಾಲ ಮಲಗಿಕೊಂಡೆ ಇದ್ದೆನು. ಭರತಾಗ್ರಜನು ಕ್ರಮವಾಗಿ ನನ್ನ ತೊಡೆಯಲ್ಲಿಯೂ ಕೂಡ ಮಲಗಿದ್ದನು.... ಬಳಿಕ ಆ ಸ್ಥಳದಲ್ಲಿ ಆ ಕಾಗೆಯು ಮತ್ತೆ ಬಂದಿತು; ಆಮೇಲೆ ಮಲಗಿ ಎಚ್ಚರಗೊಂಡವಳಾದ ಕಾರಣ ರಾಮನ ತೊಡೆಯಿಂದ ಮೇಲಕ್ಕೆದ್ದ ನನ್ನನ್ನು ಕುರಿತು ಕಾಗೆಯು ಜಾಗ್ರತೆಯಾಗಿ ಬಂದು ಕುಚಮಧ್ಯದಲ್ಲಿ ಕುಕ್ಕಿತು... ಆನಂತರದಲ್ಲಿ ಆ ಕಾಗೆಯು ಪುನಃ ಪುನಃ ಹಾರಿಬಂದು ನನ್ನನ್ನು ಬಹಳವಾಗಿ ಕುಕ್ಕಿತು. (ಆ ಗಾಯದಿಂದ) ಸ್ರವಿಸಿದ ಕೆಲವು ರಕ್ತಬಿಂದುಗಳಿಂದ ರಾಮನು ನೆನೆಸಲ್ಪಟ್ಟನು (23). ಬಳಿಕ ಆ ಕಾಗೆಯು ಅತಿಶಯವಾಗಿ ಕ್ಲೇಶಪಡುತ್ತಿರುವ ನನ್ನಿಂದ ಆ ಶ್ರೀರಾಮನೂ, ಸುಖವಾಗಿ ನಿದ್ರೆಗೈಯುತ್ತಿರುವವನೂ, ಪರಂತಪನೂ ಎಬ್ಬಿಸಲ್ಪಟ್ಟನು... ಮಹಾಬಾಹುವು ಆ ಕಾಲದಲ್ಲಿ ಕುಚಗಳಲ್ಲಿ ಸೀಳಲ್ಪಟ್ಟ ನನ್ನನ್ನು ಕಂಡು ಕುಪಿತವಾದ ಸರ್ಪದಂತೆ ನಿಟ್ಟುಸಿರು ಬಿಡುತ್ತಾ (ಈ) ಮಾತನ್ನು ಹೇಳಿದನು... 'ಆನೆಯ ಸೊಂಡಿಲನಂತೆ ತೊಡೆಯುಳ್ಳವಳೇ ನಿನ್ನ ಕುಚಮಧ್ಯವು ಯಾವನಿಂದ ಗಾಯ ಮಾಡಲ್ಪಟ್ಟಿತು?'... ಬಳಿಕ ಅತ್ತಿತ್ತ ನೋಡುತ್ತಿರುವಾಗ, ಕ್ರೂರವಾದ ರಕ್ತದಿಂದೊಡಗೂಡಿದ ಉಗುರುಗಳೊಡನೆ ನನ್ನ ಎದುರಿಗೆ ಇರುವ ಆ ಕಾಗೆ ಯನ್ನು ಕಂಡನು (27). ಇಂದ್ರನ ಮಗನಾದ, ಪಕ್ಷಿಗಳೊಳಗೆ ಶ್ರೇಷ್ಠನಾದ ಆ ಕಾಗೆಯು ವಾಯುವಿನ ಗಮನದಲ್ಲಿ ಸಮನಾಗಿ ಬೇಗ ಭೂಮಿಯನ್ನು ಹೊಂದಿ ನಷ್ಟೇ.... ಬುದ್ಧಿವಂತರಲ್ಲಿ ಶ್ರೇಷ್ಠನಾದ ಮಹಾಬಾಹುವು ರೋಷದಿಂದ ತಿರುಗಿಸಲ್ಪಟ್ಟ ದೃಷ್ಟಿಯುಳ್ಳವನಾಗಿ, ಬಳಿಕ ಆ ಕಾಗೆಯಲ್ಲಿ ಕ್ರೂರವಾದ ಬುದ್ಧಿ ಮಾಡಿದನು... ಅವನು ದರ್ಭೆಯ ಹುಲ್ಲನ್ನು ತೆಗೆದುಕೊಂಡು ಬ್ರಹ್ಮಾಸ್ತ್ರ ಮಂತ್ರದೊಡನೆ (ಅಭಿಮಂತ್ರಿಸಿದನು). (ಅದು) ಉರಿಯುತ್ತಿರುವ ಪ್ರಳಯಾಗ್ನಿಯಂತೆ ಎದುರಿಗೆ ಬರುತ್ತಿರುವಾಗಿ ಕಾಗೆಯನ್ನು (ಬೆನ್ನಟ್ಟಿ ಹೋಯಿತು)... ಆ ಕಾಲದಲ್ಲಿ ಕಾಗೆಯು... ರಕ್ಷಕನನ್ನಪೇಕ್ಷಿಸುವವನಾಗಿ ಈ ಲೋಕಗಳನ್ನೆಲ್ಲಾ ಸಂಚರಿಸಿದನು... ಆ ಕಾಕಾಸುರನು ತಂದೆಯಾದ ಇಂದ್ರನಿಂದಲೂ, ಮಹರ್ಷಿಗಳಿಂದೊಡ ಗೂಡಿದ ದೇವತೆಗಳಿಂದಲೂ ಬಿಡಲ್ಪಟ್ಟವನಾಗಿ ಮೂರು ಲೋಕಗಳನ್ನು ಸಂಚರಿಸಿ ಅವನನ್ನೇ (ರಾಮನನ್ನೇ) ರಕ್ಷಕನನ್ನಾಗಿ ಹೊಂದಿದನು... ಶರಣ್ಯ ಕಾಕುತಸ್ಥನು ಶರಣಾಗತನಾದ, ನೆಲದಲ್ಲಿ ಬಿದ್ದಿರುವ ಅವನನ್ನು ವಧಾರ್ಹನಾದಾಗ್ಯೂ ದಯೆಯಿಂದ ಪಾಲಿಸಿದನು... ಅವನು (ರಾಮನು) ಪರಿತಪ್ತನಾಗಿ, ವಿಷಣ್ಣನಾಗಿ ಬರುತ್ತಿರುವ ಅವನನ್ನು (ಕಾಕಾಸುರನನ್ನು) ಕುರಿತು ಹೇಳಿದನು: "ಬ್ರಹ್ಮಾಸ್ತ್ರವಾದರೆ ವ್ಯರ್ಥವಾಗಿ ಮಾಡಲಿ ಕ್ಕಾಗುವುದಿಲ್ಲ... ನಿನ್ನ ಬಲಗಣ್ಣನ್ನು ಕತ್ತರಿಸಲಿ, ಬಳಿಕ ಸಂಚರಿಸು' ಇಂತೆಂದು ಅವನು (ರಾಮನು) ಆ ಕಾಗೆಯ ಬಲಗಣ್ಣನ್ನು ಛೇದಿಸಿದನು... ಆ ಕಾಕಾಸುರನು ಬಲಗಣ್ಣನ್ನು ಕೊಟ್ಟು ಪ್ರಾಣಗಳಿಂದ ಪರಿಪಾಲಿಸಲ್ಪಟ್ಟನು." (ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳ ಶ್ಲೋಕಾರ್ಥ-ಸುಂ, 38, 14-37, ಸುಮಾರು


ಬಾರಿ ರಾಮನನ್ನುದ್ದೇಶಿಸಿ ಪದಗಳು ಬಂದಾಗ್ಯೂ ಸೀ ಒಂದೇ ಒಂದು ಕಡೆ ಅ 'ರಾಮ'ನೆಂದು ಸಂಬೋಧಿ ಮಿಕ್ಕ ಕಡೆಗಳಲ್ಲಿ ಅವನು ಸರ್ವನಾಮವಾಗಿ, ಇಂತಹ ಆದ, ದೂರದ ಸಂಬಂಧಿ 'ರಾಘವ', 'ಕಾಕುತಸ್ಥ', 'ಭರತಾಗ್ರಜ', 'ಶ್ರೀಮಾನ್', 'ಮಹಾಬಾಹು', 'ಶರಣಾಗ ರಕ್ಷಕನಾಗಿಯೇ' ಸಂಬೋಧಿತನಾಗಿರುವುದು ಗಮನಾರ್ಹ; ಅಲ್ಲದೆ ರಾ ಬಗೆಗಿನ ಈ ಪರಾಕ್ರಮ ವಿಶೇಷಣಗಳು, ಅವನು ಮ ಗುಬ್ಬಿಯ ಮೇಲೆ ಬಿಡುವ ಬ್ರಹ್ಮಾಸ್ತ್ರದ, ಮತ್ತು ಆ ಬ್ರ ಆ 'ಗುಬ್ಬಿ'ಯನ್ನು ಕೊಲ್ಲದೆ ಅಂಶಮಾತ್ರ ಅಂಗವಿಕಲತೆ ಮಾಡುವ ಕ್ಷುಲ್ಲಕದಲ್ಲಿ ಕೊನೆಗಾಣುವುದರಿಂದ, ಅ ಕೇವಲ ಐರನಿ, ವ್ಯಂಗ್ಯಗಳಾಗಿ ಸೀತೆಯ ಬಾಯಿಯಿಂದ ಹೊರಬಿದ್ದಿರಲು. ಸಾಧ್ಯವಲ್ಲ

ಈ ಕಥೆ ಇಡೀ ರಾಮಾಯಣದ ಪ್ರಮುಖ ಸಾಂಕೇತ, ಇದರ ಸಾಂಕೇತಿಕಾಭಿನಯದಲ್ಲಿ ಒಟ್ಟಿ ರಾಮಾಯಣದ ಇಂಗಿತ ವ್ಯಂಜಿತವಾಗುತ್ತದೆ.

ಇಲ್ಲಿ, ರಾಮನೆದುರಿನಲ್ಲೇ ಸೀತೆಯ ಮೇಲೆ ಲೈಂಗಿಕ ದುರಾಕ್ರಮಣ (Rape) ನಡೆಯುತ್ತದೆ. ಲೈಂಗಿಕ ಹಿಂಸ ತುತ್ತಾದ ಸೀತೆ, ಅದನ್ನು ನಿವಾರಿಸಿಕೊಳ್ಳಲು ಪ್ರಯತ್ನ ಹತಾಶಳಾಗುತ್ತಾಳೆ. ಆ ಪ್ರಯ ಅವಳನ್ನು ಮತ್ತಷ್ಟು ನಾಚಿಕೆಗ ಅಪಹಾಸ್ಯಕ್ಕೆ ಈಡುಮಾಡುತ್ತ ಅದು ರಾಮನಿಗೆ ಪರಿಹಾಸ್ಯವಾಗಿಬಿಡುತ್ತದೆ.

ಆನಂತರದಲ್ಲಿ ಲೈಂಗಿಕ ಅತ್ಯಾಚಾರ ಉಲ್ಬಣವಾಗುತ್ತದೆ. ಸೀತೆಯ ಸ್ತನದಿಂದ ಸುರಿಯುತ್ತದೆ. ರಾಮನ ಮೇಲೆ ಬೀಳುತ್ತದೆ. ಸೀ ಕ್ಷೋಭೆ ರಾಮನಿಗೆ ತಟ್ಟುತ್ತದೆ. ರಾಮ ಹಿಂಸ ಶಿಕ್ಷಿಸಹೋಗುತ್ತಾನೆ. ಕೊನೆಗೆ ಸಾಂಕೇತಿಕ ಶಿಕ್ಷೆ ಅವನನ್ನು ಕ್ಷಮಿಸಿಬಿಡುತ್ತಾನೆ.

ಹೀಗೆ ಸೀತೆ ನಾಚಿಕೆ, ಅಪಮಾನಕ್ಕೆ ತುತ್ತಾಗಿ ಗೊಂಡವಳಾಗಿ ಉಳಿಯುತ್ತಾಳೆ. ರಾಮ ಸ ದಾರುಣತೆಯ ಪ್ರೇಕ್ಷಕನಾಗಿ, ಒಂದು ರೀತಿ ಹಿಂಸಿತಳಾದವಳ ಬಗ್ಗೆ ಉಪೇಕ್ಷೆ ತೋರಿಸುತ್ತಾ ಮತ್ತೊಂದು ರೀತಿಯಲ್ಲಿ ಉಪಶಮನ ಮಾಡುವವನಂತೆ ಕಾಣುತ್ತಾ ಒಟ್ಟಿನಲ್ಲಿ ಈ ಲೈಂಗಿಕ ಹಿಂಸೆಯನ್ನು ಸುಮ್ಮಾನದಿಂದಲೇ ವೊಯ್ಯೂರ (voyeur)ನಂತೆ ಆನಂದಿಸುತ್ತಾ ಕೊನೆಗೆ ಆ ಲೈಂಗಿಕ ದುರಾಕ್ರಮಣಿಗೆ ಕೇವಲ ಸಾಂಕೇತಿಕ



4 ಡಾ. ಪ್ರೋಲಂಕಿ ರಾಮಮೂರ್ತಿಯವರ ಸೀತಾಯಣ

ಶಿಕ್ಷೆ ಕೊಟ್ಟು ತಟಸ್ಥನಾಗಿ ಉಳಿದುಬಿಡುತ್ತಾನೆ. ಸೀತೆ ರಾಮನಿಗೆ ಹಿಂದೆ, ನೀನು ಹೆಂಡತಿಯನ್ನು ಇ ಕೊಡುವ ಶೈಲೂಷ, ನಟನೆನ್ನುವ ಮಾತು ಸೂಕ್ತವಾಗಿ ಕಾಣುತ್ತದೆ!

ಸೀತೆಯ ನೋವಿನ ನಡುವೆ ರಾಮನ ತ ಉಪೇಕ್ಷೆ, ಸುಮ್ಮಾನಗಳ ವಿಸ್ತೃತ ಅಭಿವ್ಯಕ್ತಿಯೇ ರ ಯಣದ ನೀಳ್ಗತೆ. ಈ ದಿಶೆಯಲ್ಲಿ ನಾವು ಗಮನಿಸ ಇನ್ನೊಂದು ಗಂಭೀರ ಸಂದರ್ಭವೆಂದರೆ ಸೀತೆ ಲಕ್ಷ್ಮಣರಿಗೆ ಕಳಿಸುವ ಸಂದೇಶ. ಹನುಮ ಸೀತೆಯನ್ನು ಕುರಿತು ರಾಮಲಕ್ಷ್ಮಣರಿಗೆ 'ಏನನ್ನಾ ಹೇಳಿ ಕಳಿಸಬೇಕಾಗಿದ್ದರೆ ಹೇಳು' ಎಂದು ಕ ಸೀತೆ ಕಳಿಸುವ ಸಂದೇಶ ಈ ರೀತಿ ಇದೆ:

ಕೌಸಲ್ಯಾಮಾತೆಯು ಲೋಕಸಂರಕ್ಷಣಾರ್ಥವಾಗಿ ...ನ್ನು ಹಡೆದಿರುವಳೋ ಆತನಿಗೆ ಕುಶಲವನ್ನು ...ಚಿಸಿದ್ದೇನೆಂದು ನನ್ನ ಪರವಾಗಿ ಹೇಳಿ, ತಲೆಬಾಗಿ ...ಸ್ಕರಿಸಿದ್ದೇನೆಂದು ತಿಳಿಸು (55-56). ಸುಮಿತ್ರಾ...ಯು ಸುಕುಮಾರ ಲಕ್ಷ್ಮಣ. ಅವನು ಹೂಮಾಲೆ ... ರತ್ನಗಳು, ಉತ್ತಮ ಸ್ತ್ರೀಯರು, ಇನ್ನೆಲ್ಲಿಯೂ ...ಕದಷ್ಟು ಐಶ್ವರ್ಯ-ಇವೆಲ್ಲವನ್ನೂ ತೊರೆದು ...ತಾಯಿಗಳನ್ನು ಒಪ್ಪಿಸಿ ಅಣ್ಣನ ಹಿಂದೆಯೇ ...ರಿಬಿಟ್ಟನು (57-58). ಆ ಧರ್ಮಾತ್ಮನು ...ಸುವಾದ ಸುಖವನ್ನು ತ್ಯಜಿಸಿ ಕಾಡಿನಲ್ಲಿ ಅಣ್ಣನಿಗೆ ...ಲವಾಗಿ ಇದ್ದು ಬಿಟ್ಟನು. ಅವನಿಗೆ ಸಿಂಹದಂತಹ ...ು; ಆಜಾನುಬಾಹು; ಧೀರ, ನೋಡಿದರೆ ಆನಂದ ...ವುದು. ರಾಮನನ್ನು ತಂದೆಯೆಂದೂ, ನನ್ನನ್ನು ...ಯೆಂದೂ ತಿಳಿದುಕೊಂಡಿದ್ದಾನೆ. ರಾವಣನು ನನ್ನನ್ನು ...ರಿಸಿದ್ದು ಆ ವೀರನಿಗೆ ಗೊತ್ತಾಗದೇ ಹೋಯಿತು. ...ನು ಗುರುಹಿರಿಯರ ಸೇವಕ; ಸಮರ್ಥ; ಹೆಚ್ಚು ...ನಾಡತಕ್ಕವನಲ್ಲ. ನನ್ನ ಮಾವನಿಗೆ ಪ್ರಿಯನಾದ ...ಪುತ್ರ. ಆತನಿಗೆ ತಕ್ಕ ಮಗ. ರಾಮನಿಗೆ ಲಕ್ಷ್ಮಣನೆಂದರೆ ...ಮೇಲೆ ಇರುವುದಕ್ಕಿಂತಲೂ ಅಧಿಕ ಪ್ರೀತಿ (61- ...ಯಾವ ಕಾರ್ಯವನ್ನು ವಹಿಸಿದರೂ ನಡೆಸಬಲ್ಲ ... ರಾಮನು ಅವನನ್ನು ಕಂಡು, ಮೃತನಾದ ತನ್ನ ...ಯನ್ನು ಸ್ಮರಿಸಿಕೊಂಡು ದುಃಖಿಸದೆ ಇದ್ದನು. ...ನು ಮೃದು ಸ್ವಭಾವದವನು, ಶುದ್ಧಾತ್ಮ, ...ರ್ಯದಕ್ಷ. ಆತನ ಕುಶಲವನ್ನು ನಾನು ವಿಚಾರಿಸಿ ...ದು ಹೇಳು. (ಸುಂ. 38, 55, 64-ಒತ್ತು ನನ್ನದು).

...ರಾಮನಿಗೆ ಕೇವಲ ಒಂದೇ ಶ್ಲೋಕದ ಲೋಕಾಭಿ... ಸಂದೇಶ. ಲಕ್ಷ್ಮಣನಿಗಾದರೋ ಎಂಟು ಶ್ಲೋಕಗಳ ...ರದ ಆತ್ಮೀಯ ಗುಣಗಾನವೊಂದೇ ಅಲ್ಲ, ಅವನ ...ಸ್ಕಂದ', 'ಮಹಾಬಾಹು' ಮತ್ತು 'ಪ್ರಿಯದರ್ಶನ' ... ಮನೋಜ್ಞ ದೇಹಾಂಗ ಗುಣಗಾನ. ರಾಮನಿಗೆ ...ಲ ಎರಡು ಸಾಲಿನ ಸಾಂಪ್ರದಾಯಿಕ ಗೌರವ ...ಸ್ಕಾರ. ಲಕ್ಷ್ಮಣನಿಗೆ ಅವನ ವಿಶೇಷಾಂಗಗಳ, ಶೌರ್ಯ ...ಪಗಳ ಮೆಚ್ಚುಗೆಯು, ಆನಂದದ, ಅವನ ...ಸುದರ್ಶನ"ತ್ವದ, ಹದಿನಾರು ಸಾಲುಗಳ ಶೃಂಗಾರ ...ನೆ. ಇದರಲ್ಲಿ ಸೀತೆ, ರಾಮನಿಗೆ ಲಕ್ಷ್ಮಣನಿಗಿರುವ ...ವಾತವನ್ನು ಹೊರಗೆಡುಹುತ್ತಾ ತನಗೇ ಲಕ್ಷ್ಮಣನಲಿ ... ಗುಪ್ತ ಅನುರಕ್ತತೆ ಅಥವಾ ಅವನ ಬಗೆಗಿನ ...ಲ್ಲಿರುವ ಆಂತರಿಕ ಶೃಂಗಾರ ಸಂವೇದನೆ, ...ವುಗಳನ್ನೂ ಹೊರ ಚೆಲ್ಲುತ್ತಿದ್ದಾಳೆ. ಇಲ್ಲಿ ನಾವು ...ನಿಸಬೇಕಾದ ಅಂಶವೇನೆಂದರೆ ರಾಮನಿಗೆ ...ಯಲ್ಲಿನ ಅಥವಾ ಸಾಮಾನ್ಯವಾಗಿ ಸ್ತ್ರೀಯಲ್ಲಿನ ...ಗಿಕ ಸಹಜೋಪೇಕ್ಷೆಯೇ ಸೀತೆಯನ್ನು 'ಸಿಂಹ ...'ನೂ 'ಮಹಾಬಾಹು'ವೂ ಆದ 'ಕೊಡುವ ತೋಳ್ಗಳ ...' ನತ್ತ ತಳ್ಳಿರಲು ಸಾಧ್ಯವಾಗಿರಬಹುದಲ್ಲವೇ ...ುದು. ಅಲ್ಲದೆ, ಸೀತೆ ಅಗ್ನಿ ಪ್ರವೇಶ ಮಾಡುವ ...ಚಿ, ರಾಮ ಸೀತೆಗೆ 'ಬೇಕಾದರೆ ಲಕ್ಷ್ಮಣನನ್ನು ...ು' ಎಂದು ಲಕ್ಷ್ಮಣನನ್ನು ಮೊದಲು ಹೆಸರಿಸುತ್ತಾನೆ.


...ಇನ್ನೊಂದು ಗಂಭೀರವಾದ ವಿಶೇಷವೆಂದರೆ, ಸೀತೆ ...ನುನಿಗೆ ನಂಬಿಕೆಯಾಗುವುದಕ್ಕೆ, 'ಹೇಳುವ ...ಸಿತು'-ಕಾಕಾಸುರ ವೃತ್ತಾಂತ ಶಕುಂತಲೆ ತನ್ನನ್ನು ...ಸಿತುಹೋದ ದುಷ್ಯಂತನಲ್ಲಿ ಮತ್ತೆ ಅವಳಲ್ಲಿ ನಂಬಿಕೆ ...ಟ್ಟಿಸಲು ಹೇಳಬೇಕಾದ ಆತ್ಮೀಯ ಸಂದರ್ಭಗಳಂತೆ ...ಯವಾಗಿರಬೇಕಾದರೆ, ಯಾವ ಮರೆವೂ ಇಲ್ಲದ ...ನನ್ನು ಸೀತೆ, ಶಕುಂತಲೆ ದುಷ್ಯಂತನನ್ನು ...ಸುವಷ್ಟೇ ಕಷ್ಟಪಡಬೇಕಾಗಿದೆ ಎನ್ನುವುದು. ಅಂದರೆ ...ನ ಸಾಧಾರಣ ಉಪೇಕ್ಷಾ ಮನೋಭಾವ ...ತನ ಆಕಸ್ಮಿಕ ಮರೆವಿನದಷ್ಟೇ ಘೋರ, ಅಭೇದ್ಯ ...ವೇದನಾ ಶೂನ್ಯ.

ಇದರಲ್ಲಿ ಇನ್ನೊಂದು ಗಮನಾರ್ಹವಾದ ವಿಷಯ ...ಂದರೆ ಶಕುಂತಲೆ ದುಷ್ಯಂತನಿಗೆ ನಂಬಿಕೆ ತರಲು ...ವ ಸಂದರ್ಭ ಸೀತೆಯಂತೆ ಪ್ರಣಯ ಅಥವಾ ...ರ ಸನ್ನಿವೇಶದ್ದಲ್ಲ; ಕಾಮ ಸನ್ನಿವೇಶದ್ದಲ್ಲ; ಜಿಂಕೆಗೆ ...ಗಸೆಯಲ್ಲಿ ನೀರು ಕುಡಿಸುವ ಆ ಬಗ್ಗೆ ದುಷ್ಯಂತ ...ು ಕುಡಿಸಲಾಗದವನಾದಾಗ ಶಕುಂತಲೆ ನೀರು ...ಸುತ್ತಿರುವ ಪ್ರೇಮದ, ಜೀವ ಜೀವಿಗಳ ಅನುಬಂಧದ ...ಸೇ ಆದ ಪ್ರೇಮ, ದಯೆ, ಅನುಕಂಪ, ಕರುಣೆಗಳ ...ು ಸಂಬಂಧದ್ದು. ಇಲ್ಲಿ ರಾಮನು ಸೀತೆಯ ...ನದಲ್ಲಿ ಕೇವಲ ಕಾಮೋನ್ಮತ್ತತೆಯಲ್ಲೇ ಅವಳನ್ನು ...ಸುತ್ತಿರುವುದಕ್ಕೂ, ಸೀತೆ ರಾಮನಲ್ಲಿ ನೆನಪು ...ಡಲು ಅಂಥದೇ ಆದ ಕಾಮ ಸಂದರ್ಭದ ...ಶವನ್ನು ಚಿತ್ರಿಸುತ್ತಿರುವುದಕ್ಕೂ, ತಾಳೆ ಇದೆ. ರಾಮ ...ಯರ ಸಂಬಂಧದ ಧಾತು, ದುಷ್ಯಂತ ಶಕುಂತಲೆ ...ದಂತೆ, ಪ್ರೇಮಮೂಲದ್ದಾಗದೆ, ಪ್ರಬಲವಾಗಿ ...ು ಪರಿಪ್ಲುತವಾದದ್ದು.

(ಮುಂದುವರೆಯುತ್ತದೆ)

ವೆಲ್ಲಂಪಾಟಿ ವೆಂಕಟಸುಬ್ಬಯ್ಯ (1937-2007)

ಒಂದು ಶ್ರದ್ಧಾಂಜಲಿ



ತೆಲುಗು ಸಾಹಿತ್ಯದ ಪ್ರಮುಖ ವಿಮರ್ಶಕ, ಅನುವಾದಕ, ಸಾಹಿತಿ ಹಾಗೂ ಕನ್ನಡ-ತೆಲುಗು ಸಾಹಿತ್ಯಗಳ ಕೊಂಡಿಯಾಗಿದ್ದ ವೆಲ್ಲಂಪಾಟಿ ವೆಂಕಟಸುಬ್ಬಯ್ಯ ಕಳೆದ ಮಂಗಳವಾರ (ಜನವರಿ 2) ಸಾಯಂಕಾಲ ಅವರ ಊರಾದ ಮದನಪಲ್ಲಿಯಲ್ಲಿ ತೀರಿಕೊಂಡಿದ್ದಾರೆ. ಮಂಡಿ ಚಿಪ್ಪಿನ ಶಸ್ತ್ರ ಚಿಕಿತ್ಸೆಗೆಂದು ಬೆಂಗಳೂರಿಗೆ ಬಂದು ಚೇತರಿಸಿಕೊಳ್ಳುತ್ತಿದ್ದಾಗಲೇ ಕ್ಯಾನ್ಸರ್ ಇದೆ ಎಂಬುದು ತಿಳಿದಾಗ ಎಲ್ಲರಿಗೂ ದೊಡ್ಡ ಆಘಾತವಾಗಿತ್ತು, ಸದಾ ಗೆಲುವಿನಿಂದ ಇರುತ್ತಿದ್ದ ಹಸನ್ಮುಖಿ ವಿ.ವಿ.ಯವರೂ ಸಹ ವಿಷಯ ತಿಳಿದು ಬಹಳ ಕುಗ್ಗಿ ಹೋಗಿದ್ದರು. ಹಾಗಿದ್ದರೂ ಅವರನ್ನು ನೋಡಲು ಹೋದಾಗ ಅವರ ಇತ್ತೀಚಿನ ಕೃತಿ 'ರಾಯಲಸೀಮಲೊ ಆಧುನಿಕ ಸಾಹಿತ್ಯಂ-ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆ' ಕೊಟ್ಟು ಅವರ ಮುಂದಿನ ಬರವಣಿಗೆ ಕುರಿತ ಯೋಜನೆ ಬಗ್ಗೆ ಮಾತಾಡಿದ್ದರು. ಅವರಂದುಕೊಂಡ ಕೆಲಸ ಕೈಗೂಡುವುದೋ ಇಲ್ಲವೋ ಎಂಬ ಖಿನ್ನತೆಯ ನಡುವೆಯೂ, ಅವರು ತಮ್ಮ ಸಾಹಿತ್ಯದ ನಿಲುವು-ನಿಷ್ಠೆಯ ಬಗ್ಗೆ ಮಾತಾಡುತ್ತಿದ್ದರು. ಹಾಸಿಗೆಯಲ್ಲಿ ಮಲಗೇ ಕಾಫ್ಕಾ ಕತೆಗಳನ್ನು ಓದುತ್ತಿದ್ದ ಅವರಿಂದ ಆ ಪುಸ್ತಕವನ್ನು ತೆಗೆದಿರಿಸಿ, ಸುಮ್ಮನೇ ಮಲಗಿ ಸಂಗೀತ ಕೇಳಲಿ ಎಂದು ಒಂದಷ್ಟು ಟೇಪುಗಳನ್ನು ಕೊಟ್ಟು ಬಂದಿದ್ದೆ.

ವೆಂಕಟಸುಬ್ಬಯ್ಯನವರು ಮೊದಮೊದಲಿಗೆ ಕಾವ್ಯ-ಕತೆ ಬರೆದರೂ ಅವರು ಸಂಪೂರ್ಣವಾಗಿ ಒಲಿದುಕೊಂಡಿದ್ದು ವಿಮರ್ಶೆಗೇ.

ಮಾರ್ಕ್ಸ್‌ವಾದ ಮತ್ತು ಆಧುನಿಕ ಸಾಹಿತ್ಯ ಥಿಯರಿಗಳನ್ನು ಒಟ್ಟಿಗೇ ಓದಿಕೊಂಡಿದ್ದ ವಿವಿಯವರು ತಮ್ಮ ಸಾಹಿತ್ಯ ವಿಮರ್ಶೆಯನ್ನು ಒಟ್ಟಾರೆ ಸಾಂಸ್ಕೃತಿಕ ಚಿಂತನೆಯ ಭಾಗವಾಗಿಯೇ ಮಾಡಿದವರು. ತೆಲುಗು ಸಾಹಿತ್ಯ-ಸಂಸ್ಕೃತಿ ಮತ್ತು ಚರಿತ್ರೆಯನ್ನು ಆಳವಾದ ಅಭ್ಯಾಸ ಮಾಡಿದ್ದರೂ ಅವರ ಬರವಣಿಗೆ ಶುಷ್ಕ ಪಾಂಡಿತ್ಯದಿಂದ ಎಂದೂ ಕೂಡಿದ್ದಿಲ್ಲ. ಹಾಗೆಯೇ ರೇಮಂಡ್ ವಿಲಿಯಮ್ಸ್, ಟೆರ್ರಿ ಈಗಲ್ಟನ್ ಇತ್ಯಾದಿ ಮಾರ್ಕ್ಸಿಸ್ಟ್ ಚಿಂತಕರ ಬಗ್ಗೆ ತೀವ್ರ ಒಲವಿದ್ದುದರಿಂದ ಅವರ ಸಾಹಿತ್ಯ ವಿಮರ್ಶೆ ಕೀಳು ಮಾರ್ಕ್ಸ್‌ವಾದದಿಂದ ಮುಕ್ತವಾಗಿತ್ತು. ಕನ್ನಡ ವಿಮರ್ಶೆಯನ್ನು ಓದಿಕೊಂಡಿದ್ದ ಅವರಿಗೆ ಇಲ್ಲಿನ ಸಾಹಿತ್ಯ ವಲಯದಲ್ಲಿ-ಅದರಲ್ಲೂ ವಿಮರ್ಶೆಯ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದದ ಚಿಂತನೆಯ ಕೊರತೆಯ ಬಗ್ಗೆ ಅಪಾರ ಕಾಳಜಿಯಿತ್ತು. ನಮ್ಮ ಡಿ.ಆರ್. ಚಿಂತನೆಯನ್ನು ಮೆಚ್ಚಿಕೊಂಡಿದ್ದರಾದರೂ, ಅವರ ವಿಮರ್ಶೆಯ ಒಟ್ಟಾರೆ ಗ್ರಹಿಕೆಯ ಬಗ್ಗೆ ಗಂಭೀರವಾದ ಪ್ರಶ್ನೆಗಳಿದ್ದವು. ಹಾಗೆಯೇ ಅವರು ಇಷ್ಟಪಟ್ಟಿದ್ದ ಮತ್ತೊಬ್ಬ ಲೇಖಕ ಎಂದರೆ ದೇವನೂರ ಮಹಾದೇವ. ಅವರ ಗ್ರಾಮೀಣ ಭಾಷಾ ಬಳಕೆಯನ್ನು ಓದಿಸಿ ಕೇಳಿ, ಕಷ್ಟಪಟ್ಟು ಅಭ್ಯಸಿಸಿ ಒಡಲಾಳ ಕತೆಯನ್ನು ತೆಲುಗಿಗೆ ಅನುವಾದಿಸಿದ್ದರು.

ತೆಲುಗೆ ಕತೆಗಳ ಸ್ವರೂಪ ಮತ್ತು ಸ್ಥಿತ್ಯಂತರಗಳನ್ನು ಕುರಿತ ಅವರ ಕೃತಿ 'ಕಥಾ ಶಿಲ್ಪಂ' ಅವರ ಸಮಗ್ರ ಅಧ್ಯಯನದ ಫಲ. ಅವರಿಗೆ ತೆಲುಗು ವಿಮರ್ಶಾ ಲೋಕದಲ್ಲಿ ಅಪಾರ ಮನ್ನಣೆ ಗಳಿಸಿಕೊಟ್ಟ 'ಕಥಾಶಿಲ್ಪಂ' ಅವರ ಖಚಿತ ವಿಶ್ಲೇಷಣೆ ಹಾಗೂ ಸೈದ್ಧಾಂತಿಕ ನಿಲುವಿಗೆ ಉನ್ನತ ನಿದರ್ಶನ. ಈ ಕೃತಿಗೆ 1996-97 ರ ಸಾಲಿನ 'ಉತ್ತಮ ಸಾಹಿತ್ಯ ವಿಮರ್ಶಾ ಗ್ರಂಥ' ಎಂದು ತೆಲುಗು ವಿಶ್ವವಿದ್ಯಾಲಯ ಪ್ರಶಸ್ತಿ ನೀಡಿತ್ತು, ಇದೇ ಪುಸ್ತಕಕ್ಕೆ 1999 ರ 'ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ'ವೂ ಲಭ್ಯವಾಯಿತು.

ನಂತರದಲ್ಲಿ ಇದೇ ಮಾದರಿಯ ಕಾದಂಬರಿಶಿಲ್ಪ, ಸಾಹಿತ್ಯ ವಿಮರ್ಶಾಶಿಲ್ಪ ಕುರಿತ ಪುಸ್ತಕಗಳೂ ಹೊರಬಂದವು. 2004 ರಲ್ಲಿ ವಲ್ಲಂಪಾಟಿಯವರಿಗೆ 'ತಾನಾ' ಪುರಸ್ಕಾರ ಲಭಿಸಿತು.

ವಿಮರ್ಶೆಯಲ್ಲಿ ಹೇಗೋ ಹಾಗೆ ಅನುವಾದದಲ್ಲೂ ವೆಲ್ಲಂಪಾಟಿಯವರು ಸಿದ್ಧಹಸ್ತರಾಗಿದ್ದರು. ಅವರ ವೈವಿಧ್ಯಮಯ ಆಸಕ್ತಿ ತಸ್ಲೀಮಾ ಅವರ ವಿವಾದಾತ್ಮಕ ಕಾದಂಬರಿ 'ಲಜ್ಜಾ'ದಿಂದ ಹಿಡಿದು ಕಾರ್ ಅವರ `What is History?'ಯವರೆಗೆ ಅವರ ಅನುವಾದದ ಕೃಷಿ ಹಬ್ಬಿದೆ. ಚರಿತ್ರೆಯ ಗಂಭೀರ ವಿದ್ಯಾರ್ಥಿಯಾಗಿ ಅವರು ತೆಲುಗಿನ ಓದುಗರಿಗೋಸ್ಕರ ರೋಮಿಲಾ ಥಾಪರ್ ಅವರ ಕೆಲವು ಕೃತಿಗಳನ್ನು ಅನುವಾದಿಸಿದ್ದಾರೆ.

ರಾಯಲ ಸೀಮೆಯ ಆಧುನಿಕ ಸಾಹಿತ್ಯ ಕುರಿತ ಅವರ ಇತ್ತೀಚಿನ ಕೃತಿ (ಪ್ರ. ಮಾರ್ಚ್ 2006)ಯಲ್ಲಿ ವೆಲ್ಲಂಪಾಟಿಯವರು ಒಂದು ಪ್ರದೇಶದ ರಾಜಕೀಯ ಚರಿತ್ರೆಗೂ, ಸಾಹಿತ್ಯ ಕೃತಿಯ ವಸ್ತು ಮತ್ತು ಸ್ವರೂಪಕ್ಕೂ ಇರುವ ಅವಿನಾ ಸಂಬಂಧದ ಬಗ್ಗೆ ಚಿಂತನೆ ನಡೆಸಿದ್ದಾರೆ. ರಾಯಲಸೀಮೆಯ ಆಧುನಿಕ ಸಾಹಿತ್ಯದಲ್ಲಿ ಗಿಳಿ ಕೋಗಿಲೆಗಳ ಕಲರವವೂ, ಆತ್ಮಾನ್ವೇಷಣೆಯ ಸಿದ್ಧಾಂತಗಳೂ, ವ್ಯಕ್ತಿನಿಷ್ಠವಾದ ಅಸ್ತಿತ್ವವಾದವೂ ಯಾಕೆ ಇಲ್ಲ ಎಂಬ ಪ್ರಶ್ನೆಯಿಂದ ಮೊದಲುಗೊಂಡು, ರಾಯಲಸೀಮೆಯ ಬದುಕಿನ ಬವಣೆಗಳೇ ಅಲ್ಲಿನ ಸಾಹಿತ್ಯ ಕೃತಿಯಾಗಿ ಮೂಡಿಬಂದಿರುವ ಚಲನಸೂತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ ಮತ್ತು ರಾಯಲಸೀಮೆಯ ಪ್ರಾದೇಶಿಕತೆಯ (ವೈಶಿಷ್ಟತೆಯಿಂದಾಗಿ ನೆಲದಿಂದ ಮೂಡಿಬಂದ ಸಾಹಿತ್ಯ ಸ್ವರೂಪ) ಇತರ ತೆಲುಗು ಸಾಹಿತ್ಯ/ಸಂಸ್ಕೃತಿಗಿಂತಲೂ ಹೇಗೆ ಮತ್ತು ಯಾಕೆ ಭಿನ್ನ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಇಡೀ ಭಾರತೀಯ ಸಾಹಿತ್ಯವನ್ನು ಅಖಂಡವಾಗಿ ಓದುವ, ತನ್ಮೂಲಕ ಏಕರೂಪ ಭಾರತೀಯ ಸಾಹಿತ್ಯ ಮೀಮಾಂಸೆಯನ್ನು ರೂಪಿಸುವ ಪ್ರಯತ್ನಗಳಿಗಿಂತ ಭಿನ್ನವಾಗಿ, ಒಂದು ಭಾಷಾ ವಲಯದೊಳಗಿನ ಪ್ರಾದೇಶಿಕ ಸಾಹಿತ್ಯವೂ ತನ್ನದೇ ಆದ ಮೀಮಾಂಸೆಯನ್ನು ಬೇಡುತ್ತದೆ ಎನ್ನುವುದು ಕಡೆಗಿನ ತುಡಿತದಿಂದಾಗಿ ಈ ಕೃತಿ ಮಹತ್ವವಾದದ್ದು.

ಇದೇ ಎಳೆಯನ್ನು ಮುಂದುವರೆಸಿ ಮತ್ತಷ್ಟು ವಿಮರ್ಶಾ ಲೇಖನಗಳನ್ನು ಬರೆಯುವ ಅಗತ್ಯ-ತುರ್ತು ಎರಡೂ ಅವರಿಗಿದ್ದುದನ್ನು ಅವರೊಂದಿಗೆ ನಡೆಸಿದ ಚರ್ಚೆಯಲ್ಲಿ ನಾನು ಗಮನಿಸಿದ್ದೇನೆ. ನಮ್ಮಲ್ಲಿ ಸಾಹಿತ್ಯ ಕೃತಿಗಳ ತೌಲನಿಕ ಅಧ್ಯಯನ ನಡೆದಷ್ಟು ವಿವಿಧ ಭಾಷೆಗಳಲ್ಲಿ ಬಂದಿರುವ ಆಯಾ ಸಾಹಿತ್ಯ ವಿಮರ್ಶೆಗಳ ನಡುವಿನ ತೌಲನಿಕ ಅಧ್ಯಯನ ಇಲ್ಲವೆನ್ನುವಷ್ಟು ವಿರಳ. ಉದಾಹರಣೆಗೆ ನಮ್ಮಲ್ಲಿ ಅತ್ಯಂತ ಮಹತ್ವದ ಲೇಖಕರಲ್ಲೊಬ್ಬರಾದ ದೇವನೂರು ಮಹಾದೇವ ಅವರ ಕೃತಿಗಳು ತೆಲುಗು ಸಾಹಿತ್ಯ ವಿಮರ್ಶಾ ದೃಷ್ಟಿಯಿಂದ ಹೇಗೆ ಕಾಣಿಸುತ್ತದೆ? ಅದೇ ರೀತಿ ರಾಯಲಸೀಮೆಯ ತೆಲುಗು ಸಾಹಿತ್ಯ ನಮ್ಮ ಮುಖ್ಯವಾಹಿನಿಯ ವಿಮರ್ಶಕರ ದೃಷ್ಟಿಯಲ್ಲಿ ಕೇವಲ ಘೋಷಣೆಗಳ ಚೀರಾಟದಂತೆ ಕಂಡುಬರುತ್ತದೆಯೇ? ಒಂದು ಪ್ರದೇಶದಲ್ಲಿ ಹುಟ್ಟಿಕೊಳ್ಳುವ ಚಳವಳಿ, ಆ ಚಳವಳಿಗೆ ಪ್ರೇರಕವಾಗಿರುವ ಚರಿತ್ರೆಯ ಘಟನೆಗಳಿಗೂ ಅಲ್ಲಿನ ಸಾಹಿತ್ಯ ಮೀಮಾಂಸೆಗೂ ಏನು ಸಂಬಂಧ? ಇತ್ಯಾದಿ ಪ್ರಶ್ನೆಗಳನ್ನು ಕುರಿತು ವೆಲ್ಲಂಪಾಟಿಯವರ ಬಳಿ ಬಹಳ ಉಪಯುಕ್ತವಾದ ಚರ್ಚೆ ನಡೆಸುವ ಅವಕಾಶವಿತ್ತು, ಈ ಅವಕಾಶದಿಂದ ಹೀಗೆ ಹಠಾತ್ತಾಗಿ ವಂಚಿತರಾಗಬೇಕಾಗಿ ಬಂದದ್ದು ತೆಲುಗು-ಕನ್ನಡ ಎರಡೂ ಭಾಷೆಯ ಸಾಹಿತ್ಯ ವಿಮರ್ಶೆಗೆ ನಿಜಕ್ಕೂ ನಷ್ಟವೇ.

ರಾಷ್ಟ್ರೀಯ ಮಟ್ಟದಲ್ಲಿ ಪುರಸ್ಕೃತವಾದ ವೆಂಕಟಸುಬ್ಬಯ್ಯನವರದು ಪ್ರಚಾರವನ್ನೊಲ್ಲದ ಸರಳ ಜೀವ. ಸುಮಾರು 36 ವರ್ಷಗಳಷ್ಟು ಸುದೀರ್ಘ ಕಾಲ ಮದನಪಲ್ಲಿಯ ಬೆಸೆಂಟ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಅವರು ತಮ್ಮ ಪುಟ್ಟ ಊರಿನಲ್ಲಿ ಕುಳಿತೇ ಮಹತ್ವದ ಅಧ್ಯಯನ ನಿರತರಾಗಿದ್ದವರು. ತೆಲುಗು ಪತ್ರಿಕೆಯೊಂದಕ್ಕೆ ಅವರು ನೀಡಿದ (ಬಹುಶಃ ಅವರ ಕೊನೆಯ) ಸಂದರ್ಶನದಲ್ಲಿ 'ನಾನು ಕಾಲವಾದ ಮೇಲೆ ನನ್ನ ಲೇಖನಗಳಿಗೆ, ಅಭಿಪ್ರಾಯಗಳಿಗೆ, ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಪ್ರಚಾರ ನೀಡಿ. ನನ್ನ ಭೌತಿಕ ದೇಹಕ್ಕಲ್ಲ' ಎಂದಿದ್ದರು. ಯಾವುದೋ ಮಾರ್ಕ್ಸ್‌ವಾದದ ವಿಚಾರ ಕುರಿತಂತೆ ನಾನು ಅವರಲ್ಲಿ ಮಾಹಿತಿ ಕೇಳಿದಾಗ 'ನಿಮ್ಮ ಊರಲ್ಲೇ ಘನಪಂಡಿತರಾದ ಡಾ. ಜಿ.ಆರ್. ಅಂಥವರು ಇರುವಾಗ ನನ್ನ ಬಳಿ ಕೇಳುವುದೇನಿದೆ, ನೀವು ಬೆಂಗಳೂರಿನವರು ಯಾರೂ ಅವರ ವಿದ್ವತ್ತನ್ನು ಸರಿಯಾಗಿ ಬಳಸಿಕೊಳ್ಳುತ್ತಲೇ ಇಲ್ಲವಲ್ಲಯ್ಯ!' ಎಂದು ಪ್ರೀತಿಯಿಂದ ಗದರಿದ್ದರು.

ಕಾವ್ಯವನ್ನು ಬಹಳ ರಸವತ್ತಾಗಿ, ಅನುಭವಿಸುತ್ತಾ ಸುಶ್ರಾವ್ಯವಾಗಿ ಓದಬಲ್ಲವರಾಗಿದ್ದ ವೆಂಕಟಸುಬ್ಬಯ್ಯನವರು ಕೇವಲ ನೆನಪಿನಿಂದಲೇ ತೆಲುಗಿನ ಆದಿಕವಿ ಅಲ್ಲಸಾನಿ ಪೆದ್ದನನಿಂದ ಹಿಡಿದು ಈ ಕಾಲದ ಶ್ರೀಶ್ರೀ ಪದ್ಯಗಳನ್ನು ಹೇಳಿದ್ದರು. 'ಇನ್ನೊಂದು ಸಾರಿ ಬಂದಾಗ ನನ್ನ ಕವಿತಾ ಸಂಗ್ರಹದ ಪುಸ್ತಕಗಳಿಂದ ಓದುವೆ' ಎಂದಿದ್ದರು. ನನ್ನ ಯಾವಾಗಿನ ಆಲಸ್ಯದಿಂದಾಗಿ ಈ ಕೆಲಸವನ್ನು ಪಟ್ಟುಹಿಡಿದು ಮಾಡಿಸಲಾಗಲೇ ಇಲ್ಲ. ಈಗ ಸದ್ಯ ಅವರು ಹಾಡಿದ ಶ್ರೀಶ್ರೀಯವರ ಮಹಾ ಪ್ರಸ್ಥಾನದ 'ಪೋದಾಂ, ಪೋದಾಂ ಪೈಪೈರಿ.....' ಸಾಲುಗಳು ಮಾತ್ರ ಮನದಲ್ಲಿ ಮಾರ್ದನಿಗೊಳ್ಳುತ್ತಿವೆ.

-ವಿ.ಎಸ್. ಶ್ರೀಧರ

ತಕರಾರು

ನಿಮ್ಮ ಒಣಿಯ ಅಂಗಳದಲ್ಲೇ
ಒಂದು ರೊಟ್ಟಿಗಾಗಿ
ಯಾವುದೋ ಎಳೆಗೂಸಿನ ಮೃದುಗೆನ್ನೆಯ
ಮೇಲೆ
ಜೀತದ ಮುದ್ರೆ
ದರಬಾರು ನಡೆಸುವಾಗ
ನಿಮ್ಮ ಮನೆಯಲ್ಲಿ ನೀವು
ನಿಮ್ಮೊಡಲ ಕಂದನ ಹುಬ್ಬಿಗೆ
ಕಾಡಿಗೆ ತೀಡಿ, ದೃಷ್ಟಿ ನಿವಾಳಿಸಿ
ಕೈ ತುತ್ತು ಹಾಕುತ್ತ
ನಿರಂಬಳ ನಗುವಿರಾದರೆ....

ನೆರೆಮನೆಯ ಹುಡುಗಿ
ಹೊಂಗನಸಿನ ಹದಿನಾರರ ಚೆಲುವೆ
ಪುಂಡರ ತೊಡೆ ತೀಟೆಗೆ
ಕಣ್ಣು ಬೆಳಕು ಕಳಕೊಂಡು
ಆರ್ತನಾದಗೈಯುವಾಗಲೇ
ಮೈನೆರೆತ ನಿಮ್ಮ ಮಗಳಿಗೆ
ಸತಿಪತಿಗಳೊಂದಾಗಿ ನೀವು
ಮಲ್ಲಿಗೆ ಮುಡಿಸಿ, ಪಟಾಕಿ ಸಿಡಿಸಿ
ಆರತಿ ಬೆಳಗಿ ನಲಿಯುವಿರಾದರೆ.....

ಮಾಲೆ ಕಟ್ಟುವ ಹೂಗಾರ ಮುದುಕಿ
ಬೀದಿ ಬದಿಯಲ್ಲಿ ಹೆಣವಾದ ದಿನ
ಅದೇ ದಿನ ಅದೇ ಬೀದಿಯ ನೀವು
ನಿಮ್ಮ ಮನೆಯನ್ನು
ಘಮ ಘಮಿಸುವ ಹೂಮಾಲೆಯಿಂದ
ಶೃಂಗರಿಸಿ, ಹೆಸರಿಡುವ-
ಜೋಗುಳ ಜಾತ್ರೆ ನಡೆಸಿ
ಸಂಭ್ರಮಿಸುವಿರಾದರೆ....

ನಿಮ್ಮದೇ ಊರಿನ
ಗುಡಿ ಯಾ ಮಸೀದೆಯ ಗೋಪುರಗಳು
ಮತಾಂಧರ ಸುತ್ತಿಗೆಗೆ ಸಿಲುಕಿ
ತುಂಡಾಗುತ್ತಿರುವಾಗ
ನೀವು ನಿಮ್ಮದೇ ಜಗುಲಿ ಯಾ
ಮಸೀದೆಯಲ್ಲಿ
ಕೂತು ಭಜನೆ ಯಾ ಅಜಾ ಮಾಡುತ್ತ
ಸಂಪೂರ್ಣ ಭಕ್ತಿ
ಪರವಶರಾಗುವಿರಾದರೆ.... ....

ನಿಮ್ಮೊಂದಿಗೆ ನನ್ನದೇನೂ ತಕರಾರಿಲ್ಲ...!
ಯಾಕೆಂದರೆ
ನನ್ನ ತಕರಾರಿರುವುದು
ಕೇವಲ ಮನುಷ್ಯರ ಜೊತೆಗೆ...!!

■ ಬಸವರಾಜ ಸೂಳಿಭಾವಿ



ಈ ಮೂಲಕ ತಮ್ಮ ಗಮನಕ್ಕೆ ಮತ್ತು ತಮ್ಮ ಪತ್ರಿಕೆಯ ಮೂಲಕ ಒಂದು ವಿಷಯವನ್ನು ಹಂಚಿಕೊಳ್ಳಬೇಕಾದ ತುರ್ತು ನನ್ನಲ್ಲಿದೆ. ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಡಿ.ಎಸ್.ಇ.ಆರ್.ಟಿ. ಮತ್ತು ಶಾಂತಿವನ ಟ್ರಸ್ಟ್ (ರಿ) ಧರ್ಮಸ್ಥಳ ಇವರ ಸಹಯೋಗದಲ್ಲಿ ದಿನಾಂಕ 7,8,9 ಡಿಸೆಂಬರ್ 2006 ರಂದು ಜೀವನ ವಿಜ್ಞಾನ ಪುನಶ್ಚೇತನ ಕಾರ್ಯಾಗಾರ ನಡೆಯಿತು. ತಾಲ್ಲೂಕಿಗೆ ಇಬ್ಬರಂತೆ ಶಿಕ್ಷಕರನ್ನು ನಿಯೋಜಿಸಲಾಗಿತ್ತು. ಆ ನಿಮಿತ್ತ ಕರ್ನಾಟಕದ ಕಾಶ್ಮೀರವಾದ ಬೀದರ್‌ನಿಂದಲೂ ಬಂದಿದ್ದು ವಿಶೇಷವಾಗಿತ್ತು.

ಉತ್ತರ ಕನ್ನಡಿಗರನ್ನು ಅವಮಾನಿಸಿದ ದಕ್ಷಿಣದ ಚೆಡ್ಡಿ ಶಿಕ್ಷಕ

ಒಂದು ಪತ್ರ

ದಿನಾಂಕ 8.12.2006 ರ ಮಧ್ಯಾಹ್ನದ ಗೋಷ್ಠಿಯಲ್ಲಿ 'ಮಾನವೀಯ ಮೌಲ್ಯಗಳು' ಈ ವಿಷಯ ಕುರಿತು ಕಾರಾಯ ಸಂಜೀವ ಶೆಟ್ಟರು ಉಪನ್ಯಾಸ ನೀಡಿದರು. ಆ ಸಂದರ್ಭದಲ್ಲಿ ಉದುರಿದ ಆಣಿಮುತ್ತುಗಳಿಗೆ ಉತ್ತರ ಅಥವಾ ಪ್ರತಿಕ್ರಿಯೆ ನೀಡಲು ಅವಕಾಶ ಇರಲಿಲ್ಲ. ಅದನ್ನೇ ಪತ್ರಿಕೆಯ ಮೂಲಕ ಹಂಚಿಕೊಳ್ಳ ಬೇಕೆಂದಿರುವೆ.

1. ನಮ್ಮ ದಕ್ಷಿಣ ಕನ್ನಡದಲ್ಲಿ ಆಧ್ಯಾತ್ಮಿಕ ಪರಿಸರ ಅಥವಾ ಸಂಸ್ಕಾರ ಇರುವುದರಿಂದಲೇ ಇಲ್ಲಿ ಶಾಂತಮಯ ವಾತಾವರಣ ನೆಲೆಸಿದೆ ಎಂಬುದು.
2. ಇಲ್ಲಿಯ ಶಾಲಾ-ಕಾಲೇಜುಗಳಲ್ಲಿ ಯೋಗ ಮತ್ತು ಧ್ಯಾನ ಶಿಕ್ಷಣ ನೀಡುವುದರಿಂದ ಉತ್ತರ ಕರ್ನಾಟಕದಲ್ಲಿ ಕಂಡುಬರುವ ಕೊಳಕು ಮತ್ತು ಒರಟುತನಗಳು ಇಲ್ಲ ಎಂಬುದು.
3. ಇಂದಿನ ನೈತಿಕ ಅಧಃಪತನಕ್ಕೆ ಶಿಕ್ಷಕರೇ ಅದರಲ್ಲೂ ಸರ್ಕಾರಿ ಶಾಲೆಯ ಶಿಕ್ಷಕರೇ ಕಾರಣ ಎಂಬಂತೆ ಮಾತನಾಡಿದ್ದು... ಇವು ಉದಾಹರಣೆ ಮಾತ್ರ.

ಸಂಜೀವ ಶೆಟ್ಟರೇ ಹೇಳಿಕೊಳ್ಳುವಂತೆ ಶಿಕ್ಷಣ ಮಂತ್ರಿಗಳ ಕೋರಿಕೆಯ ಮೇರೆಗೆ DDPI ಗಳ ತರಬೇತಿಗೂ ಸಂಪನ್ಮೂಲ ವ್ಯಕ್ತಿಯಾಗಿ ಹೋಗುತ್ತೇನೆ ಎಂಬುದನ್ನು ಕೇಳಿದಾಗ ನನಗೆ ಗಾಬರಿ ಆಯ್ತು. 'ಶಾಂತಮಯ' ಎಂಬ ಶಬ್ದವೇ ವಿಚಿತ್ರವಾದ ಅರ್ಥವನ್ನು ಸ್ಫುರಿಸುತ್ತದೆ. ಜಾತಿ ಆಧಾರದ ಮೇಲೆ ಪಂಕ್ತಿ ಭೋಜನ ನಡೆಸುವುದನ್ನು ಕಂಡೂ ಕಣ್ಮುಚ್ಚಿ ಕುಳಿತುಕೊಳ್ಳುವುದು, 21ನೇ ಶತಮಾನದಲ್ಲೂ ಅಜಲು ಪದ್ಧತಿ ಆಚರಿಸುವಷ್ಟು ಅಜ್ಞಾನದಲ್ಲಿ ಬದ್ದಿರುವುದು, ದನದ ಮಾಂಸ ತಿನ್ನುವರೆಂಬ ಕಾರಣಕ್ಕೆ ಬೆತ್ತಲೆಗೊಳಿಸಿದರೂ ಒಪ್ಪಿಕೊಳ್ಳುವುದು, ಕುರುಬನೆಂಬ ಕಾರಣಕ್ಕೆ ದೇವಸ್ಥಾನದಿಂದ ಹೊರಗೆ ನಿಲ್ಲಿಸಿ ದರ್ಶನ ನೀಡುವುದು, ಜನರ ಅಜ್ಞಾನವನ್ನೇ ಬಂಡವಾಳದ ಮೂಲ ಮಾಡಿಕೊಂಡು ಜೀವನ ನಡೆಸುವರ ಕಂಡು ಸುಮ್ಮನಿರುವುದು, ಜನರ ಮೂಲಭೂತ ಅಗತ್ಯಗಳ ಕುರಿತು ಪ್ರಶ್ನಿಸುವವರನ್ನು ಸರ್ಕಾರಿ ಪೊಲೀಸರ ಮೂಲಕ ಕೊಲೆ ಮಾಡಿಸುವುದು, ಇದ್ಯಾವುದೂ ನಮ್ಮ ಉತ್ತರದಲ್ಲಿ ಕಾಣುವುದಿಲ್ಲ, ಶೆಟ್ಟರೆ, ನಿಜವಾಗಿ ಮಾನವೀಯ ಮೌಲ್ಯಗಳ ಉಲ್ಲಂಘನೆ ಎಲ್ಲಿ ಆಗುತ್ತಿದೆ ಎಂದು ನೀವೆ ಯೋಚಿಸಿ.

ಧ್ಯಾನ ಮತ್ತು ಯೋಗ ಶಿಕ್ಷಣ ನೀಡಿದ ಮಾತ್ರಕ್ಕೆ ಶಿಸ್ತು, ಶಾಂತಿ ಬರಲಾರದೆಂದೇ ನನ್ನ ಭಾವನೆ. ಮೃದುತ್ವ, ನಯವಂತಿಕೆ, ಸಾರ್ವಜನಿಕ ನಡತೆಗಳು ಬರಲು ಭೌತಿಕ ಪರಿಸರವೂ ಅಷ್ಟೇ ಮುಖ್ಯ. ಕುಡಿಯಲು ನೀರು ಸಿಗದೆ, ನಿಲ್ಲಲು ನೆರಳಿಲ್ಲದ ನಾಡಲ್ಲಿ ನಿಂತ ನೆಲವೂ ಕಾದ ಕಬ್ಬಿಣದ ಬಾಣಲೆಯಾಗಿರುತ್ತದೆ. ಇಂತಹ ನೆಲದಲ್ಲಿ ಬದುಕುವ ನಮಗೆ ಮಾನಸಿಕ ಒತ್ತಡ, ಮುಂಗೋಪ ಗಳು ರಕ್ತಗತವಾಗಿ ಬಂದುಬಿಡಬಹುದು. ಭೂ ಮಾಲೀಕರ ದೌರ್ಜನ್ಯದಲ್ಲಿ ನರಳುತ್ತಿರುವ ನಮಗೆ ಸಹಜ ವಾಗಿಯೇ ಆಕ್ರೋಶದ ವರ್ತನೆ ಮೈಗೂಡಿಕೊಳ್ಳುತ್ತದೆ. 'ಉತ್ತರ ಕರ್ನಾಟಕವೇ ಕೊಳಕು' ಎಂಬ ನಿಮ್ಮ ಭಾವನೆ ಶುದ್ಧ ಮೂರ್ಖತನದ್ದು. ಭೌತಿಕವಾಗಿ ಕೊಳಚೆ ಕಾಣಬಹುದು. ಮಾನಸಿಕವಾಗಿ ಹೃದಯ ಸಂಪನ್ನರು ನಾವು. 800 ವರ್ಷಗಳ ಹಿಂದೆಯೇ ಜಾತಿ, ಮತ ಅಳಿಸಲು ಹೋರಾಡಿದ ಜಗಜ್ಯೋತಿ ಬಸವಣ್ಣ ಜನಿಸಿದ ನಾಡು. ವೀರಶೈವ ಮಠಗಳ ಅನ್ನ ದಾಸೋಹದ ಮೂಲಕ ಸಾಮಾಜಿಕ ಸಮಾನತೆ ಸಾರಿದ ನೆಲ ನಮ್ಮದು. ಸಂತ ಶಿಶುನಾಳ ಷರೀಫರ ಮೂಲಕ ಭಾವೈಕ್ಯತೆ ಸಾರಿದ ಗಂಡು ಮೆಟ್ಟಿನ ನಾಡು ನಮ್ಮದು.

'ನೈತಿಕ ಅಧಃಪತನಕ್ಕೆ ಶಿಕ್ಷಕರೇ ಕಾರಣ' ಎಂದು ಸುಮಾರು ಒಂದೂವರೆ ತಾಸು ಮಾತನಾಡಿದಿರಿ. ಇರಬಹುದು ಕೆಲವು ಭಾಗ. ಆದರೆ ಸಂಪೂರ್ಣ ನಿಮ್ಮಿಂದಲೇ ಎಂಬ ಮಾತು ಒಪ್ಪಲಾಗದು. ರಾಷ್ಟ್ರೀಯ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದೇನೆ ಎಂಬ ನಿಮ್ಮ ಅನುಭವ ಒಂದು ಸಮಸ್ಯೆಯನ್ನು ಅಧ್ಯಯನ ಮಾಡುವಲ್ಲಿ ವಿಫಲವಾಗಿದೆಯೇನೋ ಅನಿಸುತ್ತದೆ. ಹೆಚ್ಚುತ್ತಿರುವ ತಾಂತ್ರಿಕತೆಯ ಫಲವಾಗಿ ದೃಶ್ಯಮಾಧ್ಯಮಗಳು ಬಲಗೊಳ್ಳುತ್ತಿರುವಾಗ, ಆಧುನಿಕ ಕಾಲಗತಿಯಲ್ಲಿ ದಂಪತಿಗಳಿಬ್ಬರ ದುಡಿಮೆಯಲ್ಲಿ ಪ್ರೀತಿ ವಂಚಿತ ಮಕ್ಕಳು ಮುಂದೆ ಸಮಾಜದಲ್ಲಿ ಸಹಜವಾಗಿಯೇ ಸಮಾಜಕಂಟಕರಾಗಬಹುದು. ಭ್ರಷ್ಟಗೊಂಡ ರಾಜಕೀಯಕ್ಕೆ-ಅಧಿಕಾರಕ್ಕೆ ಬಡಪಾಯಿ ಶಿಕ್ಷಕ ಹೊಣೆಗಾರನಾಗಬಹುದೇ? ಇಷ್ಟಕ್ಕೂ ಶಾಲೆಯಲ್ಲಿ ತಪ್ಪು ಮಾಡಿದ ಮಕ್ಕಳನ್ನು ಶಿಕ್ಷಿಸಿದರೆ ಕ್ರಿಮಿನಲ್ ಆಪಾದನೆ ಬೇರೆ. ಮಗು ತಾನು ಬದುಕುತ್ತಿರುವ ಪರಿಸರವೂ ಒಂದು ಕಾರಣವಾಗಬಹುದು. ಹೀಗೆ ಒಂದು ಸಮಸ್ಯೆಯನ್ನು ನಾನಾ ಮುಖಗಳಿಂದ ವಿಶ್ಲೇಷಣೆ ನಡೆಸಿದ್ದರೆ ನನ್ನಂಥವರಿಗೆ ಸಮಾಧಾನವಾಗುತ್ತಿತ್ತು.

ಉಳಿದಂತೆ ಧರ್ಮಸ್ಥಳದ ಸುಂದರ, ಸ್ವಚ್ಛವಾದ, ಶೈಕ್ಷಣಿಕ ಪರಿಸರದ ಕುರಿತು ಮೆಚ್ಚಿಕೊಂಡರೂ, ನನ್ನಲ್ಲಿದ್ದ ಕೆಲವು ಅನುಮಾನಗಳು ಪ್ರಶ್ನಾರ್ಥಕವಾಗಿಯೇ ಉಳಿದವು. ಶಾಂತಿವನ ಟ್ರಸ್ಟ್‌ನಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಲು ಕೆಳವರ್ಗದವರ್‍ಯಾರು ದೊರೆಯಲಿಲ್ಲವೇ? ರಸ್ತೆ ಗುಡಿಸುವ, ಪಾಯಖಾನೆ ತೊಳೆಯುವ ಜನಾಂಗದವರು ಅಡುಗೆ ಕೋಣೆಯಲ್ಲಿ ಅಡುಗೆ



ಮಾಡುವ ಅಥವಾ ಬಡಿಸುವಂತಿಲ್ಲವೇ? ಜನರ ನೂಕುನುಗ್ಗಲಿನಲ್ಲಿ ನಿಂತು ಕಾಲು ತುಳಿಸಿಕೊಳ್ಳುವವರ್‍ಯಾರು ಕಚೇರಿಯಲ್ಲಿ ಕೂತು ಲೆಕ್ಕಾಚಾರ ಬರೆಯುವಂತಿಲ್ಲವೇ? ಧರ್ಮಸ್ಥಳದ ಸುತ್ತಲೂ ಇರುವ ಕಾರ್ಮಿಕರಿಗೆ ಸುಸಜ್ಜಿತ ಮನೆಗಳನ್ನು ಕಟ್ಟಿಕೊಡಬಾರದೇಕೆ?

ಸಂಜೆಯ ಕಾರ್ಯಕ್ರಮದಲ್ಲಿ 'ಪಂಚವಟಿ' ಎಂಬ ಯಕ್ಷಗಾನ ಪ್ರಸಂಗವನ್ನು ಶಿಕ್ಷಕ ಸಮುದಾಯವೇ ನಡೆಸಿಕೊಟ್ಟಿತು. ಅದರ ಸಂಭಾಷಣೆಗಳು ಮತ್ತು ಕಥಾ ಹಂದರಗಳೆರಡು ನನ್ನನ್ನು ಮತ್ತಷ್ಟು ಘಾಸಿಗೊ[...] ಸಹಸ್ರಾರು ವರ್ಷಗಳ ಹಿಂದಿನ ಸಂಭಾಷ[...] ಇಂದಿಗೂ ಉಳಿಸಿಕೊಂಡಿದೆ. ಉದಾಹರಣೆಗ[...] ಲಕ್ಷ್ಮಣರನ್ನು ವಿವಾಹವಾಗು ಎಂದು ಒತ್ತಾ[...] ಹೆಣ್ಣಿಗೆ 'ನಿನ್ನ ಕುಲ ಯಾವುದು?' ಎಂದು [...] 'ನಾವು ಕುಲದಲ್ಲಿಯೇ ಶ್ರೇಷ್ಠ ಕುಲ ಬ್ರಾಹ್ಮ[...] ಎಂದು ಉತ್ತರಿಸುವ ಮೂಲಕ ಸನಾತನವಾದಿ [...] ಸ್ಥಿತಿಯನ್ನೇ ಬಿತ್ತರಿಸುವ ಕಥಾಪ್ರಸಂಗಗಳ ಸ[...] ಯನ್ನು ಕೊಂಚವಾದರೂ ಬದಲಾಯಿಸಿಕೊಳ್ಳ[...] ಪರಿವೇ ದಕ್ಷಿಣ ಕನ್ನಡ ಶಿಕ್ಷಕ ಬಂಧುಗಳಿಗೆ ಇರ[...] ಶಾಂತಿವನದ ಸಂಪನ್ಮೂಲ ವ್ಯಕ್ತಿ ಪ್ರಕಾಶ ಮೂ[...] ಸ್ವತಃ ಪಾತ್ರಧಾರಿಯೂ ಆಗಿದ್ದರು. ಇನ್ನು ಕ[...] ದ್ರಾವಿಡ ಸಂಸ್ಕೃತಿಯ ಮೂಲ ಬೇರ[...] ಕತ್ತರಿಸಿ, ಮೂಲನಿವಾಸಿಗಳನ್ನೇ ಅನಾಥರ[...] ರಾಕ್ಷಸರನ್ನಾಗಿಸಿ, ನಮ್ಮಿಂದಲೇ ನಮ್ಮನ್ನು ಹತಗ[...] ಕತೆ...... ಇದನ್ನು ನೋಡದೆ ಎದ್ದು ಬ[...] ಡಿ.ಎಸ್.ಇ.ಆರ್.ಟಿ. ಸಹಾಯಕ ನಿರ್ದೇಶಕರಾದ[...] ಲತಾ ಮೇಡಮ್‌ಗೆ ತುಂಬಾ ಬ್ಯಾಸರವಾ[...]

ತರಬೇತಿಯ ಕುರಿತು ಅನಿಸಿಕೆ ಹೇಳಿದ ಗೆ[...] ಅಲ್ಲಿನ ಆತಿಥ್ಯ, ಪುಷ್ಕಳ ಭೋಜನವೇ ಬಹುದ[...] ಗಿತ್ತು ಕಾನ್ವೆಂಟ್ ಮಕ್ಕಳ ಕಂಠಪಾಠದಂತೆ. ಇ[...] ಹೇಳಲು ಬಾಯೆಲ್ಲಿ? ಹೀಗೆ ಬರೆಯುತ್ತಿದ್ದುದನ[...] ಮಡದಿ "ಬನ್ನಿ ಬನ್ನಿ ಊಟಕ್ಕೆ, ಮೂರು ದಿನ [...] ಉಂಡು ಬಂದು ಅವರ ಮನೆ ಗಳಾನೆ [...] ಶುರು ಮಾಡಿರಲ್ಲ" ಎಂಬ ಕೊಂಕು ಮಾತಿಗೆ "[...] ಗೊತ್ತು ನನ್ನ ದುಗುಡ" ಇದು ನನ್ನ ಗೌರಕ್ಕ[...] ಗುರು ಲಂಕೇಶರಿಗೆ ಮಾತ್ರ ಅರ್ಥವಾಗುತ್ತೆ? [...] ತ್ತಿರು, ರಾಜ್ಯದ ಶಿಕ್ಷಕರ ಪರವಾಗಿ, ಸಾಮಾಜಿಕ [...] ಪರವಾಗಿ ಈ ಪ್ರಶ್ನೆಗಳನ್ನು ಕಾರಾಯ ಸಂಜೀವ [...] ಮತ್ತು ಡಾ. ವೀರೇಂದ್ರ ಹೆಗ್ಗಡೆಯವರ ಸ[...] ಕಳಿಸಿಯೇ ಕಳಿಸುತ್ತಾರೆ" ಎಂದೆ. "ಅವರು ನಿಮ್ಮ[...] ಇರಬೇಕು" ಎಂದು ಮೂಗು ಮುರಿದಳು...

-ಮಂಜಣ್ಣ, ಸ[...]

ಅನಿವಾರ್ಯ ಕಾರಣಗಳಿಂದ ಎಚ್.ಎಲ್. ಕೇಶವಮೂರ್ತಿಯವ[...] ಅಣಕ ಕಾಲಂ ಈ ವಾರ ಪ್ರಕಟವಾ[...] ಮುಂದಿನ ವಾರ ಎಂದಿನಂತೆ ಇರುತ್ತ[...]

ಲಂಕೇಶರ 'ರೊಟ್ಟಿ' ಕತೆ ನೆನಪಾಯಿತು!

ಬಿಜೆಪಿಯ ರಾಜಕೀಯ ಗ್ರಾಫ್ ಗಮನಿಸಿಕೊಂಡು ಬಂದವರಿಗೆ 73 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರ ಗೂಂಡಾ ಪ್ರವೃತ್ತಿ ನಿರೀಕ್ಷಿತವೇ ಆಗಿತ್ತು. ಅದರ ಮೊದಲ ಮುನ್ಸೂಚನೆಯನ್ನು ಯಡ್ಡಿ ತಾವು ಉಪಮುಖ್ಯಮಂತ್ರಿ ಆದ ಸಮಯದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರ ತೆಗೆಸುವ ಮೂಲಕ ಎಲ್ಲಾ ಪ್ರಗತಿಪರ, ಜನಪರ, ಮಾನವೀಯ ಮೌಲ್ಯಗಳನ್ನು ಕಿತ್ತೆಸೆಯುವ ಮೊದಲ ಗ್ರೀನ್ ಸಿಗ್ನಲ್ ಆದಾಗಿತ್ತು. ಬ್ರಿಟಿಷರಿಂದ ಎರವಲಾಗಿ ಪಡೆದ ವಿಭಜಿಸಿ ಆಳು ಎಂಬ ಸಿದ್ಧಾಂತದ ಪ್ರತಿಪಾದಕರಾದ ಬಿಜೆಪಿಯಿಂದ ಇನ್ಯಾವ ಸಿದ್ಧಾಂತ ನಿರೀಕ್ಷಿಸಲು ಸಾಧ್ಯ. ಮೊಟ್ಟಮೊದಲ ಬಾರಿಗೆ ಸಂಘ ಪರಿವಾರದವರಿಗೆ ತಿರುಗೇಟು ನೀಡುವುದರೊಂದಿಗೆ ಮಲೆನಾಡಿನ ಮಾನವೀಯ ಮೌಲ್ಯಗಳಿಗೆ ಮತ್ತೆ ಜೀವ ತುಂಬುವ ಕೆಲಸ ಮಾಡಿದ್ದೀರಾ. ಇದನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಎಲ್ಲಾ ಪ್ರಗತಿಪರ, ಜೀವಪರ, ಮಾನವಪರ ಜನತೆಗಿದೆ.

-ಬಾಬು ಮತ್ತು ಸುಲೈಮಾನ್, ಚಿಕ್ಕಮಗಳೂರು

ಮೊನ್ನೆ ಶಿವಮೊಗ್ಗ ಸಾಹಿತ್ಯ ಸಮ್ಮೇಳನದ ಸಮೂಹ ಮಾಧ್ಯಮ ಗೋಷ್ಠಿಯಲ್ಲಿ ನಿಮ್ಮ ಭಾಷಣ ಕೇಳಿದೆ. ಪೊಲೀಸರ ಕಾಟದ ಮಧ್ಯೆಯೂ ನಿಮ್ಮ ಗೋಷ್ಠಿಗಾಗಿ, ಭಾಷಣಕ್ಕಾಗಿ ಕುವೆಂಪು ರಂಗಮಂದಿರದಲ್ಲಿ ಕಾದು ಕುಳಿತಿದ್ದೆ. ತುಂಬ ಧೈರ್ಯದಿಂದ ಮಾತನಾಡಿದಿರಿ. ಅಲ್ಲದೆ, ನಿಮ್ಮ ಭಾಷಣವನ್ನು ಪತ್ರಿಕೆಯಲ್ಲೂ ಓದಿದೆ. ಖುಷಿಯಾಯಿತು.

-ಕೇಶವ ಪೆರಾಜೆ, ಮಡಿಕೇರಿ

ತಮ್ಮ ಪತ್ರಿಕಾರಂಗದ ಕೆಲಸಗಳ ಒತ್ತಡಗಳ ನಡುವೆಯೂ ಮೊನ್ನೆ ಮೊನ್ನೆ ಬಾಬಾ ಬುಡನ್‌ಗಿರಿಯಲ್ಲಿ ನಡೆಸಿದ ಚಳವಳಿಯಲ್ಲಿ ಯಶಸ್ಸನ್ನು ಪಡೆದಂತೆ ಇದೀಗ ಶಿವಮೊಗ್ಗದಲ್ಲೂ ಕೂಡ ಅದೇರೀತಿ ಮೊಂಡುವಾದಿಗಳ ಪ್ರತಿ ರೋಧದ ನಡುವೆಯೂ ಕೂಡ ಜಗ್ಗದೇ ಯಶಸ್ವಿಯಾ ದದ್ದಕ್ಕೆ ಅಭಿನಂದನೆಗಳು.

ಬಲಾಢ್ಯ ವಿರೋಧಗಳ ನಡುವೆಯೂ ತಮ್ಮ ನಿಲುವಿಗೆ ಕಟ್ಟುಬಿದ್ದ ಚಂಪಾರಿಗೂ ಅಭಿನಂದನೆಗಳು. ಅದೇರೀತಿ ತಮ್ಮ ಮಂಗಾಟಗಳ ಕಾರಣ ನಿಮ್ಮ ಕಾರ್ಯಕ್ರಮಕ್ಕೆ ಹೆಚ್ಚು ಪ್ರಚಾರ ಸಿಗುವಂತೆ ಮಾಡಿದ ಎಬಿವಿಪಿ ಕಾರ್ಯಕರ್ತರಿಗೂ ಅಭಿನಂದನೆಗಳನ್ನ ಸಲ್ಲಿಸದೇ ಬೇರೆ ವಿಧಿಯಿಲ್ಲವಾಗಿದೆ!


-ರವಿ ಪುತ್ತೂರ್, ದಕ್ಷಿಣ ಕನ್ನಡ

ಪ್ರತಿವರ್ಷ ಅದೇ ಜಾಗತೀಕರಣ, ದೇಸಿಯ ಚಿಂತನೆಯಲ್ಲಿ ಮಾತಿನ ತೌಡು ಕುಟ್ಟುತ್ತ ಸಾಹಿತ್ಯ ಸಮ್ಮೇಳನದ 'ಶಾಸ್ತ್ರ' ಮುಗಿಯುತ್ತಿತ್ತು. ಈ ಬಾರಿಯು ಹೆಚ್ಚೂ ಕಡಿಮೆ ಹೀಗೆ ನಡೆದರೂ ಒಂದಿಷ್ಟು ಭಿನ್ನವಾಗಿತ್ತು. ಒಂದು, ತಣ್ಣನೆಯ ಕವಿ ನಿಸಾರ್ ಅಹಮದ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು, ಮತ್ತೊಂದು, ಗೌರಿ ಲಂಕೇಶ್ ದಿಟ್ಟತನದಿಂದ ಪತ್ರಿಕೆಯ ನೈತಿಕ ಮೌಲ್ಯ ಹಾಗೂ ನಕ್ಸಲೀಯರ ಬಗೆಗೆ ಪೂರ್ವಾಗ್ರಹಪೀಡಿತ ನಕ್ಸಲ್ ವಿರೋಧಿಗಳಿಗೆ ಸರಿಯಾದ ತಿಳವಳಿಕೆ ನೀಡಿದ್ದು ವಿಶೇಷವಾಗಿತ್ತು.

ಗೌರಿ ಹಲವಾರು ಸವಾಲುಗಳ ನಡುವೆಯೂ ಸಮ್ಮೇಳನದಲ್ಲಿ ಮಾತನಾಡಿ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವುದನ್ನು ಮತ್ತೊಮ್ಮೆ ಮನವರಿಕೆ ಮಾಡಿಕೊಟ್ಟದ್ದಾರೆ. ಇದರ ಜೊತೆಗೆ ಎಬಿವಿಪಿ ಹಾಗೂ ಮೂಲಭೂತವಾದದ ಧರ್ಮಾಂಧ 'ವಾನರ' ಹಿಂಬಾಲಕರಿಗೆ, ಅದರ ವಂದಿಮಾಗಧರಿಗೆ ಕೊಟ್ಟರುವ injection ಪರಿಣಾಮಕಾರಿಯೂ ಆಗಿದೆ.

ಹಾಗೆ ನೋಡಿದರೆ ನಕ್ಸಲೀಯರ ಪ್ರತಿಹಿಂಸೆಯ ಬಗೆಗೆ ಮಾತನಾಡಿ ವಿರೋಧಿಸುವ ಎಬಿವಿಪಿಯಾದಿಯಾಗಿ ಹಲವಾರು ಮಂದಿಗೆ ಮೂಲ ಹಿಂಸೆಯನ್ನು ಗರ್ಭದಲ್ಲಿಟ್ಟುಕೊಂಡಿರುವ ಸರಕಾರ ಕಾಣವುದೇ ಇಲ್ಲ. ಸರಕಾರ ನಿರ್ದಯದಿಂದ ಎಸಗುವ ಯಾವುದೇ ಬಂದೂಕಿನ ಹತ್ಯೆಗೆ, ಅಮಾಯಕ ನಕ್ಸಲೀಯರ ರಕ್ತ ಬಸಿಯುವುದಕ್ಕೆ ರಕ್ಷಣೆ, ಸಂವಿಧಾನ, ಕಾನೂನು ಇವುಗಳ ಲೇಬಲ್ ಅಡಿಯಲ್ಲಿ ಅದೆಷ್ಟು ಜನ ನಕ್ಸಲೀಯರ ಕೊಂದರು ಅದೂ ಅಹಿಂಸೆಯೇ ಅಲ್ಲವೇ? ಕಾನೂನು ಮತ್ತು ನ್ಯಾಯ ಯಾವಾಗಲೂ ಒಂದೇ ಎಂದು ನಂಬಿರುವ ಅಥವಾ ನಮ್ಮನ್ನಾಳುವವರು ಹಾಗೆ ನಂಬಿಸಿ ಬದುಕುತ್ತಿರುವಾಗ ನಕ್ಸಲೀಯರ ನಿಜದನಿಯನ್ನು ಸರಕಾರ ತಿಳಿದೂ ತಿಳಿಯದಂತೆ ವರ್ತಿಸಿ ನಕ್ಸಲೀಯರನ್ನು ಹಿಂಸಾವಾದಿಗಳು ಎನ್ನುವುದು ಎಷ್ಟು ಸರಿ?

ಇಂತಹ ಜ್ವಲಂತವನ್ನು ಎದುರಿಗಿಟ್ಟುಕೊಂಡು ಬದುಕುತ್ತಿರುವ ನಮಗೆ ಇವತ್ತಿಗೂ ಲಂಕೇಶರ 'ರೊಟ್ಟಿ', ದೇವನೂರು ಮಹಾದೇವರ ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ ಆ್ಯಂಟನ್ ಚೆಕಾಫ್‌ನ ವಾರ್ಡ್ ನಂಬರ್ 6, ಈ ಕಥೆಗಳನ್ನು ಕಥೆಯಾಗಿ ಮಾತ್ರ ಓದಿಕೊಳ್ಳದೆ ಅದನ್ನು ನಮ್ಮ ಇಂದಿನ ನಕ್ಸಲ್ ಸಮಸ್ಯೆಯ ಸನ್ನಿವೇಶದಲ್ಲಿ ಇಟ್ಟು ನೋಡಬೇಕಿದೆ. ಆಗ ನಮಗೆ ಆಳುವ ವರ್ಗದ ತರ್ಕ, ಕುತರ್ಕ, ವ್ಯವಸ್ಥೆಯಲ್ಲಿನ ವೈರುಧ್ಯಗಳು, ವಾಸ್ತವತೆ ತಿಳಿಯುತ್ತದೆ ಹಾಗೂ ನಕ್ಸಲೀಯರ ಪ್ರತಿ ಹಿಂಸೆಯ ಮೂಲ ಎಲ್ಲಿಯದು? ಅವರು ಹಿಂಸಾವಾದಿಗಳೆ? ಇಷ್ಟಕ್ಕೂ ಗುಂಡು ಹಾರಿಸಿದವರು ಮಾತ್ರ ಕೊಲೆಗಾರರಾಗುತ್ತಾರೆಯೆ? ಇಂತಹ ಹಲವಾರು ಸಂಗತಿಗಳಿಗೆ ಉತ್ತರ ದೊರೆಯಬಲ್ಲದು.



ಇದಿಷ್ಟನ್ನು ಇಲ್ಲಿ ಹೇಳಲು ಕಾರಣವಿಷ್ಟೆ: ಮೊನ್ನೆ ಗೌರಿ ಲಂಕೇಶ್ ಸಮ್ಮೇಳನದಲ್ಲಿ ನಕ್ಸಲೀಯರ ಬಗ್ಗೆ[...] ಸಿಂಪಥಿಯನ್ನು ಪಕ್ಕಕ್ಕಿರಿಸಿ ಅತ್ಯಂತ ಜವಾಬ್ದಾ[...] ವಾಗಿಯೇ ಮಾತನಾಡಿದ್ದಾರೆ. ದುರಂತವೆಂದರೆ,[...] ಕತ್ಲೂರಿನ ನಕ್ಸಲೀಯ ದಿನಕರ ಪೊಲೀ[...] ಎನ್‌ಕೌಂಟರಾಗಿದ್ದಾನೆ. ಈ ನಡುವೆ ಅಮೆರಿಕಾ[...] ಹುಸೇನ್‌ನನ್ನು ಅಮಾನವೀಯವಾಗಿ ಹತ್ಯೆ ಪ[...] ಪತ್ರಿಕೆ ಈ ಕುರಿತು ಜೀವಕೇಂದ್ರಿತ ನೆಲೆಯಲ್ಲಿ [...] ಇದನ್ನು ಓದಿದಾಗ ನನಗೆ ಕವಿಯೊಬ್ಬ ಬರೆದ [...] ಸಾಲು ನೆನಪಾಗುತ್ತಿದೆ;

ಅಧಿಕಾರಕ್ಕೆ ಎಷ್ಟು ತಲೆ
ಅದಕ್ಕೆಷ್ಟು ಗ್ಯಾಲನ್ ರಕ್ತ ಬೇಕು
ಎಷ್ಟು ಭೂಮಿಗಳು ಬೇಕು

-ಆರ್. ಸುಧೀಂದ್ರ ಕುಮಾರ್, ಮೈ[...]

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜಾ[...] ಇರುವಂತಹ ಈ ಭವ್ಯ ದೇಶದ, ರಾಜ್ಯದ ಪ್ರಜಾ[...] ವೆಂಬ ನಾಡಿನಲ್ಲಿ ಸ್ವಾತಂತ್ರ್ಯಹರಣ ನಮ್ಮ ನಾಯ[...] ನಡೆಯುತ್ತಾ ಬಂದಿದೆ. ಹಿಂದೆ ನಾವು ಬ್ರಿಟಿ[...] ಪಡೆದುಕೊಂಡಿದ್ದ ಸ್ವಾತಂತ್ರ್ಯವನ್ನು ಇಂದು ನ[...] ಆರಿಸಿಹೋಗಿ ನಮ್ಮನ್ನಾಳುವ ನಾಯ[...] ಪಡೆಯುವುದಕ್ಕಾಗಿ ಹೋರಾ[...] ದುದು ಎಂತಹ ವಿಪರ್ಯಾಸ.

ಇದನ್ನು ನಾನು ಯಾಕೆ ಹೇ[...] ನೆಂದರೆ ಮೊನ್ನೆ ನಡೆದ ಶಿ[...] ಸಾಹಿತ್ಯ ಸಮ್ಮೇಳನದಲ್ಲಿ ಗೌರಿ[...] ಹಾಗೂ ಕಲ್ಕುಳಿ ವಿಠ್ಠಲ ಹೆಗ[...] ಗೋಷ್ಠಿಯಲ್ಲಿ ಶೋಷಣೆಗಳ [...] ವಾಕ್‌ಸ್ವಾತಂತ್ರ್ಯವನ್ನು ಕಸಿದು[...] ಪ್ರಯತ್ನಗಳನ್ನು ಚೆಡ್ಡಿಗಳು ಮಾ[...]

ಪ್ರಜಾಪ್ರಭುತ್ವದ ಹಕ್ಕ[...] ಹತ್ತಿಕ್ಕುವ ಈ ಪ್ರಯತ್ನ[...] ವಿಷಾದನೀಯ. ಹಾಗೆಯ[...] ಪ್ರತಿಭಟನೆಗಳಿಂದ ಗೌರಿ [...] ರಾಗಬೇಕಿಲ್ಲ, ಇಂತಹ [...] ಗಳಿಗೆ, ವೈಚಾರಿಕತೆಗೆ ಸದಾ[...] ಬೆಂಬಲವಿದೆ.

-ವೀರೇಶ್ ಬ್ಯಾಳಿ...


ನನ್ನ ಮನೆಯಲ್ಲೇ ನನಗೆ ಪ್ರತಿಸ್ಪರ್ಧಿ!

'ನಂಜುಂಡಿ ಕಲ್ಯಾಣ'ದ ಗೆಲುವು ನನಗೆ ನಮ್ಮ ಮನೆಯಲ್ಲೇ ಮತ್ತೊಬ್ಬ ಪ್ರತಿಸ್ಪರ್ಧಿಯನ್ನು ಹುಟ್ಟುಹಾಕಿತು. ಇದನ್ನು ಕಂಡು ನನಗೆ ತುಂಬ ಸಂತೋಷವಾಯಿತು. ನಮ್ಮೆಲ್ಲರಿಗಿಂತ ಹೆಚ್ಚು ಸಂತೋಷಪಟ್ಟವರು ನಮ್ಮ ಅಮ್ಮ. ಪತಿದೇವರು ಸೂಪರ್ ಸ್ಟಾರ್ ಆದರೆ ಇಬ್ಬರು ಮಕ್ಕಳು ಸಕ್ಸಸ್‌ಫುಲ್ ಹೀರೋಗಳು. ಇದು ಯಾವ ತಾಯಿಗೆ ತಾನೆ ಸಂತೋಷ ನೀಡುವುದಿಲ್ಲ?

ನಿರೂಪಣೆ: ಸದಾಶಿವ ಶೆಣೈ


35

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನನ್ನ ಅಪ್ಪಾಜಿಗೆ ನಾನು ನಟಿಸಿದ ಚಿತ್ರಗಳಲ್ಲಿ ಯಾವುದು ಅತ್ಯಂತ ಇಷ್ಟವಾದದ್ದು ಗೊತ್ತಾ? 'ಇನ್ಸ್‌ಪೆಕ್ಟರ್ ವಿಕ್ರಂ'! ಅವರಿಗೆ ಈ ಚಿತ್ರ ಎಷ್ಟು ಇಷ್ಟವಾಗಿತ್ತೆಂದರೆ ಅದನ್ನು ಅವರು ಎರಡು ಬಾರಿ ನೋಡಿದರು. ಅಷ್ಟೇ ಅಲ್ಲ, "ಹಾಸ್ಯ ಪಾತ್ರದಲ್ಲಿ ತುಂಬಾ ಚೆನ್ನಾಗಿ ನಿರ್ವಹಿಸಿದ್ದೀಯ" ಎಂದು ನನ್ನ ಬೆನ್ನು ತಟ್ಟಿದ್ದರು. 'ಇನ್ಸ್‌ಪೆಕ್ಟರ್ ವಿಕ್ರಂ' ಅವರ ಪಾಲಿಗೆ ಆಲ್‌ಟೈಮ್ ಫೇವರಿಟ್ ಎಂಬುದು ನನಗೆ ಹೆಮ್ಮೆಯ ವಿಷಯ.

ಈ ಚಿತ್ರ ನನ್ನ ಹಳೆಯ ಚಿತ್ರಗಳ ತರಹ ಸೂಪರ್‌ಹಿಟ್ ಆಗಲಿಲ್ಲ. ಆದರೆ ಅಷ್ಟೊಂದೇ ದಿನಗಳಲ್ಲಿ ಈ ಚಿತ್ರವನ್ನು ಹೇಗೆ ಮುಗಿಸಿದರು ನೋಡೋಣ ಎಂಬ ಕುತೂಹಲ ಉದ್ಯಮದವರಿಗೆ ಮತ್ತು ಪ್ರೇಕ್ಷಕರಿಗೆ ಇತ್ತು. ಚಿತ್ರವನ್ನು ನೋಡಿದವರೆಲ್ಲಾ ಮೆಚ್ಚಿದರಲ್ಲದೆ, ವಿಮರ್ಶಕರೂ ಹಾಸ್ಯ ಪಾತ್ರದಲ್ಲಿ ನನ್ನ ನಟನೆಯನ್ನು ಪ್ರಶಂಸಿಸಿದರು.



ಹಾಸ್ಯ ಅಂದಾಕ್ಷಣ ನನಗೆ ನೆನಪಿಗೆ ಬರುವುದು ನನ್ನ ಸಹೋದರ ರಾಘು ರಾಘವೇಂದ್ರ ರಾಜ್‌ಕುಮಾರ್. ರಾಘುಗೆ ಬಾಲ್ಯದಿಂದಲೇ ನಮ್ಮೆಲ್ಲರಿಗಿಂತ ಸಿಕ್ಕಾಪಟ್ಟೆ ಸೆನ್ಸ್ ಆಫ್ ಹ್ಯೂಮರ್ ಇತ್ತು. ಬಹುಶಃ ಆ ಹಾಸ್ಯಪ್ರಜ್ಞೆಯೇ ಮುಂದೆ ಆತ ಹ್ಯೂಮರ್ ನಾಯಕನಟನಾಗಿ ಮೂಡಿಬರಲು ಸಹಾಯವಾಯಿತೋ ಏನೋ?

ರಾಘು ನಟಿಸಿದ ಮೊದಲ ಚಿತ್ರ 'ಚಿರಂಜೀವಿ ಸುಧಾಕರ' ಆರಂಭವಾದಾಗ ನಮ್ಮ ಮನೆಯಲ್ಲಿ ಒಂದು ರೀತಿಯ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ನಮ್ಮ ಮನೆಯಿಂದ ಮೂರನೆಯ ನಾಯಕನಟ ಚಿತ್ರರಂಗಕ್ಕೆ ಕಾಲಿಡುವ ಆ ಸಂದರ್ಭದಲ್ಲಿ ಸಹಜವಾಗಿಯೇ ನಾವೆಲ್ಲಾ ಸಂತೋಷ, ಸಂಭ್ರಮದಿಂದ ಓಡಾಡುತ್ತಿದ್ದೆವು.


ನನ್ನ ಮೊದಲನೇ ಚಿತ್ರ 'ಆನಂದ್' ಅನ್ನು ಸಿಂಗೀತಂ ಶ್ರೀನಿವಾಸ್ ನಿರ್ದೇಶಿಸಿದ್ದರಿಂದ ರಾಘು ಚಿತ್ರಕ್ಕೂ ಅವರನ್ನೇ ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಸಿಂಗೀತಂ ಅತ್ಯಂತ ಪ್ರತಿಭಾವಂತ ಮತ್ತು ಸೆನ್ಸಿಬಲ್ ನಿರ್ದೇಶಕ ಎಂದೇ ನಮ್ಮ ಮನೆಯವರ ಅಭಿಪ್ರಾಯವಾಗಿತ್ತು.

ಆದರೆ ಅದೇನು ದುರಾದೃಷ್ಟವೋ ಏನೋ, 'ಚಿರಂಜೀವಿ ಸುಧಾಕರ' ಬಾಕ್ಸಾಫೀಸಿನಲ್ಲಿ ನಿರೀಕ್ಷಿಸಿದಷ್ಟು ಯಶಸ್ಸನ್ನು ಕಾಣಲಿಲ್ಲ. ಹಾಗಂತ ಈ ಚಿತ್ರ ಫ್ಲಾಪ್ ಎಂದು ಹೇಳಲು ಸಾಧ್ಯವಿಲ್ಲ. 50 ದಿನ ತುಂಬದ ಸಹ ಪ್ರದರ್ಶನ ಕಂಡಿತ್ತು.

ವೈದ್ಯಕೀಯ ಶಿಕ್ಷಣ ಕಲಿತಿದ್ದ ರಾಘು ಸಿನಿಮಾ ರಂಗ ಪ್ರವೇಶಿಸಲು ನಿರ್ಧರಿಸಿದಾಗ ಎಲ್ಲರಿಗೂ ಸಂತೋಷವಾಗಿತ್ತು. ಒಳ್ಳೆಯ ಹಾಸ್ಯ ಪ್ರಜ್ಞೆ ಹೊಂದಿರುವ ರಾಘು ಮೂಲತಃ ಬಹಳ ಒಳ್ಳೆಯ ಗಾಯಕ ಕೂಡ. ಆತನ ಮೊದಲ ಚಿತ್ರ ಯಶಸ್ವಿ ಆಗಲಿ ಎಂದು ಹಾರೈಸಿದ್ದೆ. ಆದರೆ ಅದು ಯಶಸ್ವಿಯಾಗದ ಕಾರಣ ನಮ್ಮೆಲ್ಲರಿಗೆ ತುಂಬಾ ಬೇಸರವಾಗಿತ್ತು. ನನ್ನ ಪ್ರಕಾರ ಆ ಚಿತ್ರದಲ್ಲಿ ರಾಘು ತುಂಬ ಚೆನ್ನಾಗಿ ನಟಿಸಿದ್ದನಲ್ಲದೆ ಅಷ್ಟೇ ಚೆನ್ನಾಗಿ ಹಾಡಿದ್ದ ಕೂಡ. ಆತ ಹಾಡಿದ್ದ ಹಾಡು ಸೂಪರ್‌ಹಿಟ್ ಆಗಿದ್ದರೂ ಅದೇಕೋ ಸಿನಿಮಾ ಮಾತ್ರ ಗೆಲ್ಲಲಿಲ್ಲ. ನಾ ಆತನಿಗೆ "ಈ ಸೋಲು ನಿನ್ನ ಮುಂದಿನ ಜೀವನಕ್ಕೆ ಸ್ಫೂರ್ತಿ ಯಾಗಬೇಕೇ ವಿನಃ ಇದನ್ನು ತಲೆಗೆ ಹಚ್ಚಿಕೊಳ್ಳಬೇಡ" ಎಂದು ಹೇಳಿದ್ದೆ.

ಆಗ ರಾಘು ಕೂಡ ಸ್ವಲ್ಪ ಬೇಸರದಲ್ಲಿದ್ದ. ಆದರೆ ಅಪ್ಪಾಜಿ ಅವನಿಗೆ ಒಂದು ಮಾತು ಹೇಳಿದ್ದರು: "ನೋಡು ಕಂದಾ... ಜೀವನದಲ್ಲಿ ಯಾರು ಆರಂಭದಲ್ಲಿ ಬಹಳಷ್ಟು ನೋವನ್ನು ಕಾಣುತ್ತಾರೋ ಅವರಿಗೆ ಭವಿಷ್ಯದಲ್ಲಿ ಸುಖಸಂಪತ್ತು ಕಟ್ಟಿಟ್ಟ ಬುತ್ತಿ. ಇದಕ್ಕೆ ನಾನೇ ಉದಾಹರಣೆ. ನಿನ್ನ ವಿಷಯದಲ್ಲೂ ಅಷ್ಟೇ. ಮೊದಲ ಚಿತ್ರದ ಸೋಲಿನಿಂದ ನೀನು ಧೃತಿಗೆಡಬೇಡ, ಯಾರೂ ಮಾಡದಂತಹ ದೊಡ್ಡ ಸಾಧನೆಯನ್ನು ನೀನು ಈ ಚಿತ್ರೋದ್ಯಮದಲ್ಲಿ ಖಂಡಿತ ಮಾಡುತ್ತಿ. ಜೀವನ ಎಂಬ ಪಯಣದಲ್ಲಿ ಸಾಗುತ್ತಿದ್ದಾಗ ನಮಗೆ ಬರೀ ಇಳಿಜಾರು ರಸ್ತೆಗಳೇ ಸಿಗುವುದಿಲ್ಲ. ಇಳಿಜಾರಿನ ನಂತರ ದಿಣ್ಣೆ ರಸ್ತೆಗಳು ಸಿಗಲೇಬೇಕು." ಅವರ ಮಾತನ್ನು ಕೇಳಿ ರಾಘು ಮತ್ತೆ ಲವಲವಿಕೆಯಿಂದ ಓಡಾಡಲು ಶುರು ಮಾಡಿದ.

ನಮ್ಮ ಮನೆಯಲ್ಲಿ ಯಾರೇ ಆಗಲಿ ದುಃಖದಲ್ಲಿರುವುದನ್ನು ಅಪ್ಪಾಜಿ ಸಹಿಸುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಅವರು ಇಂತಹ ಫಿಲಾಸಾಫಿಕಲ್ ಮಾತುಗಳಿಂದಲೇ ಎಲ್ಲರಲ್ಲಿ ಸ್ಫೂರ್ತಿಯನ್ನು ತುಂಬಿಸುತ್ತಿದ್ದರು. ಅಂತಹ ಅಪ್ಪಾಜಿಯನ್ನು ಪಡೆದ ನಾವು ನಿಜಕ್ಕೂ ಪುಣ್ಯವಂತರು. ಅವರ ಮಾತುಗಳು ಮತ್ತು ಮಾರ್ಗದರ್ಶನದಿಂದ ಮಾತ್ರ ನಾವು ಇವತ್ತು ಈ ಎತ್ತರಕ್ಕೆ ಬೆಳೆಯಲು ಸಾಧ್ಯವಾಯಿತೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಅವರನ್ನು ಕಳೆದುಕೊಂಡ ಈ ಒಂದು ವರ್ಷದಲ್ಲಿ ಸಮಸ್ಯೆಗಳು ಎದುರಾದಾಗ "ಅಪ್ಪಾಜಿ ಇರಬಾರದಿತ್ತೇ" ಎಂದು ನನಗೆ ಹಲವು ಬಾರಿ ಅನ್ನಿಸಿದೆ. ಅಂತಹ ಸಂದರ್ಭಗಳಲ್ಲಿ ಅವರು ಹಿಂದೆ ಹೇಳಿದ ಮಾತುಗಳನ್ನು ನೆನಪಿಸಿಕೊಳ್ಳುವ ಮುಖಾಂತರ ನನಗೆ ನಾನೇ ಸಾಂತ್ವನ ತಂದುಕೊಳ್ಳುತ್ತೇನೆ.



'ಚಿರಂಜೀವಿ ಸುಧಾಕರ' ಚಿತ್ರದ ಸೋಲಿನ ನಂತರ ಒಂದು ದಿನ ಒಂದು ಹುಡುಗಿಯ ಫೋಟೋವನ್ನು ನನಗೆ ತೋರಿಸಿದ ಅಮ್ಮ "ಈ ಹುಡುಗಿ ಹೇಗಿದ್ದಾಳೆ?" ಎಂದು ಕೇಳಿದರು. ಹುಡುಗಿಯ ಫೋಟೋ ತೋರಿಸಿ ಅಮ್ಮ ಹೀಗೇಕೆ ಕೇಳುತ್ತಿದ್ದಾರೆ? ಎಂದು ನಾನು ಒಂದು ಕ್ಷಣ ಆಲೋಚಿಸಿದೆ. ಹಾಗೆ ಆಲೋಚಿಸುತ್ತಾ ಸುಮ್ಮನೆ ಅಮ್ಮನನ್ನು ನೋಡುತ್ತಿದ್ದಾಗ "ರಾಘು ಚಿತ್ರಕ್ಕೆ ನಾಯಕಿಯಾಗಿ ಸೂಟ್ ಆಗ್ತಾಳಾ?" ಎಂದು ಅಮ್ಮ ಕೇಳಿದರು. "ಸರಿಹೋಗ್ತಾಳೆ. ಹೇಗಾದರೂ ಮಾಡಿ ಈ ಹುಡುಗಿಯನ್ನೇ ಚಿತ್ರಕ್ಕೆ ಹಾಕಿ" ಎಂದು ಹೇಳಿದೆ. ಆ ಹುಡುಗಿಯೇ ಮಾಲಾಶ್ರೀ!

ರಾಘುನ ಎರಡನೇ ಚಿತ್ರ 'ನಂಜುಂಡಿ ಕಲ್ಯಾಣ' ತಯಾರಾಯಿತು. ಈ ಬಾರಿ ನಮ್ಮ ಫೇವರಿಟ್ ನಿರ್ದೇಶಕ ಎಂ.ಎಸ್. ರಾಜಶೇಖರ್‌ಗೆ ನಿರ್ದೇಶನದ ಜವಾಬ್ದಾರಿಯನ್ನು ಅಮ್ಮ ನೀಡಿದರು. ಸ್ಟೇಟ್ಸ್ ಚಿತ್ರಮಂದಿರ ಸೇರಿದಂತೆ ಎಲ್ಲೆಡೆ ಚಿತ್ರ ಬಿಡುಗಡೆಯಾಯಿತು. ಅವತ್ತು ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಪೂಜೆಯನ್ನು ಮುಗಿಸಿಕೊಂಡು ನೇರವಾಗಿ ಸ್ಟೇಟ್ಸ್‌ಗೆ ಮೊದಲ ಶೋ ನೋಡಲು ಹೋದೆ. ಸಿನಿಮಾ ಮುಗಿದನಂತರ ಸೀದಾ ಮನೆಗೆ ಬಂದು ರಾಘುಗೆ ಕಂಗ್ರಾಟ್ಸ್ ಹೇಳಿದೆ. "ರಾಘು.... ಈ ಚಿತ್ರ ಹಂಡ್ರೆಡ್ ಪರ್ಸೆಂಟ್ ಸಿಲ್ವರ್ ಜ್ಯೂಬಿಲಿ ಆಚರಿಸುತ್ತೆ, ನನ್ನ ಮಾತು ಸುಳ್ಳಾಗಲ್ಲ ನೋಡು..." ಎಂದೆ. ಆಗ ರಾಘು "ಥ್ಯಾಂಕ್ಯೂ ಅಣ್ಣ ಅಷ್ಟು ದಿನ ಓಡಿದರೆ ಸಾಕಪ್ಪ" ಅಂದ. ನನ್ನ ಮಾತನ್ನು ಕೇಳಿ ನಮ್ಮ ಮನೆಯವರೆಲ್ಲಾ "ನಿಜವಾಗಿಯೂ ಚಿತ್ರ ಅಷ್ಟು ಚೆನ್ನಾಗಿದೆಯಾ?" ಎಂದು ಕೇಳುತ್ತಾ ನನ್ನನ್ನು ಸುತ್ತುವರಿದರು.

ಅವರೆಲ್ಲಾ ನನ್ನ ಮಾತನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೂ ಇತ್ತು. ರಾಘುನ ಮೊದಲ ಚಿತ್ರ ಸೋತಿದ್ದರಿಂದ ಆತನ ಎರಡನೇ ಚಿತ್ರ ಸಿಲ್ವರ್ ಜ್ಯೂಬಿಲಿ ದಾಟಿಸುತ್ತಾ? ಎಂಬುದು ಅವರ ಸಂಶಯವಾಗಿತ್ತು. ನಮ್ಮ ಗಾಂಧಿನಗರದ ಪಂಡಿತರು ಕೂಡ ಈ ಚಿತ್ರದ ಬಗ್ಗೆ ಮತ್ತು ರಾಘು ಬಗ್ಗೆ ಹಗುರವಾಗಿ ಮಾತನಾಡಿದ್ದರು. ಆದರೆ ಕೊನೆಗೆ ಈ ಚಿತ್ರ ಸಿಲ್ವರ್ ಜ್ಯೂಬಿಲಿ ಮಾತ್ರವಲ್ಲ, ಕನ್ನಡ ಚಿತ್ರರಂಗದ ಹಲವಾರು ದಾಖಲೆಗಳನ್ನು ಮುರಿಯಿತು. ನನ್ನ ಚಿತ್ರ ಮಾತ್ರವಲ್ಲ, ಅಪ್ಪಾಜಿಯ ಚಿತ್ರದ ದಾಖಲೆಗಳನ್ನೂ ರಾಘು ಮುರಿದುಬಿಟ್ಟ. ಈ ಚಿತ್ರ ಅನೇಕ ಭಾಷೆಗಳಲ್ಲಿ ರಿಮೇಕ್ ಆಯಿತು. ಅನೇಕ ಕಡೆಗಳಲ್ಲಿ ಡಬ್ ಕೂಡ ಆಯಿತು. ಎಲ್ಲೆಡೆ ಇದು ಜಯಭೇರಿ ಬಾರಿಸಿತು.

ಗಾಂಧಿನಗರದ ಜನ 'ನಂಜುಂಡಿ ಕಲ್ಯಾಣ' ಚಿತ್ರದ ದಾಖಲೆಯನ್ನು ನೋಡಿ ಬೆಚ್ಚಿಬಿದ್ದರು. ಅಷ್ಟೇ ಅಲ್ಲ, ಅದರ ಬಗ್ಗೆ ಚರ್ಚೆ ಮಾಡಲು ಆರಂಭಿಸಿದರು. ನನಗಂತೂ ನನ್ನ ಸಹೋದರ ಜಯಭೇರಿ ಬಾರಿಸಿದ ಬಗ್ಗೆ ಎಲ್ಲಿಲ್ಲದ ಸಂತೋಷವಾಯಿತು. ರಾಘುಗೂ ಅಷ್ಟೇ.. ಮೊದಲ ಚಿತ್ರದ ಸೋಲಿನ ಕಹಿ ಅನುಭವವನ್ನು ಈ ಚಿತ್ರ ಮರೆಸಿತು.



'ನಂಜುಂಡಿ ಕಲ್ಯಾಣ'ದ ಗೆಲುವು ನನಗೆ ನಮ್ಮ ಮನೆಯಲ್ಲೇ ಮತ್ತೊಬ್ಬ ಪ್ರತಿಸ್ಪರ್ಧಿಯನ್ನು ಹುಟ್ಟುಹಾಕಿತು. ಒಂದು ಕಡೆಯಲ್ಲಿ ನನ್ನ ಅಪ್ಪಾಜಿ ಸೂಪರ್ ಸ್ಟಾರ್, ಇನ್ನೊಂದೆಡೆ ದಾಖಲೆಗಳನ್ನು ಸಾಧಿಸಿದ್ದ ಸಹೋದರ. ಇವೆರಡನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ನಮ್ಮೆಲ್ಲರಿಗಿಂತ ಹೆಚ್ಚು ಸಂತೋಷಪಟ್ಟವರು ನಮ್ಮ ಅಮ್ಮ. ಪತಿದೇವರು ಸೂಪರ್ ಸ್ಟಾರ್ ಆದರೆ ಇಬ್ಬರು ಮಕ್ಕಳು ಸಕ್ಸಸ್‌ಫುಲ್ ಹೀರೋಗಳು. ಇದು ಯಾವ ತಾಯಿಗೆ ತಾನೆ ಸಂತೋಷ ನೀಡುವುದಿಲ್ಲ? ಆ ಸಂದರ್ಭದಲ್ಲಿ ನೀವು ನನ್ನ ಅಮ್ಮನ ಮುಖದಲ್ಲಿದ್ದ ಸಂತೋಷ-ಸಂಭ್ರಮವನ್ನು ನೋಡಬೇಕಿತ್ತು. ಅಮ್ಮ ಸಂತೋಷದಿಂದಿದ್ದರೆ ನಾವೆಲ್ಲಾ ಸಂತೋಷ ಪಟ್ಟಹಾಗೆ ತಾನೇ?

ಅದಾದನಂತರ ರಾಘು 'ಗಜಪತಿಯ ಗರ್ವಭಂಗ' ಎಂಬ ಚಿತ್ರದಲ್ಲಿ ಮತ್ತೆ ಮಾಲಾಶ್ರೀ ಜೊತೆ ನಟಿಸಿದ. ಈ ಬಾರಿಯೂ ಎಂ.ಎಸ್. ರಾಜಶೇಖರ್ ಚಿತ್ರದ ನಿರ್ದೇಶಕರಾದರು. ಈ ಚಿತ್ರವೂ ಸೂಪರ್ ಹಿಟ್ ಆಯಿತು. 'ನಂಜುಂಡಿ ಕಲ್ಯಾಣ'ದ ಯಶಸ್ಸು ಒಂದು ಫ್ಲೂಕ್ ಅಂದಿದ್ದವರಿಗೆಲ್ಲಾ ಈ ಚಿತ್ರದ ಯಶಸ್ಸು ಕಂಡು ಆಶ್ಚರ್ಯವಾಯಿತು. ಇದಾದ ನಂತರ 'ಅನುಕೂಲಕ್ಕೊಬ್ಬ ಗಂಡ' ಚಿತ್ರದಲ್ಲಿ ರಾಘು ನಟಿಸಿದ. ಈ ಬಾರಿ ನಮ್ಮ ಅಂಕಲ್ ಗೋವಿಂದು ಈ ಚಿತ್ರವನ್ನು ನಿರ್ಮಿಸಿದರು. ಮಾಲಾಶ್ರಿಯ ಸ್ಥಾನಕ್ಕೆ ವಿದ್ಯಾಶ್ರೀ ಎಂಬ ನಟಿ ಆಯ್ಕೆ ಯಾದಳು. ಚಿತ್ರ ಬಿಡುಗಡೆಯಾದಾಗ ಇದನ್ನು ಕೂಡ ಜನ ಇಷ್ಟಪಟ್ಟರು. ಎಲ್ಲ ಕಡೆ ಈ ಚಿತ್ರವೂ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ಇಲ್ಲಿ ನಾನು ಒಂದು ಮಾತನ್ನು ಹೇಳಲೇಬೇಕು. ನನ್ನ ಮೊದಲ ಮೂರು ಚಿತ್ರಗಳು ಸೂಪರ್ ಹಿಟ್ ಆಗಿ ನನಗೆ ಹ್ಯಾಟ್ರಿಕ್ ಹೀರೋ ಎಂಬ ಬಿರುದನ್ನು ತಂದುಕೊಟ್ಟಿತ್ತು. ರಾಘು ವಿಷಯದಲ್ಲಿ ಮೊದಲ ಚಿತ್ರದ ನಂತರ ತೆರೆಗೆ ಬಂದ ಮೂರೂ ಚಿತ್ರಗಳೂ ಬಾಕ್ಸಾಫೀಸಿನಲ್ಲಿ ಯಶಸ್ವಿಯಾಗಿ ಸಿಲ್ವರ್ ಜ್ಯೂಬಿಲಿ, ಸೆಂಚುರಿ ಬಾರಿಸಿ ಆತನಿಗೂ ಹ್ಯಾಟ್ರಿಕ್ ಹೀರೋ ಗೌರವವನ್ನು ತಂದುಕೊಟ್ಟವು. ಇದೆಲ್ಲವನ್ನು ಕಂಡು ನಮ್ಮ ಮನೆಯಲ್ಲಿ ಎಲ್ಲರಿಗೂ ಖುಷಿಯಾಗಿತ್ತು. ಇದೆಲ್ಲವೂ ಅಪ್ಪಾಜಿಗೆ ಸೇರಿದ ಗೌರವವಲ್ಲದೇ ನಮ್ಮದೇನೂ ಇಲ್ಲ ಎಂದು ನಾನು-ರಾಘು ಮಾತನಾಡಿಕೊಳ್ಳುತ್ತಿದ್ದೆವು.

ಇಂತಹ ಸಂತೋಷದ ಸಂದರ್ಭದಲ್ಲೇ ನಾನು ಕೈಮುರಿದುಕೊಂಡೆ. ಕೂಡಲೇ ನನ್ನನ್ನು ಆಸ್ಪತ್ರೆಗೆ ಸಾಗಿಸಿದರು. ಸುಮಾರು ಒಂದೂವರೆ ತಿಂಗಳುಗಳ ಕಾಲ ನಾನು ನಟಿಸುವುದನ್ನು ಬಿಟ್ಟು ಸಂಪೂರ್ಣವಾಗಿ ಬೆಡ್ ರೆಸ್ಟ್ ತೆಗೆದುಕೊಳ್ಳಬೇಕಾಯಿತು. ಆ ನೋವಿನ ವಿಷಯ ಯಾವಾಗ, ಹೇಗೆ ಸಂಭವಿಸಿತು ಎಂಬುದನ್ನು ಮುಂದಿನ ವಾರ ಹೇಳುತ್ತೇನೆ....

(ಮುಂದುವರೆಯುತ್ತದೆ)

ಇಬ್ಬರು ಅಮ್ಮಂದಿರ ಹುಟ್ಟುಹಬ್ಬ





ಮೊನ್ನೆ ಗತಕಾಲದ ನಾಯಕಿ ಕಂ ಸುಂದರಿಯರಿಬ್ಬರು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. 'ಕನ್ನಡದ ಕಂದ'ನ ತಾಯಿ ಲೀಲಾವತಿ ಯಾವುದೇ ಸದ್ದು ಗದ್ದಲವಿಲ್ಲದೆ ತಮ್ಮ 70ನೇ ವರ್ಷಕ್ಕೆ ಕಾಲಿಟ್ಟರೆ, ಪದ್ಮಭೂಷಣ ವಿಜೇತೆ ಬಿ. ಸರೋಜಾದೇವಿ ಪತ್ರಕರ್ತರನ್ನು ತಮ್ಮ ಮನೆಗೆ ಆಹ್ವಾನಿಸಿ ಊಟ ಹಾಕಿದರು. ಆದರೆ ಪತ್ರಕರ್ತರು ಎಷ್ಟೇ ಪ್ರಯತ್ನಿಸಿದರೂ ಇದು ತಮ್ಮ ಎಷ್ಟನೇ ಹುಟ್ಟುಹಬ್ಬ ಎಂಬುದನ್ನು ಮಾತ್ರ ಸರೋಜಾದೇವಿಯವರು ಬಹಿರಂಗಪಡಿಸಲಿಲ್ಲ.

ಹಿರಿಯ ಪತ್ರಕರ್ತರೊಬ್ಬರ ಅಂದಾಜಿನ ಪ್ರಕಾರ ಸರೋಜಾದೇವಿಯವರು ಕೂಡ 70ರ ಆಜುಬಾಜಿನಲ್ಲಿದ್ದಾರೆ. ಇದೇ ವರ್ಷ ಬೆಂಗಳೂರು ವಿಶ್ವವಿದ್ಯಾಲಯ ಸರೋಜಾದೇವಿಯವರಿಗೆ 'ಗೌರವ ಡಾಕ್ಟರೇಟ್' ಪದವಿಯನ್ನು ನೀಡಿ ಗೌರವಿಸಿದೆ.

ಈ ಮಾಜಿ ನಾಯಕಿಯರ ಸಾಧನೆ ಕಡಿಮೆಯೇನಲ್ಲ. ತಮ್ಮದೇ ಆದ ನಟನಾ ಶೈಲಿಯಿಂದ ತಮ್ಮ ಛಾಪನ್ನು ಮೂಡಿಸಿ ಜನರ ಮನಸ್ಸನ್ನು ಗೆದ್ದ ಇವರಿಬ್ಬರು ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಆದರೆ ಪುರುಷ ಪ್ರಧಾನ ಚಿತ್ರರಂಗದಲ್ಲಿ ನಟರ ಬರ್ತ್ ಡೇಗಳನ್ನು ಹ್ಯಾಪಿಯಾಗಿ ಆಚರಿಸುತ್ತಾರೆಯೇ ಹೊರತು ನಟಿಯರ — ಅದರಲ್ಲೂ ಮಾಜಿ ನಟಿಯರ — ಹುಟ್ಟುಹಬ್ಬಗಳ ಬಗ್ಗೆ ಯಾರೂ ಕ್ಯಾರೆ ಅನ್ನುವುದಿಲ್ಲ.

ಗೌರವ ಮತ್ತು ಸನ್ಮಾನಗಳ ಬದಲಾಗಿ ಅಡೆತಡೆ ಹಾಗು ನೋವುಗಳನ್ನೇ ಕಂಡಿರುವ ಈ ಇಬ್ಬರು ನಟಿಯರು 70 ವಸಂತಗಳನ್ನು ಮಾತ್ರವಲ್ಲ ನೂರ್ಕಾಲ ಬಾಳಲಿ ಎಂಬುದು ನಮ್ಮ ಆಶಯ. ಇವರಿಬ್ಬರಿಗೂ ಹುಟ್ಟುಹಬ್ಬದ ಶುಭಾಶಯಗಳು.....

ಬುದ್ಧಿಜೀವಿಗಳ ಹಬ್ಬ!

ಒಂದೆಡೆ 'ಬುದ್ಧಿಜೀವಿ' ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರದ ತಯಾರಿ ಭರದಿಂದ ಸಾಗುತ್ತಿದ್ದರೆ, ಇನ್ನೊಂದು ಕಡೆ ಟಿ.ಎನ್. ಸೀತಾರಾಂ ನಿರ್ದೇಶನದ 'ಮೀರಾ ಮಾಧವ ರಾಘವ' ಮುಂದಿನ ವಾರ ಸೆಟ್ಟೇರಲಿದೆ. ಈ ಮಧ್ಯೆ, ನಾಗಾಭರಣ ನಿರ್ದೇಶನದ 'ಕಲ್ಲರಳಿ ಹೂವಾಗಿ' ಈಗಾಗಲೇ ರಿಲೀಸ್ ಆಗಿದ್ದರೆ, 'ಮೌನಿ' ಖ್ಯಾತಿಯ ಲಿಂಗದೇವರು ಸದ್ದಿಲ್ಲದೆ 'ಕಾಡ ಬೆಳದಿಂಗಳು' ಎಂಬ ಚಿತ್ರವನ್ನು ಮುಗಿಸಿದ್ದಾರೆ. ಅವರಂತೆಯೇ ರಾಮದಾಸ್ ನಾಯ್ಡು ಕೂಡ 'ಮೊಗ್ಗಿನ ಜಡೆ'ಯನ್ನು ಸೈಲೆಂಟಾಗಿ ಹೆಣೆದಿದ್ದಾರೆ. ಇಷ್ಟೊಂದು ಕಲಾತ್ಮಕ ಚಿತ್ರಗಳು ಒಮ್ಮಲೆ ತಯಾರಾಗುತ್ತಿರುವುದನ್ನು ನೋಡಿದರೆ, ಈ ವರ್ಷ ಪ್ರಶಸ್ತಿಗಾಗಿ ದೊಡ್ಡ ಪೈಪೋಟಿಯೇ ನಡೆಯಲಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಅಂದಹಾಗೆ ಈ ಬಾರಿ ಪ್ರಶಸ್ತಿ ಆಯ್ಕೆ ಕಮಿಟಿಯ ಅಧ್ಯಕ್ಷರ ಕೆಲಸ ಹೂವಿನ ಹಾಸಿಗೆಯಂತಿರುವುದಿಲ್ಲ ಎಂಬುದೂ ಗ್ಯಾರಂಟಿ!








R.B.P. LANKESH, Kannada Weekly Price Rs. 10/- 17-1-2007 RNI No. KARKAN2005/14648 Regd.No.KA/BG(S)/2036/20



'ಅರಸು' ಚಿತ್ರದಲ್ಲಿ ಪುನೀತ್, ಮೀರಾ ಜಾಸ್ಮಿನ್

ತ್ಯಾಗದಿಂದ ತಪ್ಪಿಸಿಕೊಂಡ ಪುನೀತ





'ಅರಸು' ಚಿತ್ರದಲ್ಲಿ ದರ್ಶನ್ ಮತ್ತು ಆದಿತ್ಯ ಅತಿಥಿ ನಟರಾಗಿ ನಟಿಸಿದ್ದಾರೆ. ಇದರಲ್ಲಿ ಕನ್ನಡದ ರಮ್ಯ ಮತ್ತು ಮಲೆಯಾಳದ ಮೀರಾ ಜಾಸ್ಮೀನ್ ಕೂಡ ಇದ್ದಾರೆ. ಚಿತ್ರದ ಅಂತ್ಯದಲ್ಲಿ ಈ ಇಬ್ಬರು ಹುಡುಗಿಯರನ್ನು ನಾಯಕ ನಟ ಪುನೀತ್ ತನ್ನ ಸ್ನೇಹಿತರಾದ ದರ್ಶನ್ ಮತ್ತು ಆದಿತ್ಯನಿಗೆ ಧಾರೆ ಎರೆದು ಕೊಡುತ್ತಾನಂತೆ ಎಂಬುದು ಈಗ ಎಲ್ಲರಿಗೂ ಗೊತ್ತಿರುವ ವಿಷಯ. ಹಾಗಾದರೆ, ಚಿತ್ರದಲ್ಲಿ ಪುನೀತ್ ಜೊತೆಗಾರ್ತಿ ಇಲ್ಲದ 'ತ್ಯಾಗರಾಜ'ನಾಗುತ್ತಾನೆಯೇ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ. ತಮಿಳಿನ ಖ್ಯಾತ ನಟಿ ಶ್ರೇಯಾ ಕೂಡಾ ಈಗ 'ಅರಸು' ಚಿತ್ರದಲ್ಲಿ ಅತಿಥಿ ಪಾತ್ರ ನಿರ್ವಹಿಸಿರುವ ಸುದ್ದಿ ಬಂದಿದ್ದು ಆಕೆ ಸಿನಿಮಾದ ಕೊನೆಗೆ ಪುನೀತ್‌ನ 'ಜೋಡಿ' ಆಗಿರಬಹುದು ಎಂಬ ಊಹೆ ಈಗ ಗಾಂಧಿನಗರದಲ್ಲಿ ಹಬ್ಬಿದೆ.

ಅಂದಹಾಗೆ ಈ ಚಿತ್ರ ಜನವರಿ ಕೊನೆಯ ವಾರದಲ್ಲಿ ಬಿಡುಗಡೆಯಾಗಲಿದ್ದು ಆಗಲೇ ಹಂಚಿಕೆದಾರರು ಇದನ್ನು ಕೊಂಡುಕೊಳ್ಳಲು ಮುಗಿಬಿದ್ದಿದ್ದಾರೆ. ಆದರೆ ಇದನ್ನು ನಿರ್ಮಿಸಿರುವ ವಜ್ರೇಶ್ವರಿ ಎಂಬ ಹೆಡ್ ಆಫೀಸಿನವರು ಇದನ್ನು ಮಾರಾಟ ಮಾಡುವ ಉತ್ಸಾಹ ತೋರಿಸುತ್ತಿಲ್ಲ ಎಂಬುದೇ ಹಂಚಿಕೆದಾರರ ಅಳಲಾಗಿದೆ.

ಸೈನ್ಯಾಧಿಕಾರಿಯೋ? ಸರ್ವಾಧಿಕಾರಿಯೋ?

'ಒಂದು ಪ್ರೀತಿಯ ಕತೆ' ಸೆನ್ಸಾರ್ ಮಂಡಳಿಯ ಕೊಡಲಿ ಏಟಿನಿಂದ ಪಾರಾಗಿದೆ. ಈ ಚಿತ್ರ ನಕ್ಸಲ್ ಪ್ರೇಮಕತೆಯಿಂದ ಕೂಡಿದ್ದರೂ ಈ ಚಿತ್ರದಲ್ಲಿ ಎಲ್ಲೂ 'ನಕ್ಸಲ್' ಎಂಬ ಪದ ಇರ ಬಾರದು ಮತ್ತು ನಕ್ಸಲೀಯರ ಪರವಾದ ಸಿದ್ಧಾಂತ ಇರಬಾರದು ಎಂಬುದು ಸೆನ್ಸಾರ್ ಮಂಡಳಿಯ ಮುಖ್ಯಸ್ಥ ಹಾಗೂ ಮಾಜಿ ಸೈನ್ಯಾಧಿಕಾರಿ ಚಂದ್ರಶೇಖರ್ ವಾದವಾಗಿತ್ತು.



ಚಂದ್ರಶೇಖರ್

ಸೆನ್ಸಾರ್‌ನವರ ಈ ಅರ್ಥರಹಿತ ವಾದದ ವಿರುದ್ಧ ಪ್ರತಿತಂತ್ರ ರೂಪಿಸಿದ ನಿರ್ದೇಶಕ ರಾಜಶೇಖರ್ ಚಿತ್ರದ ಯಾವ ಭಾಗಕ್ಕೂ ಚಂದ್ರಶೇಖರ್‌ರವರ ಕತ್ತರಿ ಬೀಳದಂತೆ 'ಎಚ್ಚರ' ವಹಿಸಿದ್ದಾರೆ.

ಸಧ್ಯ ಚಂದ್ರಶೇಖರ್ ಎಂಬ ಈ ಮಿಲಿಟರಿ ಡಿಕ್ಟೇಟರ್ ಯಾವ ಪತ್ರಿಕೆಗಳೂ ನಕ್ಸಲ್ ಚಳವಳಿ ಬಗ್ಗೆ ಬರೆಯಬಾರದು, ಟಿವಿಗಳು ಪೊಲೀಸ್ ಎನ್‌ಕೌಂಟರ್‌ಗಳ ಬಗ್ಗೆ ವರದಿ ಮಾಡಬಾರದು ಎಂದು ಫತ್ವಾ ಹೊರಡಿಸುವ ಅಧಿಕಾರವನ್ನು ಪಡೆದಿಲ್ಲ.

ಅಂದಹಾಗೆ, ಚಂದ್ರಶೇಖರ್‌ರವರಿಗೆ ಇಲ್ಲಿ ಹಲವು ಪ್ರಶ್ನೆಗಳು: ನಾವು ಒಪ್ಪಲಿ, ಬಿಡಲಿ ಆದರೆ ಇವತ್ತು ನಮ್ಮ ರಾಜ್ಯದಲ್ಲಿ ನಕ್ಸಲರು ತಮ್ಮ ಚಳವಳಿ ನಡೆಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?




ರಾಜಶೇಖರ್

ಹಿಂಸೆ ಮತ್ತು ಪ್ರತಿಹಿಂಸೆಯಲ್ಲಿ ಪೊಲೀಸರು ಮತ್ತು ಹಲವು ನಕ್ಸಲ್ ಯುವಕರು ಸತ್ತಿರುವುದು ತಮಗೆ ಗೊತ್ತಿಲ್ಲವೇ? ಇದೆಲ್ಲ ವಾಸ್ತವದಲ್ಲಿ ನಡೆಯು ತ್ತಿರುವುದಲ್ಲವೇ? ವಾಸ್ತವವನ್ನು ತಮ್ಮ ದೃಷ್ಟಿ ಕೋನದಿಂದ ತಮ್ಮ ಚಿತ್ರಗಳಲ್ಲಿ ಬಿಂಬಿಸುವುದು ಕಲಾವಿದರಾದ ಚಿತ್ರ ನಿರ್ದೇಶಕರ ಹಕ್ಕಲ್ಲವೇ? ಆ ಅಭಿವ್ಯಕ್ತಿ ಸ್ವಾತಂತ್ರವನ್ನು ಕಸಿಯುವ, ಕುಗ್ಗಿಸುವ ಹಕ್ಕು ನಿಮಗೆ ಕೊಟ್ಟವರು ಯಾರು? ಸೆನ್ಸಾರ್ ಮಂಡಳಿಯ ಕರ್ತವ್ಯ ನಮ್ಮ ಚಿತ್ರಗಳಲ್ಲಿ ಅಶ್ಲೀಲತೆ, ಕೋಮುದ್ವೇಷ, ಯಾರದೇ ಮಾನ ನಷ್ಟ ಇರಬಾರದೆಂಬ ಎಚ್ಚರಿಕೆಯನ್ನು ವಹಿಸಲಿ ಎಂಬುದೇ ಹೊರತು, ಯಾರು, ಯಾವುದರ ಬಗ್ಗೆ, ಹೇಗೆ ಚಿತ್ರ ಮಾಡಬೇಕೆಂದು ಫತ್ವಾ ಹೊರಡಿಸಲಿಕ್ಕಲ್ಲ ಎಂಬುದು ನಿಮಗೆ ಹೇಳಿಕೊಡು ವವರು ಯಾರು? ಅದನ್ನು ನಾವು ಅರಿಯುವುದು ಯಾವಾಗ?

ಜೊತೆಜೊತೆಯಾಗಿ ಗೆದ್ದವರು

ಮೊನ್ನೆ ಶತದಿನೋತ್ಸವ ಆಚರಿಸಿಕೊಂಡ 'ಜೊತೆ ಜೊತೆಯಲಿ' ಯಾರ್‍ಯಾರಿಗೆ ಲೈಫ್ ಕೊಟ್ಟಿದೆ ನೋಡಿ.

ದಿನಕರ್ ಚೊಚ್ಚಲ ಚಿತ್ರದಲ್ಲಿ ನಿರ್ದೇಶಕನಾಗಿ ಸಕ್ಸಸ್ ಆದರು. ಆತನ ತಾಯಿ ಮೀನಾ ತೂಗುದೀಪ್ ಪ್ರಥಮ ನಿರ್ಮಾಣದಲ್ಲಿ ಲಾಭ ಕಂಡರು. 'ನೆನಪಿರಲಿ' ಖ್ಯಾತಿಯ ಪ್ರೇಂ ಚಿತ್ರದ ಯಶಸ್ಸಿನ ನಂತರ ತಮ್ಮ ಸಂಭಾವನೆಯನ್ನು ಹೆಚ್ಚಿಸಿದರು. ರವಿಚಂದ್ರನ್ ಶಿಷ್ಯ ಹರಿಕೃಷ್ಣ ಇದರ ಮುಖಾಂತರ ಸಂಗೀತ ನಿರ್ದೇಶಕರಾಗಿ ಎಸ್ಟಾಬ್ಲಿಶ್ ಆದರು. ಇದೆಲ್ಲಕ್ಕಿಂತ ಮುಖ್ಯವಾಗಿ ಅದೆಷ್ಟೋ ವರ್ಷಗಳ ನಂತರ ಚಿತ್ರದ ನಾಯಕಿ ರಮ್ಯಾಳಿಂದಾಗಿ ನಟಿಯೊಬ್ಬಳ ನಾಮಬಲದ ಮೇಲೂ ಸಿನಿಮಾ ಓಡುತ್ತದೆ ಎಂಬುದು ಮತ್ತೆ ಸಾಬೀತಾಯಿತು!



ಮತ್ತೆ ಬರಲಿದ್ದಾಳೆ ನ-ಮಿತ

'ನೀಲಕಂಠ' ಚಿತ್ರದ ನಾಯಕಿ ನಮಿ ರವಿಚಂದ್ರನ್ ಜೊತೆಗೆ ಮತ್ತೊಂದು ಚಿತ್ರ ನಟಿಸಲಿದ್ದಾಳೆ. ತೆಲುಗು ನಿರ್ಮಾಪಕರೊಬ್ಬ ನಿರ್ಮಿಸುತ್ತಿರುವ, ರವಿಚಂದ್ರನ್ ನಿರ್ದೇಶಿಸಿ ನಾಯ ನಟನಾಗಿ ಅಭಿನಯಿಸುತ್ತಿರುವ ಹೊಸ ಚಿತ್ರವೊಂ ಮಿತವಾದ ಉಡುಪು ಧರಿಸುವ ನಮಿತಾ ಆ ಯಾಗಿದ್ದಾಳೆ.

ಪತ್ರಿಕೆ ಈ ಹಿಂದೆಯೇ ಬರೆದಂತೆ ರವಿಚಂದ ತಮಗಿಂತಾ ನಮಿತಾಳ ಮೇಲೇ ಹೆಚ್ಚು ನಂ ಇಟ್ಟಿದ್ದರಿಂದ, ಅದಕ್ಕೆ ತಕ್ಕಂತೆ ನಮಿತಾ ಕೂಡ ಧರಿಸುವ ಬಗ್ಗೆ ಕಂಜೂಸಿತನ ತೋರಿಸದಿದ್ದರಿ 'ನೀಲಕಂಠ' ಬಾಕ್ಸಾಫೀಸಿನಲ್ಲಿ ಗೆದ್ದಿತಂತೆ. ಅ ತಂತ್ರವನ್ನು ರವಿ ತಮ್ಮ ಮುಂದಿನ ಚಿತ್ರದ ಅಳವಡಿಸಿದರೆ ಅಚ್ಚರಿ ಇಲ್ಲ ಎನ್ನುತ್ತಿದೆ ಗಾಂಧಿನ ಇದನ್ನು ಕೇಳಿ ಪಡ್ಡೆ ಹುಡುಗರು ಸಂತೋ ಗೊಂಡಿದ್ದಾರೆ ಎಂಬುದೂ ಅಷ್ಟು ಸುಳ್ಳಲ್ಲ!

ನಿರ್ದೇಶಕಿಯಾದ 'ಜಂಭದ ಹುಡುಗಿ'

ನಿಜಕ್ಕೂ ಈಕೆ ಜಂಭದ ಹುಡು ಗಿಯೇ!

'ಚಂದ್ರಮುಖಿ ಪ್ರಾಣಸಖಿ' ಖ್ಯಾತಿಯ ಸೀತಾರಾಮ್ ಕಾರಂತ್ ನಿರ್ದೇಶನದ 'ಜಂಭದ ಹುಡುಗಿ'ಯ ಗಲಾಟೆಯಿದು.

ಪ್ರಿಯಾ ಹಾಸನ್ ಎಂಬ ಹುಡುಗಿ ಈ ಚಿತ್ರವನ್ನು ನಿರ್ಮಿಸುವುದರೊಂದಿಗೆ ನಾಯಕಿಯೂ ಆಗಿದ್ದಳು. ನಿರ್ದೇಶಕ ಸೀತಾರಾಮ ಕಾರಂತರು ಚಿತ್ರದ ಚಿತ್ರೀಕರಣವನ್ನು ಪೂರ್ಣಗೊಳಿಸಿ ಅವರ ಪಾಲಿನ ಸಂಭಾವನೆಯನ್ನು ಪಡೆದರಾದರೂ ನಂತರ ಎಡಿಟಿಂಗ್ ಕಾರ್ಯಕ್ಕೆ ಬರಲು ವಿಳಂಬ ಮಾಡಿದರಂತೆ.

ನಿರ್ದೇಶಕರ ಈ ವಿಳಂಬನೀತಿಗೆ ಸೆಡ್ಡುಹೊಡೆದ ಪ್ರಿಯಾ ಹಾಸನ್ ಸ್ವತಃ ತಾನೇ ಕುಳಿತು ಎಡಿಟಿಂಗ್ ಮಾಡಿಸಿ ಚಿತ್ರವನ್ನು ಪೂರ್ಣಗೊಳಿಸಿದ್ದಾಳಂತೆ. ಪ್ರಿಯಾ ಹಾಸನ್‌ಳ 'ಜಂಭ'ದಿಂದ ಬೇಸರಗೊಂಡ ನಿರ್ದೇಶಕ ಸೀತಾರಾಮ ಕಾರಂತರು ಚಿತ್ರದಲ್ಲಿ ತನ್ನ ಹೆಸರು ಬರಕೂಡದು ಎಂದು ತಕರಾರು ಮಾಡು ತ್ತಿದ್ದಾರಂತೆ.

ಒಟ್ಟಿನಲ್ಲಿ ಪ್ರಿಯಾಳ ಈ ಧೈರ್ಯವನ್ನು ಕಂಡು ಗಾಂಧಿನಗರಿಗಳು ದಂಗಾಗಿದ್ದಾರೆ.



ರೀಮೇಕ್ ಬೇಡ ಅಂದ ಪ್ರೇಮ್





ಈಗ ಅಪಾರ ಬೇಡಿಕೆಯಲ್ಲಿರುವ ನಟ ಪ್ರೇಮ್ "ಯಾವುದೇ ಕಾರಣಕ್ಕೂ ರೀಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ" ಎಂದು ಹೇಳುವ ಮೂಲಕ ಅನೇಕ ನಿರ್ಮಾಪಕರಿಗೆ ನಿರಾಶೆ ಮೂಡಿಸಿದ್ದಾನೆ. ಆತನ ಕಾಲ್ ಶೀಟ್ ಪಡೆದು ಆತುರ ಆತುರವಾಗಿ ಸಿನಿಮಾ ಮಾಡುವ ಉದ್ದೇಶ ಹೊಂದಿದ್ದ ಹಲವು ಜನ "ಇವನಿಗ್ಯಾಕೆ ಈ ಬುದ್ಧಿ ಬಂತು?" ಎಂದು ಕುಪಿತರಾಗಿದ್ದರೆ, ಕ್ರಿಯಾಶೀಲತೆಯನ್ನು ಮೆಚ್ಚುವ ಜನ ಈತನ ಬೆನ್ನು ತಟ್ಟುತ್ತಿದ್ದಾರೆ. ಈಗಾಗಲೇ 2008ರ ಜೂನ್ ತನಕ ತನ್ನ ಕಾಲ್‌ಶೀಟನ್ನು ಹಂಚಿರುವ ಪ್ರೇಮ್ ಸದ್ಯ ಯಾವುದೇ ಚಿಂತೆ ಇಲ್ಲದೆ ತನ್ನ ಕೆಲಸದಲ್ಲಿ ಮಗ್ನನಾಗಿದ್ದಾನೆ. ಈತ ನಟಿಸಿರುವ 'ಪಲ್ಲಕ್ಕಿ' ಚಿತ್ರ ಸದ್ಯದಲ್ಲೇ ಬಿಡುಗಡೆಯಾಗಲಿದ್ದು, ಅದು ಕೂಡ ಸೆಂಚುರಿ ಬಾರಿಸಿದರೆ ಕನ್ನಡಕ್ಕೆ ಮತ್ತೊಬ್ಬ ಹ್ಯಾಟ್ರಿಕ್ ಹೀರೋ ಬಂದಂತಾಗುತ್ತದೆ. ಈಗ ಪ್ರೇಮ್ ಸಹಿ ಮಾಡಿರುವ ಚಿತ್ರಗಳೆಂದರೆ 'ಗುಣವಂತ', 'ಸವಿಸವಿ ನೆನಪು' ಮತ್ತು 'ಜನುಮ ಜನುಮದಲಿ'.


ಟಿ.ಎನ್.ಎಸ್.ಗೆ ಅಗ್ನಿಪರೀಕ್ಷೆ



ಕಿರುತೆರೆಯಲ್ಲಿ ಸ್ಟಾರ್ ನಿರ್ದೇಶಕರಾಗಿರುವ ಟಿ.ಎನ್. ಸೀತಾರಾಂ ಈಗ ಮತ್ತೊಮ್ಮೆ ಹಿರಿತೆರೆಗೆ ಆಗಮಿಸಿದ್ದಾರೆ. ಈ ಹಿಂದೆ ಎಸ್.ಎಲ್.ಭೈರಪ್ಪರವರ ಕಾದಂಬರಿ ಆಧಾರಿತ 'ಮತದಾನ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಸೀತಾರಾಂ ಈ ಬಾರಿ 'ಮೀರಾ ಮಾಧವ ರಾಘವ' ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಇದರ ನಾಯಕಿಯಾಗಿ ರಮ್ಯಾ ಆಯ್ಕೆಯಾಗಿದ್ದಾಳೆ. ಇನ್ನೊಂದು ವಿಶೇಷವೆಂದರೆ ಸೀತಾರಾಂರವರ ಭೂಮಿಕಾ ಸಂಸ್ಥೆಯೇ ಈ ಚಿತ್ರವನ್ನು ನಿರ್ಮಿಸಲಿದ್ದು, ಇದರ ಮುಖಾಂತರ ಸೀತಾರಾಂ ನಿರ್ಮಾಪಕರಾಗುತ್ತಿದ್ದಾರೆ.

ಟೀವಿಯಲ್ಲಿ ಮಾಡಿದ ಸಾಹಸವನ್ನು ಬೆಳ್ಳಿತೆರೆಯಲ್ಲೂ ಮಾಡುವಲ್ಲಿ ಸೀತಾರಾಂ ಯಶಸ್ವಿಯಾಗಲಿ ಎಂಬ ನಿರೀಕ್ಷೆ ಎಲ್ಲರಲ್ಲಿದೆ. ಆ ಮಟ್ಟಿಗೆ ಇದು ಸೀತಾರಾಂಗೆ ಎರಡನೆ ಅಗ್ನಿಪರೀಕ್ಷೆ.

ಕಾಶಿನಾಥ್‌ನಿಂದ ಜನ 'ಅಪ್ಪಚ್ಚಿ'



ಕಾಶಿನಾಥ್ ಎಂಬ ನಟಭಯಂಕರನನ್ನು ಕನ್ನಡ ಚಿತ್ರ ಪ್ರೇಕ್ಷಕರು ಈಗಾಗಲೇ ಹಲವಾರು ಬಾರಿ ತಿರಸ್ಕರಿಸಿದ್ದರೂ, ಈ ಹ್ಯಾಪೆ ಮೋರೆಯ ನಟ ಅವರ ಮೇಲೆ ಮತ್ತೆ ದಾಳಿ ಇಡಲಿದ್ದಾರೆ. ಅವರೇ ನಿರ್ದೇಶಿಸಿ ನಾಯಕನಾಗಿ ನಟಿಸಲಿರುವ 'ಅಪ್ಪಚ್ಚಿ' ಎಂಬ ಚಿತ್ರ ಮುಂದಿನ ವಾರ ಸೆಟ್ಟೇರಲಿದೆ. ವಿಚಿತ್ರವೆಂದರೆ ಕಾಶಿನಾಥನ ಶಿಷ್ಯಂದಿರೆಲ್ಲಾ ಈಗ ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿದ್ದರೂ ಕಾಶಿ ಮಾತ್ರ ಮರಳಿ, ಮರಳಿ ಯತ್ನವ ಮಾಡು ಎಂಬಂತೆ ನಾಯಕ ನಟನಾಗಿ ಉಳಿಯಲು ಇನ್ನೂ ತಿಣುಕಾಡುತ್ತಿದ್ದಾರೆ. ಅಂದಹಾಗೆ, 'ಅಪ್ಪಚ್ಚಿ' ಚಿತ್ರದಿಂದ ಕಾಶಿ ಮತ್ತೆ ಅಪ್ಪಚ್ಚಿಯಾಗುತ್ತಾರೋ ಅಥವಾ ತಮ್ಮ ಟೀಕಾಕಾರರನ್ನು ಅಪ್ಪಚ್ಚಿ ಮಾಡುತ್ತಾರೋ ಎಂಬುದನ್ನು ಕಾದು ನೋಡಬೇಕು.

'ಹೀ ಆದ 'ಕಾ ಗಣ

'ಮುಂಗಾರು ಮ ನೋಡಿದ ನಂತರ ಅದರ ನನ್ನು 'ಕಾಮಿಡಿ' ಗಣೇಶ ಕರೆಯುವುದಕ್ಕೆ ಮನ ವುದಿಲ್ಲ. ಯಾಕೆಂದರೆ ಚಿತ್ರದ ಭಾವನಾತ್ಮಕ ಸೀಜನ್ಡ್ ನಟರಿಗಿಂತಲೂ ವಾಗಿ ನಟಿಸಿದ್ದಾನೆ. ಇದನ್ನು ಕರು ಮತ್ತು ಪ್ರೇಕ್ಷಕರು ಒಪ್ಪಿಕೊಂಡಿದ್ದಾರೆ ವ ಬಾಕ್ಸಾಫೀಸಿನಲ್ಲೂ ಚಿತ್ರ ಚೆನ್ನಾಗಿದೆ.

'ನೆನಪಿರಲಿ' ಚಿತ್ರದ ಪ್ರೇಮ್ ತರಹ ಗಣೇ ಯಾವುದೇ ಗಾಡ್‌ಫಾದರ ಇಲ್ಲದೆ ನಾಯಕನಟನಾ ಗೊಂಡಿರುವುದು ನವ ಚಿತ್ರರಂಗದಲ್ಲಿ ಇತ್ತೀಚೆಗೆ ಉತ್ತಮ ಬೆಳವಣಿಗೆ ಎನ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate